# ಸತ್ತ್ವಾಲೋಕನಂ

ಚಂಪೂಕಾವ್ಯ

-ಪ್ರೊ. ಟಿ. ಕೇಶವ ಭಟ್ಟ









ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

# ಸತ್ಯಾಲೋಕನಂ

(ಚಂಪು ಕಾವ್ಯ)



ಪ್ರೊ. ಟಿ. ಕೇಶವ ಭಟ್ಟ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು – ೫೬೦೦೧೮

SATHWĀLŌKANAM (Champu Kavya)
By Prof. T. Keshava Bhat
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 206 Price : Rs.90=00 : **2007**

ಮೊದಲನೆಯ ಮುದ್ರಣ : ೨೦೦೭
ಪ್ರತಿಗಳು : ೫೦೦
ಬೆಲೆ : ತೊಂಬತ್ತು ರೂಪಾಯಿಗಳು





ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಶ್ರೀ ವಿಶ್ವನಾಥ ವಂಶಾಕೃತಮಠ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಪ್ರೊ. ಕೆ.ಎಸ್.ನಿಸಾರ್ ಅಹಮದ್
ಸಮ್ಮೇಳನಾಧ್ಯಕ್ಷರು
೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಸಂಸ್ಥೆ. ೯೨ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತಿಗೆ ಉತ್ತಮ ಹಾಗೂ ಮೌಲಿಕವಾದ ಸಾಹಿತ್ಯ ಕೃತಿಗಳನ್ನು ಮುದ್ರಣ ಮಾಡುವುದು ಪ್ರಧಾನ ಆಶಯವಾಗಿದೆ, ಈ ಹಿಂದಿನ ಹಲವು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಈವರೆಗೆ ಹೊರತಂದಿದೆ.

ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ, ಅಕ್ಷರಜ್ಞಾನವನ್ನುಂಟು ಮಾಡುವ ಘನ ಉದ್ದೇಶದಿಂದ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಹಲವು ಗ್ರಂಥಗಳನ್ನು ಪರಿಷತ್ತು ಪ್ರಕಟಿಸಿದೆ. ಇವುಗಳಲ್ಲಿ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳ ಗದ್ಯಾನುವಾದಗಳು, ಕನ್ನಡ ಭಾಷೆ, ಲಿಪಿ, ಸಂಸ್ಕೃತಿ ಬಗೆಗಿನ ಗ್ರಂಥಗಳು, ಕವಿ-ಕಾವ್ಯ ವಿಚಾರ ಸಂಕಿರಗಣಗಳ ಪ್ರಬಂಧಗಳು, ಜೀವನ ಚರಿತ್ರೆ, ಜಾನಪದ, ಶಾಸನ, ಆರೋಗ್ಯ, ವಿಜ್ಞಾನ, ಮಕ್ಕಳ ಸಾಹಿತ್ಯ – ಹೀಗೆ ವೈವಿಧ್ಯಮಯ ಪ್ರಕಾರಗಳ ಪುಸ್ತಕಗಳು ಸೇರಿವೆ.

ದಿ. ಪ್ರೊ. ಟಿ.ಕೇಶವ ಭಟ್ಟ ಅವರು ರಚಿಸಿರುವ 'ಸತ್ತ್ವಾಲೋಕನಂ' ಎಂಬ ಕೃತಿಯು ಪರಿಷತ್ತಿನಿಂದ ಪ್ರಥಮವಾಗಿ ಮುದ್ರಣವಾಗುತ್ತಿರುವುದು ಹೆಮ್ಮೆಯ ಸಂಗತಿ. ಈ ಕೃತಿಯು ಸಂಶೋಧನಾಸಕ್ತರಿಗೆ ಹಾಗೂ ಸಾಹಿತ್ಯಾಭಿಮಾನಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಸಹೃದಯ ಓದುಗರು ಅತ್ಯಂತ ಅಭಿಮಾನದಿಂದ ಈ ಕೃತಿಯನ್ನು ಬರಮಾಡಿಕೊಳ್ಳುತ್ತಾರೆ ಎಂದು ಆಶಿಸುತ್ತೇವೆ. ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿರುವ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಪುಸ್ತಕದ ಪ್ರಕಟಣೆಗಾಗಿ ಕರ್ನಾಟಕ ಸರ್ಕಾರವು ವಿಶೇಷ ಅನುದಾನ ನೀಡಿ ಉಪಕರಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಸಂಕಇ ೧೭೨ ಕಸಧ ೨೦೦೩ ದಿನಾಂಕ ೧೬-೩-೨೦೦೩. ಈ ಸಹಾಯಕ್ಕಾಗಿ ಪರಿಷತ್ತು ಸರ್ಕಾರಕ್ಕೆ ಕೃತಜ್ಞವಾಗಿದೆ.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

# ಅರಿಕೆ

ಕನ್ನಡಲ್ಲಿ ಲಕ್ಷಣಬದ್ಧವೂ ಅಪೇಕ್ಷಿತ ನೀತಿಮೌಲ್ಯಯುಕ್ತವೂ ಆಗಿರುವ ಅಭಿನವ ಮಾರ್ಗಕಾವ್ಯ – ಅಂದರೆ, ಚಂಪೂಕಾವ್ಯವಿದು. ೧೯೫೯ರಲ್ಲಿ ಪ್ರಥಮ ಆವೃತ್ತಿಯು ಪ್ರಕಟನವಾಗಿ ನನ್ನ ಚಿರ ಸಾಹಿತ್ಯ ಪ್ರಕಾಶನದ ಮೂಲಕ ಪ್ರಕಾಶಿತವಾಗಿ ದಿನಾಂಕ : ೨೧-೨-೧೯೫೯ರಲ್ಲಿ ಮಡಿಕೇರಿಯಲ್ಲಿ ಆಚರಿಸಲಾದ ಕೊಡಗು ಕರ್ಣಾಟಕ ಸಂಘದ ರಜತಮಹೋತ್ಸವ ಸಮಾರಂಭದಲ್ಲಿ ಅಧ್ಯಕ್ಷರಾದ ಶ್ರೀ ಅ. ನ. ಕೃಷ್ಣರಾಯರಿಂದ ಬಿಡುಗಡೆಗೊಂಡಿದೆ. ಕರ್ನಾಟಕ ರಾಜ್ಯಸರಕಾರ ಈ ಕಾವ್ಯಕ್ಕೆ ೧೯೬೦ರಲ್ಲಿ ಬಹುಮಾನ ನೀಡಿದೆ. ಈಗ ಈ ಕಾವ್ಯದ ಪ್ರತಿಗಳು ಅನುಪಲಬ್ಧ. ಕಾವ್ಯ ಕುತೂಹಲಿಗಳ ಒತ್ತಡವನ್ನು ಲಕ್ಷಿಸಿ, ಇದೀಗ ಪುನರ್ಮುದ್ರಣಗೊಳ್ಳುತ್ತಿದೆ. ಈ ಮುದ್ರಣದಲ್ಲಿ ಅಧ್ಯಯನ ಸೌಕರ್ಯಕ್ಕಾಗಿ ಸರಳ ಗದ್ಯಾನುವಾದವನ್ನೂ ಒಳಪಡಿಸಲಾಗಿದೆ. ಪ್ರಥಮಾಶ್ವಾಸದಲ್ಲಿ ಕಾವ್ಯರಚನೆಗೆ ಹಿನ್ನೆಲೆಯೆನಿಸುವ ಭಾಗದಲ್ಲಿ, ಅಳುಕಿನಿಂದ ಬಿಟ್ಟು ಬಿಡಲಾದ ಸಾಹಿತ್ಯಾಂಶವನ್ನು ಈಗ ಸೇರಿಸಿಕೊಳ್ಳಲಾಗಿದೆ. ಶಬ್ದಾರ್ಥವನ್ನು ಅಕಾರಾದಿಯಾಗಿ ಕಾಣಿಸಲಾಗಿದೆ. ಇಂತಹ ಲಕ್ಷಣಬದ್ಧ ಕಾವ್ಯರಚನೆಗೆ ಮತ್ತು ಪ್ರಕಾಶನಕ್ಕೆ ಆಗಿರುವ ಪ್ರೇರಣೆಯ ವಿಚಾರವಾಗಿ, ಒಂದಿಷ್ಟು ವಿಶದೀಕರಣ ಅವಶ್ಯವೆನಿಸುವುದರಿಂದ ಅದನ್ನಿಲ್ಲಿ ಸಂಕ್ಷೇಪಿಸಿ ನಿರೂಪಿಸಲಾಗುವುದು.

ನಾನು ೧೯೪೨ರಲ್ಲಿ ಮದ್ರಾಸು ವಿಶ್ವವಿದ್ಯಾಲಯದ ' ಬಿ ' ವಿದ್ವಾನ್ (ಕನ್ನಡ ಮತ್ತು ಸಂಸ್ಕೃತ) ತೇರ್ಗಡೆಯಾದವನು. ಪರೀಕ್ಷೆಯಲ್ಲಿ ಉತ್ತೀರ್ಣತೆಗಿಂತ ಅನುಭವದ ಗಳಿಕೆಗೆ ಹೆಚ್ಚಿನ ಲಕ್ಷ್ಯವಿಟ್ಟಿದ್ದರಿಂದ ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ರೀತಿಯಂತಹ ಶಾಸ್ತ್ರ ವಿಷಯಗಳನ್ನು ಮುಖೋದ್ಗತ ಮಾಡಿದ್ದೆನು. ಅಂತಹ ಲಕ್ಷಣಬದ್ಧ ಚಂಪೂಕಾವ್ಯಗಳನ್ನು ಹೆಚ್ಚಿನ ಶ್ರದ್ಧೆಯಿಂದ ಆಧ್ಯಯನ ಮಾಡಿದ್ದೆನು. ಅಂತಹದೇ ಕಾವ್ಯರಚನೆಗೆ ಅದರಿಂದಲೇ ಅಂತಃಪ್ರೇರಣೆ ದೊರಕಿದ್ದಿತು. ಅಷ್ಟೇ ಅಲ್ಲ, ಅದರೊಂದಿಗೆ ಕಾವ್ಯರಚನೆಯಲ್ಲಿ ಸಮಾಜಕ್ಕೆ ಎಂದಿಗೂ ಅನುಸರಣೀಯವೆನಿಸುವ ನೀತಿಪ್ರತಿಪಾದನೆಯೂ ಇರಬೇಕೆಂಬುದನ್ನು ಸಂಲಕ್ಷಿಸಿರುತ್ತೇನೆ. ಶ್ರೀಕೃಷ್ಣಾರ್ಜುನರ ಕಾಳಗವನ್ನು ಕಥಾವಸ್ತುವಾಗಿಟ್ಟು, ಕಾವ್ಯರಚನೋಚಿತವಾಗಿ ಹಿಂದೆ ಕಾಳಿದಾಸನು ಅಭಿಜ್ಞಾನಶಾಕುಂತಲವನ್ನು ರೂಪಿಸಿಕೊಂಡಂತೆ, ನನ್ನ ಕಾವ್ಯಕ್ಕೆ ಸಹಜತೆ ಮಾರ್ಮಿಕತೆ ರಸಸ್ಯಂದತೆಗಳು ಬರುವಂತೆ ಮಾಡಿಕೊಂಡಿರುವುದು ಈ ಕಾವ್ಯದಲ್ಲಿ ನನ್ನ ಯೋಜನೆಯ ವೈಶಿಷ್ಟ್ಯತೆ. ಇದರ ನೈಜತೆಯ ಪರಿಶೀಲನೆ ಸಹೃದಯರಿಗೆ ಮೀಸಲು.

ಈ ಕಾವ್ಯರಚನೆಯ ಪರಿಪೂರ್ಣತೆ ಸುಮಾರು ೧೯೫೦ರಲ್ಲೇ ಆಗಿದ್ದಿತು. ಮುಂದೆ ೧೯೫೮ರಲ್ಲಿ ನಾನು ಮಡಿಕೇರಿಯಲ್ಲಿ ಸರಕಾರಿ ಹೈಯರ್ ಸೆಕೆಂಡರಿ

ಶಾಲೆಯಲ್ಲಿ ಕನ್ನಡ ಪಂಡಿತನಾಗಿದ್ದಾಗ, ೧೯೫೮ರ ಏಪ್ರಿಲ್ – ಮೇ ತಿಂಗಳಲ್ಲಿ, ಹೈಸ್ಕೂಲು ಕನ್ನಡ ಪಂಡಿತರ ಪರಿಣತಿಯ ಅಭಿವೃದ್ಧಿಗಾಗಿ ಮೈಸೂರಿನಲ್ಲಾದ ಒಂದು ತಿಂಗಳ ಶಿಬಿರದಲ್ಲಿ ಭಾಗವಹಿಸುವ ಸುಯೋಗ ನನಗೂ ದೊರಕಿದ್ದಿತು. ಅಲ್ಲಿಗೆ ಹೋಗುವಾಗ ನನ್ನ ಕಾವ್ಯದ ಕೈಬರೆಹಡ ಪ್ರತಿಯನ್ನು ಒಯ್ದಿದ್ದೆನು. ನನ್ನಂತೆಯೇ ಅಲ್ಲಿಗೆ ಬಂದಿದ್ದ, ಕನ್ನಡ ಪಂಡಿತರು ಗಮಕವಿದ್ವಾನ್ ಆಗಿದ್ದ, ಹಾಸನದ ನಂ. ಅಶ್ವತ್ಥನಾರಾಣರ ಗೆಳೆತನವಾಯಿತು. ನಾನೂ ಗಮಕಾಭ್ಯಾಸ ಮಾಡಿದ್ದುದು ಅವರ ನಿಕಟತೆಗೆ ಹೆಚ್ಚಿನ ಕಾರಣವಾಯಿತು. ಅವರು ನನ್ನ ಸತ್ತ್ವಾಲೋಕನ ಕಾವ್ಯವನ್ನು ನೋಡಿ ಮೆಚ್ಚಿ, ಮೈಸೂರಿನಲ್ಲಿ ಸಂಜೆ ಹಲವೆಡೆಯ ಕವಿ, ಗಮಕಿ, ವಿದ್ವಜ್ಜನರ ಮನೆಗಳಿಗೆ ನನ್ನನ್ನು ಕರೆದೊಯ್ದು ವಾಚನವಮಾಡಿದರಲ್ಲದೆ, ನನ್ನಿಂದಲೇ ವ್ಯಾಖ್ಯಾನವನ್ನೂ ಮಾಡಿಸಿದರು. ನನಗೆ ನೆನಪಿರುವಂತೆ ಪೌರಾಣಿಕ ಶಿರೋಮಣಿ ಸಾಲಿಗ್ರಾಮ ಶ್ರೀಕಂಠ ಶಾಸ್ತ್ರಿಗಳು, ಗಮಕಿ ಕೃಷ್ಣಗಿರಿ ಕೃಷ್ಣರಾಯರು, ತ. ಸು. ಶಾಮರಾಯರು – ಮುಂತಾದವರ ಸನ್ನಿಧಿಯಲ್ಲಿ ಈ ಕಾವ್ಯದ ವಾಚನ ವ್ಯಾಖ್ಯಾನಗಳು ನೆರವೇರಿವೆ. ಆ ಸಂದರ್ಭದಲ್ಲಿ ಕಾವ್ಯಾಂತರ್ಗತ ವಿಚಾರ ಚರ್ಚೆಗಳು ವಿಶೇಷವಾಗಿ ಆಗಿವೆ. ಅದರ ಪರಿಣಾಮವಾಗಿಯೇ ಪ್ರಕಟನದ ವೇಳೆ ನನ್ನ ಕಾವ್ಯಕ್ಕೆ ನಾನೇ ಪ್ರಸ್ತಾವನೆಯನ್ನೂ ರಚಿಸಿದುದಾಗಿರುತ್ತದೆ. ಅದು ಪ್ರಥಮಾವೃತ್ತಿಯ ಪ್ರಕಾಶನದಲ್ಲಿ ಬಂದಿರುತ್ತದೆ. ಕಾವ್ಯಾರ್ಥಗ್ರಾಹಿಗಳ ಹೃದ್ಗತ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಆ ಪ್ರಸ್ತಾವನೆ ಉತ್ತರರೂಪದಲ್ಲಿದೆ.

ಮೈಸೂರಿನ ನಂ. ಅಶ್ವತ್ಥನಾರಾಯಣರಿಂದ ವಾಚನ, ನನ್ನಿಂದ ವ್ಯಾಖ್ಯಾನಗಳನ್ನು ಶ್ರವಣ ಮಾಡಿದ ಹಿರಿಯ ವಿದ್ವಾಂಸರು ಈ ಕಾವ್ಯವನ್ನು ಆದಷ್ಟು ಬೇಗ ಮುದ್ರಿಸಿ ಪ್ರಕಾಶನ ಪಡಿಸಲು ಒತ್ತಾಯ ಮಾಡಿದ್ದರು. ಅದರ ಪರಿಣಾಮಾಗಿಯೇ ಇದನ್ನು ನಾನು ೧೯೫೯ರಲ್ಲಿ ಮೈಸೂರಿನ ರತ್ನ ತ್ರಯ ಮುದ್ರಣಾಲಯದಲ್ಲಿ ಅಚ್ಚು ಹಾಕಿಸಿದ್ದೆನು. ಹಿಂದೆ ತಿಳಿಸಿದಂತೆ ೧೯೬೦ರಲ್ಲಿ ಇದು ರಾಜ್ಯ ಪ್ರಶಸ್ತಿಗೆ ಪಾತ್ರವಾಯಿತು. ಆ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಸಾರೋಪನ್ಯಾಸಕನಾಗಿ ನಾನು ಕನ್ನಡ ಸಾಹಿತ್ಯ ಪ್ರಸಾರ ಮಾಡುವೆಡೆ, ನನ್ನ ಈ ಕಾವ್ಯವನ್ನು ಕುರಿತು ಉಪನ್ಯಾಸ ಮಾಡಿರುವುದೂ ಉಂಟು. ಹಿರಿಯ ವಿದ್ವಾಂಸರಾದ ಜಿ. ಪಿ. ರಾಜರತ್ನಂ – ಅವರು, ನನ್ನ ಕಾವ್ಯವನ್ನು ನಾನೇ ವಾಚನವಾಡುವುದು, ವ್ಯಾಖ್ಯಾನವಮಾಡುವುದು, ಪ್ರಸಾರೋಪನ್ಯಾಸ ನಡೆಸುವುದು ಚೆನ್ನಾಗಿಲ್ಲವಲ್ಲವೆ? ಎಂದು ಪ್ರಶ್ನಿಸಿರುವುದುಂಟು. ಆಗ ನಾನು ಕೊಟ್ಟ ಉತ್ತರವಿಷ್ಟೆ – ಎಲ್ಲಿಯೂ ನಾನು ನನ್ನ ಕಾವ್ಯಪ್ರಶಂಸೆ ಮಾಡಿಲ್ಲ, ಮಾಡುವುದೂ ಇಲ್ಲ. ಆದರೆ ಸ್ವತಃ ಕವಿಯಾಗಿ ಯಾವ ದೃಷ್ಟಿಕೋನದಿಂದ ಕೃತಿ ರಚಿಸಿದ್ದೇನೆ? ಪದ್ಯಗಳಿಗೆ ನಾನಿಟ್ಟುಕೊಂಡ ಅರ್ಥವೇನು? ಶ್ಲೇಷಾರ್ಥ ಗೂಢಾರ್ಥಗಳೇನು? ಎಂಬುದನ್ನು ದಿಗ್ದರ್ಶನವಾಗಿ ತೋರಿಸುವುದು ಅಶಿಷ್ಟತೆಯಲ್ಲ – ಎಂದುದನ್ನು ಅವರೂ ಒಪ್ಪಿದರು.

ಈ ಕಾವ್ಯದ ಅನೇಕ ಕಡೆಗಳಲ್ಲಿ ನನಗೆ ಸ್ಫುರಿಸದ ವಿಶೇಷಾರ್ಥಗಳನ್ನು ಶ್ರೀಕಂಠ ಶಾಸ್ತ್ರಿಗಳು, ಗಮಕಿ ಕೃಷ್ಣಗಿರಿ ಕೃಷ್ಣರಾಯರು, ಡಿ. ಎಲ್. ನರಸಿಂಹಾಚಾರ್ಯರು, ತ. ಸು. ಶಾಮರಾಯರು ಹಾಗೂ ನಂ. ಅಶ್ವತ್ಥನಾರಾಯಣರು, ಮಡಿಕೇರಿಯಲ್ಲಿದ್ದ ಗಮಕಿ ಅನಂತಪದ್ಮನಾಭರಾಯರು, ಬೆಂಗಳೂರಿನಲ್ಲಿ ಗಮಕಿ ರಾಘವೇಂದ್ರರಾಯರು ಕಂಡುಕೊಂಡವು ಹತ್ತಾರು ಕಡೆ ಇವೆ. ಉದಾಹರಣೆಗಾಗಿ – ನಾನು ನನ್ನ ತಂದೆಯವರ ಮಕ್ಕಳಲ್ಲಿ ಕೊನೆಯವನು, ಇಂದಿನ ಕವಿಗಳಲ್ಲಿಯೂ ಕಿರಿಯನು ಎಂಬ ಅರ್ಥದಿಂದ ಕನೀಯಂ ಎಂದುಕೊಂಡುದು. ಆದರೆ ವಿದ್ವಾಂಸರು ಕನಿಷ್ಠಕಾಧಿಷ್ಠಿಕಾಧಿಷ್ಠಿತನಾದ ಕಾಳಿದಾಸನನ್ನು ಉದಾಹರಿಸಿ, 'ಕನೀಯನಲ್ಲ, ಮಹನೀಯನು' ಎಂದುದುಂಟು. ಡಾ. ಕೆ. ಕೃಷ್ಣ ಮೂರ್ತಿಯವರ 'ಪ್ರಶಸ್ತಿಕುಸುಮಾಂಜಲಿ' ಪದ್ಯಗಳನ್ನು ಈ ಕಾವ್ಯದಲ್ಲಿ (ಪ್ರಾರಂಭದ ಭಾಗದಲ್ಲಿ) ಕಾಣಬಹುದು. ಹಾಗೆಯೇ 'ಸಜ್ಜನಪದ ಮಸ್ತಕಂ' ಎಂದುದಕ್ಕೂ ವಿಶೇಷಾರ್ಥವನ್ನು ಇತರರು ಮಾಡಿರುವುದುಂಟು.

ನೀತಿಪ್ರತಿಪಾದನೆಯ ದೃಷ್ಟಿಯಿಂದ ಈ ಕಾವ್ಯಕಥನವು ಯೌವನ –ಧನ–ಸ್ಥಾನ–ಮಾನಗಳ ಗರ್ವವನ್ನು ಖಂಡಿಸುವಂತಿದೆ. ತಪ್ಪಿಗಾಗಿ ಪಶ್ಚಾತ್ತಾಪ, ಆಶ್ರಿತರಕ್ಷಣೆ, ಶಿವಭಕ್ತಿ, ಪ್ರತಿಜ್ಞಾಪಾಲನೆ, ಸತ್ಯನಿಷ್ಠೆ, ಮಾನವಸಹಜವಾದ ಪುತ್ರಸ್ನೇಹ, ಸ್ತ್ರೀಸಹಜವಾದ ಲಾಲಸೆಯಂತೆ ಉದ್ಯಾನವಿಹಾರ, ಯೋಗಿವರ್ಯನಿಂದ ಧರ್ಮೋಪದೇಶ, ಬಂಧುಪ್ರೇಮವಷ್ಟೇ ಅಲ್ಲ, ವಿಶ್ವಮೈತ್ರಿಯ ಸಂದೇಶ–ಅದು ಕೂಡ ಶಿವನಿಂದ ಕೃಷ್ಣಾರ್ಜುನರಿಬ್ಬರಿಗೂ ನೀಡುವ ಮೂಲಕ ವಿಶ್ವಕ್ಕೇ ನೀಡಿದಂತಿರುವುದು – ಈ ಕಾವ್ಯದಲ್ಲಿ ಕಾಣಿಸುವಷ್ಟು ಬೇರೆ ಕಡೆ ಕಂಡುಬರುವುದಿಲ್ಲವೆಂದು ಮಿತ್ರರೊಬ್ಬರು ಉದ್ಗರಿಸಿರುವುದನ್ನು ಖಂಡಿಸಲು ಸಾಧ್ಯವಿಲ್ಲವಲ್ಲವೆ?

ಈ ಕಾವ್ಯದ ಭಾಗವನ್ನು ಕೇರಳರಾಜ್ಯದ ಕನ್ನಡ ಪ್ರೌಢತರಗತಿಯ ಪಠ್ಯಪುಸ್ತಕದಲ್ಲಿ (೧೯೬೧) ಸೇರಿಸಿದ್ದರು. ನಾನು ಕಾಸರಗೋಡಿನ ಕಡೆಗೆ ಹೋಗಿದ್ದಾಗ ಪದ್ಯಗಳಿಗೆ ಸರಿಯಾಗಿ ಅರ್ಥನೀಡಿ ಪಾಠಮಾಡುತ್ತಿದ್ದಾರೋ ಎಂದು ಪರಿಶೀಲಿಸಿದುದುಂಟು. ಒಂದು ಉದಾಹರಣೆ ಇಲ್ಲಿ ಪ್ರಸ್ತುತ – ಅರ್ಜುನನು ಮರೆ ಹೊಕ್ಕ ಗಯನಿಗೆ ಅಭಯ ನೀಡಿದ್ದನಷ್ಟೆ? ಅರ್ಜುನನ ಭರವಸೆಯ ಮಾತಿನ ಪದ್ಯವೊಂದು ಹೀಗಿದೆ–

**ಬಂಧುತ್ವಮದನ್ಯೋನ್ಯಂ**
**ಬಂದಾ ಗಯನಂ ಸಮಂತು ಪೊರೆವುದೆ ಧರ್ಮಂ**
**ಸಂದೆಯಮೇನೆನಗಿದಿರೊಳ್**
**ನಿಂದೊಡೆ ತಾನಾವೆಯಾದೊಡಂ ಕಾದದಿರೆಂ (ಅ. ೭–೨೫)**

ಇಲ್ಲಿ 'ಆವೆಯಾದೊಡಂ' ಎಂದಿರುವುದು ಮುದ್ರಣದ ತಪ್ಪಾಗಿರಬಹುದೆಂದು ಕನ್ನಡ ಪಂಡಿತರೊಬ್ಬರು ಅದೊಂದು ಹೈಸ್ಕೂಲಿನಲ್ಲಿ 'ಅವ್ವೆಯಾದೊಡಂ ಕಾದದಿರೆಂ' ಎಂದು ತಿದ್ದುಪಡಿಯನ್ನು ಮಾಡಿದರಂತೆ. ತನ್ನ ಅವ್ವೆ (ತಾಯಿ) ಕಾದಾಡಲು

ಬಂದರೂ ನಾನು ಕಾದಾಡದಿರೆನು–ಎಂದು ಅರ್ಥಹೇಳಿರುವುದಾಗಿ ನನಗೆ ತಿಳಿಯಿತು. ವಾಸ್ತವಿಕವಾಗಿ ಇಲ್ಲಿ ಮುದ್ರಾದೋಷವಿಲ್ಲ, ಅರ್ಥಮಾಡಲಾರದಾದುದೇ ದೋಷ. ಶಬ್ದಮಣಿದರ್ಪಣ ಪ್ರಯೋಗದಲ್ಲಿ – 'ಆರಾದೊಡಂ ಎಂಬಲ್ಲಿ ಆವೆಯಾದೊಡಂ ಎಂದುಮುಂಟು' ಎನ್ನಲಾಗಿದೆ. 'ಯಾರೇ ಆದರೂ' ಎಂದು ಅದರ ಅರ್ಥ. ಪೂರ್ವಕವಿಪ್ರಯೋಗವೆಂಬುದು ಆ ಕನ್ನಡ ಪಂಡಿತರಿಗೆ ಗೊತ್ತಿದ್ದಿಲ್ಲ !

ಈಗ ಈ ಸತ್ತ್ವಾಲೋಕನ ಕಾವ್ಯವನ್ನು ವಿಶೇಷ ಪರಿಶೀಲನೆಯಿಂದ ಪುನರ್ಮುದ್ರಣ ಮಾಡುವ ಅವಕಾಶವಾದುದಕ್ಕಾಗಿ ಸಂತೋಷಪಡುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಕೃತಜ್ಞತೆಗಳು.

ಬೆಳಕಿತ್ತರ್ ಕವಿ ಪಂಪ ರತ್ನ ವರ ರುದ್ರಾಂಡಯ್ಯ ಮುಂತಾದವರ್
ವಿಳಸತ್ ಕಾವ್ಯಸುರತ್ನದೀಪತತಿಯಿಂ ಸಾಹಿತ್ಯ ಸುಕ್ಷೇತ್ರದೊಳ್
ತೊಳಗಲ್ಕೀ ಮೊಸಗಬ್ಬಮಂ ಪಣತೆಯೊಂದಂ ಪೊತ್ತಿಸಲ್ಕಾರ್ತೆ ನಾಂ
ತಿಳಿಯೆಂ ಮಾಟ್ಪು ಮಾಡದೊ ಬೆಳಕನೀ ಕರ್ತವ್ಯಮಂ ಮಾಡಿದೆಂ

**(8–34)**

# ಪರಿವಿಡಿ



*****

### ಗ್ರಂಥಾವಲೋಕನ ನಿದರ್ಶಕವಾಗಿ
### ಶ್ರೀ ದ. ರಾ. ಬೇಂದ್ರೆಯವರು ಕಳುಹಿದ ಪದ್ಯಗಳು

ಸತ್ತ್ವಾಲೋಕನ ಪಥದೊಳ್
ತತ್ತ್ವಾಲೋಕನಮೆ ಸಹಜಮಾಗಿರೆ ಸ್ವಾಂತಃ
ಸ್ವತ್ವಸ್ಪಂದನಮಾದ ಕ
ವಿತ್ವದ ಸಂರಾಜ್ಯದಲ್ಲದಾರು ಕನೀಯರ್ ? : ೧ :

ಸುರಗಂಧರ್ವನ ಗರ್ವಪರ್ವತದ ಪಕ್ಷಚ್ಛೇದಮಂ ಮಾಡಲುಂ
ಹರನುಂ ಸಂಹರಣಾರ್ಥಮಾಗಿ ಧರೆಯೊಳ್ ಮೇಣಟ್ಟಿದಂ ಕೃಷ್ಣನಂ
ವರಮೈತ್ರಂ ಪ್ರತಿಪಾತ್ರಮಾಗೆ ಚರಿತಂ ತಾನದ್ಭುತಾಶಾಂಕುರಂ
ನರ ನಾರಾಯಣ ನಾರಕಂ ನಡೆದಿರಲ್ಕಾ ಸಂಗರಂ ಭಂಗುರಂ : ೨ :

ಕಾವ್ಯಂ ಜೈನಕವೀಶ್ವರರ್ ತುಳಿದ ಮಾರ್ಗಂ ಸಮ್ಮತಂ ವಸ್ತುವುಂ
ಸೇವ್ಯಂ ವೈಷ್ಣವ ಶ್ರೋತ್ರಿಯಾಗ್ರಣಿಗಳಿಂ ತಾಂ ಬಂಧುರಂ ಬಂಧದೊಳ್
ಶೈವಾನುಗ್ರಹಮೊಂದಿ ಬಂದಿದೆ ಕಣಾ ! ಇನ್ನೇನಭಿಪ್ರಾಯಮೋ
ದೈವಾನುಗ್ರಹಮುಂಟೆ ಬೇರೆ ಕವಿಗಂ ಸಾರಸ್ವತಂ ಸಂಗತಂ : ೩ :

ಕೇಶವಕವಿಕೃತ ಕಾವ್ಯಂ
ಪ್ರಾಶನಯೋಗ್ಯಂ ಸದಂತರಂಗಂ ತೀರ್ಥಂ
ಆ ಶಿವನುಂ ಕೇಶವನುಂ
ಪೋಷಿತರೇಕಾಂಗಮಾಗಿ ನಿಂದರ್ ಕೃತಿಯೊಳ್ : ೪ :

– ಅಂಬಿಕಾತನಯ ದತ್ತ

### ಕೃತಿಗೆ ಮೆಚ್ಚರಾರೀ ಧರೆಯೊಳ್ ?

ಅರಸಲ್ ಚಂಪೂಮಾರ್ಗಂ
ಧರೆಯೊಳ್ ತಾಂ ವಿರಳಮಾಗೆ ಕವಿಕೇಶವನಿಂ
ದುರುತರಶೈಲಿಯ ಸೊಗಸಿಂ
ಮೆರೆವುದು ಚಿಗುರೊಡೆದ ಮಾಮರಂ ತಾನೆನಿಸ್ : ೧ :

ಸತ್ತ್ವಾಲೋಕನ ಕಾವ್ಯಾಮ
ನತ್ಯಾದರದಿಂದಮೋದಿ ರಸದುನ್ನತಿಯಂ
ತತ್ತ್ವಾಲೋಕನಮಂ ಮೇಣ್
ಬಿತ್ತರಿಸುವ ಕೃತಿಗೆ ಮೆಚ್ಚರಾರೀ ಧರೆಯೊಳ್ : ೨ :

ಕವಿಕೇಶವಕೃತ ಕಾವ್ಯಂ
ಭುವನಸ್ತುತಮಾಗಿ ನಿಲ್ಕನಾಕುಳಮೆಂಬೀ
ಶಿವವಾಕ್ಯಂ ಸುಂದರತರ
ಮವಿರತಮಾಗಿರ್ಕೆ ಚಂದ್ರತಾರ್ರಂಬರೆಗಂ : ೩ :

— ಪ್ರೊ. ಆರ್. ಸಿ. ಹೀರೆಮಠ, ಎಂ. ಎ., ಪಿ.ಎಚ್. ಡಿ.
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೨–೪–೧೯೫೯

## ಪ್ರಶಸ್ತಿಕುಸುಮಾಂಜಲಿ

ರುಚಿಚಕ್ರದ ಪರಿವರ್ತಂ
ಪ್ರಚಲಿತ ಪಾಶ್ಚಾತ್ಯಮಾರ್ಗದಂಧಪ್ರೇಮಂ
ಸುಚರಿತ ಕವಿಪದ್ಧತಿಯಂ
ವಿಚಲಿತಗೊಳಿಸಲ್ಕೆ ಸಾಲ್ವುದೆಂತೀ ಧರೆಯೊಳ್ : ೧ :

ಗಿರಿಗೆಂತುನ್ನತಿ ಬೆಂಕಿಗೆಂತು ದಹನಂ ಗಾಂಭೀರ್ಯಮೆಂತಬ್ಧಿಗಂ
ತಿರೆಗೆಂತುತ್ತಮಗಂಧಮಾ ದಿನಕರಂಗೆಂತಾ ಮಹಾತೇಜಮುಂ
ವರಮಾನವ್ಯಕುಲಕ್ಕಮಂತೆ ಸಹಜಂ ರತ್ಯಾದಿ ಭಾವಂ ವಲಂ
ಚಿರಸಾಹಿತ್ಯಕಿದಲ್ತೆ ಮೂಲವಿಷಯಂ ವ್ಯಾವರ್ಣನಕ್ಕೂರ್ಜಿತಂ : ೨ :

ಪಿರಿದೆನೆ ನಡೆ ಪಿರಿದದು ನುಡಿ
ಪಿರಿದೈಸಲೆ ಭಾವದೆತ್ತರಂ ಪಿರಿದೆಲ್ಲಂ
ಪುರುಷರ್ ಪಿರಿಯರೆನಲ್ ಕವಿ
ವರರುಂ ಪಿರಿದಪ್ಪ ಕೃತಿಗಳಂ ವಿರಚಿಸಿದರ್ : ೩ :

ಎಲ್ಲರ್ ಬಲ್ಲಾ ಕತೆಯೆನ
ಲೆಲ್ಲಿಯುಮಿನಿಸಿಲ್ಲದೊಂದು ಸೊಬಗಂ ಬೆಡಗಂ
ಬಲ್ಲಿದರೊಂದಿಸೆ ಕವಿಗಳ್
ಸಲ್ಲಲಿತ ಕಲಾವಿಲಾಸದಿಂ ಪೂರ್ವದವರ್ : ೪ :

ಪೊಸಯುಗದೊಳ್ ಪೊಸಕೃತಿಯಂ
ರಸಮೊಸರ್ವಂತುಸಿರಲಾರ್ಪರಿರ್ಪರೆನುತ್ತಂ
ಸುಸಮಾಹಿತ ಮನದಿಂದಂ
ಬಿಸವಂದಮೆನಲ್ಕೆ ಸಮೆದ ಕವಿ ನೀಂ ಧನ್ಯಂ : ೫ :

ದೋರ್ವಲದೆಸಕಂ ರಂಜಿಸು
ವೀರ್ವರ ವರಕಥೆಯೇ ವಸ್ತು ವಸ್ತುಕಕೆನಿಸಲ್
ಪೂರ್ವದ ಚಂಪೂರೂಪಮ
ಪೂರ್ವತೆಯಂ ತಳೆದು ಪೊಳೆವುದೈ ಪೊಸಜಾಣಿಂ : ೬ :

ಕವಿಯೀ ಸತ್ತ್ವಾವಲೋಕಂ ಸಹೃದಯಜನತಾ ಸತ್ತ್ವದಾಲೋಕಕಲ್ಪಂ
ಸುವಿಚಾರಂ ಕಾವ್ಯಲೋಕೋಚಿತ ಮೃದುಮಧುರಾಲಾಪಕೀರ್ಣಂ
ಸುಪೂರ್ಣಂ

ಕವಿತಾವಿನ್ಯಾಸಮೊಳ್ಪಂ ತಳೆದಿರೆ ವಚನಂ ಕಾಂತಿಯಂ ಸೂಸಲೆತ್ತಂ
ಬುವಿಯೊಳ್ ಕಾವ್ಯಪ್ರಚಾರಂ ಕವಿಗಮುರುಯಶಂ ಬರ್ಕೆ ತಾಂ
ನಿಚ್ಚಮೆಂಬೆಂ : ೭ :

ಚಾರುತರಾಲಂಕಾರಂ
ಸಾರಂ ಶೃಂಗಾರ ವೀರ ಪೂರಂ ಪರಿಯಲ್
ಹಾರಾವಳಿಯಿಂದೊಪ್ಪುವ
ನಾರೀಮಣಿಯಂತೆ ಕಾವ್ಯಮೆಳೆಯದೆ ಜನರಂ : ೮ :

ಕೃತಕೃತ್ಯಂ ಕವಿಕೇಶವ
ನತಿ ನಯದೆ ಕನೀಯನೇಂದೊಡಂ ಮಹನೀಯಂ
ಮತಿವಂತರ್ ಪಳಗನ್ನಡ
ಗತಿಲೋಲರ್ ಮೆಚ್ಚಿ ಪಡೆಗೆ ಕೃತಕೃತ್ಯತೆಯಂ : ೯ :

ಪ್ರಸ್ತುತ ಕಾವ್ಯಾಲೋಕನ
ವಿಸ್ತಾರಿತ ಹರ್ಷನಾತ್ತ ಪುಲಕೋತ್ಕರ್ಷಂ
ಅಸ್ತ ಸಮಸ್ತಾಸೂಯಂ
ಹಸ್ತದಿನರ್ಪಿಸುವನೀ ಪ್ರಶಸ್ತಿಯ ಸುಮಮಂ. : ೧೦ :

– ಡಾ. ಕೆ. ಕೃಷ್ಣಮೂರ್ತಿ, ಎಂ. ಎ. ಬಿ. ಟಿ., ಪಿಹೆಚ್. ಡಿ.
೧೮–೩–೧೯೫೪

# ಶುಭಾಶಯ

ಹಾಸನ

ತಾ : ೨೧-೩-೧೯೫೫

ಕಳೆದ ವರ್ಷ ಬೇಸಗೆ ರಜಾದಲ್ಲಿ ನನ್ನ ಮಿತ್ರರಾದ ಶ್ರೀ ಟಿ. ಕೇಶವ ಭಟ್, ಎಂ. ಎ. ಅವರು ರಚಿಸಿದ 'ಸತ್ತ್ವಾಲೋಕನಂ' ಎಂಬ ವಸ್ತುಕಕಾವ್ಯವು ಇನ್ನೂ ಕರಡು ಪ್ರತಿಯಲ್ಲಿ ಇದ್ದಾಗಲೇ ಮೈಸೂರಿನಲ್ಲಿ ಹಲವು ವಿದ್ವಾಂಸರ ಸನ್ನಿಧಿಯಲ್ಲಿ ನಾಲ್ಕಾರು ಬಾರಿ ವಾಚನೂಮಾಡುವ ಸುಯೋಗವು ನನಗೆ ಲಭಿಸಿತು. ಈಗ ಅದೇ ಕಾವ್ಯವು ಅಚ್ಚುಕೂಟದಿಂದ ಸರ್ವಾಂಗಸುಂದರವಾಗಿ ಹೊರಬಂದು ಕೊಡಗು ಕರ್ಣಾಟಸಂಘದ ರಜತಮಹೋತ್ಸವ ಸಂದರ್ಭದಲ್ಲಿ ಶ್ರೀ ಅ. ನ. ಕೃಷ್ಣರಾಯರ ನೇತೃತ್ವದಲ್ಲಿ ಉದ್ಘಾಟಿಸಲ್ಪಟ್ಟಿರುವುದು ಅತ್ಯಂತ ಸಂತೋಷದ ಸಂಗತಿ.

ಈಗಿನ ಕಾಲದಲ್ಲಿ ಚಂಪೂಕಾವ್ಯವನ್ನು ಬರೆವವರು ವಿರಳ; ಇಲ್ಲವೆಂದರೂ ತಪ್ಪಾಗಲಾರದು. ಶ್ರೀ ಟಿ ಕೇಶವ ಭಟ್ಟರು ಇಂಥ ಮಹೋದ್ಯಮವನ್ನು ಕೈಗೊಂಡು ಪೂರ್ಣ ಯಶಸ್ವಿಗಳಾಗಿರುತ್ತಾರೆ. ಕನ್ನಡ ಸಾಹಿತ್ಯಭಂಡಾರಕ್ಕೆ ಇದೊಂದು ಬೆಲೆಯುಳ್ಳ ಕಾಣ್ಕೆಯಾಗಿದೆ. ಗಮಕವಾಚನಕ್ಕೆ ಈ ಕಾವ್ಯ ಬಹಳ ಚೆನ್ನಾಗಿ ಅಳವಡುತ್ತದೆ. ತರುಣಗಮಕಿಗಳು ಈ ಕಾವ್ಯವನ್ನು ಬೆಳಕಿಗೆ ತರುವ ಸಾಹಸ ಮಾಡಬೇಕೆಂತ ಪ್ರಾರ್ಥಿಸುತ್ತೇನೆ. ಕಂದ ವೃತ್ತಗಳನ್ನು ನಿರಾಯಾಸವಾಗಿ ಬರೆಯುವುದರಲ್ಲಿ ಭಟ್ಟರು ಸಿದ್ಧಹಸ್ತರು. ಒಳ್ಳೆಯ ಗಮಕಿ ಮನಸ್ಸು ಮಾಡಿದರೆ, ಅವುಗಳನ್ನು ಕುಣಿಸಬಹುದು. ಇಂಥ ಸುಂದರ ವಸ್ತಕ ಕಾವ್ಯವು ಅತ್ಯಂತ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಶ್ರೀ ಕೇಶವ ಭಟ್ಟರಂಥ ವಿದ್ವಾಂಸರಿಂದ ನಾಡು ಇಂಥ ಇನ್ನೂ ಅನೇಕ ಕೃತಿಗಳನ್ನು ಬಯಸುತ್ತದೆ. ಶ್ರೀ ವೀರನಾರಾಯಣನು ಅವರಿಗೆ ಸಕಲ ಸನ್ಮಂಗಳಗಳನ್ನೂ ಕೊಟ್ಟು ಕಾಪಾಡಲೆಂತ ಪ್ರಾರ್ಥಿಸುತ್ತೇನೆ.

**– ನಂ. ಅಶ್ವತ್ಥನಾರಾಯಣ, ಹಾಸನ**

ಕನ್ನಡ ಪಂಡಿತರು, ಗಮಕ ವಿದ್ವಾನ್.

# ಅಭಿಪ್ರಾಯ

ನನ್ನ ಸ್ನೇಹಿತರಾದ ವಿದ್ವಾನ್, ಟಿ. ಕೇಶವ ಭಟ್. ಎಂ. ಎ ಅವರು ರಚಿಸಿರುವ ಕನ್ನಡ ಚಂಪೂ ಕಾವ್ಯವಾದ 'ಸತ್ತ್ವಾಲೋಕನಂ' ಎಂಬ ಉದ್ಗ್ರಂಥವನ್ನು ಓದಿ ನೋಡಿದೆನು. ಸಂತೊಂಷವಾಯಿತು.ಈ ಗ್ರಂಥವನ್ನೋದುವಾಗ ಪಂಪ ರನ್ನರ ನೆನಪಾಯಿತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಸ್ತುಕ ಕಾವ್ಯರಚನೆಯು ಬಹಳ ವಿರಳವಾಗುತ್ತಿರುವಾಗ ಶ್ರೀಮಾನ್ ಕೇಶವ ಭಟ್ಟರು ಉತ್ತಮ ರೀತಿಯ ಕಾವ್ಯವೊಂದನ್ನು ಪ್ರೌಢಶೈಲಿಯಲ್ಲಿ ರಚಿಸಿ, ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಗಯನ ನಿಮಿತ್ತದಿಂದ ಅರ್ಜುನ ಕೃಷ್ಣರಿಗೆ ನಡೆಯುವ ಯುದ್ಧವು ಈ ಕಾವ್ಯದ ಕಥಾವಸ್ತು. ವೀರರಸವೇ ಈ ಗ್ರಂಥದಲ್ಲಿ ಪ್ರಧಾನವಾಗಿ ಕಂಡರೂ ಇತರ ರಸಗಳೂ ಅಲ್ಲಲ್ಲಿ ಒರತೆಗಳಂತೆ ಉಕ್ಕಿ ಓದುಗರ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತವೆ.

ಶ್ರೀಯುತರು ಕನ್ನಡ, ಸಂಸ್ಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷಾನಿಪುಣರಾಗಿರುತ್ತಾರೆ. ಈ ಗ್ರಂಥದ ಆರಂಭದಲ್ಲಿ ಪ್ರಸ್ತಾವನೆಯಾಗಿ ಕೃತಿಪರಿಚಯವನ್ನು ತಾವೇ ಮಾಡಿಕೊಟ್ಟಿರುತ್ತಾರೆ. ನವೀನ ಕಾಲದಲ್ಲಿ ಹುಟ್ಟಿರುವ ಈ ಪ್ರಾಚೀನಶೈಲಿಯ ಗ್ರಂಥಕ್ಕೆ ಕನ್ನಡ ಬಾಂಧವರು ಸುಸ್ವಾಗತವನ್ನೀಯಲಿ. ಶ್ರೀಯುತರ ಲೇಖನಿಯು ನಿರರ್ಗಳವಾಗಿ ಹರಿದು, ಅದರಿಂದ ಅನೇಕ ಕಾವ್ಯಗಳು ಹೊರ ಸೂಸಲಿ.

'ಸಿರಿಗನ್ನಡಂ ಗೆಲ್ಗೆ'

ವಿಧಾನಸೌಧ,
ಬೆಂಗಳೂರು – 1
ತಾ : 30–4–1959.

– **ಕೆ. ಎಸ್. ಧರಣೇಂದ್ರಯ್ಯ, ಎಂ. ಎ. ಬಿ. ಟಿ.**
ಡೈರೆಕ್ಟರು, ಸಾಹಿತ್ಯ ಮತ್ತು ಸಂಸ್ಕೃತಿ
ಅಭಿವೃದ್ಧಿ ಇಲಾಖೆ, ಮೈಸೂರು ಸರಕಾರ.

*****

# ಪ್ರಸ್ತಾವನೆ

**ಕವಿ ಕಾವ್ಯನಾಮ ವಿಚಾರ**

ಈ ಕಾವ್ಯವು 'ಸತ್ತ್ವಾಲೋಕನ ವಸ್ತುಕ ಕಾವ್ಯ'. ಇದಕ್ಕೆ ಹರಿ ನರ ಸಮರವೇ ವಸ್ತು. ಇದನ್ನು ರಚಿಸಿದವನು ಸಜ್ಜನ–ಪದ–ಮಸ್ತಕನೂ ಉಪಾಧ್ಯಾಯನೂ ಕನೀಯನೂ ಆದ ಕೇಶವನೆಂದು ಕಾವ್ಯದಲ್ಲಿ ಉಕ್ತವಾಗಿದೆ. ಒಂದರ್ಥದಲ್ಲಿ ಸತ್ ಜನ – ಪದ – ಮಸ್ತಕಂ ಕನೀಯಂ ಎಂದಾಗ, ಸತ್ಪುರುಷರ ಪಾದಕ್ಕೆ ತಲೆಯನ್ನಿಟ್ಟ (ವಿನಮ್ರನಾದ), ಕನೀಯನಾದ (ಕಿರಿಯನಾದ), ಅಲ್ಪನಾದ ತಾನು ಎಂದಂತಾಗುವುದು. ಕವಿಯ ಭಾವನೆ ಇದೇ. ಅಭಿಮಾನಿಗಳು ಕೆಲವರು ಇದಕ್ಕೇ ಇನ್ನೊಂದು ಅರ್ಥದಲ್ಲಿ – ಸತ್ + ಜನಪದ (ಹಳ್ಳಿಗಳ ಸಮುದಾಯ, ದೇಶ, ಜನತೆ) ಮಸ್ತಕಂ – ಎಂದರೆ ಒಳ್ಳೆಯ ದೇಶಕ್ಕೆ (ನಾಡಿಗೆ) ಹಾಗೂ ಜನತೆಗೆ ಶಿರಃ ಪ್ರಾಯನಾಗಿ ಕವಿಗಳ ಗಣನೆಯಲ್ಲಿ ಮೊದಲಿಗನೆನಿಸುವವನೆಂದು ಹೇಳಿಕೊಂಡಂತಿದೆ ಎಂದಿದ್ದಾರೆ. 'ವಸ್ತುಕ' ಎಂದರೆ ಚಂಪೂಕಾವ್ಯ. ಉದಯಾದಿತ್ಯಾಲಂಕಾರಗ್ರಂಥದಲ್ಲಿ ಹೀಗೆ ಹೇಳಿದೆ –

> **ಗದ್ಯದ ಪದ್ಯದ ಮಿಶ್ರದೆ**
> **ಹೃದ್ಯಂ ಚಂಪೂಸಮಾಖ್ಯ ಕಾವ್ಯಂ ಸೇವ್ಯಂ**

ಇದಲ್ಲದೆ, ಚಂಪು ಮತ್ತು ವಸ್ತುಕ ಎಂದರೆ ಒಂದೇ ಎಂದು ಅಪ್ರತಿಮವೀರ ಚರಿತೆಯಲ್ಲಿಯೂ ಹೇಳಿದೆ. ಅದರಂತೆ ಇದು ಎಂಟು ಆಶ್ವಾಸಗಳಿಂದ ಕೂಡಿದ ಚಿಕ್ಕ ಚಂಪೂಕಾವ್ಯವೆಂಬುದು ನಿಶ್ಚಯ. ಇದಕ್ಕೆ 'ಸತ್ತ್ವಾಲೋಕನಂ' ಎಂಬ ಹೆಸರೇಕೆ? ಇದೇ ಕಾವ್ಯದ ಪ್ರಮಾಣವನ್ನೇ ನೋಡಬಹುದು – ಪ್ರತಿಯೊಂದು ಆಶ್ವಾಸಾಂತ್ಯದಲ್ಲಿ 'ಸತ್ತ್ವಾಲೋಕನ ಕಾವ್ಯದೊಳ್' ಎಂಬ ವಾಕ್ಯಾಂಶವಿದೆ. ಅದಲ್ಲದೆ ಅಷ್ಟಮಾಶ್ವಾಸದಲ್ಲಿ ಮೂವತ್ತಮೂರನೇಯ ಪದ್ಯ ಈ ರೀತಿಯಿದೆ –

> **ಇದು ಕೃಷ್ಣನದಿದು ಪಾರ್ಥನ**
> **ದಿದು ಕವಿಕೇಶವನದೆನಿಸಿ ಸತ್ತ್ವಾಲೋಕಾ**
> **ಸ್ಪದ ಸತ್ತ್ವಾಲೋಕನ ಕಾ**
> **ವ್ಯದ ವಿಸ್ತೃತಿಯಾಯ್ತು ಕಾಣ್ಕೆ ಕನ್ನಡಕೀಗಳ್ (೮ – ೩೩)**

ಈ ಪದ್ಯದಲ್ಲಿ ಹೇಳುವಂತೆ, ಈ ಕಾವ್ಯವು ಶ್ರೀಕೃಷ್ಣ – ಅರ್ಜುನ – ಕವಿ – ಕೇಶವ – ಎಂಬೀ ಮೂವರ ಸತ್ತ್ವದ ಆಲೋಕನಕ್ಕೆ ಆಸ್ಪದವಾಗಿರುವ 'ಸತ್ತ್ವಾಲೋಕನ ಕಾವ್ಯ' ಎಂದು ವಿದಿತವಾಗುವುದು. ಹಾಗಿದ್ದರೆ ಆ ಪದದ ಅರ್ಥವೇನು?

'ಸತ್ತ್ವ' ಎಂದರೆ ಇಲ್ಲಿ ಬಲ ಅಥವಾ ಸಾಮರ್ಥ್ಯ. ಆಲೋಕ ಅಥವಾ ಆಲೋಕನ ಎಂಬುದು ನೋಡುವಿಕೆ, ಪ್ರಕಾಶಪಡಿಸುವಿಕೆ ಎಂಬ ಅರ್ಥಗಳಲ್ಲಿದೆ. ಈ ಕಾವ್ಯದಲ್ಲಿ ಶ್ರೀಕೃಷ್ಣನು ಅರ್ಜುನನ ಸತ್ತ್ವವನ್ನು ಪರೀಕ್ಷಿಸಿ ನೋಡಲು ಹವಣಿಸಿದ್ದನೆಂದು ಒಂದೆಡೆ ಶಿವನ ಮಾತಿನಲ್ಲಿ ಬಂದಿದೆ. ಅದನ್ನು ನೋಡಿ ಮುಂಬರಿವುದೇ ಲೇಸು.

**ಹರಿಯೆನ್ನಂಶಜನೊಳ್ಗಿದರ್ ಮೆರೆವಿನಂ ಕೃಷ್ಣಾಖ್ಯೆಯಿಂ ಪುಟ್ಟಿ ದು**
**ಷ್ಟರನುನ್ಮೂಲಿಸುತಲ್ಲಿ ಭಾರತ ಮಹಾಸಂಗ್ರಾಮದೊಳ್ ನೇಹಿಗಂ**
**ನರನಿಂದೆಯ್ದೆ ಪೊಣರ್ಚಿಸಲ್ಕವನ ಬಲ್ಪಿಂ ಸಾಸಮುಂ ಶೌರ್ಯಮು**
**ಗ್ರರಣಾಟೋಪಮದೆಂತುಟೆಂದರಿಯಲೀ ಭೂಭಾಗದೊಳ್ ಕಾಂಕ್ಷಿಪಂ (೩–೬೧)**

ಇದು ಶಿವನ ಮಾತಲ್ಲದೆ, ಕೃಷ್ಣನು ಎಲ್ಲಿಯೂ ಈ ಕಾವ್ಯದಲ್ಲಿ ತನ್ನ ಉದ್ದೇಶವಿದ್ದಂತೆ ಹೇಳಿಕೊಂಡಿಲ್ಲ. ಆದರೆ ಸ್ನಿವೇಶವೇ ಹಾಗೆ ಕೈಗೂಡಿ ಬಂದಂತೆ ತೋರುತ್ತದೆ. ಮಹಾಪುರುಷರು ಸ್ವತಃ ಭಾವಿಸಿರಲಿ, ಭಾವಿಸದಿರಲಿ, ಅವರ ಧ್ಯೇಯವೂ ಧ್ಯೇಯಕ್ಕೆ ಅನುಕೂಲ ಪರಿಸ್ಥಿತಿಯೂ ತಾನಾಗಿ ಕೂಡಿಬರುವುದು ಸಹಜ. ಅಂತೂ ಶ್ರೀಕೃಷ್ಣನು ಅರ್ಜುನನ ಸತ್ತ್ವವನ್ನು ಪರೀಕ್ಷಿಸಿ ನೋಡುವುದೇ ಈ ಕಾವ್ಯಕ್ಕೆ ವಸ್ತುವಾದುದರಿಂದ ಈ ಕಾವ್ಯವಿಡಿಯಾಗಿ ಶ್ರೀಕೃಷ್ಣನ ಲೀಲಾಸತ್ತ್ವವನ್ನೂ ಪ್ರತಿಜ್ಞಾಪಾಲನಾದಿ ಸದ್ಗುಣಗಳನ್ನೂ ಪ್ರಕಟಪಡಿಸುವುದರಿಂದ ಇದು ಶ್ರೀಕೃಷ್ಣನ 'ಸತ್ತ್ವಾಲೋಕನ' ವೆನಿಸುವುದು. ಅರ್ಜುನನು ಸತ್ತ್ವಾತಿಶಯನಾಗಿದ್ದು ಆಶ್ರಿತವತ್ಸಲನೂ ಆಗಿ ಖೇಚರನಾದ ಗಯನನ್ನು ರಕ್ಷಿಸುವುದಕ್ಕಾಗಿ, ಎದುರಾಳಿ ತನ್ನ ಭಾವನಂಟನಾಗಿದ್ದರೂ ಶ್ರೀಹರಿಯೇ ಆಗಿದ್ದರೂ ಗಣಿಸದೆ, ತತ್ತ್ವಕ್ಕಾಗಿ ಆ ಶ್ರೀಕೃಷ್ಣನೊಡನೆ ಹೋರಾಡಿ ತನ್ನ ಸಾಮರ್ಥ್ಯವನ್ನು ಮೆರೆಯಿಸಿದುದರಿಂದ (ಸತ್ತ್ವಾಲೋಕನಂಗೆಯ್ದುದರಿಂದ) ಇದು ಪಾರ್ಥನ ಸತ್ತ್ವಾಲೋಕನವೆನಿಸುವುದು. ಕವಿಯ ಸತ್ತ್ವಾಲೋಕನವು ಇದಾಗುವುದು ಹೇಗೆ ?

ಕನ್ನಡದ ಸಾಹಿತ್ಯಚರಿತ್ರೆಯನ್ನು ನೋಡಿದರೆ ಚಂಪೂಕಾವ್ಯಗಳು ಹೆಚ್ಚಾಗಿ ಆಶ್ರಯದಾತರ ಪ್ರಭಾವದಿಂದಲೇ ಉದ್ಭವಿಸಿ ಬೆಳಕಿಗೆ ಬಂದಂತೆ ಕಾಣುತ್ತದೆ. ಕವಿಗಳಿಗೆ ಆಶ್ರಯಬಲ ಕುಗ್ಗಿದಾಗ ಮಾರ್ಗಕಾವ್ಯಗಳ ಹೊನಲಿಗೆ ಬೇಸಗೆಯೊದಗಿ, ದೇಸಿಗಬ್ಬಗಳು – ಷಟ್ಪದಿ, ರಗಳೆ , ಸಾಂಗತ್ಯ ಮುಂತಾದ ಸರಳಶೈಲಿಯ ಹಾಗೂ ಕಡಮೆ ಬಿಗುಪಿನ ಕಾವ್ಯಗಳು ರಚಿತವಾದುದು ಕಂಡುಬರುತ್ತದೆ. ಆದರೆ, ಈ ಸತ್ತ್ವಾಲೋಕನ ಕಾವ್ಯ ಯಾವುದೇ ರಾಜರಿಂದಾಗಲಿ, ಆಶ್ರಯದಾತರಿಂದಾಗಲಿ ಪ್ರೋತ್ಸಾಹಿತವಾಗಿ ರಚಿತವಾದುದಲ್ಲ. ಇದು ಕವಿಯ ಅಂತಸ್ಸತ್ತ್ವದ ಪ್ರತೀಕವಾಗಿ ಹೊರಹೊಮ್ಮಿದುದೆಂದು

ನಿರ್ಧಾರವಾಗಿ ಹೇಳಬಹುದು. ಈ ಶತಮಾನದಲ್ಲಿಯೂ ಇಂತಹ ಸುದೀರ್ಘ ಕಾವ್ಯತಪಃಫಲೈಕಸಾಧ್ಯವಾಗುವ ಮತ್ತು ಲಕ್ಷಣಬದ್ಧವಾದ ಕಾವ್ಯವನ್ನು ಓರ್ವನು ರಚಿಸಿದನೆಂದರೆ – ಅದು ಕವಿಯ ಅಂತಸ್ಸತ್ತ್ವದ ಮತ್ತು ಕವಿತಾಸಾಮರ್ಥ್ಯದ ಆಲೋಕನ (ಪ್ರಕಾಶನ) ಅಲ್ಲದೆ ಮತ್ತೇನು? ಆದುದರಿಂದ ಇದು ಕವಿಯ ಸತ್ತ್ವಾಲೋಕನ ಎನಿಸಿದೆ.

**ಕಾವ್ಯ ಮತ್ತು ಕವಿ**

'ಚಂಪೂಶೈಲಿ' ಎಂದ ಮಾತ್ರಕ್ಕೆ ಕಾವ್ಯಕ್ಕಾಗಲಿ ಕವಿಗಾಗಲಿ ಮಹತ್ತ್ವ ಬಂತೆಂದು ಯಾರೂ ಭಾವಿಸಲಾಗದು. ಕವಿಯು ವಿಕಸಿತ ಸಾಮಾಜಿಕನಾಗಿರಬೇಕು. ಅವನಲ್ಲಿ ಭಾವಶಕ್ತಿ ಭಾಷಾಶಕ್ತಿಗಳೊಂದಿಗೆ ಆಳವಾದ ತಿಳಿವು ಮತ್ತು ಔಚಿತ್ಯ ಪರಿಜ್ಞಾನವಿರಬೇಕು. ಅವನ ಕಾವ್ಯರಚನೆ ಜೀವನಸಂಸ್ಪರ್ಶಿಯೂ ಜೀವನ ಮಾರ್ಗದರ್ಶಿಯೂ ಆಗಿರಬೇಕು. ಈ ವಿಚಾರಗಳು ಈ ಕಾವ್ಯದಲ್ಲಿ ಅಲ್ಲಲ್ಲಿ ಬಿಕ್ಕಿ (ಹರಡಿ) ಇರುವುದನ್ನು ಕಾಣಬಹುದು. ಕಾವ್ಯಾರಂಭದ ಪದ್ಯ ಶ್ಲೇಷದಿಂದ ಶಿವಪರವಾಗಿಯೂ ವಿಷ್ಣುಪರವಾಗಿಯೂ ಇದೆ. "ಏಕೋ ದೇವಃ ಕೇಶವೋ ವಾ ಶಿವೋ ವಾ" ಎಂಬ ಭಾವನೆ ಕವಿಯದು. ಆತನು ಭಕ್ತರನ್ನು ಕಾಪಾಡಲಿ ಎಂಬುದೇ ಕವಿಯ ಆಶಯ. ನಾಲ್ಕನೆ ಸ್ತುತಿ ಪದ್ಯದಲ್ಲಿ ಶಿವನು ಸದ್ಗಣವನ್ನು ಪಾಲಿಸುವಂತೆ ಪ್ರಾರ್ಥನೆಯಿದೆ. ಸದ್ಗಣ ಎಂಬುದು ಸತ್ಪುರುಷರ ಸಮೂಹ ಎಂದಾಗಬಹುದು, ಪದ್ಯರಚನೆಗೆ ತಕ್ಕುದಾದ ಛಂದೋಗಣವೂ ಆಗಬಹುದು. ಎರಡೂ ಅರ್ಥಗಳು ಸಮುಚಿತ. ಅದರ ಮುಂದಿನ ಪದ್ಯದಲ್ಲಿ ಕವಿಯ ಮನೋರಂಗಸ್ಥಳದಲ್ಲಿ ರುದ್ರದೇವನು ತನ್ನ ಲೀಲಾನಾಟ್ಯವನ್ನಾಡುತ್ತಾ ಪದನ್ಯಾಸದಲ್ಲಿ (ಪದ್ಯರಚನೆಯಲ್ಲಿ) ಸ್ಥಿರತೆಯನ್ನು ನೀಡುವಂತೆ ಸ್ತುತಿಯಿದೆ. ಇದರಿಂದ ಕಾವ್ಯದಲ್ಲಿ ಹಾಗೂ ಕಾವ್ಯ ರಚನೆಯಲ್ಲಿ ಸಮುಚಿತ ಗುಣಗಳಿರಬೇಕಲ್ಲದೆ ಪದಜೋಡಣೆಯಲ್ಲಿ ಬಿಗುಪು ಅಂದರೆ – ಓಜೋಗುಣವಿರಬೇಕೆಂಬ ಸೂಚನೆಯನ್ನು ಕಾಣಬಹುದು. ಕಾವ್ಯಲಕ್ಷಣವನ್ನು ಕೆಡಿಸದೆ, ಕವಿಮಾರ್ಗವನ್ನು ಬಿಡದೆ, ಹುರುಳನ್ನು ಒಳಗೊಂಡು ರಚಿತವಾದುವೇ ಶ್ರೇಷ್ಠ ಕಾವ್ಯಗಳೆಂಬ ಸಂಜ್ಞೆಯಿದೆ. ದ್ವಾರಕೆಯಲ್ಲಿ ಅತ್ತಿತ್ತ ಬೀಸುವ ಗಾಳಿ ಕವಿಯ ಮತ್ತು ಕಾವ್ಯಲಕ್ಷಣವನ್ನು ಹೇಗೆ ಧ್ವನಿಸುತ್ತದೆ? ನೋಡಬಹುದು –

> **ಮಾರ್ಗದೆ ಮುಂಬರಿಯುತೆ ಪಿಂ**
> **ಮಾರ್ಗೈತರುತುಂ ಸುಶಬ್ದಯುತನೆಡೆಯರಿಯು**
> **ತ್ತೂರ್ಗೆ ಹಿತಂ ಮರುತಂ ಕವಿ**
> **ಮಾರ್ಗವನೆಂತಂತು ಮಾರ್ಗಮಂ ಪೊಸಯಿಸುವಂ (೧–೩೪)**

ದ್ವಾರಕೆಯಲ್ಲಿ ಅಸಂಖ್ಯಾತವಾಗಿ ಅಂಗಡಿಗಳೂ ಬೀದಿಗಳೂ ಇದ್ದು, ಅವು ಒಂದನ್ನೊಂದು ಹೋಲುತ್ತಿದ್ದುದರಿಂದ ವಾಯುವಿಗೆ ಅಲ್ಲಿ ದೆಸೆ–ದಾರಿಗಳು ತಪ್ಪಿಹೋಗುವುದು ಸಂಭವನೀಯ. ಆದುದರಿಂದ ವಾಯು ಅಂಗಡಿಗಳ ಹೆಸರುಗಳನ್ನು

ಓದುತ್ತ ಅಂಗಡಿಯವರ ಗುರುತುಗಳನ್ನು ನೋಡಿಕೊಳ್ಳುತ್ತ ಮುಂಬರಿಯುತ್ತಿದ್ದುದರಿಂದ ವೇಗವು ಕುಂಠಿತವಾಗಿ ಮೆಲ್ಲನೆ ಸಾಗುತ್ತಿದ್ದನೆಂಬುದು ಒಂದು ಅಲಂಕಾರಿಕ ವರ್ಣನೆ. ವಾಯು ಒಮ್ಮೆ ಮುಂದೆ ಹೋದರೂ ಎಲ್ಲಾದರೂ ಮಾರ್ಗ ತಪ್ಪಿತೋ ಎಂಬ ಸಂದೇಹದಿಂದ ಹಿಂದಕ್ಕೆ ಬರುವುದು ಕವಿಗೆ ಹೋಲಿಕೆ. ಕೃತಿರಚನೆಮಾಡತಕ್ಕ ಕವಿ ಕೆಲವೊಮ್ಮೆ ಬರೆದ ಪದ್ಯದ ಪಾದವನ್ನು ಪುನಃ ಸರಿಯೋ ಎಂದು ತಿಳಿಯಲು ಹಿಂದಕ್ಕೆ ದೃಷ್ಟಿಹಾಯಿಸುವುದು ಸ್ವಾಭಾವಿಕ ವಿಷಯ. ವಾಯು ಒಳ್ಳೆಯ ಶಬ್ದವುಳ್ಳವನು. ಎಡೆಯನ್ನು (ಅವಕಾಶವನ್ನು) ತಿಳಿದುಕೊಳ್ಳುತ್ತಾನೆ. ಅವನು 'ಊರ್ಗೆ ಹಿತಂ' (ಲೋಕಕ್ಕೆ ಹಿತಕರನು), ಈ ಲಕ್ಷಣವೂ ಕವಿಗೆ ಅನ್ವಿತ. ಎಡೆಯರಿಯುತೆ ಎಂಬುದನ್ನು ಕವಿಗೆ ಅನ್ವಯಿಸುವಾಗ (ಎಡೆ – ಸ್ಥಳ, ಸಮಯ) ದೇಶ ಕಾಲಗಳನ್ನು ತಿಳಿದುಕೊಂಡು – ಎಂದು ಹೇಳಬಹುದು. ಪೊಸಯಿಸುವಂ – ಗಾಳಿಯು ಮಾರ್ಗವನ್ನು ಉಜ್ಜುತ್ತಿರುವನೆಂಬುದಾದರೆ, ಕವಿ ತನ್ನ ಕವಿತಾಮಾರ್ಗವನ್ನು ಹೊಸತು ಹೊಸತಾಗಿ ಮಾಡುವನು ಎಂಬುದರ್ಥ. ಕವಿಯು ತಪ್ಪೊಪ್ಪುಗಳನ್ನು ಪರಿಶೀಲಿಸುತ್ತಾ ಒಳ್ಳೆಯ ನುಡಿಗಳನ್ನು ಜೋಡಿಸುತ್ತಾ ಅಡಿಯಿಡಬೇಕೆಂದಿಲ್ಲಿ ಸೂಚಿಸಿದೆ. ಅವನಲ್ಲಿ ಲೋಕಹಿತಭಾವನೆ ಇರಬೇಕೆಂಬುದನ್ನೂ ಸ್ಪಷ್ಟಪಡಿಸಿದೆ.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸಬಹುದು. ಚಂಪೂಕಾವ್ಯವೆಂಬುದು ಹೊಸತೆನಿಸುವುದು ಹೇಗೆ ? ಎಂಬುದು. ಅದಕ್ಕೂ ಈ ಕಾವ್ಯದಲ್ಲೇ ಉತ್ತರವಿದೆ –

**ಪಳಗನ್ನಡಮನೆ ಕಬ್ಬದೆ**
**ಬಳಸುವರೀ ಚಂಪು ತೆರಳ್ವ ಕಾಲರಥಾಂಗ**
**ಕ್ಕೊಳಗಾಗಿ ಮುಂದೆ ಬಂದುದು**
**ಪಳತಲ್ತಿದರಲಿ ಪೊಸತನರಿವವರರಿವರ್** (೧ – ೧೦)

ಚರಿತ್ರೆ ಪುನರಾವರ್ತನೆಗೊಳ್ಳುವುದಷ್ಟೆ ? (History Repeats itself) ಕಾಲಚಕ್ರಕ್ಕೆ ಒಳಗಾಗಿ ಚಂಪೂರಚನೆ ಈಗ ಪುನರಾವರ್ತನೆಗೊಂಡಿದೆ ಆದರೂ ಇದೀಗ ಮರಳಿ ಹೊಸತಾದ ಮಾರ್ಗ ಕಾವ್ಯವೆಂದು ತಿಳಿದುಕೊಳ್ಳಬಹುದು. ಇದರೊಳ್ ಎಂಬ ಅರ್ಥದಲ್ಲೇ 'ಇದರಲ್ಲಿ' ಎಂಬುದು ಹೊಸಗನ್ನಡವಷ್ಟೆ ?

ಕವಿಯ ಲಕ್ಷಣವನ್ನು ನಿರೂಪಿಸುವ ಇನ್ನೊಂದು ಸಂದರ್ಭ ಯುದ್ಧದ ಪ್ರಸಂಗದಲ್ಲಿದೆ (೬–೪೩, ೪೪). ಯಾದವ ವೀರನಾದ ಕವಿ ಎಂಬವನೊಡನೆ ಕಾದಲು 'ಪೂರ್ಣ ಭರದಿಂ' ಬಂದ ವಿಕರ್ಣನ ಮಾತನ್ನು ಪರಿಶೀಲಿಸಬೇಕು. ಮತ್ಸರರಾಹಿತ್ಯ, ಸಮತಾಭಾವನೆಗಳು ಕವಿಗೆ ಮುಖ್ಯಾವಾಗಿರಬೇಕು. ಅವನು ಹೊಸತಾದ, ಗುರೂಪದಿಷ್ಟ ಮಾರ್ಗದಿಂದ ಕೂಡಿದ ಶಾಸ್ತ್ರಕ್ಕೆ ಅನುಸಾರವಾದ ಮತ್ತು ಪೂಜ್ಯವಾದ ಕೃತಿರಚನೆಮಾಡಬೇಕು. ಅಧಮನಾದ ಸಾಮಾಜಿಕನಾಗಿದ್ದು ತನಗೊಬ್ಬನಿಗೆ ಹಿತವೆಂದು ಮನಸ್ಸಿಗೆ ಬಂದಂತೆ ಬರೆಯತಕ್ಕವನು ಎಂದೂ ಯೋಗ್ಯಕವಿಯಾಗಲಾರನು –

ಎಂಬ ವಿಚಾರ ಇಲ್ಲಿ ಹೊರಹೊಮ್ಮಿದೆ. ಚಂಪೂಕಾವ್ಯದಲ್ಲಿ ಸತೃಣಾಭ್ಯವಹಾರಿಗಳು ಅರೋಚಕರು ಎಂಬುದು ಅಭಿಪ್ರಾಯ.

ಇಷ್ಟನ್ನು ಹೇಳಿದುದರಿಂದ ಸತ್ತ್ವಾಲೋಕನ ಕಾವ್ಯದ ಕವಿ ಕೇವಲ ಸಂಪ್ರದಾಯಶರಣನೆಂದಾಗಲಿ, ಔಚಿತ್ಯಜ್ಞಾನಹೀನನೆಂದಾಗಲಿ ತಿಳಿಯವುದು ಸರಿಯಲ್ಲ. ಅಷ್ಟಾದಶವರ್ಣನೆಗಳು ಈ ಕಾವ್ಯದಲ್ಲಿ ಕಾಣಿಸವು. ಆದಿಯಲ್ಲಿ ಸಮುದ್ರವರ್ಣನೆ ಬಂದಿದೆ ನಿಜ. ಅದು ಅಲ್ಲಿ ಅನುಚಿತವಾಗಿ ತಂದು ತುರುಕಿದ ಅಂಶವಲ್ಲ, ದ್ವಾರಕಾಪತ್ತನವನ್ನು ಕುರಿತು ಹೇಳುವಾಗ ಅದನ್ನು ಆವರಿಸಿದ ಪಡುಗಡಲ ಮಾತನ್ನೆತ್ತಬೇಕಾದುದು ಸಹಜ. ಆ ಸಮುದ್ರವರ್ಣನದಲ್ಲಿಯೂ ಹೊಸತನ ಮೆರುಗು, ನೀತಿವಿಚಾರಗಳ ನರ್ತನ ಕಾಣಿಸಬಹುದು.

**ಕಾವ್ಯೋದ್ದೇಶ**

ಕಾವ್ಯ ನಾಟಕಾದಿಗಳು ಆಹ್ಲಾದಕರ ಸಾಹಿತ್ಯ ಪ್ರಕಾರದವು. ನಾಟಕ ಅಥವಾ ರೂಪಕ ಪ್ರಕಾರದವು ದೃಶ್ಯವರ್ಗದವು. ಕಾವ್ಯಗಳು ಶ್ರವ್ಯವೆನಿಸುತ್ತವೆ. ಶ್ರವ್ಯಕಾವ್ಯಗಳಲ್ಲಿ 'ಗದ್ಯಂ ಹೃದ್ಯಂ' ಎಂದೂ 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಉಕ್ತಿಗಳು ಗದ್ಯದ ಮೇಲ್ಮೆಯನ್ನು ಸ್ಥಾಪಿಸಿವೆ. ಆದರೆ, ಪದ್ಯಕಾವ್ಯವೆಂಬುದು ರಸ ಭಾವಧ್ವನಿ ಅರ್ಥನಿರೂಪಣೆಗಳಲ್ಲಿ ಮೇಲ್ಮಟ್ಟದಲ್ಲಿರುವುದಲ್ಲದೆ, ಕವಿಯ ಪ್ರತಿಭೆ, ಅಭ್ಯಾಸ, ಕಾವ್ಯಪರಿಜ್ಞಾನಾದಿಗಳ ನೆಲೆಯಾಗಿ ಇನ್ನೂ ಮೇಲೆನಿಸುವುದು. 'ಛಂದಸ್ಸು ಕವಿತೆಯ ಪರಿಷ್ಕೃತಿಯ ಒಂದು ಅಂಗ'ವೆಂದು ಅರ್ನಾಲ್ಡ್ ಎಂಬಾತನು ಹೇಳಿದ್ದಾನೆ. ಹೀಗಿರುವಾಗ, ಗದ್ಯ ಪದ್ಯ ಮಿಶ್ರವಾದ ಕಾವ್ಯವೆಂದ ಮೇಲೆ ಅದು ಇನ್ನೂ ಮೇಲಾದುದೆಂದು ಬೇರೆ ಹೇಳಬೇಕಾಗಿಲ್ಲ. ಕಾವ್ಯೋದ್ದೇಶ ಆನಂದವೊಂದೇ ಅಲ್ಲ; ಆ ಆನಂದದೊಂದಿಗೆ ಕಾಂತಾಸಮ್ಮಿತ ನೀತಿಬೋಧೆಯೂ ಇದ್ದು ಉತ್ತಮವಾದ ಜೀವನದರ್ಶನವನ್ನು ನೀಡಿ ಸಂಸ್ಕೃತಿಪೋಷಕಾಂಶಗಳನ್ನು ಮಾಡುವುದು ಭಾರತೀಯ ಕಾವ್ಯಗಳ ನಿಜನಿಕಷವಾಗಿದೆ. ಹೀಗೆಂದ ಮೇಲೆ ಈ ಕಾವ್ಯವನ್ನು ಆ ದೃಷ್ಟಿಯಿಂದಲೂ ನೋಡುವುದು ಅವಶ್ಯಕ.

'ಲೋಕಕೆ ಸದದ್ವವನಿಂತುಟೆನುತ್ತೆ ತೋರ್ಪ ಕೃಷ್ಣಾರ್ಜುನರಾರ್ಯಚರ್ಯೆಯ ಅಂಶ'ವನ್ನು ಇದರಲ್ಲಿ ಬಣ್ಣಿಸಲು ಎತ್ತಿಕೊಳ್ಳಲಾಗಿದೆ. ಶ್ರೀಕೃಷ್ಣನ ಮತ್ತು ಅರ್ಜುನನ ಆರ್ಜವ (ಋಜುಸ್ವಭಾವ) ಶೌರ್ಯಗಳು ನಮ್ಮಲ್ಲಿ ಉಂಟಾಗಬೇಕು. ಅವರೊಡನಾಗಿದ್ದಂತಹ ಪರಸ್ಪರ ಸ್ನೇಹವೂ ನೆಲೆಗೊಳ್ಳಬೇಕು. ಸ್ವತ್ಯವಾಕ್ ಪರಿಪಾಲನೆಯ ಮೂಲಕ ಕೀರ್ತಿಯೂ ಉಂಟಾಗಬೇಕು. ಈ ಕಾವ್ಯದ ಕಥೆಯಲ್ಲಿ ಸತ್ಯಕ್ಕಾಗಿ ಪರಸ್ಪರ ಕಾದಾಡುವ ಪರಿಸ್ಥಿತಿ ಅವರಿಗೆ ಒದಗಿದರೂ ಅದು ಮುಂದೆಂದೂ ದ್ವೇಷಕ್ಕೆ ಉದ್ದೀಪನವಾಗದೆ, ಚಿರಸ್ನೇಹಕ್ಕೆ ಕಾರಣವೇ ಆಯಿತು. ಶಿವನು ಪ್ರಸನ್ನನಾಗಿ ಕೃಷ್ಣಾರ್ಜುನರಿಗೆ ಮಾಡಿದ ಉಪದೇಶ ಈ ಕಾವ್ಯದ ನೀತಿಸಾರವೆಂಬಂತಿದೆ. ಮಾತ್ರವಲ್ಲ, ಅದು ವಿಶ್ವಮಾನವ ಸಂದೇಶವೂ

ಪಂಚಶೀಲಬೋಧಕವೂ ಆಗಿದೆ. ಮುಖ್ಯವಾದುದಿದು –

**ಕೆಳೆಯೊಂದೆ ಬೇಳ್ಪ ಪುರುಳಾ**
**ಕೆಳೆ ನಿಮ್ಮಲ್ಲಗಲದಿರ್ಕೆ ! ಅದನೆಲ್ಲುಂ ಸಾ**
**ದ್ರಿಳೆಯೊಳ್ ಸರ್ವರ್ ಕ್ಷೇಮಂ**
**ದಳೆದಿರೆ ಬಳೆಯಿಪುದು ಧರ್ಮಮಂ ಶಾಂತಿಯುಮಂ (೮–೩೦)**

**ಈ ಕಾವ್ಯದಲ್ಲಿ ಮಾನವಧರ್ಮ**

ಧರ್ಮವೆಂದರೆ, ಮಾನವಧರ್ಮವೇ. ಅದು ಧಾರಣೆಮಾಡುವಂತಹದು. ಮಾನವಕೋಟಿಯ ಕಲ್ಯಾಣಕ್ಕೆ ಉಪಾದೇಯವಾದ ಆಚಾರವಿಚಾರಗಳು ಧರ್ಮದ ಅಂತರ್ಗತಗಳು. ಅಂತಹ ಧರ್ಮದ ಲಕ್ಷಣಗಳೆಂದರೆ – ಸದ್ಗುಣಗಳು. ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ 'ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ' ಇತ್ಯಾದಿಯಾಗಿ ೨೪ ಸದ್ಗುಣಗಳನ್ನು ಧರ್ಮಾಮೃತವೆಂದು ಕರೆದುದನ್ನು ಪರಾಂಬರಿಸಬಹುದು. ಪ್ರಕೃತ, ಈ ಕಾವ್ಯದಲ್ಲಿ ಸತ್ಯ , ಶೌರ್ಯ , ಸಾಹಸ, ನ್ಯಾಯಶೀಲತೆ, ಗಾಂಭೀರ್ಯ, ಪರೋಪಕಾರ, ಆಶ್ರಿತವಾತ್ಸಲ್ಯ, ಸ್ವಾಮಿಭಕ್ತಿ, ದೈವಭಕ್ತಿ, ಕರ್ತವ್ಯನಿಷ್ಠೆ, ಸಮಾನತೆ, ಪಾತಿವ್ರತ್ಯ, ಉತ್ತಮಧ್ಯೇಯತತ್ಪರತೆ, ಸರ್ವಜನಹಿತ, ವಿವೇಕ – ಮುಂತಾದ ಸದ್ಗುಣಗಳನ್ನು ಕಾವ್ಯದುದ್ದಕ್ಕೂ ಕೈವಾರಿಸಿರುವುದನ್ನು ಕಾಣಬಹುದು.

ಗಯನಿಗೆ ಕೈಲಾಸಪರ್ವತದಲ್ಲಿ ಒಬ್ಬ ಮುನಿವರ್ಯನು ಮಾಡಿದ ಉಪದೇಶದಲ್ಲಿ ಧರ್ಮದ ವ್ಯಾಖ್ಯೆ ಹೀಗಿದೆ (೩–೪೬ . . ೫೦)

**ಹಿತಮಿಳೆಗದು ಧರ್ಮಮ**
**ಹಿತಮಪ್ಪುದಧರ್ಮಮಪ್ಪುದು . . .**

ಹಾಗೆಯೇ ಶೀಲವೆಂದರೆ –

**ದೇವನದೃಶ್ಯಂ ದೃಶ್ಯಂ**
**ಜೀವಶರೀರಾಶರೀರಮವನಂಶವಿದಂ**
**ಭಾವಿಸಿ ಸರ್ವೋಚಿತ ಸಮ**
**ಭಾವದೆ ತನ್ನಂತೆ ಪರರನರಿವುದೆ ಶೀಲಂ (೩–೪೮)**

ಪರಮಾತ್ಮನು ನಿರಾಕಾರನಾದುದರಿಂದ ಅದೃಶ್ಯನು. 'ಸರ್ವಂ ಬ್ರಹ್ಮಮಯಂ ಜಗತ್' ಎಂಬ ವಾಕ್ಯದಂತೆ ಕಾಣುವುದೆಲ್ಲವೂ ಪರಮಾತ್ಮನೇ ಆದುದರಿಂದ ದೃಶ್ಯನು ಎಂದರಿಯಬೇಕು. ಆಗ ಸಮತಾಭಾವ ಬರಲು ಎಡೆಯಾಗುವುದು. ತನ್ನಂತೆ ಇತರರನ್ನು ತಿಳಿಯುವುದೇ ಉತ್ತಮಶೀಲವೆಂಬುದು ಸತ್ಯವೂ ನ್ಯಾಯವೂ ಯುಕ್ತಿಸಂಗತವೂ ಎನಿಸುವುದು. ಇದನ್ನೇ ಮಹಾಭಾರತದಲ್ಲಿ 'ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ

ಸ ಪಶ್ಯತಿ' ಎಂದು ಹೇಳಲಾಗಿದೆ. ಈ ಉದಾಹರಣೆಗಳಿಂದ ಈ ಕಾವ್ಯದಲ್ಲಿ ಮಾನವಧರ್ಮವೇ ನಿರೂಪಿತವಾಗಿದೆಯಲ್ಲದೆ, ಯಾವುದೋ ಒಂದು ಮತದವರಿಗೆ ಅಥವಾ ಪರಿಮಿತ ವ್ಯಕ್ತಿಗಳಿಗೆ ಸಂಬಂಧಿಸುವ ಸಂಕುಚಿತಾರ್ಥವುಳ್ಳುದು ಧರ್ಮವಲ್ಲವೆಂದು ವಿದಿತವಾಗುವುಗದು.

**ಮತ, ತತ್ತ್ವ , ಜಾತಿ, ನೀತಿವಿಚಾರ**

ಹರಿಹರರಲ್ಲಿ ಭೇದವಿಲ್ಲವೆಂದು ನಿರೂಪಿತವಾದರೂ ಕಾವ್ಯದಲ್ಲಿ ಅಲ್ಲಲ್ಲಿ ಶಿವನೇ ಪರದೈವವಾಗಿ ವರ್ಣಿತನಾಗಿದ್ದಾನೆ. ಶ್ರೀಕೃಷ್ಣನು ಮಾನವಾಕಾರನು. ಅವನನ್ನೂ ಅರ್ಜುನನನ್ನೂ ಉದ್ದೇಶಿಸಿ ಪರಶಿವನು ಕರ್ತವ್ಯನಿರೂಪಣೆ ಮಾಡಿರುವುದು ಹೀಗಿದೆ–

'ಜಗದೊಳ್ ನಿಮ್ಮಿಂದೆ ಮಾಡಲ್ಪಡುವವೊಳವು ಮೇಲ್ಮುಂದುಗಜ್ಜಂಗಳ್' , 'ಕೆಳೆ ನಿಮ್ಮಲ್ಲಗಲದಿರ್ಕೆ' ಇದಲ್ಲದೆ 'ಹರಿಯೆನ್ನಂಶಜಂ' ಎಂದೂ ಶಿವನು ಎಂದಿದ್ದಾನೆ. ಶ್ರೀಕೃಷ್ಣನ ವಿಷಯವಾಗಿ ಇನ್ನೊಂದೆಡೆಯ ಪದ್ಯ ಹೀಗಿದೆ –

**ವಸುಧಾಭಾರವನಿಳಿಸೆ ಗಿ**
**ರಿಸನಾಣತಿವಡೆದು ಪುಟ್ಟಿಯೀ ಹರಿ ದುರುಳ**
**ಪ್ರಸರವನಳಿಸುವನೆನುತುಂ**
**ನಿಸದಂ ಪೇಳ್ವಲ್ಲಿ ಸಂದೆಯಂ ಬಂದಪುದೇ ? (೨–೫)**

ಸಂಶಯವು ಬಾರದೆಂದು ಹೇಳಿದುದರಲ್ಲಿಯೇ ಹಲವರಿಗೆ ಸಂದೇಹ ಬಂದುದುಂಟು. ಶ್ರೀಕೃಷ್ಣನಿಗೆ ಯಾರ ಆಜ್ಞೆಯೂ ಇರಲಿಲ್ಲ. ಸ್ವಯಂಭುವಾದ ಆತನೇ ಭೂದೇವಿಯ ಮತ್ತು ದೇವತೆಗಳ ಪ್ರಾರ್ಥನೆಗೆ ಒಲಿದು ಅಭಯವಿತ್ತು, ಕೃಷ್ಣಾವತಾರಿಯಾಗಿ ಬಂದಿರುವಾಗ ಆತನಿಗೆ ಶಿವನ ಆಣತಿಯೆಂಬುದಕ್ಕೆ ಆಧಾರವೇನು? ಪ್ರಶ್ನೆಯಿದು. ತಲೆತಿರುಗಿಸುವಂತದೇ ಸರಿ. ಅದಕ್ಕೆ ಉತ್ತರವೂ ಸಮಾಧಾನಕರವಾದುದೇ ಇದೆ.

ಶ್ರೀಕೃಷ್ಣನು ಅವತರಿಸಿ ಬಂದವನಾದುದರಿಂದ ಅವನಿಗೆ ಹಾಗೆ ಬರಲು ಮೂಲವಸ್ತು ಪರಮಾತ್ಮನ ದಿಗ್ದರ್ಶನವಿರಬೇಕು. ಆ ಪರಮಾತ್ಮನನ್ನು ಇಲ್ಲಿ ಶಿವನೆಂದು (ಗಿರಿಶನೆಂದು) ಹೇಳಲಾಗಿದೆ ಎಂದು ಸಮಾಧಾನ ಹೇಳಬಹುದು. ಇದಕ್ಕಿಂತಲೂ ಪುಷ್ಟಿಕರವಾದ, ಶುದ್ಧವಾದ ಸಮಾಧಾನವಿದೆ – ತ್ರಿಮೂರ್ತಿಗಳಲ್ಲಿ ಒಬ್ಬನಾದ ಹರಿ ಪಾಲನಾಕರ್ತೃವಷ್ಟೆ? ಸಂಹಾರಕನಲ್ಲ. ಸಂಹಾರಕಾರ್ಯ ಹರನದು. ಆ ಹರನ ಕಾರ್ಯವನ್ನು ಕೃಷ್ಣನು ಮಾಡಬೇಕಿದ್ದರೆ ಆತನ ಅಪ್ಪಣೆ ಬೇಡವೆ ? ತನ್ನ ಕೆಲಸವನ್ನು ಬಿಟ್ಟು ಹೇಳದೆ, ಕೇಳದೆ, ಅನ್ಯರ ಕಾರ್ಯವನ್ನು ಲೋಕಕ್ಕೆ ಮಾರ್ಗದರ್ಶಕನಾದ ಶ್ರೀಕೃಷ್ಣನು ಮಾಡುವನೇ? ಗಿರಿಶನ ಆಣತಿಯನ್ನು ಪಡೆದು ದುರುಳರ ಸಂಹಾರಮಾಡಿದನೆಂದು

ಹೇಳಿದುದರಲ್ಲಿ ಕೃಷ್ಣನ ವ್ಯಕ್ತಿತ್ವಕ್ಕೆ ಕೊಳೆಯಾಗದು, ಕಳೆಯೇ ಬರುವುದು. ಆತನು ತನ್ನ ಕರ್ತವ್ಯದ ಸೀಮೋಲ್ಲಂಘನ ಮಾಡದೆ, ತನ್ನ ಕರ್ತವ್ಯದ ಪರಿಧಿಯೊಳಗೇ ಸುಳಿದು ಆದರ್ಶನಾದನೆಂದು ಕೊಂಡಾಡಿದಂತೆಯೇ ಆಗಿದೆ.

ದೇವಾಲಯ, ಬ್ರಾಹ್ಮಣ, ಮಡಿ ಮೈಲಿಗೆಗಳ ವಿಚಾರದಲ್ಲಿ ಈ ಕಾವ್ಯವು ಸರ್ವಮಾನ್ಯವಾಗುವ ವಿಚಾರವನ್ನೇ ಎತ್ತಿ ಹಿಡಿದಿದೆ. ಇಪ್ಪತ್ತನೆಯ ಶತಮಾನವೆಂದು, ವಿಜ್ಞಾನಯುಗವೆಂದು, ಯಾರೂ ಮೇಲಿನ ವಿಚಾರಗಳಲ್ಲಿ ಮೈಲುದೂರ ಓಡಬೇಕಾಗಿಲ್ಲ. ಅವೆಲ್ಲವೂ ನಿಜವಾದ ಅರ್ಥದಲ್ಲಿದ್ದರೆ ಸಮಾಜಕ್ಕೆ ಕ್ಷೇಮಕರವಲ್ಲದೆ ಬಾಧಕಗಳಲ್ಲ ಎಂಬ ಧ್ವನಿ ಇಲ್ಲಿ ಸಿಗುತ್ತದೆ. ಇಲ್ಲಿ ಹೇಳಿರುವಂತೆ ದೇವಾಲಯಗಳು ಸರ್ವಮಾನವರ ಸರ್ವೇಷ್ಟದವಾಗಿವೆಯಲ್ಲದೆ ಅಲ್ಲಿ ಸದಾ ಸಮಾಜಹಿತಕಾರ್ಯಗಳೇ ಇರುತ್ತವೆ. ಪರಿಶುದ್ಧತೆ ಮತ್ತು ಸರ್ವಜನಹಿತಕಾರ್ಯಗಳೇ ಅಲ್ಲಿರುತ್ತವೆ ಎನ್ನಲಾಗಿದೆ. ಅದನ್ನೇ ಬ್ರಾಹ್ಮಣ್ಯವೆನ್ನಲಾಗಿದೆ. ಹೊಲೆತನವಿರುವುದು ಕೊಳೆಯಲ್ಲಿ, ಕೊಳಕಿನಲ್ಲಿ, ಅಶುದ್ಧತೆಯಲ್ಲಿ ಕೀಳ್ನಡತೆಯಲ್ಲಿ ಮಾತ್ರ. ಮೈಲಿಗೆಯು ವರ್ಣದ ಅಥವಾ ಜಾತಿಯ ಚಿಹ್ನೆಯಲ್ಲ; ಶುದ್ಧತೆಯೇ ಮಡಿ. ಹೀಗಿದ್ದರೆ ಯಾವುದು ತಾನೇ ತ್ಯಾಜ್ಯವಾಗುವುದು?

### ಕಾವ್ಯತತ್ತ್ವ ವಿಚಾರ

**ಕತೆ ಗೆಲ್ ಭಾವವಲರ್ ಸದರ್ಥಮೆ ಫಲಂ ಕುಕಿಲ್ ಛಂದಮ**
**ನ್ವಿತಪರ್ಣಂ ರಸಜೀವಮಾಗೆ ಪುರುಡೆಂಬಾ ಮಾರುತಾಘಾತದಿಂ**
**ಕೃತಿಭೂಜಂ ಕೆಡೆ ಬೀಳದಂತೆ ತಳೆವಾ ತಾಯ್ವೇರವೋಲ್ ದೇವಿ ವಾ**
**ಕ್ಸತಿ ಮತ್ಕಾವ್ಯವನಾಂತು ರಂಜಿಸುಗೆ ವಿದ್ಯಾಲೋಕಮಂ ಲೋಕಮಂ (೧–೬)**

ಸರಸ್ವತೀಸ್ತುತಿರೂಪದಲ್ಲಿರುವ ಈ ಪದ್ಯವು ಈ ಕಾವ್ಯವಿಷಯಕವಾದ ಕವಿಮನೋಭಾವವನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಹೇಳಿದಂತೆ ಈ ಸತ್ವಾಲೋಕನ ಕಾವ್ಯವೆಂಬುದೊಂದು ವೃಕ್ಷ (ಕೃತಿಭೂಜಂ). ಕಥಾವಸ್ತು ಮರದ ಕೊಂಬೆಗಳು. ಭಾವವೇ ಹೂವು, ಶ್ರೇಷ್ಠವಾದ ಅರ್ಥವಿಚಾರವೇ ಹಣ್ಣುಗಳು, ಶಬ್ದವೇ ಕೋಗಿಲೆಯ ಸ್ವರ, ಎಲೆಗಳೇ ಛಂದಸ್ಸು, ಕಾವ್ಯರಸವೇ ಪ್ರಾಣ. ಈ ವೃಕ್ಷವನ್ನು ಅಸೂಯೆಯೆಂಬ ಗಾಳಿಯ ಹೊಡೆತದಿಂದ ಮುರಿದು ಬೀಳದಂತೆ ಆಧರಿಸತಕ್ಕ ತಾಯಿಬೇರಿನಂತೆ ಇರತಕ್ಕವಳೇ ವಾಗ್ದೇವಿ. ಅಂತಹ ವಾಗ್ದೇವಿ ಈ ಕಾವ್ಯವೃಕ್ಷಕ್ಕೆ ಆಧಾರವಾಗಿರುವಂತೆ ಇಲ್ಲಿ ತಿಳಿಸಲಾಗಿದೆ. ಈ ಸಪ್ತಾಂಗಗಳಲ್ಲಿ ಸ್ವಲ್ಪಮಟ್ಟಿಗೆ ದೃಷ್ಟಿ ಉಚಿತ.

**ಕತೆ ಗೆಲ್** : ಕಾವ್ಯವನ್ನು ವೃಕ್ಷವೆಂದ ಮೇಲೆ, ವೃಕ್ಷದ ದೃಶ್ಯಾಂಗಗಳಾದ ಹೂ, ಹಣ್ಣು, ಎಲೆ, ಹಕ್ಕಿಗಳು ಮುಂತಾದವನ್ನು ಹೊತ್ತಿರುವವು ಕೊಂಬೆಗಳಷ್ಟೇ ? ಕೊಂಬೆಗಳು ಹಲವಿರುವಂತೆ ಹಲವು ಪಾತ್ರಗಳ ವೈಯಕ್ತಿಕ ಹಾಗೂ ಸಾಮೂಹಿಕ ಕಥೆಗಳು ಕೂಡಿಯೇ ಕಥಾವಸ್ತು ರೂಪಗೊಳ್ಳುವುದು. ಪಾತ್ರಗಳು ಮತ್ತು ನಟನೆಗಳು ಇದ್ದಂತೆಲ್ಲ ಕಾವ್ಯವೃಕ್ಷವು ವಿಪುಲವೂ ವಿಶಾಲವೂ ಮನೋಜ್ಞವೂ ಜೀವಿಗಳಿಗೆ ಆಶ್ರಯವೂ

ಆಗಿ ರಂಜಿಸುವುದು ಸಹಜ. ಪ್ರಕೃತ ಈ ಕಾವ್ಯವಸ್ತುವಿನ ಮುಖ್ಯಪಾತ್ರಗಳಾವುವು? ಆ ಪಾತ್ರಗಳು ಕಾವ್ಯವೃಕ್ಷದ ವಿವಿಧಶಾಖೆಗಳಾಗಿ ವಿವಿಧ ಘಟನೆಗಳಿಗೆ ಎಡೆಯಾದುದನ್ನು ಪರಿಶೀಲಿಸಬಹುದು. ಈ ಕಾವ್ಯದಲ್ಲಿ ಶ್ರೀಕೃಷ್ಣ, ಅರ್ಜುನ, ಗಯ, ನಾರದ, ಅಕ್ರೂರ, ಇತರ ಪಾಂಡವರು, ಕೌರವ, ಕರ್ಣ, ಅಶ್ವತ್ಥಾಮ, ಭೀಷ್ಮ, ಬಲರಾಮ, ದುಶ್ಶಾಸನ, ಸಿಂಹ, ವಿಕರ್ಣ, ಕವಿ (ಶ್ರೀಕೃಷ್ಣನ ಮಗ) ಮುಂತಾದವರಲ್ಲದೆ – ಶಿವ, ಪಾರ್ವತಿ, ಗಣಪತಿ, ಯೋಗಿವರ್ಯರು ಮುಂತಾದವರೂ ಕಥಾವ್ಯಕ್ತಿಗಳಾಗಿದ್ದಾರೆ.

**ಪಾತ್ರಗಳ ಸ್ವಭಾವಚಿತ್ರಣ.**

ಈ ಕಾವ್ಯದ ಕಥಾನಾಯಕನು ಯಾರು? ಧೀರೋದಾತ್ತಗುಣವುಳ್ಳವನೇ ಕಥಾನಾಯಕಟಿನೆನ್ನುವಾಗ ಅಂತಹ ಗುಣ ಶ್ರೀಕೃಷ್ಣಾರ್ಜುನರಿಬ್ಬರಲ್ಲಿಯೂ ಮೂಡಿ ನಿಂತಿದೆ. ಅವರಿಬ್ಬರ ಆರ್ಯಚರ್ಯೆಯ ಅಂಶವನ್ನು ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿರುವುದರಿಂದ ಅವರಿರ್ವರೂ ನಾಯಕರೇ ಸರಿ. ಕೃಷ್ಣಾರ್ಜುನರ ಯುದ್ಧಾರಂಭದ ಪದ್ಯ ಹೀಗಿದೆ –

**ಒರ್ವನುದಾತ್ತಗುಣಂ ತಾ**
**ನೊರ್ವಂ ಸತ್ತ್ವಾತಿಶಯನೆ ಬಾಂಧವರಿರ್ವರ್ (೭ – ೨)**

ಇದರಿಂದ ಇಬ್ಬರೂ ಕಥಾನಾಯಕರಾಗುವರು. ಪರಸ್ಪರ ಕಾದಾಡಿದುದರಿಂದ ಪ್ರತಿನಾಯಕರೂ ಆಗಬಹುದು. ಸನ್ನಿವೇಶಪ್ರಭಾವದಿಂದ ಅವರೊಳಗೆ ಯುದ್ಧವೊದಗಿತಲ್ಲದೆ ಬೇರೆ ಅರ್ಥ ಕಾಣುವುದಿಲ್ಲ. ಯುದ್ಧಕ್ಕೆ ಕಾರಣನು ಖೇಚರನಾದ ಗಯನು, ಪ್ರೇರಕನು ನಾರದನು, ಪ್ರೇರಕನಷ್ಟೇ ಅಲ್ಲ – ಯುದ್ಧಕ್ಕೆ ಉತ್ಕಟತೆಯನ್ನು ಉಂಟುಮಾಡುವುದಕ್ಕಾಗಿ ಕೌರವರನ್ನೂ ಗಂಟಿಕ್ಕಿದವನು ಅವನೇ. ಅಕ್ರೂರನ ಸಂಧಿಪ್ರಸ್ತಾವವೆಂಬುದು ಶ್ರೀಕೃಷ್ಣನ ರಾಜನೀತಿಕೌಶಲದ ಪ್ರದರ್ಶನ ಮಾತ್ರ. ಶ್ರೀ ಕೃಷ್ಣನು ಗಯನ ಮೇಲೆ ಸಿಟ್ಟಾಗಿ ಅವನನ್ನು ಅಂದಿಗೆ ಎಂಟನೆಯ ದಿನದಂದು ಕೊಂದುಬಿಡುವೆನೆಂದು ಪೂಣ್ದುದರಿಂದ ಗಯನ ಗರ್ವಭಂಗವಾಯಿತು. ಅವನಿಗೆ ನಾರದನಿಂದ ಮಾರ್ಗದರ್ಶನ– ಅದರಿಂದ ಅರ್ಜುನನ ಅಭಯಪ್ರದಾನ – ಅದರಿಂದಲೇ ಕೃಷ್ಣಾರ್ಜುನರ ಕಾಳಗ – ಈ ಕಾಳಗದಿಂದಲೇ 'ಸತ್ತ್ವಾಲೋಕನ' (ಸತ್ತ್ವಪರೀಕ್ಷೆ, ಸತ್ತ್ವ ಪ್ರದರ್ಶನ). ಅದರಿಂದಲೇ ಶಿವನು ಕಾಣಿಸಿಕೊಂಡು ಕೃಷ್ಣಾರ್ಜುನರಿಗೆ ಮೈತ್ರಿಯನ್ನು ಬೋಧಿಸಿದುದಲ್ಲದೆ, ವಿಶ್ವಮೈತ್ರಿಯ ಸಂದೇಶವನ್ನು ಸಾರಿದುದಾಗಿರುತ್ತದೆ. ಈ ವಿಚಾರವನ್ನು ಕವಿ ಬೇಂದ್ರೆಯವರು ಚೆನ್ನಾಗಿ ಲಕ್ಷ್ಯವಿಟ್ಟಿರುವುದು ಅವರ ಅವಲೋಕನ ಪದ್ಯದಲ್ಲಿ ಕಂಡುಬರುತ್ತದೆ.

**ಕಥಾಸನ್ನಿವೇಶ, ಘಟನೆ, ಔಚಿತ್ಯಗಳು**

ಮಾನವನ ಜೀವನವೆಂಬುದು ಸನ್ನಿವೇಶಾನುಗುಣವಾಗಿ ಮಾರ್ಪಡುತ್ತ ಸಾಗುವುದು. ದೇವತೆಗಳದೂ ಇದೇ ರೀತಿಯೆಂದು ನಮಗೆ ಪುರಾಣಕಥೆಗಳು ಸಾರುತ್ತವೆ; ಅದಿರಲಿ. ಸನ್ನಿವೇಶವಂತೂ ಪ್ರಬಲವೂ ಪ್ರಭಾವಿಯೂ ಆದಂತೆ ಜೀವನದ ಘಟನೆಗಳು ಹೆಚ್ಚು ಪ್ರಭಾವೋತ್ಪಾದಕವಾಗಿ ಸಾಗುತ್ತವೆ. ಅಂತಹ ಪ್ರಭಾವೀಜೀವನದ ಮಾರ್ಮಿಕ ಶಬ್ದಚಿತ್ರವು ಕಾವ್ಯವೆನಿಸುವುದು. ಹೀಗೆ ಕಾವ್ಯವು ಜೀವನದ ಪ್ರತಿಬಿಂಬವಾಗಿದೆ. ಈ ಕಾವ್ಯಕಥೆಯ ಮುಖ್ಯಘಟನೆಗಳು ಯಾವ ಸನ್ನಿವೇಶಗಳಿಂದ ಸ್ಫುಟಗೊಂಡಿವೆ ಎಂಬುದು ಪರಿಶೀಲನಾರ್ಹವಾದುದು.

ಶ್ರೀಕೃಷ್ಣನು ಗಯನನ್ನು ಕೊಲ್ಲಲು ಶಪಥ ಮಾಡಿದುದು ಸತ್ವಾಲೋಕನದ ಕಥಾಬೀಜವೆನ್ನಬಹುದು. ಯಾವ ಸನ್ನಿವೇಶ ಆತನನ್ನು ಅಷ್ಟು ಕೆರಳಿಸಿತು, ಎಂಬುದನ್ನು ಪರಿಶೀಲಿಸಬೇಕು. ವಿನೋದಶೀಲನೂ ಲೋಕಕಲ್ಯಾಣಕಾರಿಯೂ ಆದ ಶ್ರೀಕೃಷ್ಣನು ಉದ್ಯಾನವಿಹಾರವನ್ನು ಕೈಗೊಂಡುದು ಸನ್ನಿವೇಶದ ಪ್ರೇರಣೆಯಿಂದಲೇ ಆಗಿದೆ.

ಶ್ರೀಕೃಷ್ಣವು ದ್ವಾರಕೆಯಲ್ಲಿದ್ದಾಗ ಒಮ್ಮೆ ವಸಂತರ್ತು ತಲೆದೋರಿತು. ವಸಂತವೆಂದರೆ ಮಾನವರಿಗೆ ಮಾತ್ರವಲ್ಲ. ಪ್ರಾಣಿಗಳಿಗೂ ಸಸ್ಯಗಳಿಗೂ ಬಾಳಿನಲ್ಲಿ ಬೆಳಕನ್ನುಂಟುಮಾಡಿ ಇಷ್ಟಾರ್ಥವನ್ನು ಈಡೇರಿಸುವಂತಹ ಕಾಲ. ಅಂತಹ ಕಾಲದಲ್ಲಿ ಒಂದು ದಿನ ಕೃಷ್ಣನು ಪೆಂಡಿರ ತಂಡದ ಸಭೆಯಲ್ಲಿದ್ದನು. ಅಲ್ಲಿ ಸಾಹಿತ್ಯಯುತವಾದ ಗಾನ ನರ್ತನಾದಿಗಳು ನಡೆದವು. ಹೆಂಡಿರಲ್ಲಿ ಎಲ್ಲರ ಮುಖಿಯಾಗಿ ಒಬ್ಬಳು ಉದ್ಯಾನವಿಹಾರ ಮತ್ತು ಜಲಕೇಳಿಗಳ ಇಚ್ಛೆಯನ್ನು ಪ್ರಕಟಿಸಿದಳು. ಆ ಮಾತು ಕೇಳತಕ್ಕುದೇ ಸರಿ – (೨–೩೨, ೩೩)

**ಪೆಂಡಿರೆವಂತರಿಂ ಗೃಹದ ಸಟ್ಟುಗವಾಂಪುದು ಮಕ್ಕಳಂ ಸೊಗಂ**
**ಗೊಂಡುರೆಸಾಂಕಿ ಸಂಪದವನುಂಬುದು ಕೇಳ್ವುದು ಗಾನಮಂ ಮನಂ**
**ಗೊಂಡಿರಲೋದುಮಾ ಸಹಜ ಸುಂದರ ಬಂಧುರ ನಂದನಂಗಳೊಳ್**
**ಕಂಡೆಡೆಗೀಗಳೆಯ್ದಿ ನಲಿದುಂಡ ಸುಖೋದಯಕೊಂದು ಸಾಟಿಯೇ?**

**ಕಲಿಸದೆ ಬಂದ ಕೌಶಲದೆ ಪಾಡುವ ಕೋಗಿಲೆ, ಮಾತನಾಡುವಾ**
**ನಲವಿನ ಬಾಸೆವಕ್ಕಿ, ಪರಿವಂಚೆ, ಮೈಗಾಳಿ, ಮನೋನುರಾಗದಿಂ**
**ದುಲಿವೆಳದುಂಬಿ ಚೆಲ್ವೆಸೆವ ಪೂಮರವಲ್ಳಿ, ಕೊಳಂಗಳೆಂಬ ನ**
**ಲ್ನೆಲಸಿರಿ ನೋಡದೀ ಮನೆಯ ಮೂರ್ತಿವೊಲೆಮ್ಮದು ಬಾಳ್ಕೆ ಬಾಳ್ಕೆಯೇ?**

ಶ್ರೀಕೃಷ್ಣನ ವನಿತೆಯರು ಇತರರಂತಲ್ಲ. ಮನೆಗೆಲಸವನ್ನು ಮಾತ್ರ ಮಾಡುತ್ತಾ ಮಕ್ಕಳನ್ನು ಹೆತ್ತು ಸಾಕಿ ಮೆರೆವ ವಿಲಾಸಿನಿಯರಲ್ಲ, ಯಂತ್ರೋಪಕರಣಗಳಂತೆ ಇದ್ದಿಲ್ಲ. ಬುದ್ಧಿ ಮನಗಳು ಅವರಲ್ಲಿ ಕೆಲಸ ಮಾಡುತ್ತಿದ್ದವು. ಸಂಗೀತ ಸಾಹಿತ್ಯಾದಿ ಕಲೆಗಳಲ್ಲಿ

ಅವರು ನುರಿತವರು. ಪ್ರಕೃತಿಸೌಂದರ್ಯದ ನೋಟದಲ್ಲಿ ಕೂಡ ಆನಂದವನ್ನು ಅನುಭವಿಸಬಲ್ಲರು. ಅಂತಹ ಸದಿಚ್ಛೆಯನ್ನು ಈಡೇರಿಸದ ಅರಸಿಕನೇ ಶ್ರೀಕೃಷ್ಣನು? ಅವನನ್ನು ಪ್ರೇರಿಸುವ ಸನ್ನಿವೇಶಗಳು ಇನ್ನೂ ಇದ್ದುವು.

ಆಗಲೇ ಉದ್ಯಾನದತ್ತಲಿಂದ ಪುಷ್ಪಸುಗಂಧಮಯವಾದ ವಾಯು ತನ್ನೆಡೆಗೆ ಬೀಸಿದುದು – ತಿಂಬಾಸೆಯಾದಾಗ ತಿಂಡಿಯ .ಪರಿಮಳ ಮೂಗಿಗೆ ಬಡಿದಂತಾಗಿರಬೇಕು. ಸಾಲದುದಕ್ಕೆ ತಿಂಡಿಯಿದೆಯೆಂದು ಕರೆಯುವಂತೆ ಕೋಗಿಲೆಯ ಅವ್ಯಕ್ತ ಮಧುರಧ್ವನಿ ಕೇಳಿಸಿತು. ಆಗಲೇ ವನಪಾಲಕನು ಬಂದು ಹೂಹಣ್ಣುಗಳ ಕಾಣಿಕೆಗಳನ್ನರ್ಪಿಸಿ, ಬಹಿರ್ನಂದನವನ್ನು ನೋಡಲು ಬರುವಂತೆ ಬಿನ್ನಯಿಸಿದನು. ಈ ಉತ್ತೇಜಕ ಸನ್ನಿವೇಶಗಳಿಂದ ಆ ಅಷ್ಟಮಾಂಗನೆಯರಿಗೆ ವನವಿಹಾರದ ಅಹಮಹಮಿಕೆ ಹೆಚ್ಚಿತು. ಇನ್ನೇನು? ಕೃಷ್ಣನು ಹೊರಟೇಬಿಟ್ಟನು.

ಶ್ರೀಕೃಷ್ಣವು ಗಯನ ಮೇಲೆ ಕೆರಳಿದ ಸನ್ನಿವೇಶ ಮತ್ತಿನದು – ವನವಿಹಾರ ಪುಷ್ಪಾಪಚಯ, ಜಲಕೇಳಿಗಳನ್ನು ಮುಗಿಸಿ ಕುಂಜಗೃಹದಲ್ಲಿ ವಿಶ್ರಮಿಸಿದ ಸಮಯವಾದ ಪ್ರೀತಿ, ಸಂತೋಷ, ತೃಪ್ತಿ, ವಿನೋದ, ಮನಶ್ಶಾಂತಿಗಳು ಸುಗಂಧ, ಸೌಂದರ್ಯ, ಮಂದಮಾರುತಮಯವಾದ ಶಾಂತವಾತಾವರಣದಲ್ಲಿ ಭವ್ಯತಾಂಡವದಲ್ಲಿದ್ದ ಸಮಯ. ಅದನ್ನೆಲ್ಲಾ ಭಂಗಗೊಳಿಸತಕ್ಕ ವರ್ತನೆ ಓರ್ವ ಖೇಚರನಿಂದ ಆಗಲೇ ಆಗಬೇಕೇ! ಆಗಿಯೇ ಹೋಯಿತು. ಗಗನಸಂಚಾರಿ ಗಯನಿಗೆ ದ್ವಾರಕೆಯಲ್ಲಿ ತನ್ನ ಕುದುರೆಸವಾರಿಯ ಕೌಶಲಪ್ರದರ್ಶನದ ಇಚ್ಛೆ ! ಭೂಲೋಕದವರು ನೋಡಿ ಮೆಚ್ಚಿ ಹೊಗಳಬಹುದೆಂಬ ನಿರೀಕ್ಷೆ! ಭೂಲೋಕಕ್ಕೆ ಈಗ ತೆರಳುವುದು ತಕ್ಕುದಲ್ಲವೆಂದು ಅವನ ಗುರುಜನರು ಹೇಳಿದರೂ ಕೇಳನು. ಇದಕ್ಕೆ ಕಾರಣ? ಮದ. ಮದಕ್ಕೆ ಕಾರಣ? ಹೀಗಿದೆ –

**ಸಂಪದಮುಂಟು, ತನ್ನ ಬಗೆಗೊಪ್ಪಿದ ಪೆಂಡಿರ ಮೇಳಮುಂಟು, ತಾ**
**ತಂ ಪರಮೇಶಮಿತ್ರನೆನಿಪೊಪ್ಪುವ ಪೆರ್ಮೆಯುಂಟು, ಸರ್ವರಿಂ**
**ದಂ ಪದಪೊಂದಿದೊಂದು ಕುಲಮುಂ ಚಲಮುಂ ಬಲಮುಂ ನೆಗಳ್ತೆಯುಂ**
**ಟಿಂ ಪೆರತೇಕೆ? ಜವ್ವನಮಿರಲ್ ಮದಮಿಲ್ಲದೆ ಬಾಳ್ಕೆವೆತ್ತರಾರ್?**

ಇಂತಹ ಸನ್ನಿವೇಶದಲ್ಲಿದ್ದುದರಿಂದಲೇ ಆತನಲ್ಲಿ ಮದದ ಪ್ರಭುತ್ವ. ಸರಿ, ಆತನೇರಿದ್ದ ಕುದುರೆ ದ್ವಾರಕೆಯ ಮಾರ್ಗನಿಯಮಗಳನ್ನು ಮೀರಿತು. ಅದರ ತುಳಿತದಿಂದ ದೂಳೆದ್ದು ಮುಸುಕಿ ಜನರಿಗೆ ಕಷ್ಟಗಳಾದವು. ನಿಲ್ಲು ನಿಲ್ಲು ಎಂದು ಎಣ್ಣೆದೇರ್ಗೆ (ಸರ್ವಿಸ್ ಬಸ್ಸಿಗೆ) ಈ ಕಾಲದ ಪಯಣಿಗರಂತೆ ಯಾರು ಕೈಯೆತ್ತಿದರೂ ಒಳಗೆ ಎಡೆಯಿಲ್ಲದ ಬಸ್ಸಿನಂತೆ ನಿಲ್ಲದೆ ಕುದುರೆಯು ಧಾವಿಸಿತು. ಪಟ್ಟಣಿಗರು ಶ್ರೀಕೃಷ್ಣನಿಗೆ ಮೊರೆಯಿಟ್ಟರು. ಕೃಷ್ಣನಿದ್ದಲ್ಲಿಗೂ ದೂಳು ಕವಿದಿರಬೇಕು ತನ್ನ ಮನಕ್ಕೆ ಮೆಚ್ಚಿನ ಸುದತಿಯರಿಗೂ ವಿರಾಗಕರವೆಂದು ಅರಿತ ಕೃಷ್ಣನು ಕೋಪಗೊಂಡನು ಮಾತ್ರವಲ್ಲ, ಎಂಟನೆಯ ದಿನದಲ್ಲಿ ಗಯನನ್ನು ವಧಿಸಲೂ ಸೂರುಳಿಟ್ಟನು. ಶ್ರೀಕೃಷ್ಣನ ಈ

ಪ್ರತಿಜ್ಞೆಯಲ್ಲಿ ಲೋಕಕಲ್ಯಾಣದೃಷ್ಟಿ, ಪ್ರಜೆಗಳ ಹಿತಾಕಾಂಕ್ಷೆ ಮತ್ತು ತನ್ನ ಸ್ಥಾನ ಮಾನ ಗೌರವರಕ್ಷಣೆಯ ಇಚ್ಛೆ – ಎಂಬ ಕಾರಣಗಳು ಮುಪ್ಪುರಿಗೊಂಡುದು ಸಹಜವೆನಿಸುತ್ತದೆ.

ಕಾವ್ಯಕಥಾಬೀಜದ ಮೊಳಕೆಗೂ ಬೆಳವಣಿಗೆಗೂ ತಕ್ಕುದಾದ ಮುಂದಿನ ಸನ್ನಿವೇಶವೆಂದರೆ – ನಾರದನ ಕಾರ್ಯ. ಅವನು ಗಯನನ್ನು ವೇಗಸ್ತಂಭನವಿದ್ಯೆಯಿಂದ ತಡೆದು, ಅವನಿಗೆ ಶ್ರೀಕೃಷ್ಣ ಪ್ರತಿಜ್ಞೆಯನ್ನು ತಿಳಿಸಿ ಅವನಲ್ಲೇ ಕ್ಷಮಾಯಾಚನೆಮಾಡಲು ಹೇಳಿದುದು, ದೇವನನ್ನು ನಂಬಿ ವರ್ತಿಸಲು ತಿಳಿಸಿದುದು, ಅದರಂತೆ ಕೃಷ್ಣನಿಂ 'ಕಾವರಂ ಅರಸಿ ಮರೆವುಗು' ಎಂಬ ಮಾತನ್ನು ಪಡೆದುದು. ಮುಂದೆ – ಶಿವನನ್ನೇ ಸಂದರ್ಶಿಸಿ ಅರ್ಜುನನನ್ನು ಮರೆಹೊಕ್ಕುದು – ಕಾವ್ಯವಸ್ತು ವೈಖರಿಯಾಗಿದೆ. ಶಿವನೇ ತನ್ನೆಡೆಗೆ ಕಳುಹಿಸಿದ ಪ್ರಕಾರ ಬಂದ ಗಯನ ರಕ್ಷಣೆಯ ಪ್ರತಿಜ್ಞೆ ಅರ್ಜುನನಿಂದಾಗುತ್ತದೆ. ಶ್ರೀಕೃಷ್ಣನೇ ತನಗೀಗ ಶತ್ರುವಾಗುವ ಪರಿಸ್ಥಿತಿಗಾಗಿ ಅರ್ಜುನನು ನೊಂದುಕೊಳ್ಳುತ್ತಾನೆ. ಸಂಧಿಪ್ರಸ್ತಾವಕ್ಕಾಗಿ ಅಕ್ರೂರನು ಬಂದಾಗ ತನ್ನ ಅನಿವಾರ್ಯದ ದೃಢನಿರ್ಧಾರವನ್ನು ಅವನ ಮಾತಿನಲ್ಲೇ ಕೇಳಬೇಕು –

**ಅರವಕ್ಕಳ್ಗರಮೆಂದು ಬಂದು ಮರೆವೊಕ್ಕಾತಂಗೆ ಧೈರ್ಯಂಗುಡಲ್**
**ನೆರೆದೆಂ ನಲ್ವಗೆಯಾತನಂ ಪಗೆಯಲಲ್ತಿಂ ದೈವಮೊತ್ತೈಸಲಾ**
**ಹರಿಯೊಳ್ದ್ ಕಾದುವೆನಿಂದ್ರಮುಖ್ಯರೊಳಮಾಂ ಮಾರಾಂಪೆನಾ ಪಾರ್ವತೀ**
**ಶ್ವರನೊಳ್ ತಳ್ತಿರಿವೆಂ ದಲೆನ್ನ ಶಪಥಂ ಬೀಯಲ್ ಸೊಗಂ ಬಾಳ್ವೆನೇ ?**

ಅಷ್ಟೇ ಅಲ್ಲ, ಹಿಂದು ಮುಂದು ನೋಡದೆ ಕೃಷ್ಣನು ತನ್ನಲ್ಲಿ ಕಾದಾಡಿದರೆ 'ಸಕ್ಕರೆ ಬೆಮೆಯಿಂದೆ ಮಣಲನುಂಬಂತಕ್ಕುಂ' ಎನ್ನುವನು. ಹೀಗೆ ಸಂಧಿಯ ಕೀಲು ಮುರಿಯುವದು.

ಕಥಾವಸ್ತುವಿನಲ್ಲಿ ಬರುವ ಇನ್ನೊಂದು ಸನ್ನಿವೇಶ – ನಾರದನ ತಂತ್ರ, ಅದರಿಂದಲೇ ಕೃಷ್ಣಾರ್ಜುನರ ಕಾಳಗದಲ್ಲಿ ಕೌರವರು ಪಾಂಡವರೊಡನೆ ಒಂದಾಗುವರು. ನಾರದನು ಕೌರವನಲ್ಲಿಗೆ ಬಂದಾಗ ಅವನ ಕಲಹಪ್ರಿಯತೆಯ ರೂಪಚಿತ್ರ ಕವಿಗೆ ಕಂಡುದು ಹೀಗಿದೆ –

**ಗಳದೊಳ್ ರುದ್ರಾಕ್ಷಿಯ ಪೊಸ**
**ತೊಳಚಿಯ ಸರಮೊಂದಿತಂಟಿ ಗಂಟಿಕ್ಕಿ ಜನಾ**
**ವಳಿಗೆ ಕಿಸುತರನಳ್ಕರ್ತಂ**
**ವಿಳಸಿತಮತಿಯೆಂದು ಮುನಿಯನೆಂಬವೊಲೆಸೆಗುಂ (೫–೩)**

ಆದರೆ ನಾರದನು ಕಲಹಪ್ರಿಯನಲ್ಲ, ಸ್ನೇಹಪ್ರಿಯನಾಗಿ ವರ್ತಿಸಿ, ಪಾಂಡವರಿಗೆ ಕೌರವರ ಸಹಾಯವಾಗುವಂತೆ ಮಾಡುವುದು ಕಥಾವಸ್ತು ವೈಶಿಷ್ಟ್ಯ. ಕೌರವರ ಸೈನ್ಯವು ಪಾಂಡವರಿಗೆ ನೆರವಾಗಲು ಬಂದಾಗ ಧರ್ಮರಾಯನಿಗೆ ಮೆಚ್ಚುಗೆಯೇ ಆಯಿತು. ಆ ಸಂದರ್ಭದ ಪದ್ಯವಿದು –

ಪೊಸತೆಯ್ದಿ ನೆರೆಯೆ ಬಲದೊಡ
ನೆಸಗಿದುದಂ ಮರೆತು ಹಿತಸಹೋದರನೆನೆ ಭಾ
ವಿಸುತನುಜರ ಕೂಡಿಯೆ ಮೇ
ನ್ನಿಸಿದಂ ಗಾಂಧಾರಿಯಣುಗನಂ ಜವನಣುಗಂ (೬-೧೦)

ಇದು ಅಜಾತಶತ್ರುವಾದ ಧರ್ಮರಾಯನ ಗುಣವಿಶೇಷವಷ್ಟೆ?

ಈ ಕಥಾವಸ್ತುವಿನಲ್ಲಿ ಕೊನೆಯ ಸನ್ನಿವೇಶವೆಂದರೆ – ಶಿವನು ಪ್ರಸನ್ನನಾಗಿ ಮಂಗಳವನ್ನುಂಟು ಮಾಡಿದುದು. ಶಿವನೇ ಧರೆಗಿಳಿದು ಬರಬೇಕಾಯಿತೆಂದರೆ ಆ ಪ್ರಸಂಗ ಅಷ್ಟೊಂದು ತೀವ್ರವಾದುದೆಂದು ಬೇರೆ ಹೇಳಬೇಕಾಗಿಲ್ಲ. ಈ ಯುದ್ಧದಲ್ಲಿ ಗಯನ ಕಡೆಯಿಂದ (ಕುಬೇರನಿಂದ) ವಿಮಾನಗಳೂ ಬಂದು ಯುದ್ಧಮಾಡಿರುವುದು ಹೊಸತಾದ ಸಂಗತಿ. ಯುದ್ಧದಲ್ಲಿ ವಾಗ್ಯುದ್ಧವೂ ಇಲ್ಲಿದೆ. ದುಶ್ಶಾಸನನಿಗೆ ಯಾದವವೀರನಾದ ಸಿಂಹನೊಂದಿಗೆ, ಭೀಷ್ಮನಿಗೆ ಬಲರಾಮನೊಂದಿಗೆ, ವಿಕರ್ಣನಿಗೆ ಕವಿಯೊಂದಿಗೆ ಮಾತಿನ ಮತ್ತು ಆಯುಧಗಳ ಪ್ರಯೋಗದ ಯುದ್ಧ ಲಕ್ಷ್ಯಾರ್ಹ. ಕೃಷ್ಣಾರ್ಜುನರಿಬ್ಬರ ಪ್ರತಿಜ್ಞೆಗೂ ಭಂಗವಾಗದೆ ಯುದ್ಧವಾಗಿ ಕೃಷ್ಣನು ಬಿದ್ದಾಗ, ಭೂ ಮಾತೆಯೂ ಆ ಮೇಲೆ ಶಿವನೂ ಬಂದೆಸಗಿದ ವರ್ತನೆ ಮಂಗಳಕರವೇ ಆಗಿ ಪರಿಣಮಿಸಿದೆ. ಹೀಗೆ ಪಂಚಶಾಖೆಗಳಿಂದ ಕೂಡಿ ಕಾವ್ಯಕಥಾವಸ್ತು ಓದುಗರಿಗೆ ವಿಶೇಷ ಪರಿಜ್ಞಾನದ ನೆಳಲ ತಂಪನ್ನು ಒದಗಿಸಿದೆ.

**ಭಾವವಲರ್**

ವೃಕ್ಷದ ಸೌಂದರ್ಯ ಸಂಪತ್ತುಗಳಲ್ಲಿ ಪುಷ್ಪವು ಹಿರಿಮೆಯದು. ಅದು ಮರಕ್ಕೆ ಚೆಲುವನ್ನು ನೀಡುವುದಲ್ಲದೆ ತುಂಬಿಗಳನ್ನು ಬಳಿಗೆ ಸೆಳೆಯುವುದು, ಜನರ ಮನಸ್ಸನ್ನು ಸೆಳೆದು ಅವರಿಗೆ ಹಣ್ಣುಗಳನ್ನು ನೀಡುವುದು. ಹೂಗಂಪನ್ನು ಪಸರಿಸಿ ಆನಂದಗೊಳಿಸುವುದು. ಕಾವ್ಯದಲ್ಲಿ ಭಾವವೂ ಹಾಗೆಯೇ. ರಸಿಕರನ್ನು ಆಕರ್ಷಿಸಿ ಅವರಿಗೆ ಸದರ್ಥವನ್ನು ಕರುಣಿಸುವುದು. ಹೂವನ್ನು ದೇವರಿಗೆ ಅರ್ಪಿಸಿ, ಅದನ್ನೇ ಪ್ರಸಾದವಾಗಿ ಸ್ವೀಕರಿಸಬಹುದಷ್ಟೆ? ವಿಘ್ನೇಶನ ಪಾದಕ್ಕೆ ಅರ್ಪಿಸಿದ ಭಾವಕುಸುಮವನ್ನೆ ಪ್ರಸಾದವಾಗಿ ಮೊದಲು ಕೊಳ್ಳೋಣ –

ಈಶಂ ಮೃತ್ಯುಹರಂ ಸ್ವತಾತನಿರೆಯುಂ ಪೂರ್ವಸ್ತುತಂ ಸರ್ವವಿ
ಘ್ನೇಶಂ ರಾಜಿಪ ವಾರಣೇಂದ್ರ ಮುಖನಾಗಿರ್ದುಂ ವಿವೇಕಾತಿಸಂ
ಕಾಶಂ ಮೂಷಕವಾಹನಂ ಫಣಿಧರಂ ಲಂಬೋದರಂದಾಳ್ದು ಸ
ರ್ವಾಶಾವ್ಯಾಪಿ ಗಣೇಶನಾದನೊಸೆದಾದಂ ಮಾಳ್ಕೆ ನಿರ್ವಿಘ್ನಮಂ (೧-೨)

ಸರ್ವವಿಘ್ನಗಳಿಗೂ ಒಡೆಯನೆಂದ ಮೇಲೆ, ಅವನಲ್ಲಿ ವಿಘ್ನ – ಅವಿಘ್ನ ಎಂಬೆರಡು ಗುಣಗಳೂ ಇರಬೇಕಷ್ಟೆ? ತಂದೆಯಾದ ಶಿವನು ಮೃತ್ಯುಹರನು, ವಿಶ್ವಕ್ಕೇ

ಈಶನು; ಆದರೂ ಮೊದಲ ವಂದನೆ ಅವನ ಮಗನಿಗೆ ! ಆನೆಯ ಮುಖವಿದ್ದರೂ ಬುದ್ಧಿ ಆನೆಯದಲ್ಲ. ದೊಡ್ಡ ಶರೀರ, ಕುಳಿತುಕೊಳ್ಳತಕ್ಕ ವಾಹನ – ಇಲಿ! ಇಲಿಯನ್ನು ನುಂಗಿಹಾಕತಕ್ಕ ಹಾವನ್ನು ಧರಿಸಿದ್ದಾನೆ! ಜೋತಾಡುವ ಹೊಟ್ಟೆ ಇದ್ದರೂ ಎಲ್ಲ ದಿಕ್ಕುಗಳಲ್ಲೂ ವ್ಯಾಪಿಸಿದ್ದಾನೆ. ಆದುದರಿಂದಲೇ ಅವನು ಎಡರ್ಗೇಡಿ! ಮುಂದೆ ಸಮುದ್ರವರ್ಣನೆಯಲ್ಲಿ ಮುಕ್ತಪದಗ್ರಹಣಗದ್ಯವನ್ನು ಕಾಣಬಹುದು. ಶ್ರೀಕೃಷ್ಣನು ಉದ್ಯಾನದ ಅದೊಂದು ಕೊಳದ ತಡಿಯಲ್ಲಿ ನಿಂತಾಗ ತೆಗೆದ ಛಾಯಾಚಿತ್ರವಿದು–

**ಸುತ್ತಣ ಗಿಡ ಮರ ಬಳ್ಳಿಯ**
**ಕುತ್ತುರ ಪಸುರ್ಗತ್ತಲಿರ್ಪ ತಡಿಯಂ ಕೃಷ್ಣಂ**
**ಚಿತ್ತಹರಮೆಸಗಿ ರವಿವಿಲ**
**ಸತ್ತೇಜೋಮಧ್ಯ ಸರಸಿಯಂ ನಿಟ್ಟಿಪುದುಂ (೨ – ೬೩)**

ಕೊಳದ ನಡುನೀರಿನ ಮೇಲೆ ರಣಬಿಸಿಲು ಬಿದ್ದಿದೆ. ಸುತ್ತಲೂ ಗಿಡ ಮರ ಬಳ್ಳಿ ಪೊದೆಗಳಿದ್ದು ಅವುಗಳ ನೆರಳಿನಿಂದ ಕತ್ತಲಿಸಿದೆ. ದಡದಲ್ಲಿ ಕೃಷ್ಣನು ಬಂದು ನಿಂತಿದ್ದಾನೆ. ಕೃಷ್ಣನದೂ ಕಪ್ಪಾದ ಛಾಯೆ. ಈ ಛಾಯೆಗಳು ಬೆರೆತು ಮನೋಹರವಾದುದನ್ನು ಶಬ್ದಚಿತ್ರದಲ್ಲಿ ತೋರಿಸಲಾಗಿದೆ. ಕುಶಲ ಚಿತ್ರಕಾರನು ಇದನ್ನು ಚಿತ್ರಿಸಿದರೆ ಕಣ್ಣಿಗೆ ಕಂಡಂತಾಗುವುದಲ್ಲವೆ? ಇನ್ನೊಂದು ದೃಶ್ಯ ಕಣ್ಣಿಗೆ ಕಟ್ಟುವಂತಹ ಪದ್ಯವಿದು – ಮದುವೆ ಉಪನಯನಾದಿಗಳಲ್ಲಿ ವಧೂವರರಿಗೆ ಅಥವಾ ವಟುವಿಗೆ ಆರತಿಯ ಹಾಡನ್ನು ಹಾಡುತ್ತಾ ಮುತ್ತೈದೆಯರು ಆರತಿ ಎತ್ತುವರು. ಆ ಆಚರಣೆಯ ದೇಸಿಯನ್ನು ಇಲ್ಲಿ ವ್ಯಕ್ತಪಡಿಸಿದೆ. ಶ್ರೀಕೃಷ್ಣನು ಉದ್ಯಾನಕ್ಕೆ ಬಂದ ಪ್ರಸಂಗ –

**ಬಳ್ಳಿಯ ಪೆಣ್ ಮೊರೆವಾಡಿನ**
**ಬಳ್ಳಿಯನೆಳೆಯುತ್ತೆ ಹರಿಯ ಮುಂದೆಸೆಯಿಂದಂ**
**ಬೆಳ್ಳಿಯ ಮಂದಾರದ ಪೊಸ**
**ಬೆಳ್ಳಿಯ ತಳಿಗೆಯ ಮಿಳಿರ್ಚಿತಾರತಿಯೆಂಬೋಲ್ (೨ – ೫೦)**

ಅಲ್ಲೊಂದು ಬಿಳಿ ಮಂದಾರದ ಸಸಿಯನ್ನು ಬಳ್ಳಿ ಕವಿದಿದ್ದಿತು. ಮಂದಾರದ ಹೂವನ್ನು ಬಳ್ಳಿ ಸುತ್ತಿ ಅದು ಒಂದು ಆರತಿಯ ತಟ್ಟೆಯನ್ನು ಓರ್ವ ಲತಾಂಗಿಯು ಹಿಡಿದಂತಿತ್ತು. ಹೂವಿನ ಜೇನಿಗಾಗಿ ತುಂಬಿಗಳು ಜೇಂಕರಿಸುತ್ತ ಅಲ್ಲಿ ಸುತ್ತುತ್ತಿದ್ದವು. ಗಾಳಿ ಬೀಸುತ್ತಿದ್ದುದರಿಂದ ಹೂ ಅತ್ತಿತ್ತ ಅಲ್ಲಾಡುತ್ತಿತ್ತು. ಈ ದೃಶ್ಯವು ಒಬ್ಬಳು ಶೋಭಾನೆ ಹಾಡನ್ನು ಹಾಡುತ್ತ ಶ್ರೀಕೃಷ್ಣನಿಗೆ ಆರತಿ ಎತ್ತುವಂತೆ ಇದ್ದಿತು ಎಂದಿಲ್ಲಿ ಹೇಳಲಾಗಿದೆ.

ಗಯನಿಗೆ ಅರ್ಜುನನು ಅಭಯವಿತ್ತ ಮೇಲೆ, ತನ್ನ ಹಗೆ ಕೃಷ್ಣನೆಂದು ತಿಳಿದಾಗ ಅರ್ಜುನನ ಉದ್ಗಾರಗಳಲ್ಲಿ ಒಂದು ಆ ಸೃಷ್ಟಿಕರ್ತನಾದ ಬ್ರಹ್ಮನ ತಿಳಿಗೇಡಿತನವನ್ನು ಬಯಲುಮಾಡುವಂತಿದೆ –

**ತಕ್ಕುದನಿಳೆಯೊಳ್ ಜನನಿಕ**
**ರಕ್ಕರಿಯಂ ದೇಶ ಕಾಲ ಪಾತ್ರವನರಿತೀ**
**ಯಲ್ಕೆನಗೀ ವಿಧಿಯಂ ತಾಂ**
**ನಿಕ್ಕಿದ ವಿಧಿಯೇಕೆ ವಾಣಿಯಂ ವರಿಸಿದನೋ (೪–೨೧)**

ಉದ್ಗಾರವಿದು ಶೋಕದ ಕಹಿ ಬೆರೆತಿದ್ದರೂ ಭಾವದ ಸಿಹಿಯಿಂದ ಕೂಡಿದೆಯಲ್ಲವೆ? ಹಿಂದೆ ಮುಂದೆ ನೋಡದೆಯೆ ವರ್ತಿಸಿ ತಪ್ಪೇನೋ ಆಯಿತು. ಆ ತಪ್ಪನ್ನು ವಿಧಿಯ ಮೇಲೆ ಹೊರಿಸಿಬಿಡುವ ಭಾವಕುಸುಮ ವಿಕಸಿಸಿ ಕಂಪುಬೀರುವುದಲ್ಲವೆ?

ಕೃಷ್ಣನೊಡನೆ ಕಾದತಕ್ಕ ಪ್ರಸಂಗ ತಮಗೆ ಒದಗಿದುದರ ಮೇಲೆ ಸಹದೇವನ ವಿಮರ್ಶೆ ಹೀಗಿದೆ –

**ಬೇಸಗೆ ಕಾಯ್ದು ಭೂತಳವ ತಾಪಿಸೆಯುಂ ಮಳೆಗಂ ನಿಮಿತ್ತಮಾ**
**ಬೇಸಗೆಯಪ್ಪವೋಲ್ ಹರಿಯೊಳಾಹವದಿಂದತಿಕಷ್ಟಮಾದೊಡಂ**
**ಗಾಸಿಗಳಾಗವಲ್ಲಿ ಬಳಿಕಂ ಸೊಗಮಪ್ಪುದು ತಪ್ಪದಣ್ಣ ಎಂ**
**ದೋಸಮಿದೆಂದನಂದು ಸಹದೇವನಮೇಯ ಸುಬುದ್ಧಿಭಾವನಂ (೪ – ೨೭)**

ಸಹದೇವನೆಂದರೆ ಇತರರಂತಲ್ಲ. ಸಹ–ದೇವ ಅಂದರೆ, ದೇವನಿಂದ ಸಹಿತನು. ಅದಲ್ಲದೆ, ಉನ್ನತವಾದ ಬುದ್ಧಿಭಾವಗಳನ್ನುಳ್ಳವನು. ಹೀಗಿರುವಾಗ ಆತನ ವಿಚಾರ ಅದೆಷ್ಟು ಉನ್ನತವಾಗಿರಬೇಡ? ಕೃಷ್ಣನೊಂದಿಗೆ ಕಾದಾಟವೆಂದರೆ – ತಂಪಿನ ಮಳೆಗಾಲ ಬರಲು ಕಾರಣವಾಗುವ ಬೇಸಗೆಯಂತೆ : ಎನ್ನುತ್ತಾನೆ. ಈ ಯುದ್ಧದಿಂದ ದುಷ್ಪರಿಣಾಮವಾಗದು ಎಂಬುದು ಅವನ ಭವಿಷ್ಯೋಕ್ತಿ. ಅವನು ಒಳ್ಳೆಯ ಜ್ಯೋತಿಷಿ. ಇಂತಹ ಭಾವದ ಅಲರು(ಹೂ)ಗಳನ್ನೆಷ್ಟೋ ಈ ಕಾವ್ಯದಲ್ಲಿ ಕಾಣಬಹುದು.

## ಸದರ್ಥಮೆ ಫಲಂ

ಈ ಕಾವ್ಯವೃಕ್ಷದ ಒಂದೆರಡು ಹಣ್ಣುಗಳ ರುಚಿಯನ್ನು ನೋಡೋಣ. ಅರ್ಥವೂ ಭಾವದಲ್ಲೇ ಅಂತರ್ಗತ. ಏಕೆಂದರೆ – ಹೂವೇ ಮುಂದೆ ಕಾಯಾಗಿ ಹಣ್ಣಾಗುವುದಲ್ಲವೆ? ಭಾವವನ್ನು ಕುರಿತು ಆಡಿದುದರಲ್ಲಿ ಅರ್ಥವೂ ಒಳಗೊಂಡಿದೆ. ಆದರೂ ಹಣ್ಣಿಗೆ ಉದಾಹರಣೆ ಕೊಡಬಹುದು – ಶ್ರೀ ಕೃಷ್ಣನ ಪ್ರಜೆಗಳು ಹೇಗಿದ್ದರು?

**ಪಕ್ಷವನಾನದವರ್ ಶಶಿ**
**ಪಕ್ಷಯುಗದೆ ಶುಕ್ಲ ಪಕ್ಷಮದನನುಕರಿಸು**
**ತ್ತಕ್ಷಯ ಕಳೆವಡೆಯುತೆ ತ**
**ಮ್ಮಕ್ಷದೊಳಾ ಕೃಷ್ಣಪಕ್ಷಮಂ ಪಿಡಿದೆಸೆವರ್ (೨ – ೯)**

ಅವರು ಪಕ್ಷಹಿಡಿಯದವರು – ಅಂದರೆ, ಸ್ವಜನ – ಸ್ವಜಾತಿ – ಸ್ವಪಕ್ಷ ಎಂಬಂತಹ ಪಕ್ಷ ಪಂಗಡ ಕಟ್ಟಿ ಅಧಿಕಾರ ಗಿಟ್ಟಿಸಲು ಹೋರಾಡುವವರಲ್ಲ, ಪಕ್ಷಪಾತರಹಿತರು; ನ್ಯಾಯಪಕ್ಷದವರು. ಆದರೂ ಚಂದ್ರನ ಶುಕ್ಲಪಕ್ಷವನ್ನು ಅನುಕರಿಸುತ್ತಾ ಹೆಚ್ಚಿನ ಕಳೆ (ಕಲೆ, ಕಾಂತಿ)ಯನ್ನು ತಾಳುತ್ತಿದ್ದರು. ಕೃಷ್ಣಪಕ್ಷವು ಕಳಾಹೀನವಷ್ಟೆ? ಆದರೆ ಶ್ರೀಕೃಷ್ಣನ ಪಕ್ಷವನ್ನು ತಮ್ಮ ಅಕ್ಷದಲ್ಲಿ (ಆತ್ಮದಲ್ಲಿ) ನೆಲೆಗೊಳಿಸಿ ಶೋಭಿಸುತ್ತಿದ್ದರು. ಇದು ಕಾವ್ಯ ವೃಕ್ಷದ ಒಂದು ರುಚಿಕರಫಲವಲ್ಲವೆ?

ಶ್ರೀಕೃಷ್ಣನು ಗಯನ ಮೇಲೆ ಸಿಟ್ಟುಗೊಂಡು ಮಾಡಿದ ಪ್ರತಿಜ್ಞೆಯ ಸಂಗತಿಯನ್ನು ನಾರದನು ತಿಳಿಸಿ, ತೆರಳಿದಾಗ ತನ್ನ ದುಷ್ಕೃತ್ಯದಿಂದ ಆಕುಲಚಿತ್ತನಾಗಿ ಗಯನೆನ್ನುವ ಮಾತು ಇಲ್ಲಿದೆ –

**ತೋಷಿತನೊಳ್ ಬಹುಚಿಂತಾ 1 ದೂಷಿತನೊಳ್ ಮಮತೆ ದೈನ್ಯಮೊಪ್ಪದು ಬಹುಧಾ**
**ತೋಷಿತನೇಗಳ್ ಚಿಂತಾ 1 ದೂಷಿತನೀ ನುಡಿಗೆ ಗಯನುದಾಹೃತನಲ್ತೇ ? (೩–೨೫)**

ಸಂತುಷ್ಟನಲ್ಲಿ ತನ್ನತನ (ಅಹಂಕಾರ) ದುಃಖಿತನಲ್ಲಿ ದೈನ್ಯ ಸಹಜವಾದರೂ ಹಾಗಾಗಬಾರದು. 'ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ' ಎಂಬ ಗೀತೆಯ ಮಾತಿನ ಛಾಯೆ ಇಲ್ಲಿದೆ. 'ನಕ್ಕಷ್ಟೇ ಅಳಬೇಕು' ಎಂಬ ಮಾತು ಇಲ್ಲಿ ಸರಿಹೋಗುವುದು. ನೀತಿ ಮಾರ್ಮಿಕವಾಗಿದೆ.

ಕೃಷ್ಣನೊಡನೆ ಯುದ್ಧಮಾಡುವ ಪರಿಸ್ಥಿತಿ ಬಂತಲ್ಲಾ – ಎಂಬ ಬೇಸರದಿಂದ ಅರ್ಜುನನು ಹೇಳಿಕೊಂಡುದು ಹೀಗಿದೆ –

**ಕೋಪಾಟೋಪದೋಳಿಂದು ಕೌರವರೊಳೇ? ಪ್ರೋನ್ಮತ್ತದಿಗ್ದೇಶ ಭೂ**
**ಮೀಪಾಲರ್ಕಳೊಳೇ ಕಡಂಗಿ ಪೋಣರ್ವೆಂ ಪಂಚೇಂದ್ರಿಯವ್ರಾತದಂ**
**ತೀ ಪಾಂಡೂದ್ಭವರೆಮ್ಮ ಕಾವ ಸುಮತಿಶ್ರೀ ಕೃಷ್ಣನಂ ಭಾವನಂ**
**ಗೋಪೀನಾಥನನೆಂತು ಕೂಗಿ ಕರೆವೆಂ ಮೇಣೆಂತು ಮಾರಾಂಪೆನೋ (೪–೨೨)**

'ಭಾವನಂ' ಎಂಬಲ್ಲಿ ಭಾವನಾದ ಕೃಷ್ಣನನ್ನು ಎಂಬುದು ಒಂದರ್ಥವಾದರೆ, ಪಂಚೇಂದ್ರಿಯಗಳನ್ನು ಕಾಪಾಡುವ ಮನಸ್ಸಿನಂತಿರುವವನನ್ನು ಎಂಬ ಅರ್ಥವೂ ಇಲ್ಲಿ ಸಿದ್ಧಿಸುವುದು.

ಆ ಮೇಲೆ ಧರ್ಮರಾಯನು ಸಂಗತಿಯನ್ನರಿತು ಅರ್ಜುನನೊಡನೆ – 'ನೀಂ ಪಡಿಯಾಡೆ ನಾಡೆ ತಿರೆಯಂ ಕಳೆದಾತನೆ ನಾನೆ ಸೋಲ್ತನಪ್ಪೆಂ' ಎನ್ನುವನು. ಅರ್ಜುನನ ತಪ್ಪನ್ನು ಅವನ ಮೋರೆಗೆ ಕಟ್ಟಿ ತೋರಿಸುವಾಗಲೇ ತನ್ನ ಅಳುಕು ಮುಂದಾಗಿ ತನ್ನನ್ನೆ ಬಿಗಿಹಿಡಿದಿದೆ. ಧರ್ಮರಾಯನು ಹಿಂದುಮುಂದೆಣಿಸದೆ, ಜೂಜಾಡಿ, ರಾಜ್ಯವನ್ನೇ ಕಳೆದುಕೊಂಡನಲ್ಲವೆ? ಆ ನೆನಪು ಅವನ ಚಿತ್ತವನ್ನು ಕುತ್ತಿರಬೇಕು. ಇದಕ್ಕೆ ಇನ್ನೊಂದು ಬಗೆಯ ಅರ್ಥವೂ ಕಾಣುತ್ತದೆ. –

'ನೀಂ ಪಡಿಯಾಡೆ' – ನೀನು ಮರೆಹೊಕ್ಕ ಗಯನನ್ನು ಕಾಪಾಡುವ ಪ್ರತಿಜ್ಞೆಮಾಡಿದೆಯಷ್ಟೆ? ಇದರಿಂದ ಕೃಷ್ಣನೇ ವೈರಿಯಾದನೆಂಬುದನ್ನು ತಿಳಿದ ಮೇಲೆ, ಹಿಂದಣ ಮಾತಿಗೆ ವ್ಯತಿರಿಕ್ತವಾಗಿ ವರ್ತಿಸಿದರೆ, ಅರ್ಥಾತ್, ರಕ್ಷಿಸಲು ನಿರಾಕರಿಸಿದರೆ, ಆ ಸೋಲು ನನ್ನದೆಂದೇ ಭಾವಿಸುಥೆನು. ಮೊಧಲು ರಾಜ್ಯವನ್ನು ಕಳೆದು ಸೋಲನುಭವಿಸಿದ ನನಗೆ ಅದು ಇನ್ನೊಂದು ಸೋಲಾಗುವುದು ಎಂಬ ಧ್ವನ್ಯರ್ಥವೂ ಇಲ್ಲಿದೆ. ಧರ್ಮರಾಯನ ಮುಂದಣ ಮಾತೂ ಲಕ್ಷ್ಯಾರ್ಹ –

**ಬರೆದುದು ಬಗೆದುದು ಮಾಜಲ್**
**ನೆರೆಗುಂ ನುಡಿ ಮಾಜಲರಿದು ನಮ್ಮನ್ನರ್ಗೆ . . . (೪ – ೨೪)**

ಈ ಮಾತಿನಲ್ಲಿ ಸತ್ಯಯುಗದ ಚಿತ್ರ ನಮ್ಮ ಕಣ್ಮುಂದೆ ಬರುವುದು. ಈಗಿನ ಕಾಲವೆಂದರೆ – 'ಏನು ಹೇಳಿದರೂ' ಬರಹ ಮೂಲಕ ತಿಳಿಸು" (Give in writing) ಎಂಬ ಕಾಲವಾಗಿದೆ. ಬಾಯಲ್ಲಿ ನುಡಿದುದು ನಂಬಲರ್ಹವಲ್ಲ ಎಂಬ ಕಾಲ. ಅದಕ್ಕೆ ಅನುಗುಣವಾಗಿ – ಇಂದಿನವರು ಒಮ್ಮೆ ಹೇಳಿದುದನ್ನು ಮುಂದಣ ಸಂದರ್ಭದಲ್ಲಿ 'ನಾನು ಹಾಗೆ ಹೇಳಿಯೇ ಇಲ್ಲ' ಎಂದು ಬಿಡುತ್ತಾರೆ. ಅಥವಾ ಹಿಂದೆ ಹೇಳಿದುದು ನಿಜವಾದರೂ ಅದನ್ನೆ ಮಾರ್ಪಡಿಸುತ್ತ, 'ಅಂದಿಗೆ ಅದು ಸತ್ಯ, ಇಂದಿಗೆ ಇದು ಸತ್ಯ.' ಎಂದು ಸತ್ಯಕ್ಕೆ ಬೇಕಾದಂತೆ ವ್ಯಾಖ್ಯಾನಮಾಡುವರು. ಆಡಿದ ಮಾತಿಗೆ ವ್ಯತಿರಿಕ್ತವಾಗಿಯೇ ವರ್ತಿಸುವರು. ಧರ್ಮರಾಯನ ಅಭಿಪ್ರಾಯ ಏತದ್ವಿರುದ್ಧವಿದೆ. ಬರೆದುದನ್ನು ಮಸುಳಿಸಬಹುದು, ಆದರೆ, ಆಡಿದುದನ್ನು ಆಡಲಿಲ್ಲವೆನ್ನಲು ಸಾಧ್ಯವೇ ಇಲ್ಲ! ಎಂಧು ಆತನು ಹೇಳುವನು. ಅದು ಎಲ್ಲ ಕಾಲಕ್ಕೂ ಅನುಸರಣೀಯ ನೀತಿಯೇ ಸರಿ.

ಮುಂದೆ ಸಂಧಿಗೆ ಬಂದ ಅಕ್ರೂರನು ಅಭಿಮನ್ಯುವಿನ ನೈಜಗೌರವವನ್ನು ತಿಳಿಸುವನು. ಮೊದಲು ಅವನ (ಅಭಿಮನ್ಯುವಿನ) ಆಟದ ವಿಚಾರ. ಆ ಮೇಲೆ ಪಾಠದ ವಿಚಾರ :–

**ಆಟದೊಳವನಿಟ್ಟಾ ಸೆಂ**
**ಡೇಟಂ ಕಾಲ್ಮುಸಿದು ಬೀಳ್ವರೋರಗೆಗುವರರ್**
**ಪಾಟದೊಳೋಜರ್ಗರಿಪ**
**ಲ್ಯಾಟಿಪನಂತಾತನರಿವನಾರ್ಪೆರರರಿವರ್ (೪ – ೩೦)**

ಅಭಿಮನ್ಯುವನ್ನು ವರ್ಣಿಸಲು ಈ ಪದ್ಯದಲ್ಲಿ ಶಿಕ್ಷಣತತ್ತ್ವವಿದೆಯಲ್ಲವೆ? ಆಟದೊಂದಿಗೆ ಅಥವಾ ಆಟದ ಮೂಲಕ ಪಾಠ ಎಂಬುದು ಶಿಕ್ಷಣಜ್ಞರ ಮತ. ಆಟಾಳಿಕಂದನಾದ ಅಭಿಮನ್ಯುವಿನ ಆಟದ ಶಕ್ತಿಯೂ ಅಸಾಮಾನ್ಯ. ಚೆಂಡಾಟದಲ್ಲಿ ಅವನೆದುರಿಗೆ ನಿಲ್ಲವರಿಲ್ಲ. ಅವನು ಹೊಡೆದ ಕಾಲ್ಚೆಂಡು ತಗಲಿದ ಎದುರಾಳಿ ಹುಡುಗರು ಕಾಲ್ಮುಸಿದು ಬೀಳುವರು ಎನ್ನಲಾಗಿದೆ. ಪಾಠದಲ್ಲಿ ಅವನು ಗುರುವಿಗೆ

ಹೇಳಿಕೊಡುವಷ್ಟರ ಜ್ಞಾನಿ. ಆದರೆ ಗುರುವೆಂದುದನ್ನು ತಪ್ಪಾಗಿದ್ದರೆ ತಿದ್ದಿ ತಾನೇ ಗುರುವಾಗುತ್ತಾನೆಂದು ಹೇಳಿಲ್ಲ. ಅದು ಶಿಸ್ತುಭಂಗವಾಗುವುದು. ಗುರು ತಪ್ಪಿದಲ್ಲಿ ತಿಳಿಸುವುದಾದರೂ ಅದು ಏಕಾಂತದಲ್ಲಾಗಬೇಕು – ಎಂಬ ಸೂಚನೆಯೂ ಇಲ್ಲಿದೆ.

ಮುಂದೆ ಅರ್ಜುನನು ಕೋಪದಿಂದ ಅಕ್ರೂರನಿಗೆ ಹೇಳಿದ ಮಾತಿದು –

**ಹರಿ ನೀರ ನಡುವಿನಂಬರ**
**ಚರಕೀಟಕೆ ತೀರದರ್ಜುನ ದ್ರುಮಶಾಖಾ**
**ಕರಮಂ ದಿಂಕಿಡೆ ನೆರೆಗುಮೆ**
**ಹರಿಗಳ್ಕರೆನೆ ನಂದುಮೆನ್ನ ಪೂಣ್ಕೆಯನುಳಿಯೊ (೪–೪೮)**

ಇಲ್ಲಿ ಶ್ಲೇಷಾರ್ಥದಿಂದ ನೀರ ನಡುವೆ ಇರತಕ್ಕ ಕಪ್ಪೆಗೆ ದಡದಲ್ಲಿರತಕ್ಕ ಮತ್ತಿಮರದ ಗೆಲ್ಲಿನಲ್ಲಿರುವ ಹಾತೆಯನ್ನು ಹಿಡಿಯಲಿಕ್ಕಾಗಿ ನೆಗೆಯಲು ಸಾಧ್ಯವಾಗದೆಂದು, ಪ್ರಕೃತಾರ್ಥದಲ್ಲಿ ಕಡಲ ನಡುವಿನ ದ್ವಾರಕೆಯ ಕೃಷ್ಣನಿಗೆ ಅರ್ಜುನನ (ತನ್ನ) ಕೈಯಲ್ಲಿ (ರಕ್ಷಣೆಯಲ್ಲಿ) ಇರುವ ಖೇಚರನನ್ನು ಹಿಡಿಯಲು ಸಾಧ್ಯವಾಗದೆಂದು ಸ್ಫುಟಾರ್ಥವೂ ಇದೆ. ಇಂತಹ ಅರ್ಥಮಹತ್ತ್ವವುಳ್ಳ ಕಾವ್ಯಾಂಶಗಳು ಇನ್ನೆಷ್ಟೋ ಇವೆ. ಇದು ದಿಗ್ದರ್ಶನ ಮಾತ್ರ.

**ಶಬ್ದಂ ಕುಕಿಲ್**

ಈ ಕಾವ್ಯವೃಕ್ಷದಲ್ಲಿ ಅಲ್ಲಲ್ಲಿ ಇಂಪಾಗಿ ಶಬ್ದಿಸುವ ಶಬ್ದಗಳೇ ಕೋಕಿಲಸ್ವರ . ಅವನ್ನು ಅರ್ಥ ದೃಷ್ಟಿಯಿಂದ ಮತ್ತು ನಾದಮಾಧುರ್ಯ ದೃಷ್ಟಿಯಿಂದ ತೂಗಿ ಇಟ್ಟುದರಿಂದ ಪದಮೈತ್ರಿ (ಶಯ್ಯೆ) ಈ ಕಾವ್ಯದ ಇನ್ನೊಂದು ಪ್ರಮುಖ ಲಕ್ಷಣವಾಗಿದೆ. ಅಲ್ಲಲ್ಲಿ ಅನುಪ್ರಾಸಗಳನ್ನು ಕಾವ್ಯದುದ್ದಕ್ಕೂ ಕಾಣಬಹುದು. ದೇಸಿ ಎನಿಸುವ ಕೆಲವು ಶಬ್ದಪರಿಶೀಲನೆ ಮಾಡೋಣ –

ಬಾಳೆಯ ಕಿತ್ತೆಲೆ (೨–೫೬) ಬಾಳೆಲೆಯ ಒಂದು ಬದಿಯಿಂದ ಹರಿದು ತೆಗೆದ ಸಣ್ಣ ಭಾಗವೇ ಕಿತ್ತೆಲೆ. ಕಿರಿದು–ಎಲೆ–ಕಿತ್ತೆಲೆ. ಇದನ್ನೆ 'ಕೀತು' ಎಂದೂ ದೇಸಿಯಾಗಿ ಹೇಳುವರು.

ಮದ್ದುಗುತ್ತು – ಇಂಜೆಕ್ಷನ್ ಎಂಬ ಅರ್ಥದಲ್ಲಿ ಇದು ಬಳಕೆಯಾಗಿದೆ. ಎಣ್ಣೆ ದೇರ್ – ತೈಲಶಕಟ ಎಂದು ಸಂಸ್ಕೃತರೂಪ. ಬಸ್ಸು, ಕಾರು ಎಂಬ ವಾಹನಕ್ಕೆ ಬಳಸಿದ ಅಚ್ಚಗನ್ನಡದ ಶಬ್ದವಿದು. ರೂಢಿಗತವಾದ ದೇಸಿಯನ್ನು ತಿಳಿಯದಿದ್ದರೆ ಈ ಕೆಳಗಿನ ಪದ್ಯಕ್ಕೆ ಅರ್ಥವಾಗದು –

**ಯಮಸುತನಂ ನೀರ್ದಾಂಟಿಸಿ**
**ಸಮೀರಜನ ಕುತ್ತಿ ಕೆಡಪಿ ಮೊನೆಯೊಳ್ ಮೊನೆಯೊಳ್**
**ಯಮಳರ ಕಾಪಿಟ್ಟಾಂ ಸಂ**
**ಭ್ರಮಿಯಿಸಿ ನರನಂ ಮರಳ್ಚಿ ತರ್ಪೆಂ ಗಯನಂ (೬–೫)**

ಮನೆಗಳಲ್ಲಿ ಗಡಿಗೆಗಳನ್ನು ಮಗುಚುವ ಕಳ್ಳಬೆಕ್ಕನ್ನು ನಿವಾರಣೆ ಮಾಡಲು, ಅದನ್ನು ಗೋಣಿಚೀಲದಲ್ಲಿ ತುಂಬಿ ಒಯ್ದು ಹರಿಯುವ ಹೊಳೆಯ ಆಚೆ ಬಿಡುವ ಕ್ರಮವಿದೆ. ಹಾಗೆ ಬಿಟ್ಟಲ್ಲಿ ಅದರ ಕಾಟ ತಪ್ಪುವುದು. (ಕೊಲ್ಲುವುದು ಪಾಪಕರ). ಧರ್ಮರಾಯನನ್ನು ಕಳ್ಳಬೆಕ್ಕಿಗೆ ಸರಿಯಾಗಿ ಎಣಿಸಿ, ಅವನನ್ನು ನೀರಿನ ಆಚೆಗೆ, ಪ್ರಾಯಶ: ಸಮುದ್ರದ ಆಚೆಗೆ ದಾಟಿಸಿಬಿಡುವೆನು – ಎಂದಿಲ್ಲಿ ಅಭಿಪ್ರಾಯ. 'ಯಮಳರನ್ನು ಕಾಪಿಟ್ಟು' ಎಂಬುದೂ ಅರ್ಥದಲ್ಲಿ ದೇಸಿ. ತಮ್ಮಿಂದೇನೂ ಸಾಗದ ಆ ಬಡಪಾಯಿ ಅವಳಿ ಮಕ್ಕಳನ್ನು ಉಳಿಸಿ – ಎಂದು ಅರ್ಥವನ್ನೂ ಹೇಳಬಹುದು. ಆಗ ಅದು ದೇಸಿಯೆನಿಸದು. ತುಳುನಾಡಿನ ಕನ್ನಡಿಗರಿಗೆ ಇದು ಅರ್ಥವಾಗುವ ಪ್ರಯೋಗ. ಹಳ್ಳಿಗಳಲ್ಲಿ ಪೈರು ನೆಟ್ಟಾದ ಮೇಲೆ ಅದಕ್ಕೆ ಕಾಪುಗುತ್ತುವರು. ಸೌತೆ ಹಿತ್ತಿಲು, ಕಬ್ಬಿನ ಹಿತ್ತಿಲುಗಳಿಗೆ ಕಾಪಿಗಾಗಿ (ರಕ್ಷಣೆಗಾಗಿ) ಹುಲ್ಲಿನ ಮನುಷ್ಯ ರೂಪವನ್ನು ನಿಲ್ಲಿಸುತ್ತಾರೆ. ಅದನ್ನು 'ಬೆರ್ಚಪ್ಪ' ಎನ್ನುವರು. ಮನುಷ್ಯರ ದೃಷ್ಟಿದೋಷವಾಗದಂತೆ, ನರಿ ಮುಂತಾದ ಮೃಗಗಳು ಕಂಡಾಗ ಹೆದರುವಂತೆ ಅಂತಹ ಕಾಪು ಉಪಯುಕ್ತವಾಗುವುದು. ನಕುಲ ಸಹದೇವರನ್ನು ಕೊಂದು ಕಾಪು ಇಟ್ಟಾಗ, ಉಳಿದೆಲ್ಲರೂ ಓಡಿಹೋಗುವರೆಂದು ಈ ದೇಸಿಯ ಪ್ರಯೋಗದ ಭಾವ.

**ಛಂದಂ ಅನ್ವಿತಪರ್ಣಂ**

ಎಲೆಗಳಿಲ್ಲವಾದರೆ ಅಥವಾ ಒಮ್ಮೆ ಇಲ್ಲವಾಗಿ ಚಿಗುರದಿದ್ದರೆ, ಮರ ಸತ್ತಿತೆಂದು ತಿಳಿಯಬೇಕು. ಆದುದರಿಂದ ಪದ್ಯಕಾವ್ಯ ವೃಕ್ಷಕ್ಕೆ ಛಂದಸ್ಸೇ ಎಲೆಗಳು. (ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇವಿತ್ – ಭಗವದ್ಗೀತೆ) ಸತ್ತ್ವಾಲೋಕನ ಕಾವ್ಯದಲ್ಲಿ ವೃತ್ತ, ಕಂದಪದ್ಯ, ಪಿರಿಯಕ್ಕರ, ತ್ರಿಪದಿ, ಮಂದಾನಿಲರಗಳೆ ಮಾತ್ರವಲ್ಲದೆ, 'ಅರಲ ರಗಳೆ' ಎಂಬುದೂ ಇದೆ. ಇದು ಹರಿಹರಕವಿಯ ಪುಷ್ಪರಗಳೆಯಂತಲ್ಲ. ಆ ಪುಷ್ಪರಗಳೆ ವಿಶಿಷ್ಟ ಛಂದಸ್ಸೂ ಅಲ್ಲ, ಅದು ಪುಷ್ಪಾಪಚಯವರ್ಣನೆಯುಳ್ಳುದಾಗಿದೆ. 'ಅರಲ ರಗಳೆ' ಕುಸುಮಷಟ್ಪದಿಯ ದೀರ್ಘಪಾದ ಸಮುಚ್ಚಯ. ಈ ಕಾವ್ಯದಲ್ಲಿ ಮುಕ್ತಪದಗ್ರಹಣಗದ್ಯವಿದೆ (ಆಶ್ವಾಸ – ೧). ಕೆಲವು ಪದ್ಯಗಂಧಿ ಗದ್ಯಗಳೂ ಬಂದಿವೆ. ಉದಾ: ೪–೪೯ ಪದ್ಯಾನಂತರದ ಗದ್ಯ.

**ರಸಂ ಜೀವಂ**

ರಸವೇ ಕಾವ್ಯದ ಜೀವಾಳ. ಮರದ ಜೀವಾಳವೂ ರಸವೇ. ರಸಾತ್ಮಕ ವಾಕ್ಯಸಮೂಹವೇ ಕಾವ್ಯ (ವಾಕ್ಯಂ ರಸಾತ್ಮಕಂ ಕಾವ್ಯಂ). ಸತ್ತ್ವಾಲೋಕನ ಕಾವ್ಯವು ವೀರರಸಪ್ರಧಾನವಾದುದು. ಇತರ ರಸಗಳ ಸನ್ನಿವೇಶವೂ ಇದರಲ್ಲಿವೆ –

ವನವಿಹಾರವನ್ನು ಮುಗಿಸಿ ವಲ್ಲೀಗೃಹದಲ್ಲಿದ್ದ ಶ್ರೀಕೃಷ್ಣನು ಗಯನ ಉದ್ವೃತ್ತಿಯಿಂದ ಕೆರಳಿದ ಭಾಗ ರೌದ್ರಕ್ಕೆ ಉದಾಹರಣೆ (೩ – ೪). ವೀರರಸಕ್ಕೆ ಉದಾಹರಣೆಯಾಗಿ ಅರ್ಜುನನ ಪ್ರತಿಜ್ಞೋಕ್ತಿಯಿದೆ (೪ – ೧೯). ಅಭಿಮನ್ಯುವಿನ

ವೀರೋಕ್ತಿ (೪ – ೩೩). ಕರುಣರಸಕ್ಕೆ ಉದಾಹರಣವಾಗಿ ಗಯನು ವ್ಯಸನದಿಂದ ಆಡುವ ಮಾತುಗಳು (೩ – ೨೬). ಅರ್ಜುನನಲ್ಲಿ ಉಕ್ಕಿ ಬಂದ ಕರುಣರಸ (೪ – ೨೦). ವಾಸವಾತ್ಮಜನಿಂದ ಕೆಡೆದ ವಾಸುದೇವನಂ ನೋಡಿ ಭೂದೇವಿ ಮರುಗುವುದು (೮ – ೨೦). ಕೈಲಾಸಾದ್ರಿಯಲ್ಲಿದ್ದ ತಪಸ್ವಿಗಳ ವರ್ಣನೆಯಲ್ಲಿ ಶಾಂತರಸವನ್ನು ಕಾಣಬಹುದು (೩ – ೪೨. . ೪೪)

**ತಾಯ್ವೇರವೊಲ್ ದೇವಿ ವಾಕ್ಸತಿ**

ಇಷ್ಟೆಲ್ಲಾ ಶೋಭೆಗಳಿಂದಲೂ ಸಜೀವತೆಯಿಂದಲೂ ಕೂಡಿರುವ ಕಾವ್ಯವೃಕ್ಷ ಕಾಲನ ಮೂದಲೆಯನ್ನು ಗಣಿಸದೆ, ಬಿರುಗಾಳಿಗೆ ಮಗುಚದ, ನಿಂತಿದ್ದರೆ ಮಾತ್ರ ಅದರ ಗೆಲ್ಲು, ಹೂ, ಹಣ್ಣು, ಎಲೆಗಳು ಇರಬಲ್ಲವು. ಹಾಗೆ ಸ್ಥಿರವಾಗಿ ನಿಲ್ಲಲು ಆಧಾರವಾವುದು? ಅದೇ ತಾಯಿಬೇರು. ಕಾವ್ಯವು ವೃಕ್ಷವಾದರೆ ಅದರ ತಾಯಿಬೇರು ವಾಗ್ದೇವಿಯೇ ಸರಿ. ತಾಯಿಬೇರು ಹೊರಗಡೆಗೆ ಕಾಣುವುದಿಲ್ಲ. ಅದು ನೆಲದ ಆಳದಲ್ಲಿ ಹುದುಗಿ ಕವಲು ಕವಲುಗಳಾಗಿ ಹರಡಿ ನೆಲದ ಸಾರವನ್ನು ಹೀರಿ ಮರಕ್ಕೆ ಒದಗಿಸುವುದು. ಅದರಂತೆ ವಾಗ್ದೇವಿಯು ಕಾವ್ಯಕ್ಕೆ ಆಧಾರವಾಗಿದ್ದು ಅದನ್ನು ಹೃಷ್ಟಪುಷ್ಟಗೊಳಿಸುವಳು. ಆಕೆಯ ಒಲ್ಮೆಯಿಂದಲೇ ಕವಿಕರ್ಮ ಕಾವ್ಯವಾಗಬಲ್ಲುದು; ಲೋಕದ ಜನಸಾಮಾನ್ಯರನ್ನೂ ವಿದ್ವಾಂಸರನ್ನೂ ರಂಜಿಸಬಲ್ಲುದು.

*****

ಓಂ ಶುಭಮಸ್ತು

# ಸತ್ವಾಲೋಕನಂ ಎಂಬ ವಸ್ತುಕ ಕಾವ್ಯಂ

## ಪ್ರಥಮಾಶ್ವಾಸಂ

### (ನಾಂದಿ–ಕಥಾಪೀಠಿಕೆ–ದ್ವಾರ ಕಾವರ್ಣನಂ)

ಶಾ.ವಿ. ಶ್ರೀದೇವೀರಮಣಂ ವಿನೋದಕರಣಂ ಧರ್ಮಾನುಕೂಲಾತ್ಮಸ
ದ್ಬೋಧಪ್ರಾಯಗುಣಂ ಮನೋಜ್ಞಸುಮುಖಂ ಚಾತುರ್ಮುಖೋದ್ಗೀತದಿ ॥
ವ್ಯೋದಂತಂ ರಣರಂಗಪಂಚವದನಂ ದೋಷಪ್ರಣಾಶಂ ಸದಾ
ಹ್ಲಾದಂ ರಕ್ಷಿಸುಗೊಳ್ಪನಿತ್ತು ತಿರೆಯೊಳ್ ಶ್ರೀಶಂಕರಂ ಲೆಂಕರಂ ॥೧॥

ಈಶಂ ಮೃತ್ಯುಹರಂ ಸ್ವಕಾಶನಿರೆಯುಂ ಪೂರ್ವಸ್ತುತಂ ಸರ್ವವಿ
ಘ್ನೇಶಂ ರಾಜಿಪ ವಾರಣೇಂದ್ರಮುಖನಾಗಿರ್ದುಂ ವಿವೇಕಾತಿಸಂ
ಕಾಶಂ ಮೂಷಕವಾಹನಂ ಫಣಿಧರಂ ಲಂಬೋದರಂದಾಳ್ದು ಸ
ರ್ವಾಶಾವ್ಯಾಪಿ ಗಣೇಶನಾದನೊಸೆದಾದಂ ಮಾಳ್ಕೆನಿರ್ವಿಘ್ನಮಂ ॥೨॥

೧. (ಆಶೀರೂಪದ ಈ ಪ್ರಥಮ ಮಂಗಳ ಪದ್ಯವು ವಿಷ್ಣು–ಶಿವ ಉಭಯಪರವಾಗಿದೆ; ಎಂಟು ಆಶ್ವಾಸಗಳ ಕಥಾಗರ್ಭಸೂಚಕವು ಆಗಿದೆ). ಶ್ರೀ ದೇವಿಯ (ಲಕ್ಷ್ಮೀದೇವಿಯ, ಕಾಂತಿಯುಕ್ತಳಾದ ದೇವಿಯ) ವಲ್ಲಭನು, ವಿನೋದದ ಮನೋಭಾವವುಳ್ಳವನು, ಧರ್ಮಕ್ಕೆ ಅನುಕೂಲವಾಗುಳ್ಳ ಆತ್ಮಜ್ಞಾನ ಸಮೃದ್ಧ ಗುಣವುಳ್ಳವನು, ಮನೋಹರವಾಗಿ ಕಾಣಿಸುವ ಒಳ್ಳೆಯ ಮುಖವುಳ್ಳವನು (ಗರುಡನುಳ್ಳವನು, ಗಣೇಶನನುಳ್ಳವನು), ನಾರದಾದಿ ಕೀರ್ತನಶೀಲ ಭಕ್ತರಿಂದ ಹಾಡಲಾದ ದಿವ್ಯಚರಿತ್ರೆಯುಳ್ಳವನು, ಯುದ್ಧರಂಗದಲ್ಲಿ ಪಂಚಾಸ್ಯನು (ಸಿಂಹನು, ನರಸಿಂಹರೂಪನು, ಐಮೊಗನು), ದೋಷನಾಶ ಮಾಡುವವನು, ಯಾವಾಗಲೂ ಸಂತೋಷವುಳ್ಳವನು (ಸತ್ಪುರುಷರಿಗೆ ಸಂತೋಷ ಸ್ವರೂಪನು) ಆದ ಶ್ರೀಶನು (ಶ್ರೀಯರಸನು ವಿಶೇಷವಾಗಿ)–ಶೀಶಂಕರನು ಈ ಭೂಮಿಯಲ್ಲಿ ಒಳ್ಳೆಯದನ್ನಿತ್ತು ಭಕ್ತರನ್ನು ಕಾಪಾಡಲಿ!

೨. ಈಶ್ವರನೂ ಮರಣ ದೇವತೆಯ ಸಂಹಾರಕನೂ ಆಗಿ, ತನ್ನ ತಂದೆಯಿದ್ದರೂ ಅವನಿಂದ ಮೊದಲೇ ಸ್ತುತಿಗೆ ಪಾತ್ರನಾದ, ಎಲ್ಲ ವಿಘ್ನಗಳಿಗೂ ಒಡೆಯನಾದ, ಶೋಭಿಸುವ ಗಜರಾಜನ ಮುಖವುಳ್ಳವನಾಗಿದ್ದೂ ಜ್ಞಾನದ ಅತಿಶಯ ಕಾಂತಿಯುಳ್ಳವನಾದ, ಇಲಿಯ ವಾಹನವುಳ್ಳವನಾಗಿ ಸರ್ಪಧರನೂ ಆದ, ಜೋತಾಡುವ ಹೊಟ್ಟೆಯಿದ್ದೂ ಎಲ್ಲ ದಿಕ್ಕುಗಳಲ್ಲಿ ವ್ಯಾಪಿಸಿ ಕೊಂಡಿರುವ ಹೀಗೆ ವಿರುದ್ಧಗುಣ ವಿಶೇಷವುಳ್ಳ ಗಣೇಶನೆನಿಸಿದವನು ಭಕ್ತರನ್ನೂ ಪ್ರೀತಿಸಿ ನಿರ್ವಿಘ್ನವನ್ನು ವಿಶೇಷವಾಗಿ ಉಂಟು ಮಾಡಲಿ!

ಮ.ವಿ. ವಿಧಿಮುಖ್ಯಾಮರಸೇವಿತಂ ಶ್ರುತಿನುತಂ ಭಕ್ತಾರ್ತಿನಿಶ್ಶೇಷತಾ
ವಿಧಿಪೂರ್ಣಂ ವಿಮಲಂ ಶಿವ ಸಕಲಗಂ ಸರ್ವಾರ್ಥದಂ ನ್ಯಾಯಸಂ
ಪದನಜ್ಞಾನನಿವಾರಣಂ ಪರಮಭಕ್ತಿಜ್ಞಾನದಾನಂ ಭವಾಂ
ಬುಧಿಪಾರಾಯಣನೀಗಭೀಷ್ಟಫಲಮಂ ಶ್ರೀ ಸತ್ಯನಾರಾಯಣಂ ॥೩॥

ಗಣಿಯೊಳ್ ಮಾಣಿಕದಂತೆಯುಟ್ಟ ನೆಲದೊಳ್ ಪೈರಂತೆ ವಾರಾಶಿಯೊಳ್
ಮಣಿಯಂತಂಬುಜದಂತೆಯಬ್ಜವನದೊಳ್ ಶುದ್ಧಾನ್ನದೊಳ್ ಸತ್ವಸ
ದ್ಗುಣದಂತಾವಗಮುಂ ಪ್ರಭಾವಯುತನಿರ್ದೀ ಕಾವ್ಯದೊಳ್ ಯುಕ್ತ ಸ
ದ್ಗಣಾಮಂ ಪಾಲಿಕೆ ಕೃಷ್ಣರೂಪಯಶನೀಶಂ ಭಕ್ತಪೋಷಂ ಸದಾ ॥೪॥

ಬುಧಜಾಲಸ್ತುತನಾಗಿ ದಿವ್ಯ ನಿಜಲೀಲಾನಾಟ್ಯದಿಂ ಭಕ್ತಸಂ
ಪದಶೇಷಪ್ರದನಾಗಿ ಸರ್ವಜಗದುತ್ಪತ್ತಿಸ್ಥಿತಿಧ್ವಂಸಕಾ॥
ರ್ಯದೆ ತನ್ನೊಪ್ಪುವ ಹಾವಭಾವಯುತನಾದಾ ರುದ್ರದೇವಂ ಸ್ವಚಿ
ತ್ತದ ರಂಗಸ್ಥಿತನಿರ್ಕೆ ಈಗೆ ಪದವಿನ್ಯಾಸಸ್ಥಿತ ಸ್ಥೈರ್ಯಮಂ ॥೫॥

೩. ಬ್ರಹ್ಮನೇ ಮುಖ್ಯವಾದ ದೇವತೆಗಳಿಂದ ಸೇವಿತನಾದ, ವೇದಸ್ತುತನಾದ, ಭಕ್ತರ ಸಂಕಷ್ಟವನ್ನು ಏನೂ ಇಲ್ಲದಂತೆ ಮಾಡುವ ವಿಧಾನವುಳ್ಳವನಾದ, ನಿರ್ಮಲನಾದ, ಎಲ್ಲೆಡೆಯೂ ಗಮಿಸಿಕೊಂಡಿರುವ, ಭಕ್ತರಿಗೆ ಎಲ್ಲ ಪ್ರಯೋಜನವನ್ನು ಕೊಡತಕ್ಕ, ನ್ಯಾಯ ಸಂಪತ್ತುಳ್ಳ, ಅಜ್ಞಾನವನ್ನು ನಿವಾರಿಸುವ, ಶ್ರೇಷ್ಠ (ಪರಮಾತ್ಮನ) ಭಕ್ತಿ ಜ್ಞಾನಗಳನ್ನು ದಾನಮಾಡತಕ್ಕ, ಭವಸಾಗರವನ್ನು ದಾಟಿದ ಅಥವಾ ದಾಟಿಸುವವನಾದ ಶ್ರೀ ಸತ್ಯನಾರಾಯಣನು ವಿಶೇಷವಾದ ಇಷ್ಟಫಲವನ್ನು ಕೊಡಲಿ!

೪. ಗಣಿಯಲ್ಲಿ ಮಾಣಿಕ್ಯದಂತೆ, ಉತ್ತು ಬಿತ್ತಿ ಕೃಷಿ ಮಾಡಿದ ನೆಲದಲ್ಲಿ ಪೈರಿನಂತೆ, ಸಾಗರದಲ್ಲಿ ರತ್ನದಂತೆ, ಸರೋವರದಲ್ಲಿ ತಾವರೆಯಂತೆ, ಶುದ್ಧವಾದ ಆಹಾರದಲ್ಲಿ ಸತ್ವವೆಂಬ ಸದ್ಗುಣದಂತೆ, ಈ ಕಾವ್ಯದಲ್ಲಿ ಎಲ್ಲೆಡೆಯೂ ಅತ್ಯಧಿಕ ಪ್ರಭಾವದಿಂದ ಕೂಡಿದವನಾಗಿದ್ದುಕೊಂಡು ಶ್ರೀಕೃಷ್ಣನರೂಪ ಕೀರ್ತಿಗಳಿಂದೊಪ್ಪುವ ಭಕ್ತ ಪೋಷಕನಾದ ಈಶ್ವರನು ಯಾವಾಗಲೂ ಯೋಗ್ಯ ಸದ್ಗುಣವನ್ನು (ಸತ್ಪುರುಷರ ಸಮೂಹವನ್ನು; ಒಳ್ಳೆಯ ಛಂದೋನಿಯಮದ ಗಣ ಪ್ರಯೋಗ ಶಕ್ತಿಯನ್ನು) ಪಾಲಿಸಲಿ (ಕಾಪಾಡಲಿ; ಕೊಡಲಿ).

೫. ದಿವ್ಯವೂ ತನ್ನದೂ ಆದ ಲೀಲೆಯ ನಾಟ್ಯದಿಂದಾಗಿ ವಿದ್ವಜ್ಜನಸಮೂಹದ ಸ್ತುತಿಗೆ ಪಾತ್ರನಾಗಿ, ಭಕ್ತರಿಗೆ ಸಂಪತ್ತನ್ನು ಪೂರ್ತಿಯಾಗಿ ಕೊಡುವವನಾಗಿ ಎಲ್ಲ ಲೋಕಗಳ ಸೃಷ್ಟಿ ಸ್ಥಿತಿ ಲಯ ಕಾರ್ಯಗಳೆಂಬ ಹಾವಭಾವಗಳಿಂದ ಕೂಡಿದವನಾದಂತಹ ಆ ರುದ್ರದೇವನು ನನ್ನ ಮನಸ್ಸೆಂಬ ರಂಗಸ್ಥಳದಲ್ಲಿರಲಿ. ಪದವಿನ್ಯಾಸದಲ್ಲಿ (ಕಂಡಿಕೆಯಲ್ಲಿರತಕ್ಕುದಾದ ಪದಗಳನ್ನಿಡುವುದರಲ್ಲಿ; ನಾಟ್ಯದ ಹಜ್ಜೆಯಿಡುವುದರಲ್ಲಿ) ಸ್ಥಿರತೆಯನ್ನು ಕರುಣಿಸಲಿ!.

ಕತೆ ಗೆಲ್ ಭಾವಮಲರ್ ಸದರ್ಥಮೆ ಫಲಂ ಶಬ್ದಂ ಕುಕಿಲ್ ಛಂದಮ
ನ್ವಿತಪರ್ಣಂ ರಸಜೀವಮಾಗೆ ಪುರುಡೆಂಬಾ ಮಾರುತಾಘಾತದಿಂ ॥
ಕೃತಿಭೂಜಂ ಕೆಡೆಬೀಳದಂತೆ ತಳೆವಾ ತಾಯ್ವೇರವೋಲ್ ದೇವಿವಾ
ಕ್ಷತಿ ಮತ್ಕಾವ್ಯವನಾಂತು ರಂಜಿಸುಗೆ ವಿದ್ಯಾಲೋಕಮಂ ಲೋಕಮಂ ॥೬॥

ಕಂದ॥ ಲಕ್ಕಣಮಂ ಕಿಡಿಸದೆ ಪಿಂ
ತಿಕ್ಕದೆ ಸನ್ಮಾರ್ಗಗತಿಯನೀಗಳ್ ಪುರುಳಂ
ಲಕ್ಕಿಸಿ ಕಬ್ಬಂಬೇಟ್ದರ್
ತಕ್ಕಿನ ಕವಿರಾಜರೆನ್ನ ಸನ್ನುತಿಭಾಜರ್ ॥ ॥೭॥

ಸನ್ನುತರೆನಗಂ ಪೂರ್ವಜ
ರೆನ್ನೋದಿಕೆಗಿಂತು ನೆಗಳ್ದ ಮತಿಗಂ ಕೃತಿಗಂ
ರನ್ನದ ಕೈದೀವಿಗೆಯಾ
ದನ್ನರ್ ಸದ್ಭಕ್ತಿಯಿಂದವಱಿಂ ನೆನೆವೆಂ ॥೮॥

ಧೀರರುದಾರರ್ ವಾಗ್ಗಂ
ಭೀರರ್ ನಾನಾ ಕಳಾಪ್ರಸಾರವಿಹಾರರ್
ಚಾರುಗುಣಧಾರರೀರ್ಷ್ಯಾ
ದೂರರ್ ಸತತಂ ಬುಧರ್ಕಳೆಂದಱಿದಿರ್ಪೆಂ ॥೯॥

೬. ಕಾವ್ಯವೆಂಬುದೊಂದು ಮರ–ಕತೆಗಳೇ ಅದರ ಕೊಂಬೆಗಳು, ಭಾವವೇ ಹೂಗಳು, ಒಳ್ಳಿತಾದ ಅರ್ಥವೆಂಬುದು ಹಣ್ಣುಗಳು ಶಬ್ದವೇ ಕೋಗಿಲೆಯ ಕೂಗು, ಛಂದಸ್ಸು ಮರದೆಲೆಗಳು, ರಸವೇ ಜೀವ, ಹೀಗಿರುವ ಕಾವ್ಯವೃಕ್ಷವು ಕೆಟ್ಟ ಜನರ ಹೊಟ್ಟೆಕಿಚ್ಚೆಂಬ ಗಾಳಿಹೊಡೆತಕ್ಕೆ ಗುರಿಯಾಗಿ ಮುರಿದು ಬೀಳದಂತೆ ಧರಿಸತಕ್ಕ ತಾಯಿ ಬೇರಿನಂತೆ ಇರತಕ್ಕ ವಾಗ್ದೇವಿಯು ನನ್ನ ಕಾವ್ಯವನ್ನು ಆಧರಿಸಿಕೊಂಡು ಇದು ವಿದ್ಯಾವಂತರಾದ ಜನರನ್ನೂ ಇತರ ಜನರನ್ನೂ ರಂಜಿಸುವಂತೆ ಮಾಡಲಿ !

೭. ಕಾವ್ಯಕ್ಕೆ ಇರಬೇಕಾದ ಲಕ್ಷಣವನ್ನು ಕೆಡಿಸದೆ, ಸನ್ಮಾರ್ಗದಲ್ಲಿ ಮುಂದುವರಿಯ ಬೇಕಾದುದನ್ನು ಹಿಂದಕ್ಕೆ ತಳ್ಳದೆ, ಯಾವಾಗಲೂ ಹುರುಳನ್ನು ವಿಶೇಷವಾಗಿ ಲಕ್ಷ್ಯವಿಟ್ಟುಕೊಂಡು ಕಾವ್ಯರಚನೆ ಮಾಡಿದ ಯೋಗ್ಯ ಕವಿರಾಜರು ನನ್ನ ಸಂಸ್ತುತಿಗೆ ಪಾತ್ರರಾಗಿರುವರು.

೮. ನನಗೂ ಸನ್ನುತರಾಗಿದ್ದು ನನ್ನ ಓದಿಕೆಗೂ (ವಿದ್ಯಾಭ್ಯಾಸಕ್ಕೂ) ಹೀಗೆ ಪ್ರಖ್ಯಾತವಾದ ಬುದ್ಧಿಗೂ ಕೃತಿರಚನೆಗೂ ರತ್ನದ ಕೈದೀವಿಗೆಯಾದಂತಹರು ನನ್ನ ಪೂರ್ವಜರು (ನನ್ನಣ್ಣನವರು) ಅವರನ್ನು ನಾನು ಭಕ್ತಿಯಿಂದ ಸ್ಮರಿಸುತ್ತೇನೆ.

೯. ವಿದ್ವಾಂಸರೆಂದರೆ – ಯಾವಾಗಲೂ ಬುದ್ಧಿವಂತರು, ಉದಾರ ಗುಣವುಳ್ಳವರು, ಮಾತಿನಲ್ಲಿ ಗಂಭೀರತೆಯುಳ್ಳವರು. ಹಲವು ಬಗೆಯ ಕಲೆಗಳನ್ನು ಪ್ರಸಾರ ಮಾಡುವುದೇ ತಮ್ಮ ಲೀಲೆಯಾಗಿರುವವರು. ಮನೋಹರ ಗುಣಗಳನ್ನು ಧರಿಸಿರುವವರು, ಮತ್ಸರದಿಂದ ದೂರವಾದವರು (ನಿರ್ಮತ್ಸರರು) ಎಂದು ನಾನು ತಿಳಿದಿರುತ್ತೇನೆ . (ವಿದ್ವಾಂಸರು ಪ್ರಕೃತ ಹಾಗೆ ವರ್ತಿಸಬೇಕೆಂಬುದು ಇಲ್ಲಿಯ ಭಾವ) (ಪರಿಕರಾಲಂಕಾರ)

ಪಟಗನ್ನಡಮನೆ ಕಬ್ಬದೆ
ಬಳಸುವರೀ ಚಂಪು ತೆರಳ್ವ ಕಾಲರಥಾಂಗ
ಕ್ಕೊಳಗಾಗಿ ಮುಂದೆ ಬಂದುದು
ಪಟತಲ್ತದರಲ್ಲಿ ಪೊಸತನಜಿವವರಜಿವರ್ ॥೧೦॥

ಎಲ್ಲುಂ ನಿಱುಗೆಯೊಳಿದಱೊಳ್
ಸಲ್ಲದ ಕುಂದಿರ್ದೊಡಂ ಪ್ರಸನ್ನತೆಯಿಂದಂ
ಬಲ್ಲವರಂದದೆ ತಿರ್ದುಗೆ
ಸಲ್ಲಲಿತಗುಣಾಂತರಂಗ ಶರನಿಧಿ ಸೋಮರ್ ॥೧೧॥

ಪ್ರಸ್ತುತ ಸತ್ವಾಲೋಕನ
ವಸ್ತುಕಮೀ ಕಾವ್ಯಮಿದಕೆ ಹರಿನರಸಮರಂ
ವಸ್ತುವಿದಂ ಸಜ್ಜನಪದ
ಮಸ್ತಕನೊವಜಂ ಕನೀಯ ಕೇಶವನೊರೆದಂ ॥೧೨॥

ಉ.ಮಾ. ಆರ್ಜವ ಶೌರ್ಯಮಂ ಮೆಱೆದು ಸಖ್ಯದೆ ಕೂಡಿ ಸುಕೃತ್ಯದಿಂದೆ ಧ
ರ್ಮೋರ್ಜಿತ ಕಾರ್ಯಮಂ ನೆಗೞ್ದು ಸತ್ಯವಚಃಪರಿಪಾಲನಾ ಸುಕೀ
ರ್ತ್ಯಾರ್ಜನೆಯಿಂದೆ ಲೋಕಕೆ ಸದಧ್ವವನಿಂತುಟೆನುತ್ತೆ ತೋರ್ಪ ಕೃ
ಷ್ಣಾರ್ಜುನರಾರ್ಯ ಚರ್ಯೆಯನೆ ಕಬ್ಬದೊಳಂಶವನೆತ್ತಿ ಬಣ್ಣಿಪೆಂ ॥೧೩॥

೧೦. ಹೊಸದಾದ ಕಾವ್ಯವೆಂದಾಗ ಅದರಲ್ಲಿ ಹಳಗನ್ನಡವನ್ನು ಪ್ರಯೋಗಿಸದೆ ಯಾರೂ ಇರುವುದಿಲ್ಲ. ಇದೀಗ ಈ ಚಂಪೂಕಾವ್ಯವು ಕಾಲ ಚಕ್ರ ಪರಿವರ್ತನೆಗೊಳಗಾಗಿ ಮುಂದೆ ಬಂದಿರುತ್ತದೆ. ಇದು ಹಳೆಯದೇನೂ ಅಲ್ಲ. ತಿಳಿದವರು ಇದರಲ್ಲಿರತಕ್ಕ ಹೊಸತನವನ್ನು ತಿಳಿದುಕೊಳ್ಳುವರು.

೧೧. ಈ ಕಾವ್ಯದ ಪದವಿನ್ಯಾಸದಲ್ಲಿ ಎಲ್ಲಿಯೇ ಆಗಲಿ, ಸಲ್ಲದಂತಹ ಕುಂದು ಏನಾದರು ಇದ್ದರೆ, ಒಳ್ಳೆಯ ಸುಮಧುರವಾದ ಗುಣಗಳುಳ್ಳ ಅಂತರಂಗವೆಂಬ ಸಮುದ್ರಕ್ಕೆ ಚಂದ್ರನಂತಿರತಕ್ಕ ಕೋವಿದರು ಅಂದವಾಗಿ ತಿದ್ದಲಿ! (ಬಲ್ಲವರು ತಿದ್ದುವ ಹಾಗೆ ತಿದ್ದಲಿ).

೧೨. ಒಳ್ಳೆಯ ಸ್ತುತಿಗೆ ಒಳಗಾದಂತಹ 'ಸತ್ವಾಲೋಕನಂ' ಎಂಬ ವಸ್ತುಕ (ಚಂಪು) ಕಾವ್ಯವಿದು. ಇದಕ್ಕೆ ಕಥಾವಸ್ತು ಕೃಷ್ಣಾರ್ಜುನರ ಕಾಳಗ. ಇದನ್ನು ಸಜ್ಜನರ ಪಾದಕ್ಕಿಟ್ಟ ಕಲೆಯವನಾದ (ಒಳ್ಳೆಯ ಜನಪದಕ್ಕೆ ಅಂದರೆ ರಾಷ್ಟ್ರಕ್ಕೆ ದಿಗ್ದರ್ಶಕನೆನಿಸಿ ಶಿರಃಪ್ರಾಯನಾದ) ಓಜನಾದ (ಉಪಾಧ್ಯಾಯನಾದ, ನಾಡೋಜನಾದ) 'ಕನೀಯ ಕವಿ' ಎಂಬ ಬಿರುದಿನ ಕೇಶವನು ರಚಿಸಿರುವನು.

೧೩. ಈ ಕಾವ್ಯದ ಕಥಾವಸ್ತು ವಿವರ ಹೀಗಿದೆ – ಋಜುತ್ವದಿಂದ ಮತ್ತು ಶೌರ್ಯ ದಿಂದ ಮೆರೆದು, ಸ್ನೇಹದಿಂದ ಒಂದಾಗಿ, ಒಳ್ಳೆಯ ಕಾರ್ಯದಿಂದ ಧರ್ಮೋನ್ನತಿಯ ಕಾರ್ಯವನ್ನು ಮಾಡಿ, ಆಡಿದಂತೆ ನಡೆದುದರಿಂದಾದ ಕೀರ್ತಿಸಂಪಾದನೆಯಿಂದ, ಲೋಕದ ಜನರಿಗೆ ಸರಿಯಾದ ದಾರಿ ಹೀಗಿದೆಯೆಂದು ತೋರಿಸಿಕೊಡತಕ್ಕ ಕೃಷ್ಣಾರ್ಜುನರ ಶ್ರೇಷ್ಠವರ್ತನೆಯ ಒಂದು ಅಂಶವನ್ನು ಎತ್ತಿಕೊಂಡು ಈ ಕಾವ್ಯದಲ್ಲಿ ಘಟನೆಗಳೊಂದಿಗೆ ಬಣ್ಣಿಸುತ್ತೇನೆ.

ಕಂದ॥ ಎನಗರಿದೀ ಸತ್ಕೃತಿವಿರ
ಚನೆಯೆಂದಾನಳ್ಕೆ ಮಳೆಗೆ ಬೇಸಗೆ ಕೊನೆ ಚೋ
ದನೆಯಿತ್ತವೊಲೀ ಕಾವ್ಯರ
ಚನೆಗೊಳಗಿಂ ಪೊಱಗಿನಾದುದೆನಗೊತ್ತಾಯಂ ॥೧೪॥

ಗದ್ಯ॥ ಅದೆಂತೆಂದೊಡೀ ಬುವಿಯೊಳಮಲ ಕೀರ್ತಿಶ್ರೀಧಾರಿಣಿಯಪ್ಪಭರತ ಧಾರಿಣಿಯ ಕೈಗನ್ನಡಿಯಂತೆಸೆವ ಕನ್ನಡ ನಾಡೊಳೊಳ್ಗೆಯೆಳನೇಸಱ ಮೂಡಲೆಂಬಂತೆ ಪಡುವಣ ಕಡಲ ತಡಿಯ ಕೆಂಗನ್ನಡ ನಾಡೆಸೆಗುಂ ಅಲ್ಲಿ ಮನಂಗೊಳಿಪ ಕುಂಬಳೆ ವಿಟ್ಲಸೀಮೆಗಳ ನಡುವೆ ಡಿಂಗರಿಗರ ಸರ್ವೇಂಗಿತಮನುತ್ಸುಂಗೋಪಸ್ಥಿತ ಮಂಗಳಾಂಗಂ ಪಂಚಲಿಂಗದೇವಂ ಕುಡಲ್ಕೆನುತ್ತದೊಂದು ದೇಗುಲದೊಳ್ ನಿಂದೊಡೆ, ತತ್ತನಯಂ ಪ್ರಾಂತಸ್ಥಾನಂಗಳಂ ವ್ಯಾಪಿಸಿ ನೆಲಸಿದನೆನೆ ಪೆಸರಾಂತ ಬಾಯಾರೂರೆಂಬ ಷಣ್ಮುಖಗ್ರಾಮಮೆಸೆಗುಂ ಅಲ್ಲಿ ಜಾಣ್ದಂಬುಲದ ತಳಿಗೆಯಂತೆಯುಂ ಪ್ರಕೃತಿಸೌಂದರ್ಯದ ಗಣಿಯಂತೆಯುಂ ರಿಸಿಬನದಂತೆಯುಂ ಪೆಂಪು ತಳ್ತ ತಾಳ್ತಜೆಯೆಂಬ ಪೆಸರಿಂದಗ್ರಹಾರಮಿರ್ಕುಂ ಅಲ್ಲಿರ್ಪ ಮನೆಗಳ್ಗೆಲ್ಲಂ ತಲೆವನೆಯೆನೆ

ಮ.ಸ್ರ
ನಾನಾ ಸಂಗೀತ ಗೀತಾವಳಿತ ಮೃದಂಗಾದಿ ನಾದಾತಿರಮ್ಯಂ ನಾನಾ ಕಾವ್ಯ
ಪ್ರಸಂಗಾನುಚರಿತವಿಹಿತಂ ನೀತಿಸಾರ ಪ್ರಸಾರಂ
ನಾನಾ ವಿಸ್ತಾರ ಪೂಜಾರ್ಜಿತ ಹರಿಹರ ಪಾದಾಂಬುಜಂ ತಾನಿದೊಂದೇ
ನಾನಾ ವಿದ್ಯಾರ್ಥಿ ನರ್ಮ್ಯಂ ನಿಳಯಮೆಸೆಯುತಿರ್ಕುಂ ಕರಂ ಸೋಗೆಮಾಡಿಂ ॥೧೫॥

೧೪. ಈ ಸತ್ಕಾವ್ಯ ರಚನೆ ನನಗೆ ಸಾಧ್ಯವಾಗದೆಂದು ನಾನು ಹಿಂಜರಿದಿರಲು, ಬೇಸಗೆಯ ಕೊನೆಯು ಮಳೆ ಬರಲು ಪ್ರಚೋದನೆಯನ್ನಿತ್ತಂತೆ, ನನಗೆ ಈ ಕಾವ್ಯ ರಚನೆಮಾಡಲು ಒಳಗಿಂದಲೂ ಹೊರಗಿಂದಲೂ ಒತ್ತಾಯವುಂಟಾಯಿತು.

ಗದ್ಯ : ಅದು ಹೇಗೆಂದರೆ – ಈ ಭೂಮಿಯಲ್ಲಿ ನಿರ್ಮಲ ಕೀರ್ತಿ ಸಂಪತ್ತನ್ನು ಧರಿಸಿರುವ ಭರತಭೂಮಿಯ ಕೈಗನ್ನಡಿಯಂತೆ ಶೋಭಿಸುವ ಕನ್ನಡ ನಾಡಿನಲ್ಲಿ, ಎಳಿಗೆಯ ಬಾಲಸೂರ್ಯನ ಮೂಡುದೆಸೆಯೆಂಬಂತೆ ಪಶ್ಚಿಮಸಮುದ್ರತೀರದ ದಕ್ಷಿಣ ಕನ್ನಡ ಎಂಬ ನಾಡು ಶೋಭಿಸುವುದು. ಅಲ್ಲಿ ಮನಸ್ಸನ್ನು ಸೆಳೆವ ಕುಂಬಳೆ–ವಿಠ್ಠಲ ಸೀಮೆಗಳ ನಡುವೆ ಭಕ್ತರ ಸಕಲ ಇಷ್ಟಾರ್ಥವನ್ನು ಕೊಡುವುದಕ್ಕಾಗಿ, ತೊಡೆಯಲ್ಲಿ ಕುಳಿತ ಪಾರ್ವತಿಯಿಂದ ಕೂಡಿದ ಪಂಚಲಿಂಗೇಶ್ವರ ದೇವನು ಅದೊಂದು ದೇವಾಲಯದಲ್ಲಿ ನೆಲಸಿದ್ದಾನೆ. ಅವನ ಮಗನು ಆ ಪ್ರದೇಶದ ಸ್ಥಳಗಳನ್ನು ವ್ಯಾಪಿಸಿಕೊಂಡು ನೆಲೆಸಿದ್ದಾನೆ ಎಂಬಂತೆ ಬಾಯಾರು ಎಂಬ ಹೆಸರನ್ನು ಪಡೆದಿರುವ ಷಣ್ಮುಖ ಗ್ರಾಮವು ಶೋಭಿಸುವುದು. ಅಲ್ಲಿ ಬುದ್ಧಿವಂತಿಕೆಯೆಂಬ ತಾಂಬೂಲದ ಹರಿವಾಣದಂತೆಯೂ ಪ್ರಕೃತಿಸೌಂದರ್ಯದ ಗಣಿಯಂತೆಯೂ ಋಷ್ಯಾಶ್ರಮದಂತೆಯೂ ಹಿರಿಮೆಯು ನಿಬಿಡವಾಗಿರುವ ತಾಳ್ತಜೆ ಎಂಬ ಹೆಸರಿನಿಂದ ಒಂದು ಅಗ್ರಹಾರ (ಬ್ರಾಹ್ಮಣವಸತಿ ಪ್ರದೇಶ) ಇರುವುದು. ಅಲ್ಲಿರುವ ಮನೆಗಳಿಗೆಲ್ಲ ಮೇಲಿನ ಮನೆಯೊಂದಿದೆ.

೧೫. ಅದು ಹಲವು ಬಗೆಯ ಸಂಗೀತದ ಹಾಡುಗಳ ಅಧೀನವಾಗಿರುವ ಮೃದಂಗಾದಿ ವಾದ್ಯಗಳಿಂದ ಕಿವಿಗಿಂಪಾಗಿಯೂ ಹಲವಾರು ಕಾವ್ಯಕಥೆಗಳ

ಗದ್ಯ॥ ಅದಱೊಳ್ –

ಕಂದ॥ ಪೂರ್ವಾಚಾರ ಚರಿತ್ರಮ
ಪೂರ್ವೋನ್ನತ ದೈವಭಕ್ತಿ ಪೂರ್ಣಂ ಗುಣಿ ಮ
ತ್ತುರ್ವಿಗೆ ಬುಧನೆಂದೆನಿಸಿದ
ನೊರ್ವಂ ಗೋವಿಂದಭಟ್ಟನೆಂಬಂ ನೆಗಟ್ದಂ ॥೧೬॥

ಆತಂಗರೆ ಮೆಯ್ಯೆನಿಸಿಯೆ
ಪಾತಕಸಂಬಂಧ ಭೀತೆ ಕುಲವರ್ಧಿತೆ ವಿ
ಖ್ಯಾತೆ ಸುಶೋಭನೆಯೆನಿಪ ಸು
ನೀತಿಯೆ ಸಾಂತಬ್ಬೆಯೆಂಬಳವನೀಸ್ತುತ್ಯಳ್ ॥೧೭॥

ಅವರ್ಗಮುಪಾಯಂಗಳವೋಲ್
ಕುವರರ್ ನಾಲ್ವಱೊಳೆ ಕೊನೆಯವರ್ ಸದ್ಬುದ್ಧಿ
ಪ್ರವರರ್ ಸಹಿಷ್ಣುಶೀಲರ್
ಕವಿಗಳ್ ಮೇಣ್ ಕೃಷ್ಣಕೇಶವಾಭಿಧರಿರ್ವರ್ ॥೧೮॥

ಪ್ರಸ್ತಾವಗಳಿಂದ ಕೂಡಿದುದಾಗಿಯೂ ನೀತಿಸಾರವನ್ನು ಪ್ರಸಾರಮಾಡುವಂತಹದಾಗಿಯೂ ಹಲವು ರೀತಿಯ ವಿಸ್ತಾರದ ಪೂಜೆಗಳ ಮೂಲಕ ಅರ್ಚಿಸಲಾದ ಹರಿ ಹರ ಪಾದಕಮಲವುಳ್ಳುದಾಗಿಯೂ ಇದೊಂದೇ ಹಲವಾರು ವಿದ್ಯಾರ್ಥಿಗಳ ನಮನಕ್ಕೆಡೆಯಾಗಿಯೂ ಇರತಕ್ಕ ಒಂದು ಅಡಕೆಸೋಗೆ ಛಾವಣಿಯ ಮನೆ ಚೆನ್ನಾಗಿ ಶೋಭಿಸುತ್ತಿರುವುದು.

೧೬. (ಆ ಮನೆಯಲ್ಲಿ) ಹಿಂದಿನವರ ಪರಂಪರೆಯ ಆಚಾರದ ನಡವಳಿಕೆಯುಳ್ಳ, ಹಿಂದಿನವರಿಗಿಲ್ಲದಷ್ಟು ಉನ್ನತಿಯುಳ್ಳ ದೈವಭಕ್ತಿಯಿಂದ ತುಂಬಿದ, ಗುಣವಂತನಾದ, ಭೂಮಿಗೆ ದೇವತೆಯೆಂದೆನಿಸಿದ ಗೋವಿಂದ ಭಟ್ಟನೆಂಬವನಿದ್ದನು.

೧೭. ಆತನಿಗೆ ಅರ್ಧಾಂಗಿಯೆನಿಸಿ, ಪಾಪದ ಸಂಬಂಧದಲ್ಲಿ ಭಯಗೊಂಡ, ಕುಲವನ್ನು ವೃದ್ಧಿಮಾಡುವವಳಾದ, ಕೀರ್ತಿಶಾಲಿನಿಯಾದ, ಒಳ್ಳೆಯ ರೀತಿಯಲ್ಲಿ ಶೋಭಿಸುವವಳಾದ (ಶೋಭನಗೀತಗಾಯಕಿಯಾದ) ಒಳ್ಳೆಯ ನೀತಿವಂತಳಾದ ಸಾಂತಮ್ಮನೆಂಬಾಕೆಯು ಲೋಕದಲ್ಲಿ ಸ್ತುತಿಪಾತ್ರಳಾಗಿದ್ದಳು.

೧೮. ಆ ಪುಣ್ಯದಂಪತಿಗಳಿಗೆ ಸಾಮ–ದಾನ–ಭೇದ–ದಂಡ ಎಂಬ ನಾಲ್ಕು ಉಪಾಯಗಳಂತೆ ನಾಲ್ವರು ಗಂಡುಮಕ್ಕಳು. ಅವರಲ್ಲಿ ಕೊನೆಯವರಿಬ್ಬರು ಒಳ್ಳೆಯ ಬುದ್ಧಿಶಾಲಿಗಳಲ್ಲಿ ಶ್ರೇಷ್ಠರು; ಸಹನಾಗುಣವುಳ್ಳವರು ಅದಲ್ಲದೆ ಕವಿಗಳು, ಕೃಷ್ಣ ಕೇಶವ ಎಂಬ ಹೆಸರುಳ್ಳವರು.

ಗದ್ಯ॥ ಅದೊರ್ಮೆ ಕವಿ.ಕನೀಯಂ ಕೇಶವಂ ಶಿವಪೂಜಾತೀರ್ಥ ಪ್ರಸಾದ ಗ್ರಹಣಾನಂತರ
ನಡುವಗಲಾರೋಗಣೆಯಂ ಗೆಯ್ದು ಮಣ್ಣಿಟ್ಟೆಯೊಳ್ ಪಟ್ಟಿರ್ದು
ಪರಮಾಲೋಚನಾನಂದದೊಳಿರ್ಪುದುಮಾಗಳ್ –

ಕಂದ॥ ಪ್ರಸ್ತುತ ಗುರುಭಕ್ತಿ ರಸೋ
ದ್ರಿಕ್ತಂ ವಿದ್ಯಾ ಸುಸಂಪದಾರ್ಥಂ ಕೈಯೊಳ್
ಪೊತ್ತಗೆ ಲೆಕ್ಕಣಿಗಳನಾಂ
ತೊತ್ತಂಬದೆ ಬಂದುದಂದು ಶಿಷ್ಯಸಮಾಜಂ' ॥೧೯॥

ಗದ್ಯ॥ ಅಂತು ಬಂದು ಮುಂದು ಕುಂಬಿಟ್ಟು ಮುಕುಳಿತಾಂಜಲೀಕಂಜರಾಗಿ ನಿಲ್ವುದುಂ–

ಚಂ. ಮಾ. ಇಳಿಸಿದುದಿಲ್ಲ ಹಸ್ತಯುಗಮಂ ಮುಕುಳೀಕೃತಮಂ ಫಣಾಗ್ರದಿಂ
ಕುಳಿತುದುಮಿಲ್ಲ ನಿಮ್ಮ ಮನದಿಂ ಪೊಸತಪ್ಪ ವಿಭಾವ ಭಂಗಿಯಂ
ಗಳ ಪೊಜಗಿಕ್ಕುಗುಂ ಮೊಗಮನಿತ್ತು ಮನಂ ನಡೆ ಬಂದು ನಿಂದ ನಿ
ಮ್ಮೊಳಗೆನಗಾದುದಿಲ್ಲಜೆವೊಡೀಗಳೆ ಬಣ್ಣಿಪುದೆನ್ನೊಳಾಗದೇ? ॥೨೦॥

ಗದ್ಯ: ಅದೊಮ್ಮೆ ಕವಿಕನೀಯನಾದ ಕೇಶವನು ತಂದೆಯವರು ಮಾಡಿದ ಶಿವಪೂಜೆಯ ತೀರ್ಥ ಪ್ರಸಾದವನ್ನು ಸ್ವೀಕರಿಸಿದ ಮೇಲೆ ಮಧ್ಯಾಹ್ನದ ಊಟವನ್ನು ಮಾಡಿ ಮಣ್ಣಿತಿಟ್ಟೆಯಲ್ಲಿ ಮಲಗಿದ್ದು ಪರಮಾತ್ಮ ಚಿಂತನೆಯ ಆನಂದದಲ್ಲಿ ಇರುತ್ತಿದ್ದನು. ಆಗ ಏನಾದುದೆಂದರೆ –

೧೯. ಹೊಗಳಿಕೆಗೆ ಪಾತ್ರವಾದ ಗುರುಭಕ್ತಿರಸೋದ್ರೇಕವುಳ್ಳ, ವಿದ್ಯೆಯೆಂಬ ಒಳ್ಳೆಯ ಸಂಪತ್ತನ್ನೇ ಬಯಸುವ, ಶಿಷ್ಯರ ಸಮೂಹವು ಕೈಯಲ್ಲಿ ಪುಸ್ತಕ ಲೇಖನಿಗಳನ್ನು ಹಿಡಿದುಕೊಂಡು ಗುಂಪಾಗಿ ಬಂದಿತು.

೨೦. (ಹಾಗೆ ಬಂದು ಎದುರಾಗಿ ನಮಸ್ಕರಿಸಿ. ಮುಗುಳಾಗಿ ಮಾಡಿದ ಬೊಗಸೆ ದಾವರೆಯರಾಗಿ (ಕೈಮುಗಿದು) ನಿಂತುಕೊಂಡರು. ಆಗ) ಕೇಶವನು ಹೀಗೆಂದನು. ಇದೇನು? ಮುಗಿದುಕೊಂಡು ಹಣೆಯ ಮೇಲಕ್ಕೇರಿಸಿದ ಕೈಗಳೆರಡನ್ನು ಇನ್ನೂ ಕೆಳಗೆ ಇಳಿಸಿಲ್ಲವಲ್ಲಾ! ಕುಳಿತುಕೊಳ್ಳಲೂ ಇಲ್ಲ! ನಿಮ್ಮ ಮುಖವು ನಿಮ್ಮ ಮನದೊಳಗಿನಿಂದ ವಿಶೇಷವಾದ ಭಾವಭಂಗಿಯನ್ನು ಪ್ರಕಟಪಡಿಸುವುದಲ್ಲವೆ? ಅಷ್ಟೊಂದು ನೆಟ್ಟುಕೊಂಡ ಮನಸ್ಸಿನಿಂದ ಬಂದು ನಿಂದಿರುವ ನಿಮ್ಮ ಆಂತರ್ಯವೇನೆಂದು ನನಗೆ ತಿಳಿಯಲಿಲ್ಲ. ಅದನ್ನು ಈಗಲೇ ನನ್ನಲ್ಲಿ ವರ್ಣಿಸಬಹುದಲ್ಲಾ? (ಗದ್ಯ) ಎಂದು ಹೇಳಿದಾಗ, ಭಕ್ತಿ ಭಾವನೆಯ ಭಾರದಿಂದ ಹಿಗ್ಗಿ, ಬಾಗಿ, ನಿಡಿದು ಹೊತ್ತು ನೋಡುತ್ತಾ ಇರಲು, "ಅಂಜಿಕೆಯೇನು? ಮನಸ್ಸಿನ ಭಾವನೆಯನ್ನು ವಿವರಿಸಬಾರದೆ"? ಎಂದಾಗ,

ಗದ್ಯ॥ ಎನೆ, ಭಕ್ತಿಭಾವ ಭಾರದಿಂ ಬೀಗಿ ಬಾಗಿ ನೀಡುಂ ನೋಟ್ಪುದುಂ – ಏನಂಜಿಕೆ? ಮನೋಭಾವಮಂ ಬಿತ್ತರಿಸಲಾಗ? ಎಂದಾಗಳ್, ನಿಮ್ಮಡಿ, ಆವೊಂದು ನಲ್ಗತೆಗಬ್ಬಮಂ ಕೇಳಲಾಟಿಪೆವು ಎನಿತೋ ದಿನಗಳಿಂದೆಮಗೆ ಕಾವ್ಯಪಾಠಮಂ ಗೆಯ್ದಿರಿಲ್ಲಂ – ಎಂದು ತುಟಿಲ್ ಗೆಯ್ವನ್ನೆಗಂ –

ನಡೆತರ್ಪೆಡೆಯೊಳಾಡುವ ಕಿರುವಾತುಂ, ದಾರಿಯೊಳಿಡಿದ ಕಲ್ವರಲ್ಗಳಂ ತುಳಿಯುತೆ ಬರ್ಪವರ ಕೆರ್ಪಿನ ಸಪ್ಪಳಮುಂ, ಮೆಯ್ಗೊರಸುವ ನೆಲಕ್ಕೆ ಜೋತ ಬಾಟಿಚಾಂಬಾರ ದರಬರ ಸಬುದಮುಂ ಕಿವಿವುಗುತ್ತಿರೆ ಕುಟ್ಟವದ ಕಟ್ಟಡಕೆಮರ ಸಲಕೆಯಿಂ ಕಟ್ಟಿದ ತಟ್ಟಿಮಱೆಯೆಡೆಯೊಳ್ ನಿಟ್ಟಿಸೆ– ಬೇಱೆ ವೇಱೆ ಮರಂಗಳಂ ಪತ್ತಿರ್ಪ ನಲ್ಪೆಳಸಿನ, ತಂಬುಲದೆಲೆಯ, ಕಾನಗಲ್ಲಟೆಯ, ಬಳ್ಳಿಗೆಳಸಿನ, ಮಲ್ಲಿಗೆಯ ಬಿತ್ತರದಿಂದೆಯುಂ – ಬಾಟೆ ಪೇರೀಳೆ, ಪಲಸು, ಸಂಪಗೆ, ತೆಂಗು ಕೌಂಗುಗಳ ಬೆಳಸಿಂದೆಯುಂ, ಕತ್ತಲಿಸಿದಡಕೆದೋಂಟದೊಳೆ ಬರ್ಪ – ಎಳ್ವಟ್ಟೆಗಟ್ಟಿದುತ್ತಮಾಂಗದ, ವಿಭೂತಿ ಚಂದನಾನುಲಿಪ್ತ ವದನದ, ದೋತರಂ ಪೊದಟ್ಟಿ ಮುಂಡದ, ಧೌತಾಂಬರವನುಟ್ಟ ಚೆಂದದ ಬುಧವರ್ಗಂ ಶರತ್ಕಾಲಾಭ್ರದ ಶರದಕದಂಬಂ ಸೋಲ್ವ ವೇಷದಿಂದೆಯುಂ, ಪೊಟ್ತಡೆಯ ಕಮಳ ಕುಳಮಂ ಮುಸುಳ್ವ ಪರಮೆವಱೆಗಳಂತೆ ನಡೆತಂದು ಮನಂಬುಗೆ ಮನೆಯಂ ಪುಗೆ ಕವಿಕನಿಷ್ಠಿಕಂ ಮನ್ನಿಸುತಿಂತೆಂದಂ –

"ಗುರುವೇ, ನಾವು ಒಂದು ಒಳ್ಳೆಯ ಕಥೆಯಿಂದ ಕೂಡಿದ ಕಾವ್ಯವನ್ನು ನಿಮ್ಮಿಂದ ಕೇಳಲು ಇಚ್ಛಿಸುತ್ತೇವೆ. ಎಷ್ಟೋ ದಿವಸಗಳಿಂದ ನಮಗೆ ನೀವು ಕಾವ್ಯಪಾಠವನ್ನು ಮಾಡಿಲ್ಲ" ಎಂದು ನಮಸ್ಕರಿಸಿದರು. ಅದೇ ಹೊತ್ತಿಗೆ – ನಡೆದು ಕೊಂಡು ಬರುವಾಗ ಆಡುವ ಸಣ್ಣ ಮಾತೂ ದಾರಿಯಲ್ಲಿ ತುಂಬಿದ ಕಲ್ಲಹರಳನ್ನು ತುಳಿದುಕೊಂಡು ಬರತಕ್ಕವರ ಚಪ್ಪಲಿ ಶಬ್ದವೂ ಅವರ ಮೈಗೆ ತಗಲುವ, ನೆಲಕ್ಕೆ ಜೋತಾಡುವ ಬಾಳೆ ಚಾಂಬಾರುಗಳ ದರಬರ ಎಂಬ ಶಬ್ದವು ಕಿವಿಗೆ ಕೇಳಿಸುತ್ತಿತ್ತು. ಆಗ ಮನೆ ಜಗಲಿಯ ಗಟ್ಟಿಯಾದ ಅಡಕೆ ಮರ ಸಲಕ್ಕೆಯಿಂದ ಕಟ್ಟಿದ ತಟ್ಟಿಯ ಮರೆಯೆಡೆಯಲ್ಲಿ ನೋಡಿದಾಗ – ಬೇರೆ ಬೇರೆ ಮರಗಳನ್ನು ಹತ್ತಿಕೊಂಡ ಒಳ್ಳೆ ಮೆಣಸಿನ, ವೀಳ್ಯದೆಲೆಯ, ಕಾನಗಲ್ಲಟೆಯ, ಬಳ್ಳಿ ಗೆಣಸಿನ, ಮಲ್ಲಿಗೆ ಬಳ್ಳಿಯ ಹಬ್ಬುವಿಕೆಯಿಂದಲೂ ಬಾಳೆ, ಪೇರಳೆ, ಹಲಸು, ಸಂಪಗೆ, ತೆಂಗು, ಅಡಕೆಮರಗಳ ಬೆಳಸಿನಿಂದಲೂ ಕತ್ತಲೆಗೊಂಡ ಅಡಕೆತೋಟದಲ್ಲಿ ಬರುತ್ತಿರುವ – ತಲೆಗೆ ಬಿಳಿಬಟ್ಟೆಯನ್ನು ಸುತ್ತಿದ, ವಿಭೂತಿ ಶ್ರೀಗಂಧಗಳನ್ನು ಹಚ್ಚಿದ ಮುಖದ, ದೋತರಬಟ್ಟೆ ಹೊದೆದುಕೊಂಡು, ತೊಳೆದ ಬಟ್ಟೆಯನ್ನುಟ್ಟು ಚಂದವಾಗಿ ತೋರುವ ವಿದ್ವಾಂಸರ ಸಮೂಹವು ಶರತ್ಕಾಲದ ಆಕಾಶದ ಬಿಳಿಮುಗಿಲ ಸಮೂಹವೇ ಸೋತು ಹೋಗುವ ವೇಷದಿಂದಲೂ ಪ್ರಾತಃಕಾಲದ ತಾವರೆಯ ಸಮೂಹವನ್ನು ಮುತ್ತುವ ಮರಿದುಂಬಿಗಳ ಹಾಗೆ ಬಂದು ಮನಸ್ಸಿಗೆ ಸೊಗಸೆನಿಸುವಂತೆ ಮನೆಯೊಳಗೆ ಬಂದರು. ಕವಿ ಕನೀಯನು ಅವರನ್ನು ಮನ್ನಿಸುತ್ತ ಹೀಗೆಂದನು.

ಉ.ಮಾ. ವಂಗಡಮಾಗಿ ಕಾಲುರಿಚನಂ ಪಿರಿದೋದುಮದೇನುಮಿಲ್ಲದೆ
ನ್ನಂ ಗಳ ಸಾರ್ದದೇಂ ಬೆಸನಮೋ ನಿಮಗಿಂದು ಸುದೀಪಕಾಂತಿಯಂ
ಬೆಂಗದಿರಿಂ ಪೊದಟ್ಟಿ ಪಗಲಾಟಿಪುದಂತುಟಿ ಕಾಡನೊಂದಿಯಾ
ಲಿಂಗಿಪುದುಂ ಸುವರ್ಣಲತೆ ಕಾಟ್ಮರನಂ ಕಡುಚೋದ್ಯಮಾಗದೇ ? ॥೨೧॥

ಗದ್ಯ॥ ಎನಲೊಡಂ ಬುಧರೆಂದರ್ – ಸತ್ಕಾವ್ಯಲಕ್ಷಣಲಕ್ಷಿತಮುಂ, ನೀತಿಬೋಧಾಮೋದ ಪ್ರಸಾರಶಿಕ್ಷಿತಮುಂ, ಸಕಲ ಜನಲೋಕಮಾನ್ಯ ಗುಣಯುಕ್ತಮುಂ, ಗೌರವ ಭೂಮಿಯುಂ, ಸೌಂದರ್ಯ ಬಂಧುರಮುಂ, ಶ್ರೀಕೃಷ್ಣಲೀಲಾಕಥಾತಿಸುಂದರಮುಮಪ್ಪ ನಲ್ಗಬ್ಬಮಂ ಪೇರಿಸಲಾಟಿಸಿ ಬಂದೆವದಲ್ಲದೆಯುಂ –

ಕಂದ॥ ಧೀರಂಗಂ ಸುಕಥಾಸಂ
ಸಾರಂಗಂ ನಿನಗೆ ಕಾವ್ಯ ಸಾರಂಗೆಮ್ಮೀ
ಕೋರುವುದದೊಂದು ಪಿರಿದೇ
ಮೇರುವನೇರ್ವಂಗೆ ತಿಟ್ಟನೇರುವುದರಿದೇ? ॥೨೨॥

೨೧. ಬಾಯಾರು ಎಂಬ ಈ ಚಿಕ್ಕ ಊರಿನಲ್ಲಿ ಹುಟ್ಟಿದವನಾದ ಹೆಚ್ಚಿನ ಅಧ್ಯಯನವೇನೂ ಇಲ್ಲದಿರುವ ನನ್ನನ್ನು ನೀವು ಹೀಗೆ ಹಲವರೊಂದಾಗಿ ಬಂದು ಸೇರಬೇಕಾದರೆ ಈ ದಿನ ನಿಮಗೆ ಅದೇನು ಕಾರ್ಯವಿದ್ದಿತೋ! ಸೂರ್ಯನ ಬಿಸಿಲಿಂದ ವ್ಯಾಪ್ತವಾದ ಹಗಲು ದೀಪದಕಾಂತಿಯನ್ನು ಬಯಸುವುದೂ ಚಿನ್ನದ ಬಳ್ಳಿಯು ಉರೆಕಾಡನ್ನು (ಜಿಂಕೆಯಿರುವ ಕಾಡನ್ನು ವಿಶೇಷವಾಗಿ ಕಾಡನ್ನು) ಸೇರಿಕೊಂಡು ಕಾಡುಮರವನ್ನು ಅಪ್ಪಿಕೊಳ್ಳುವುದೂ ತುಂಬಾ ಆಶ್ಚರ್ಯವೆನಿಸಿದೆ ! (ಗದ್ಯ) ಕವಿಯು ಹಾಗೆ ಹೇಳಿದಾಗ ಬುಧರು ಹೀಗೆಂದರು – ಒಳ್ಳೆಯ ಕಾವ್ಯಲಕ್ಷಣದಿಂದ ಕಾಣಿಸುವಂತಹದೂ ನೀತಿಬೋಧೆಯ ಪರಿಮಳ ಪ್ರಸಾರದ ಶಿಕ್ಷಣವುಳ್ಳುದೂ ಸಕಲ ಜನರಿಗೂ ಮಾನ್ಯವಾಗುವ ಗುಣದಿಂದ ಕೂಡಿದುದೂ ಹಿರಿಮೆಗೆ ನೆಲವೂ ಕಾವ್ಯಸೌಂದರ್ಯದಿಂದ ತುಂಬಿದುದೂ ಶ್ರೀಕೃಷ್ಣನ ಲೀಲಾಕಥನದಿಂದ ಬಹಳ ಸೊಗಸುಳ್ಳುದೂ ಆದ ಸತ್ಕಾವ್ಯವನ್ನು ನಿಮ್ಮಿಂದ ಹೇಳಿಸಲು ಬಯಸಿ ಬಂದಿದ್ದೇವೆ. ಅದಲ್ಲದೆ–

೨೨. ಬುದ್ಧಿಶಾಲಿಯೂ ಒಳ್ಳೆಯ ಕಥೆಯನ್ನು ರಂಜಕವಾಗಿ ವಿಸ್ತರಿಸಬಲ್ಲವನೂ, ಕಾವ್ಯದ ಸತ್ವವುಳ್ಳವನೂ ಆಗಿರುವ ನಿನಗೆ ನಮ್ಮ ಕೋರಿಕೆಯನ್ನು ಈಡೇರಿಸುವುದೆಂದರೆ, ಅದೇನು ದೊಡ್ಡದೋ! ಮೇರುಪರ್ವತವನ್ನು ಏರಿ ಹೋಗಬಲ್ಲವನಿಗೆ ದಿಣ್ಣೆಯನ್ನೇರುವುದು ಅಸಾಧ್ಯವೇ?

ಗದ್ಯ॥ ಅಂತಾದೊಡಕ್ಕೆ ನೋಲ್ಪಂ ಮೇಣೀಗಳಾವುದಂ ಬಣ್ಣಿಪಮೆನೆ, ಮುನ್ನಂ ವಾಸುದೇವಂ ಕೌಂತೇಯನ ಸತ್ವಾಲೋಕನಮಂ ಗೆಯ್ದ ನಿದಾನಮೆಂತದಱ ವಿವರಮೆಂತೆಂಬುದಂ ನಿನ್ನಿಂದ ಕೇಳಲಬ್ಥಿರ್ತವದನೆ ಕೇಲ್ಬುದು. ನಿನ್ನ ಕಲ್ವಿಗಂ ಗರುವಿಕೆಗಂ ಸಾಸಕ್ಕಮನುರೂಪಮೆನೆ ನೈಜಮಪ್ಪ ಸಕ್ಕದಂ ಬೆರೆತಿರ್ಪ ಕನ್ನಡದೊಳ್ ಗದ್ಯಪದ್ಯಮಿಶ್ರಮಪ್ಪ ಚಂಪೂಕಾವ್ಯಮಾಗಿ ಪೇಲ್ವುದೊಪ್ಪುಗುಂ. ಮನೆವಾೞ್ತೆಯೋಜವಾೞ್ತೆಯೊಡನೆ ಯಕ್ಷಗಾನ ಕೂಟಂಗಳ ಮೇಣಲ್ಲಲ್ಲಿಯ ಜಂಬರಂಗಳ್ಗೇನುಂ ಪುಚ್ಚಟಿಯಾಗದಂತೆಯುಂ ಪೇಟಿವಟ್ಟುದು ಮನಂಬುಗುವಂತಿನಿಸಿನಿಸಂ ದೆವಸದೆವಸಂ ಪೇಟದೆನೆ ಕಬ್ಬಮನೊರೆಯಲ್ ಕಾರಣಮುಮಾಯ್ತದಱಂತೊರೆದ ಪದಿಮೂಱು ಪೀಠಿಕಾಪದ್ಯಂಗಳನೀ ಕಾವ್ಯಪ್ರತಿಯೊಳ್ ಮೊದಲೆ ಕಾಣಿಸಲಾಯ್ತಿಂ ಮುಂಖಱೆವಮೀ ಸತ್ವಾಲೋಕನ ಕಾವ್ಯದ ವಿಸ್ತಾರಮೆಂತೆಂದೊಡೆ–

ಸ್ರಗ್ಧರಾ :

ಕೀಲಾಲ ಕ್ರೋಡ ಘೋರಾಕೃತ ಮಕರಗಜಾಕೀರ್ಣಮಾವರ್ತಗರ್ತಾಂ
ದೋಲೋತ್ಪಾತಂ ಗಭೀರಂ ವಿಚಲಗಿರಿನಿಭೋತೀತ ಭಂಗಾಕರಂ ಪ್ರಾ
ವಾಲಸ್ಥಂ ಮತ್ಸ್ಯವಾಸಂ ಘನಘನನಿನದಂ ಶಂಖಶುಕ್ತ್ಯಾಳಿರಂಗತ್
ಕೂಲಂ ರತ್ನಾಕರಂ ದುಸ್ತರತರಮೆನಿಕುಂ ಪಶ್ಚಿಮಾಂಭೋನಿಧಾನಂ ॥೨೩॥

ಗದ್ಯ: ಆಗ ಕನೀಯನಿಂತೆಂದನು – ಹಾಗಾದರೆ, ಆಗಲಿ, ನೋಡೋಣ. ಅಲ್ಲದೆ ಈಗ ಯಾವುದನ್ನು ವರ್ಣಿಸಲಿ? ಎನ್ನಲು, ಹಿಂದೆ ಕೃಷ್ಣನು ಅರ್ಜುನನ ಸತ್ವಾಲೋಕನವನ್ನು ಮಾಡಿದ ಮೂಲಸಂಗತಿ ಹೇಗೆ? ಅದರ ವಿವರ ಹೇಗೆ? ಎಂಬುದನ್ನು ನಾವು ನಿನ್ನಿಂದ ಕೇಳಲು ಆಸಕ್ತರಾಗಿದ್ದೇವೆ; ಅದನ್ನೇ ಹೇಳುವುದು. ನಿನ್ನ ಕಲಿಕೆಗೂ ಗೌರವಕ್ಕೂ ಸಾಹಸಕ್ಕೂ ಅನುರೂಪವೆನಿಸುವಂತೆ ನೈಜವಾದ ಸಂಸ್ಕೃತ ಮಿಶ್ರಣವಾದ ಕನ್ನಡದಲ್ಲಿ ಗದ್ಯಪದ್ಯಗಳು ಬೆರೆತಿರುವ ಚಂಪೂಕಾವ್ಯವಾಗಿ ಹೇಳುವುದು ಸೊಗಸೆನಿಸುವುದು. ಮನೆಗೆಲಸ, ಅಧ್ಯಾಪಕನ ಕೆಲಸಗಳೊಂದಿಗೆ ಯಕ್ಷಗಾನಕೂಟಗಳ ಮತ್ತು ಅಲ್ಲಲ್ಲಿಯ ಕೆಲಸಗಳಿಗೇನೂ ತೊಂದರೆ ಯಾಗದಂತೆಯೂ ಹೇಳಿದುದು ಮನಸ್ಸಿಗೆ ನಾಟುವಂತೆ ಸ್ವಲ್ಪ ಸ್ವಲ್ಪವನ್ನೇ ದಿನದಿನವೂ ಹೇಳುವುದು–ಎಂದು ಅವರು ಹೇಳಿದುದರಿಂದ ಈ ಕಾವ್ಯವನ್ನು ಹೇಳಲು ಕಾರಣವಾಯಿತು. ಅದರಂತೆ ಹೇಳಲಾದ ಹದಿಮೂರು ಪೀಠಿಕಾಪದ್ಯಗಳನ್ನು ಈ ಕಾವ್ಯದ ಪ್ರತಿಯಲ್ಲಿ ಮೊದಲಾಗಿ ಕಾಣಿಸಲಾಯಿತು. ಇನ್ನು ಮುಂದುವರಿಯೋಣ. ಈ ಸತ್ವಾಲೋಕನ ಕಾವ್ಯದ ವಿಸ್ತಾರವು ಹೇಗೆಂದರೆ –

೨೩. ನೀರುಹಂದಿ, ಭಯಂಕರಾಕಾರವುಳ್ಳ ಮೊಸಳೆ, ನೀರಾನೆಗಳಿಂದ ಕೂಡಿದುದೂ ಸುಳಿಗಳಿಂದಲೂ ಸುಳಿಗಳ ಬಲದಿಂದಲೂ ಕೂಡಿ ಅಲ್ಲಾಡುವ ಉತ್ಪಾತದಿಂದಲೂ ಆಳವಾದುದೂ ಚಲಿಸುವ ಬೆಟ್ಟಗಳಂತಿರುವ ಅಲೆಗಳಿಂದ ಕೂಡಿದುದೂ ಹವಳಗಳಿಂದ ಕೂಡಿದುದೂ ಮೀನಿನ ವಾಸಸ್ಥಾನವಾದುದು ಮೋಡಗಳ ಘನವಾದ ಶಬ್ದವುಳ್ಳುದೂ ಶಂಖಗಳ ಮತ್ತು ಚಿಪ್ಪುಗಳು ಹಾರುತ್ತಿರುವ ತೀರವುಳ್ಳುದೂ ರತ್ನಗಳಿಗೆ ಆಸರೆಯೂ ಆದ ಪಶ್ಚಿಮ ಸಮುದ್ರವು ದಾಟಲು ಅಸಾಧ್ಯವೆನಿಸಿರುವುದು.

ಮ.ವಿ. ವಿಳಸನ್ಮೌಕ್ತಿಕ ಚಾರು ಶೀಕರಯುತಂ ಹೇಮಂತ ಶೈಲೀ ಹಿಮಾ
ವಳಿ ಸಂಸ್ಪರ್ಧಿತ ಗೌರವರ್ಣ ಬಹು ಡಿಂಡೀರಾವೃತಂ ಬಾಡಬಾ
ನಳ ದೂಮಾವಳಿ ಸಂಶಯಪ್ರದ ಪಯೋದ ವ್ಯೂಹಯುಕ್ತಂ ತಿಮಿ
ಗಿಳದುದ್‌ಜೃಂಭಣ ಮೇದಿನೀವಿಳಯಘೋಷಕ್ಕಾಗರಂ ಸಾಗರಂ ॥೨೪॥

ಚಂ. ಮಾ. ಸುರುಚಿರಮಾಗಿ ಪೆರ್ಚಿ ಬೆಳೆದಿರ್ಪನಿಲ ದ್ರುಮ ವಾಯುಘೋಷಮಾ
ಶರನಿಧಿಯುತ್ತರಂಗ ರವಮೋಡುವ ಕೂಗಿನ ನೀಟ್ದ ದೂವೆದೇ
ರುರು ನಿನದಂಗಳಂ ಬೆರೆತ ಕೊತ್ತಟಿಕೂಗಿನ ಕರ್ಕಶತ್ವದಿಂ
ಕರಕರೆಗೊಂಬರಾಗತಜನರ್ ಕಿವುಡೋ[illegible]ುವೆವೆಂದು ತೀರದೊಳ್ ॥೨೫॥

ಕಂದ॥ ಉಡುಪಂಗಳಿಂದೆ ದಾಸರ್
ಕಡಲೊಳೆ ಪೋಗುತ್ತದೊಂದು ದೀವಿಯೊಳಾಗಳ್
ಅಡಲೊಡರಿಸಿದೊಡೆ ಸುಡೆ ಬೆ
ನ್ನೊಡನಾಳಿಸಿ ತರ್ಗುಗುಂ ತಿಮಂಗಿಳಮದಜಿಕೊಳ್ ॥೨೬॥

೨೪. ಸಾಗರವು ಶೋಭಿಸುವ ಮುತ್ತುಗಳಂತೆ ಮನೋಹರವಾದ ಜಲಬಿಂದುಗಳಿಂದ ಕೂಡಿರುವುದು. ಚಳಿಗಾಲದ ಪರ್ವತದ ಹಿಮಸಮೂಹವನ್ನು ಬಿಳಿಬಣ್ಣದಲ್ಲಿ ಸ್ಪರ್ಧಿಸುವ ಬಹಳ ನೊರೆಯಿಂದ ಆವೃತವಾದುದು. ವಡಬ ಎಂಬ ಬೆಂಕಿಯ ಹೊಗೆಯ ಸಮೂಹವೆಂಬ ಸಂಶಯವನ್ನು ಒದಗಿಸತಕ್ಕ ಮುಗಿಲಿನ ಒಡ್ಡಣೆಯುಳ್ಳದು. ತಿಮಿಂಗಿಲದ ಸೊಕ್ಕಾಟದಿಂದ ಕೂಡಿ ಭೂಮಿಗೆ ನಾಶವುಂಟಾಗುವುದೋ ಎನಿಸತಕ್ಕ ಮೊರೆತಕ್ಕೆ ಆಸ್ಪದವಾದುದು.

೨೫. ಮನೋಹರವಾಗಿ ಹೆಚ್ಚಳಗೊಂಡು ಬೆಳೆದ ಗಾಳಿಮರಗಳ ಗಾಳಿಯ ಶಬ್ದವೂ ಆ ಸಮುದ್ರದಲ್ಲಿ ಮೇಲೇಳುವ ಅಲೆಗಳ ಶಬ್ದವೂ ಓಡುತ್ತಿರುವ ರೈಲುಬಂಡಿಯ ಕೂಗಿನ ಶಬ್ದವೂ ಇವುಗಳೊಂದಿಗೆ ಕಾಗೆಗಳ ಕೂಗಿನ ಕರ್ಕಶತೆಯಿಂದಾಗಿ, ಆ ಕಡೆಗೆ ಬಂದ ಜನರು ಕಡಲತೀರದಲ್ಲಿ ಅಯ್ಯೋ ನಾವೀಗ ಕಿವುಡರಾದೆವು ಎಂಬ ಮಟ್ಟಿಗೆ ಕರಕರೆಗೆ ಒಳಗಾಗುವರು.

೨೬. ಒಮ್ಮೆ ಬೆಸ್ತರು ತೆಪ್ಪಗಳಲ್ಲಿ ಆ ಕಡಲಿನ ದೂರದವರೆಗೆ ಹೋದರು. ಅವರಿಗೆ ಒಂದು ದ್ವೀಪ ಸಿಕ್ಕಿತು. ಅಲ್ಲಿ ಅಡುಗೆ ಮಾಡತೊಡಗಲು, ಆ ದ್ವೀಪದಲ್ಲಿ ಒಂದು ತಿಮಿಂಗಲದ ಬೆನ್ನಾಗಿದ್ದುದರಿಂದ ಅದರ ಬೆನ್ನು ಸುಡುವಾಗ ಅದು ಇವರನ್ನೆಲ್ಲ ಮುಳುಗಿಸಿ ತಳಕ್ಕೆ ಸರಿಯಿತು.

ವನಖಡ್ಗಮೃಗದ ಕೋಡೆನೆ
ವನಯಾನಸ್ತಂಭಮೆಸೆಯೆ ನೋಡೆದೊಡೆ ನಕ್ರಂ
ಮನದೊಳಗಜೆತಾ ಪಡಗಕೆ
ಜನರದಬಿಡಿಮೆಯ್ಗೆ ಕಟ್ಟುಗುಂ ಕರಗಸಮಂ ॥೨೭॥

ಅಂಬುಧಿಯಂ ಶೋಷಿಸಲುಂ
ಕುಂಭಿನಿಯಂ ಲಯಿಸಲುಂ ಸಮರ್ಥಂ ದ್ಯುತಿಸಂ
ರಂಭಂ ಜ್ಞಾನಾತ್ಮದ್ಯುತಿ
ಯೆಂಬಿನಂಬುಧಿಯೊಳೊಂದು ಕಿರ್ಚುಂಟೆಂಬರ್ ॥೨೮॥

ಗಂಭೀರತೆಯಿಂ ತನ್ನೊಳೆ
ಜೃಂಭಿಪುದಲ್ಲದೆಯೆ ಮೆಱೆಯಿಪೆಂ ಕಾರ್ಯವನೆಂ
ದಂಬುಧಿ ಮೇರೆಯ ಮೀಱದು
ಗಂಭೀರತೆಯನ್ನೆಯಕ್ಕೆ ದೊರೆಯನಿಸುಗುಮೇ ॥೨೯॥

ದೇಶಕ್ಕೆ ಯೋಗ್ಯಕಾಲದೆ
ತೋಷದ ಮೞೆಯೀಗುಮಲ್ತೆ ಮೇಘಂ ಕಾಲಾ
ಶೇಷಮದಕ್ಕುದಕಂಗುಡು
ವೀ ಸುಗುಣಕ್ಕಾವನುಂ ಸಮಾನನೆನಿಪನೇ? ॥೩೦॥

೨೭. ಇನ್ನೊಮ್ಮೆ ಹಡಗಿನಲ್ಲಿ ಕಡಲ ದೂರಕ್ಕೆ ಹೋದಾಗ, ದೊಡ್ಡ ಮೊಸಳೆ ಆ ಹಡಗವು ನುಂಗತೊಡಗಿತು. ಆಗ ಹಡಗದ ಹಾಯಿ ಕಂಬ ಅಡ್ಡವಾದುದರಿಂದ ಪೂರ್ಣವಾಗಿ ನುಂಗಲಾರದಾಯಿತು. ಆ ಕಂಬವು ಕಡಲ ಖಡ್ಗಮೃಗದ ಉದ್ದವಾದ ಕೋಡಿನಂತೆ ತೋರಿತು. ಬೆಸ್ತ ಜನರು ಇದಕ್ಕೆ ಪರಿಹಾರವೆನಿಸುವಂತೆ ತಮ್ಮ ಹಡಗಿನ ಅಡಿಗೆ ಗರಗಸವನ್ನು ಕಟ್ಟಿಕೊಳ್ಳತೊಡಗಿದರೂ ಇದರಿಂದ, ಹಡಗನ್ನು ನುಂಗುವ ಜಲಚರದ ಬಾಯಿ ಸೀಳಿಹೋಗುವಂತಾಯಿತು.

೨೮. ಸಮುದ್ರವನ್ನು ಒಣಗಿಸಲು ಭೂಮಿಯನ್ನು ಲಯಗೊಳಿಸಲೂ ಸಮರ್ಥವಾಗಿ ಉಜ್ವಲಪ್ರಕಾಶಯುಕ್ತವಾಗಿ ಜ್ಞಾನದ ಆತ್ಮಜ್ಯೋತಿಯ ಹಾಗೆ ಸಮುದ್ರದಲ್ಲಿ ವಡಬವೆಂಬ ಅಗ್ನಿ ಇರುವುದೆಂದು ಹೇಳುತ್ತಾರೆ.

೨೯. ಗಾಂಭೀರ್ಯಕ್ಕೆ ಹೆಸರಾದ ಸಮುದ್ರವು ತನ್ನ ಮೇರೆಯೊಳಗೆ ಮಾತ್ರವೇ ವಿಜೃಂಭಿಸಿಕೊಂಡಿರುತ್ತದೆಯಲ್ಲದೆ, ತನ್ನ ಶೌರ್ಯವನ್ನು ಮೆರೆಯಿಸುವೆನೆಂದು ಮೇರೆಯನ್ನೆಂದಿಗೂ ಮೀರುವುದಿಲ್ಲ. ಗಾಂಭೀರ್ಯ ಗುಣವು ಅನ್ಯಾಯಕ್ಕೆ ಆಶ್ರಯವೆನಿಸುವುದೇ? ಸರ್ವಥಾ ಇಲ್ಲ.

೩೦. ಮೋಡವು ಯೋಗ್ಯವಾದ ಕಾಲದಲ್ಲಿ ಸಂತೋಷಕರವಾದ ಮಳೆಯನ್ನು ಯಾವಾಗಲೂ ಕೊಡುವುದಲ್ಲವೆ? ಅಂತಹ ಮೋಡಕ್ಕೆ ನೀರನ್ನೊದಗಿಸುವ ಸಮುದ್ರದ ಈ ಸದ್ಗುಣಕ್ಕೆ ಯಾವನಾದರೂ ಸಮಾನನೆನಿಸುವನೆ?

ಉ.ಮಾ. ರಕ್ಷಿತಜೀವಸಂತತಿ ವಿಚಾರಯುತಂ ಮಣಿಭೂಷಿತಂ ವಿನಾ
ಲಕ್ಷಿತವೈರಿ ಫೇನಯಶಸಂ ದ್ವಿಜವೃಂದವಿವೃದ್ಧಸೇವನಂ
ಪಕ್ಷಧರಾವನೀಧರಭಯಾಪಹರಂ ಸುಕಲಾಧ್ರಹರ್ಷನಂ
ತಕ್ಷಯ ರಾಗಭಾಜನೆಸೆಗುಂ ಧರಣೀಪತಿಯಂತೆ ಸಾಗರಂ ॥೩೧॥

(ಮುಕ್ತಪದಗ್ರಹಣ ಗದ್ಯ)

ಮತ್ತಂ ವಿನತಾತನೂಜಂ ಪತತ್ರಿರಾಜಂ ಸಾಜಮಪ್ಪ ವೈರದಿಂದುರಗ ಪರಿವಾರ ಸಂಹಾರಂಗೆಯ್ದಾಹಾರಂಗೆಯ್ವಾಗಳ್ ಮಱೆವೊಕ್ಕವಂ ಕೊಲ್ವುದಱನಲ್ಲದುದಱಿಂ ಕೊಲಲಾಱನಾಗಿ ನಿರಾಹಾರಿಯಾದನೆಂದಱಿತು ವಿಭುಹಿತಾರ್ಥಂ ಪಾರಿ ನೆಲದೊಳ್ ದೊರೆಕೊಂಡ ಕೊಳ್ಗೆಯಿಂ ತಣಿಯದೆ ಜಲಧಿಯೊಳರಸಲ್ ಬರ್ಪುವೆನಿಸಿ ಪಾರಾಡುವ ಪಕ್ಷಿನಿಕಾಯದಿಂ – ಆ ಪಕ್ಷಿನಿಕಾಯಂ ತನ್ನ ಸೇವೆಗೆಯ್ಯುತ್ತುರ್ಪುದುಗೆತ್ತದರ್ಕೆ ಕರ್ದುಂಕಲಕ್ಕಿಗಾಳ್ಗಳಂ ಸಮುದ್ರರಾಜಂ ಪಾರಿಸುವನೆನಿಸಿ ಸಿಡಿಯುತ್ತಿರ್ಪ ಸೀವರಂಗಳಿಂದೆಯುಂ – ಆ ಸೀವರಂಗಳ್ ವನಧಿ ಮುದ್ರಿತ ಧಾತ್ರೀದೇವೀಪೂಜಾ ಪುಷ್ಪಾಂಜಲಿಕ್ಷೇಪಮಾಗೆ, ಕೆಮ್ಮೀನ್ ದೀಪಾಂಕುರಮಾಗೆ, ಸಮುದ್ರಘೂರ್ಣನಮೆಂಬ ದೆಸೆವಳರ ವಾದ್ಯಧ್ವನಿಯಿಂದೆಯುಂ – ಆ ವಾದ್ಯಧ್ವನಿ ಶ್ರವಣ ಪಲಾಯಮಾನ ಜನ ಜೀವನ ಮಾರುತನಂ ಮಾರುತನಂ ತಡೆದು ಸಂಶಯಿಪಂತೆ ಮಿಳಿರ್ಪ ನಾವೆಯ ಕೊವೆಗಂಬದ ಬೆಳ್ಪಟೆಯಿಂದೆಯುಂ – ಆ ಬೆಳ್ಪಟೆಯಂ ಸ್ವವೇಗಭಂಗ ಕೋಪದಿಂ ಸಖನಪ್ಪ ಸರ್ವ ದಹನಂಗೆ ವಡಬಾನಲಂಗೆ ಕುಡುವೆನೆಂದಾರ್ಪಿನಿಂ ಚಲಂಕುವ ಚಂಡಾನಿಲ

೩೧.ಸಮುದ್ರನು ರಾಜನ ಹಾಗೆ ಜೀವಿಗಳ ಸಂತತಿಯ ರಕ್ಷಕನಾಗಿದ್ದಾನೆ. ವಿಚಾರ (ಪಕ್ಷಿಗಳ ಸಂಚಾರ)ದಿಂದ ಕೂಡಿದೆ. ರತ್ನಗಳಿಂದ ಅಲಂಕೃತನಾಗಿದೆ. ಶತ್ರುವನ್ನು ಲಕ್ಷ್ಯಮಾಡದವನು. ನೊರೆಯೇ ಕೀರ್ತಿ ಚಿಹ್ನೆಯಾಗಿರುವವನು (ನೊರೆಯಂತೆ ಬೆಳ್ಳಗಿನ ಕೀರ್ತಿಯುಳ್ಳವನು), ದ್ವಿಜವೃಂದದಿಂದ (ಬ್ರಾಹ್ಮಣ ಸಮೂಹದಿಂದ, ಪಕ್ಷಿ ಸಮೂಹದಿಂದ) ಹೆಚ್ಚಾದ ಸೇವೆಯುಳ್ಳವನು, ಮೈನಾಕಪರ್ವತಕ್ಕೆ ಆಶ್ರಯ ಕೊಡುವ ಮೂಲಕ ಅವನ ಭಯವನ್ನು ಪರಿಹರಿಸಿದವನು (ಆಶ್ರಿತರಾಜರ ಭಯ ಪರಿಹಾರ ಮಾಡತಕ್ಕವನು. ಕಲಾಧ್ರನಾದ ಚಂದ್ರನಿಂದ ಹರ್ಷಗೊಳ್ಳುವವನು (ಕಲಾವಿದರ ಸಂತೋಷದಿಂದ ಕೂಡಿದವನು) ಏನೂ ಕಡಮೆಯಲ್ಲದ ಅನುರಾಗ ಪಾತ್ರನು.

ಗದ್ಯ: ಆಮೇಲೆ ಪಕ್ಷಿರಾಜನಾದ ಗರುಡನು ಸಹಜವೈರದಿಂದ ಹಾವುಗಳ ಪರಿವಾರವನ್ನು ಕೊಲ್ಲುವಾಗ ಮರೆಹೊಕ್ಕವನ್ನು ಕೊಲ್ಲುವುದು ಧರ್ಮವಲ್ಲವಾದುದರಿಂದ ಕೊಲ್ಲಲಾರದೆ, ಆಹಾರವೇ ಇಲ್ಲದವನಾದನೆಂದು ತಿಳಿದು ಒಡೆಯನ ಹಿತಕ್ಕಾಗಿ ಹಾರಾಡಿದಾಗ ನೆಲದಲ್ಲಿ ದೊರೆತ ಕೊಳ್ಳೆಯಿಂದ ತೃಪ್ತಿಗೊಳ್ಳದೆ ಸಮುದ್ರದಲ್ಲಿ ಹುಡುಕಲು ಬರುತ್ತವೆ ಎಂದೆನಿಸಿ ಹಾರಾಡುವ ಪಕ್ಷಿಸಮೂಹದಿಂದಲೂ ಆ ಪಕ್ಷಿ ಸಮೂಹವು ತನ್ನ ಸೇವೆಗಾಗಿ ಬರುತ್ತಿದೆಯೆಂದು ಭಾವಿಸಿ, ಅದಕ್ಕೆ ಕುಟುಕುವುದಕ್ಕಾಗಿ ಸಮುದ್ರರಾಜನು ಅಕ್ಕಿ ಕಾಳುಗಳನ್ನು ಹಾರಿಸುತ್ತಿರುವನೆನಿಸಿ ಸಿಡಿಯುತ್ತಿರುವ ತುಂತುರುಹನಿಗಳಿಂದಲೂ ಆ ತುಂತುರುಹನಿಗಳು ಸಮುದ್ರಾವೃತ ಭೂಮೀದೇವಿಯ ಪೂಜೆಯ ಪುಷ್ಪಾಂಜಲಿಯ ಎರಚಾಟವೆನಿಸಲು, ಕೆಮ್ಮೀನುಗಳು ದೀಪಾಂಕುರವೆನಿಸಲು ಕಡಲ ಮೊರೆತವೆಂಬ

ನಿಂದೆಯುಂ – ಆ ಚಂಡಾನಿಲನ ಬಿಱುವೊಯ್ಲಿಂ ನೊಂದು ಕನಲ್ದು"" ಮರುತ್ಪಥಮಂ ಮಾರುತಂಗಂ ದುಷ್ಪ್ರವೇಶ್ಯಂ ಮಾಟ್ಪೆನೆಂದೇಟ್ಟ ಪೆರ್ದೆರೆಯಿಂದೆಯುಂ ಆ ಪೆರ್ದೆರೆಯರೆ ಚಣದೊಳೆ ಮಾಯವಪ್ಪುದಱಿಂ ಭವಸಾಗರ ಸುಖಜೀವನ ಭಂಗುರತೆಯಂ ನಿದರ್ಶಿಪ ನೀತಿಯಿಂದೆಯುಮಾದಮೊಪ್ಪುಗುಂ ಅಂತು ಪೆಂಪುಗುಂಪುವಡೆದಾ ಪಡುವಣ ಪೆರ್ಗಡಲೊಳ್–

ಕಂದ॥ ಆ ನೀರನಿಧಿಯ ರಾಜಾ
ಸ್ಥಾನಂ ತೆಂಕಿದುದೊ ವಿಮಳ ವೈಕುಂಠಪುರಂ
ಸ್ನಾನಕ್ಕೆ ಬಂದುದೋ ಎನೆ
ತಾನೆಸೆಗುಂ ಪುಣ್ಯನಗರಮಾ ದ್ವಾರಕೆಯಾ ॥೩೨॥

ಪಸರಂಗಳ ಪೆಸರೋದುತೆ
ಪಸರಾಣ್ಮರ ಕುಱುಪನೀಕ್ಷಿಸುತ್ತುಮದೆತ್ತಂ
ಶ್ವಸನಂ ನಿಜಕರ್ತವ್ಯಂ
ಕುಸಿಯದವೊಲ್ ಮಂದಮಾಗಿ ತೀಡುತ್ತಿರ್ಪಂ ॥೩೩॥

ದಿಕ್ಪಾಲಕರ ವಾದ್ಯದ ಸ್ವರದಿಂದಲೂ ಆ ವಾದ್ಯಸ್ವರವನ್ನು ಕೇಳಿ, ಓಡಿ ಹೋಗುವ ಜನರ ಜೀವನದ ಪ್ರಾಣವಾಯುವಾಗಿರುವ ವಾಯುವನ್ನು ತಡೆದು ನಿಲ್ಲಿಸಿ ಸಂತೈಸುವಂತೆ ಅಲುಗಾಡುವ ನಾವೆಯ ಕೂವೆಕಂಬದ ಬಿಳಿಬಟ್ಟೆಯಿಂದಲೂ ಆ ಬಿಳಿಬಟ್ಟೆಯನ್ನು ತನ್ನ ವೇಗಕ್ಕೆ ಭಂಗವೊದಗಿಸುವುದೆಂಬ ಕೋಪದಿಂದ ತನ್ನ ಗೆಳೆಯನಾದ ಎಲ್ಲವನ್ನೂ ಸುಡತಕ್ಕ ವಡಬಾನಲನಿಗೆ ಕೊಡುವೆನೆಂದು ಸಾಮರ್ಥ್ಯದಿಂದ ನೂಕುವ ಚಂಡಮಾರುತನಿಂದಲೂ ಆ ಚಂಡಮಾರುತನ ಬಿರುಸಾದ ಹೊಡೆತದಿಂದ ನೊಂದು ಕೋಪಗೊಂಡು ಆಕಾಶವನ್ನು ವಾಯುವಿಗೂ ಪ್ರವೇಶಿಸಲು ಸಾಧ್ಯವಾಗದಂತೆ ಮಾಡಿಬಿಡುವೆನೆಂದು ಮೇಲೇಳ್ವ ದೊಡ್ಡ ಅಲೆಗಳಿಂದಲೂ ಆ ದೊಡ್ಡ ಅಲೆಗಳು ಕ್ಷಣದಲ್ಲಿಯೇ ಮಾಯವಾಗುವುದರಿಂದ ಸಂಸಾರಸಾಗರದ ಸುಖಜೀವನದ ಕ್ಷಣಿಕತೆಯನ್ನು ಕಾಣಿಸುವ ನೀತಿಯಿಂದಲೂ ವಿಶೇಷವಾಗಿ ಶೋಭಿಸುವುದು. ಅಂತು ಹಿರಿಮೆಗಳು ಗುಂಪುಗೂಡಿರುವ ಆ ಪಡುವಣ ಮಹಾಸಾಗರದಲ್ಲಿ (ಒಂದು ಪುಣ್ಯಕರವಾದ ನಗರವಿದೆ).

೩೨. ಆ ಸಮುದ್ರದ ರಾಜಾಸ್ಥಾನವೇ ತೇಲಿತೋ! ನಿರ್ಮಲವಾದ ವೈಕುಂಠಪುರವು ಸ್ನಾನಕ್ಕಾಗಿ ಇಲ್ಲಿಗೆ ಬಂದಿತೋ! ಎಂಬ ಹಾಗೆ ದ್ವಾರಕೆಯ ಪುಣ್ಯ ನಗರವು ಶೋಭಿಸುವುದು.

೩೩. ಆ ನಗರದಲ್ಲಿರತಕ್ಕ ಅಂಗಡಿಗಳ ಹೆಸರುಗಳನ್ನು ಓದುತ್ತಾ, ಅಂಗಡಿಗಾರರ ಗುರುತನ್ನು ನೋಡಿಕೊಳ್ಳುತ್ತಾ ವಾಯುವು ತನ್ನ ಕರ್ತವ್ಯಕ್ಕೆ ಚ್ಯುತಿ ಬರಬಾರದೆಂಬಂತೆ ಮಂದವಾಗಿ (ಮೆಲ್ಲನೆ) ಬೀಸುತ್ತಿರುವನು.

ಮಾರ್ಗದೆ ಮುಂಬರಿಯುತೆ ಪಿಂ
ಮಾರ್ಗೈತರುತುಂ ಸುಶಬ್ದಯುತನೆಡೆಯಱಿಯು
ತ್ತೂರ್ಗೆ ಹಿತಂ ಮರುತಂ ಕವಿ
ಮಾರ್ಗವನೆಂತಂತು ಮಾರ್ಗಮಂ ಪೊಸಯಿಸುವಂ ॥೩೪॥

ಮ.ಸ್ರ.

ಅದು ಮುನ್ನಂ ರಾಜನೀತಿ ಪ್ರವಣನೆನಿಪ ಗೋವಿಂದನಿಂದುದಾ ಮಾ
ಗಧನತ್ಯಾಚಾರದಿಂ ಸಜ್ಜನರನುಳಿಸಿ ಸಚ್ಛಕ್ತಿಸಂವರ್ಧನಂ ಗೆ
ಯ್ಯುದಕಿನ್ನಾ ಧರ್ಮಸಿಂಹಾಸನವನಿರಿಸಲೀ ಕ್ಷೋಣಿಯೋಳ್ ಯುಕ್ತಕಾರ್ಯಾ
ಸ್ಪದಮಾಗಿರ್ದತ್ತು ಪುಣ್ಯಸ್ಥಳಮೆನಿಸಿಯೆ ರಾರಾಜಿಸುತ್ತಿರ್ಪುದಲ್ತೇ? ॥೩೫॥

ಗದ್ಯ॥ ಮತ್ತಮದು ಹೇಷಾರುತ ಹಯಶಾಲೆಗಳಿಂ – ಬೃಂಹಿತ ಶುಂಡಾಲ ಬಂಧನ ಮಂದಿರಂಗಳಿಂ– ವಿವಿಧ ಶಬ್ದ ಜ್ಞಾನಯುತ ಮೃಗಯಾ ನಿಪುಣ ಶುನಕಶಾಲೆಗಳಿಂ – ಪ್ರದರ್ಶನಾರ್ಥ ಗ್ರಥಿತ ವಿವಿಧ ಮೃಗಾಲಯಂಗಳಿಂ ಕೋಕಿಲರವ ಸ್ಪರ್ಧಿ ತಿರಸ್ಕೃತ ವಿಪಂಚಿಕಾ ಸ್ವನ ಸಂಯುತೆಯರಪ್ಪ ಕಾಮಿನಿಯರಿಂ ಸ್ವಜನ್ಮ ಕರ್ಮಾನು ಯೋಗೋದ್ಯೋಗ ಕುಶಲ ಮಾನವ ಸಾಮಾನ್ಯರಿಂ ಕ್ರೀಡಾಲೋಲ ಬಾಲಕಜಾಲಕದಿಂ – ದಿವ್ಯ ವೇದಮಂತ್ರ ಪ್ರಯೋಗಾನುಮಿತ ಧರ್ಮ ಕರ್ಮ ಮಾರ್ಗ ಸ್ವತಂತ್ರ ನಿಯಂತಾರರಪ್ಪ ವಿಪ್ರಸಂತತಿಯಿರ ಚೆಲ್ವಾಗಿ ಚತುರಸ್ರದ್ವಾರಕಾಂತಮಪ್ಪಾ ಪತ್ತನಂ ದಿವ್ಯಮಹಿಮೆಯಿಂ ಜನಮನದಾಪತ್ತನಂಜಿಸುತೆ ರಂಜಿಸು ಮಲ್ಲಿ

೩೪. ಊರಿಗೆ ಹಿತಕರನಾದ ವಾಯುವು ಮಾರ್ಗದಲ್ಲೇ ಮುಂದೆ ಹೋಗುತ್ತಾ ಎಲ್ಲಿಯಾದರೂ ಬಿಟ್ಟುಹೋಗಿದೆಯೋ ಎಂದು ನೋಡುವುದಕ್ಕಾಗಿ ಹಿಂದಕ್ಕೆ ಬರುತ್ತಾ ಒಳ್ಳೆಯ ಶಬ್ದದಿಂದ ಕೂಡಿದವನಾಗಿ, ಪ್ರತಿಯೊಂದೆಡೆಯನ್ನು ತಿಳಿದುಕೊಂಡು, ಕವಿಯು ತನ್ನ ಕವಿತಾಮಾರ್ಗವನ್ನು ಪೊಸಯಿಸುವ ಹಾಗೆ, ಮಾರ್ಗವನ್ನು ಪೊಸಯಿಸುವನು.

೩೫. ರಾಜನೀತಿಪ್ರವೀಣನೆನಿಸಿದ ಶ್ರೀಕೃಷ್ಣನು ಮಾಗಧನ ಅತ್ಯಾಚಾರದಿಂದ ಸಜ್ಜನರನ್ನು ರಕ್ಷಿಸಿಕೊಂಡು ಒಳ್ಳೆಯ ಶಕ್ತಿ ಸಂವರ್ಧನೆಯನ್ನು ಮಾಡುವುದಕ್ಕೂ ಈ ಭೂಮಿಯಲ್ಲಿ ಧರ್ಮಸಿಂಹಾಸನವನ್ನು ಇರಿಸುವುದಕ್ಕೂ ಯೋಗ್ಯವಾದ ಕಾರ್ಯವನ್ನು ಮಾಡಲು ಆಸ್ಪದವಾಗುವಂತೆ ದ್ವಾರಕೆಯನ್ನು ನಿರ್ಮಿಸಿದನು. ಅದೊಂದು ಪುಣ್ಯಸ್ಥಳವೆನಿಸಿ ಶೋಭಿಸುವುದಲ್ಲವೆ? (ಗದ್ಯ) ಅದಲ್ಲದೆ, ಆ ನಗರವು ಕೆನೆಯುವ ಸ್ವರವುಳ್ಳ ಹಯಶಾಲೆಗಳಿಂದಲೂ – ಗೀಳಿಡುವ ಆನೆಗಳನ್ನು ಕಟ್ಟಿಹಾಕುವ ಕಟ್ಟಡಗಳಿಂದಲೂ ಬಗೆಬಗೆಯ ಶಬ್ದಜ್ಞಾನವುಳ್ಳ ಮತ್ತು ಬೇಟೆಯ ನೈಪುಣ್ಯವುಳ್ಳ ನಾಯಿಗಳ ಕೊಟ್ಟಿಗೆಗಳಿಂದಲೂ ಪ್ರದರ್ಶನಕ್ಕಾಗಿ ಕೂಡಿಹಾಕಿದ ಮೃಗಾಲಯಗಳಿಂದಲೂ ಕೋಗಿಲೆಯ ಸ್ವರಕ್ಕೆ ಸ್ಪರ್ಧೆಮಾಡುವ ವೀಣಾಸ್ವರವನ್ನು ತಿರಸ್ಕರಿಸುವಂತಿರುವ ಸ್ವರವುಳ್ಳ ಸ್ತ್ರೀಯರಿಂದಲೂ – ತಂತಮ್ಮ ಜನ್ಮಕ್ಕೂ ಕರ್ಮಕ್ಕೂ ಅನುಸಾರವಾದ ಉದ್ಯೋಗದಲ್ಲಿ ಕುಶಲರಾದ ಸಾಮಾನ್ಯ ಮನುಷ್ಯರಿಂದಲೂ ಆಟದಲ್ಲಿ ಪ್ರೀತಿಯುಳ್ಳ ಬಾಲಕರ ಸಮೂಹದಿಂದಲೂ ದಿವ್ಯವಾದ ವೇದಮಂತ್ರ ಪ್ರಯೋಗದ ಅನುಮತಿಯುಳ್ಳ ಧರ್ಮಕರ್ಮ ಮಾರ್ಗದಲ್ಲಿ ಸ್ವತಂತ್ರರಾಗಿ ನಿಯಮಮಾಡತಕ್ಕ ಬ್ರಾಹ್ಮಣ ಸಮೂಹದಿಂದಲೂ

ಮ.ವ. ನವಧೂಪಾಗರು ಧೂಮ ಗಂಧ ಹೃತ ದಿಕ್ಪಾಪಾಳಿ ದುರ್ಗಂಧ ಮೊ
ತ್ತುವ ತೂರ್ಯಸ್ವನ ನಷ್ಟ ದುಷ್ಟವಚನ ಶ್ರಾವಪ್ರದೋಷಂ ಭವ
ಸ್ತವ ಮಂತ್ರಾನುಗಮಾನುರಾಗರಸ ವಿಧ್ವಸ್ತಾಶುಭಂ ಸರ್ವಮಾ
ನವ ಸರ್ವೇಷ್ಟದಮಾಗೆ ದೇವನಿಳಯಂಗಳ್ ನಾಡೆ ರಾರಾಜಿಕುಂ ॥೩೬॥

ಉ.ಮಾ – ನಿತ್ಯವಿಶೇಷಪೂಜೆ ನಿಯತೋತ್ಸವಮರ್ಪಣೆ ಹೋಮ ದಾನಸತ್
ಕೃತ್ಯಮುದಾತ್ತ ಧರ್ಮಸಭೆಯುಂ ನಿಗಮಾಗಮ ಗೋಷ್ಠಿ ಸೇವೆ ಸಾ
ಹಿತ್ಯದ ತಾಳಮದ್ದಳೆಯ ಗಾನದ ವಾಚನಕೀರ್ತನಾದಿಯಾ
ಸಕ್ತ್ಯತಿಯಾಗಿ ದೇಗುಲದೊಳಲ್ಲಿ ಸಮಾಜಹಿತಾರ್ಥ ಸಂಕುಲದಿ ॥೩೭॥

ಚೆಲುವಾಗಿ ನಾಲ್ಕೂ ಕಡೆಯ ಬಾಗಿಲುಗಳಿಂದ ಸೊಗಸಾದ ಆ ಪಟ್ಟಣವು ದಿವ್ಯಮಹಿಮೆಯಿಂದ ಜನರ ಮನಸ್ಸಿನ ಸಂಕಷ್ಟವನ್ನು ಹೆದರಿಸುತ್ತ ರಂಜಿಸುವುದು. (ಅಲ್ಲಿನ ವಿಶೇಷತೆಗಳು ಹೀಗಿವೆ)–

೩೬. ಅಲ್ಲಿ ದೇವಾಲಯಗಳು ಹೀಗಿವೆ – ಹೊಸತಾದ ಧೂಪ ಅಗರುಬತ್ತಿಗಳ ಹೊಗೆಯ ಪರಿಮಳವು ದಿಕ್ಕುಗಳ ಪಾಪ ಸಮೂಹವೆಂಬ ದುರ್ವಾಸನೆಯನ್ನು ನಾಶಮಾಡುತ್ತಿವೆ. ಮಂಗಳ ವಾದ್ಯಸ್ವರವು, ದುರ್ವಚನವನ್ನು ಕೇಳಿದ್ದರಿಂದಾದ ದೋಷವನ್ನು ನಷ್ಟ ಗೊಳಿಸುವುದು. ಶಿವಸ್ತುತಿಮಂತ್ರದೊಡನೆ ಹೋಗತಕ್ಕ ಭಕ್ತಿರಸವು ಅಶುಭವನ್ನೆಲ್ಲ ಧ್ವಂಸಮಾಡುತ್ತದೆ. ಎಲ್ಲಾ ಮಾನವರಿಗೂ ಎಲ್ಲ ಇಷ್ಟಾರ್ಥವನ್ನು ಕೊಡತಕ್ಕವಾಗಿ ದೇವಾಲಯಗಳು ಶೋಭಿಸುವವು.

೩೭. ಅಲ್ಲಿಯ ದೇವಾಲಯಗಳಲ್ಲಿ ನಿತ್ಯಪೂಜೆ ವಿಶೇಷಪೂಜೆಗಳಿರುತ್ತವೆ. ನಿಯತವಾದ ಸಮಯದಲ್ಲಿ ಉತ್ಸವಗಳು, ಅರ್ಪಣೆಗಳು, ಹೋಮ, ದಾನದಂತಹ ಕಾರ್ಯಗಳು, ಶ್ರೇಷ್ಠವಾದ ಧರ್ಮಸಭೆ, ವೇದಶಾಸ್ತ್ರ ವಿಷಯದ ಗೋಷ್ಠಿಗಳು, ಸೇವೆಗಳು ಇರುತ್ತವೆ. ಜನರಿಗೆ ಸಾಹಿತ್ಯದಲ್ಲಿ ತಾಳಮದ್ದಳೆಯಲ್ಲಿ, ಗಾನದಲ್ಲಿ, ಕಾವ್ಯವಾಚನದಲ್ಲಿ, ಕೀರ್ತನೆಯಲ್ಲಿ ಆಸಕ್ತಿ ವಿಶೇಷವಾಗಿದ್ದು ಹೀಗೆ ದೇವಾಲಯಗಳಲ್ಲಿ ಸಮಾಜಕ್ಕೆ ಹಿತವಾಗತಕ್ಕ ಸಂಗತಿಗಳ ಸಮೂಹವಿರುತ್ತದೆ.

ಮ.ವಿ. ಒಸೆಯೊಳ್ ಮಂಗಳ ಗೀತ ವಾದ್ಯ ವರಘಂಟಾನಾದಮಲ್ಲಿಂ ಪ್ರಸಾ
ಸಲೆಟ್ಟಿತ್ತಖಿಳರ್ ಹರಿಸ್ಮರಣೆಯಂ ಶೌಚಾದಯಂ ಶುದ್ಧಿಯಂ
ಭಸಿತಾಲೇಪನ ಸಂಧ್ಯೆಯಂ ವಿನುತ ವೇದಾಭ್ಯಾಸ ಪಾಠಂಗಳಂ
ಪೊಸ ಮೆಚ್ಚಿಂ ತಳೆಯಲ್ಕದೇಂ ಪಿರಿದೊ ತಾತ್ಪರ್ಯಂ ಸದಾಚಾರದೊಳ್ ॥೩೮॥

ಉ.ಮಾ. ವೇದವನೋದುಗುಂ ಶುಭಕಥಾವಳಿಯಂ ಸಲೆ ಕಲ್ತುಮೀಶಪೂ
ಜಾದಿಯನೊಪ್ಪದಿಂ ನೆಗಟ್ಟುಮುತ್ತಮ ನೀತಿಯನಾಲಿಕುಂ ವಿಶು
ದ್ಧೋದಿತ ಮಾರ್ಗವರ್ತಿಯೆನಿಕುಂ ಸುಪುರಾಣಮನೊಲ್ದುಮೈತಿಹಾ
ಸಾದರಯುಕ್ತಮಕ್ಕುಮವನೀಬುಧಸಂತತಿಯಗ್ರಹಾರದೊಳ್ ॥೩೯॥

ಕಂದ॥ ಮೆಱೆಗುಂ ಕೊಳೆಯೊಳಸಹ್ಯಾ
ಪರಿಶುದ್ಧಿಯೊಳೆಯ್ದೆ ಪೊಲೆತನಂ ಮೈಲಿಗೆಯಾ
ಚರಣೆ ಜನ ವರ್ಣ ಜಾತಿಯ
ಕುಱುಪಲ್ಲಂ ಶುದ್ಧಿಯೇ ನಿಜಂ ಮಡಿಯವಱಿಕೊಳ್ ॥೪೦॥

೩೮. ಆ ದೇವಾಲಯಗಳಿಂದ ಉಷಃಕಾಲದಲ್ಲಿ ಮಂಗಳಗೀತಗಳ – ವಾದ್ಯಗಳ – ಶ್ರೇಷ್ಠವಾದ ಗಂಟೆಗಳ ನಾದವು ಪ್ರಸಾರವಾದೊಡನೆ ಜನರೆಲ್ಲರೂ ಎಚ್ಚರಗೊಂಡು ಹರಿಸ್ಮರಣೆಯನ್ನು ಶುಚಿತ್ವವನ್ನು ಶುದ್ಧತೆಯನ್ನು ಭಸ್ಮಲೇಪನ, ಸಂಧ್ಯಾವಂದನೆ, ವೇದಾಭ್ಯಾಸ ಪಾಠಗಳನ್ನು ಹೊಸ ಮೆಚ್ಚುಗೆಯಿಂದ ವಹಿಸಿಕೊಳ್ಳುವರು. ಹೀಗಿರುವಾಗ ಅಲ್ಲಿಯ ಜನರಿಗೆ ಸದಾಚಾರದಲ್ಲಿ ಅದೆಷ್ಟು ತತ್ಪರತೆಯೋ!

೩೯. ಬ್ರಾಹ್ಮಣ ಬೀದಿಯಲ್ಲಿರತಕ್ಕ ಬ್ರಾಹ್ಮಣರು ವೇದಪಠನ ಮಾಡುವರು. ಶುಭವಾದ ಕತೆಗಳನ್ನು ವಿಶೇಷವಾಗಿ ಕಲಿತುಕೊಳ್ಳುವರು. ಶಿವಪೂಜೆ ಮುಂತಾದುವನ್ನು ಯೋಗ್ಯರೀತಿಯಿಂದ ನೆರವೇರಿಸುವರು. ಉತ್ತಮ ನೀತಿ ಯಾವಕಡೆಯಿಂದ ಬಂದರೂ ಕಿವಿಗೊಟ್ಟು ಕೇಳುವರು. ಪರಿಶುದ್ಧವಾಗಿ ಮೂಡಿಬಂದ ಜೀವನಮಾರ್ಗವನ್ನು ಅನುಸರಿಸುವರು. ಒಳ್ಳೆಯ ಪುರಾಣವನ್ನು ಮೆಚ್ಚುವರು. ಇತಿಹಾಸವನ್ನು ಕೇಳುವುದರಲ್ಲಿ ಓದಿ ತಿಳಿಯುವುದರಲ್ಲಿ ಆದರವುಳ್ಳವರಾಗಿರುವರು.

೪೦. ಅವರಲ್ಲಿ ಹೊಲೆತನದ ಭಾವನೆಯಿರುವುದು ಕೊಳೆಯಲ್ಲಿ, ಅಸಹ್ಯವಾದ ಕೃತ್ಯದಲ್ಲಿ ಮತ್ತು ನೈರ್ಮಲ್ಯ ಹೀನತೆಯಲ್ಲಿ ಮಾತ್ರ. ಮೈಲಿಗೆ ಎಂಬುದು ಯಾವುದೇ ವರ್ಣದ ಅಥವಾ ಜಾತಿಯ ಚಿಹ್ನೆಯಲ್ಲ. ನೈರ್ಮಲ್ಯವೇ ಅವರಿಗೆ ನಿಜವಾದ 'ಮಡಿ' ಎನಿಸುವುದು.

ಮ.ಸ್ರ. ಭವನಂ ವ್ಯೋಮಕ್ಕೆ ನೀಳಂ ಪುರವಿಮಳಯಶಂ ಮೇರುಗಂ ನೀಳಮೊಗಳ್
ಸುವಿಲಾಸಂ ಭೂಷ್ಯಭಾವಂ ಸುಜನತೆಯೊಡಗೂಡಿರ್ದು ತಾಂ ನೀಳಮಾದ
ತ್ತು ವಿವೇಕಂ ಮುಕ್ತಿರಾಜ್ಯಸ್ಥಿತಿವರೆಗಿರೆ ನೀಳಂ ಪುರಂ ವರ್ಣಿಸಲ್ ನೀ
ಳವಮೇಯಂ ನೈಜಮಾಗಲ್ ಸಕಲ ಭುವನಮಂ ರಕ್ಷಿಪಂ ನೀಳಗಾತ್ರಂ ॥೪೧॥

ಶಾ.ವಿ. ದೇವಕಾಯೆನುತೆಯ್ದಿವಂದು ಮಱೆವೊಕ್ಕರ್ಗ್ಗಂ ನಿರಾತಂಕವ
ನ್ನೋವುತ್ತೀಯುತುಮುರ್ಕಿ ನಿಂದ ಪಗೆಗಿರ್ಚಂ ಕರ್ಚುತುಂ ಧರ್ಮದಿಂ
ತೀವುತ್ತುಂ ಜಗಮಂ ಸ್ವಭೋಗರಹಿತಸ್ವಾಮಿತ್ವಮಂ ತಾಳುತುಂ
'ನಾವಿಷ್ಣುಃ ಪೃಥಿವೀ ಪತಿಃ' ಎನಿಸುಗುಂ ಶ್ರೀದೇವಕೀನಂದನಂ ॥೪೨॥

ಎಂಬಲ್ಲಿಗೆ ಸತ್ವಾಲೋಕನ ಕಾವ್ಯದೊಳ್
ಮಂಗಲಾಚರಣೆ ದ್ವಾರಕಾವರ್ಣನಂ
ಪ್ರಥಮಾಶ್ವಾಸಂ

೪೧. ಆ ದ್ವಾರಕೆಯ ಮನೆಗಳು ಆಕಾಶದವರೆಗೂ ನೀಳವಾಗಿರುತ್ತವೆ. ಪಟ್ಟಣದ ನಿರ್ಮಲವಾದ ಕೀರ್ತಿ ಮೇರುಪರ್ವತಕ್ಕಿಂತಲೂ ನೀಳವಾದುದು. ಅಲ್ಲಿಯ ಬಾಹ್ಯ ಶೋಭೆ ತೊಡುಗೆಯ ಸೌಂದರ್ಯಭಾವವು ಸೌಜನ್ಯದಿಂದ ಕೂಡಿ ನೀಳವಾದುದು. ವಿವೇಕ (ತತ್ತ್ವವಿಚಾರ ಜ್ಞಾನವು) ಮೋಕ್ಷರಾಜ್ಯವಿರುವಲ್ಲಿವರೆಗೂ ನೀಳವಾದುದು. ಆ ಪಟ್ಟಣವು ವರ್ಣನೆಗೆ ಅಳತೆಮೀರಿದ ನೀಳವೆಂಬುದು ನಿಜವೆನಿಸಿರಲು ನೀಲಶರೀರನಾದ ಶ್ರೀಕೃಷ್ಣನು ಎಲ್ಲಾ ಲೋಕಗಳ ರಕ್ಷಣೆಯನ್ನು ಮಾಡುತ್ತಿರುವನು.

೪೨. ದೇವಾ, ಕಾಪಾಡು ಎಂದು ವಿಶೇಷವಾಗಿ ಬಂದು ಮರೆಹೊಕ್ಕವರಿಗೆ ಪ್ರೀತಿಯಿಂದ ಅಭಯವನ್ನು ಕೊಡುತ್ತಾ, ಸೊಕ್ಕೇರಿ ಎದುರು ನಿಂತ ಶತ್ರುಗಳೆಂಬ ಬೆಂಕಿಯನ್ನು ನೀರು ಹಾಕಿ ನಂದಿಸುತ್ತಾ ಲೋಕವನ್ನೇ ಧರ್ಮದಿಂದ ತುಂಬುತ್ತಾ ತಾನೇ ಅನುಭವಿಸದಿರುವ (ತ್ಯಾಗಯುಕ್ತವಾದ) ಒಡೆತನವನ್ನು ತಾಳುತ್ತಾ ದೇವಕೀಪುತ್ರನಾದ ಶ್ರೀಕೃಷ್ಣನು ವಿಷ್ಣುವಲ್ಲದವನು ಭೂಪತಿಯಲ್ಲ (ತಾನು ಸ್ವತಹ ಆದಿನಾರಾಯಣನು ಹೌದು) ಭೂಮಿಗೆ ಒಡೆಯನು ಹೌದು ಎಂದೆನಿಸಿದನು.

ಇಲ್ಲಿಗೆ ಪ್ರಥಮಾಶ್ವಾಸ ಮುಗಿಯಿತು.

*****

# ದ್ವಿತೀಯಾಶ್ವಾಸಂ

## (ವನ ವಿಹಾರ ವಿನೋದವರ್ಣನಂ)

ಕಂದ॥ ಶ್ರೀ ಮದ್ಯದುವಂಶಾಂಬುಧಿ
ಸೋಮಂ ಸದ್ಧರ್ಮಬೀಜನನುಪಮ ಶಾಂತಿ
ಪ್ರೇಮಂ ಸದ್ಗುಣಗಣನಿ
ಸ್ಸೀಮಂ ಶ್ರೀಕೃಷ್ಣದೇವನಸಮ ಪ್ರತಿಮಂ ॥೧॥

ಚಂ.ಮಾ. ರವಿಶಶಿಪಾವಕಾಕೃತಿಯನಾಂತುದು ಕೃಷ್ಣನ ಘೋರ ಶೌರ್ಯರೋ
ಚಿವಿತತಿ ದುಷ್ಟಜೀವಿ ಕುಮುದಾಂಬುಜಕಾನನಕೆಂದೆನಲ್ ಸುರೂ
ಪವಿಮಳತೇಜಮುಂ ಸುಡದೆ ಕೋಡದೆ ಪೊತ್ತದೆ ಕಾಂತಿಬೀರುವಾ
ರವಿಶಶಿ ಪಾವಕಾಕೃತಿಯದೆಂಬಿನಮೊಪ್ಪಿದನೇಂ ಮಹಾತ್ಮನೋ! ॥೨॥

ಮ.ಪು. ರಿಪುದೈತ್ಯಾನೀಕಮಂ ಬೆಂಬಿಡಿದು ಬಡಿಯುತೀಡಾಡುಗುಂ ವೈರಿಹೃತ್ತಂ
ವಿಪುಳಂ ಕೋಳ್ಗುಟ್ಟಿಕುಂ ಕುಂಕುಮತಿಲಕಮನಾ ಭಾಮಿನೀ ವಕ್ತ್ರದಿಂ ಕಿ
ಟ್ಟಿಪನೀತಂ ಮಾಡುಗುಂ ಮೇಣಮಿತಧನವ ಕೈಸಾರ್ಚುಗುಂ ಸಂತರಂ ಸೇ
ವಿಪ ಸಾಧುವ್ರಾತಮಂ ಸಂತಯಿಪ ಸುಗುಣದಿಂ ಕೃಷ್ಣದೇವಪ್ರಭಾವಂ ॥೩॥

೧. ಶ್ರೀಕೃಷ್ಣದೇವನು ಶ್ರೀಯುಕ್ತವಾದ ಯದುಕುಲವೆಂಬ ಸಮುದ್ರಕ್ಕೆ ಚಂದ್ರನಂತಿರುವವನು. ಸತ್ವರೂಪದ ಧರ್ಮಕ್ಕೆ ಬೀಜದಂತಿರುವವನು. ಹೋಲಿಸಲು ಸಾಧ್ಯವಿಲ್ಲದ ಶಾಂತಿಯನ್ನು ಪ್ರೀತಿಸುವವನು. ಒಳ್ಳೆಯಗುಣಗಳ ಸಮೂಹಕ್ಕೆ ಸೀಮಾತೀತನು. ತನಗೆ ಸಮಾನತೆಯೇ ಇಲ್ಲದ ಸ್ವರೂಪನಾಗಿರುವನು.

೨. ಶ್ರೀಕೃಷ್ಣನ ಶತ್ರುಗಳಿಗೆ ಭಯಂಕರವಾದ ಪರಾಕ್ರಮದ ಕಾಂತೀಯು ದುಷ್ಟಜೀವಿಗಳೆಂಬ ನೈದಿಲೆಗಳುಳ್ಳ ಮತ್ತು ತಾವರೆಗಳುಳ್ಳ ಸರೊವರಕ್ಕೆ ಸೂರ್ಯ–ಚಂದ್ರ–ಅಗ್ನಿ ಸ್ವರೂಪವಾಗಿದ್ದಿತು. (ನೈದಿಲೆಗೆ ಸೂರ್ಯನಂತೆ, ತಾವರೆಗೆ ಚಂದ್ರನಂತೆ). ಹೀಗಿರುವಾಗ ಅವನ ಸೌಂದರ್ಯದ ಕಾಂತಿಯೆಂಬುದು ಸೂರ್ಯನಂತೆ ಸುಡದಿರುವ ಬೆಂಕಿಯಂತೆ ಉರಿಯದಿರುವ ಕಾಂತಿಯನ್ನು ಬೀರುವ ಸೂರ್ಯ–ಚಂದ್ರ–ಅಗ್ನಿಗಳ ಆಕೃತಿಯದೆಂಬಂತೆ ಅವನು ಶೋಭಿಸಿದನು. ಅವನು ಅದೆಂತಹ ಮಹಾತ್ಮನೋ!

೩. ದೇವಸ್ವರೂಪನಾದ ಕೃಷ್ಣ ಶೌರ್ಯದ ಮಹಿಮೆ ಅಸಾಮಾನ್ಯ. ಅದು ಶತ್ರುಗಳಾದ ರಾಕ್ಷಸರ ಸಮೂಹವನ್ನು ಬೆನ್ನಟ್ಟಿ ಬಡಿದು ನೆಲಕ್ಕುರುಳಿಸುವುದು. ಶತ್ರುಗಳ ಎದೆಯನ್ನು ನಡುಗಿಸುವುದು. ಅಂತಹ ಶತ್ರುಗಳ ಹೆಂಡಿರ ಹಣೆಯ ಕುಂಕುಮಬೊಟ್ಟನ್ನು ಕಿತ್ತು ಇಲ್ಲದಂತೆ ಮಾಡುವುದು (ಎಂದರೆ – ಆವರಿಸಿ ವೈಧವ್ಯವನ್ನುಂಟು ಮಾಡುವುದು). ಅದಲ್ಲದೆ ಆ ಶತ್ರುಗಳ ಅಮಿತವಾದ ಐಶ್ವರ್ಯವನ್ನು ಸೆಳೆದು ಬಿಡುವುದು. ಸಜ್ಜನರ ಸೇವೆಯನ್ನು ಮಾಡುವುದು. ದುರುಳರಿಂದ ಪೀಡಿತರಾದ ಸಾಧುಜನರ ಸಮೂಹವನ್ನು ತನ್ನ ಒಳ್ಳೆಯ ಗುಣಗಳ ಮೂಲಕ ಸಂತಯಿಸುವುದು.

ಕಂದ॥ ನಾಗನ ಸಂತಯಿಕುಂ ದಿ
ಙ್ನಾಗಂಗಳ ತಣಿಸಿಯಾವೆ ಬೆನ್ನೊತ್ತುಗಳಂ
ಬೇಗಂ ಸಡಿಲಿಸಿ ನಾಕದ
ಲೋಗರನುಱೆ ಹರಿಸವಡಿಕುಮವನ ಪ್ರಭಾವಂ ॥೪॥

ವಸುಧೆಯ ಭರವಿಳಿಸಲ್ಕೆ ಗಿ
ರಿಸನಾಣತಿಯಿಂದೆ ಪುಟ್ಟಿಯೀ ಹರಿ ದುರುಳ
ಪ್ರಸರವಟಿಸುವೆನೆನುತುಂ
ನಿಸದಂ ಪೇೞ್ವಲ್ಲಿ ಸಂದೆಯಂ ಬಂದಪುದೇ? ॥೫॥

ಚಂ.ಮಾ. ಮುಳಿಸಿನ ಮಾತು ನೀರ ಬರೆಪಂ ಪುಸಿ ಮೋಸದ ಕಾಡು ವಹ್ನಿಸಂ
ಮಿಳಿತಮಯೋಗ್ಯತಾ ನಳಿನ ಮಿಂದುಕರಾನ್ವಿತಮಡ್ಡ ಕೊಯ್ದು ದಾ
ಕಳವಿನ ದಾಂಟುವಳ್ಳಿ ರುಜೆಯೆಂಬಿರುಳರ್ಕನಿದಿರ್ ವಿವಾದದಾ
ಕುಳಗೃಹಕಂಬರಂ ನೆಲೆಯೆನಲ್ ನೆಲನೊಪ್ಪಿತು ಶೌರಿಯಂಕೆಯಿಂ ॥೬॥

೪. ಅಷ್ಟೇಅಲ್ಲ ಅವನ ಪ್ರಭಾವವು ಈ ಭೂಮಿಯನ್ನು ಹೊತ್ತಿರುವ ಆದಿಶೇಷನಿಗೆ ಭೂಭಾರವನ್ನು ತಗ್ಗಿಸುವ ಮೂಲಕ ಸಾಂತ್ವನವನ್ನು ನೀಡುವುದು. ದಿಗ್ಗಜಗಳನ್ನು ಸಮಾಧಾನ ಪಡಿಸಿ; ಭೂಮಿಯನ್ನು ಹೊತ್ತಿರುವ ಕೂರ್ಮನ ಬೆನ್ನಿನ ಭಾರವನ್ನು ಬೇಗನೆ ಕಡಮೆ ಮಾಡಿ ಸ್ವರ್ಗವಾಸಿಗಳನ್ನು ವಿಶೇಷವಾಗಿ ಸಂತೋಷಪಡಿಸುವುದು.

೫. ಈ ಕೃಷ್ಣನು ಭೂಭಾರವನ್ನು ತಗ್ಗಿಸುವುದಕ್ಕಾಗಿ, ಲಯಕರ್ತೃವಾದ ಶಿವನಿಂದ ಅಪ್ಪಣೆಯನ್ನು ಪಡೆದು, ಭೂಲೋಕದಲ್ಲಿ ಜನ್ಮತಾಳಿ ದುಷ್ಟರ ಸಮೂಹವನ್ನು ನಾಶಪಡಿಸುವನು. ಹೀಗೆ ನಿಜದ ಸಂಗತಿಯನ್ನು ಹೇಳುವಾಗ ಯಾರಿಗಾದರೂ ಸಂದೇಹ ಬರುವುದುಂಟೆ?

೬. ಶೂರವಂಶಜನಾದ ಶ್ರೀಕೃಷ್ಣನ ಅಧಿಕಾರವ್ಯಾಪ್ತಿಯಿಂದಾಗಿ – ಲೋಕದಲ್ಲಿ ಕೋಪದ ಮಾತು ಜಲಲಿಪಿ ಎಂಬಂತಾಯಿತು (ಇಲ್ಲವಾಯಿತು). ಸುಳ್ಳು, ಮೋಸ ಎಂಬ ಕಾಡು ಸುಟ್ಟುಹೋಯಿತು. ಅಯೋಗ್ಯತೆ ಎಂಬ ತಾವರೆ ಬೆಳ್ದಿಂಗಳಿಂದ ಕೂಡಿತು. ಕಳವು ಎಂಬ ಹಬ್ಬುವ ಬಳ್ಳಿ ಅಡ್ಡ ಕತ್ತರಿಸಿದುದಾಯಿತು (ಮುಂದೆ ಹರಿಯದಾಯಿತು). ರೋಗವೆಂಬ ಕತ್ತಲು ಸೂರ್ಯನಿದಿರಾಯಿತು. ವಿವಾದವೆಂಬ ಕುಟುಂಬದ ಮನೆಗೆ ನೆಲೆ ಆಕಾಶವೆನಿಸಿತು (ನೆಲೆಯಿಲ್ಲವಾಯಿತು). ಹೀಗೆ ಈ ಭೂಲೋಕವು ಶೋಭಿಸಿತು.

ಮ.ವಿ. ಪ್ರಿಯಭಾವಂ ಪರಮೋಪಕಾರಮರಿರಾಹಿತ್ಯಂ ಮನಸ್ಸಯಮಂ
ನಯವಾಕ್ಯಂ ಗುರುದೇವತಾನುರತಿಯುಂ ಜ್ಞಾನಂ ಶತಂ ಸತ್ಯಮುಂ
ದಯೆ ದಾನಂ ಧೃತಿ ಶುದ್ಧಿ ಶೌರ್ಯಗುಣಮಾತ್ಮೀಯತ್ವಮೆಂಬೀ ಗುಣೋ
ದಯದಿಂ ವರ್ಣಿತರಾಗಿ ಲೊಗರೆಸೆವರ್ ಶ್ರೀ ಕೃಷ್ಣಮಾಹಾತ್ಮ್ಯದಿಂ ॥೭॥

ಕಂದ॥ ನಿಯಮಿತ ತೇಜೋಮಾರ್ಗ ಸ
ಮಯದಿಂ ರವಿ ನಿತ್ಯವೃತ್ತ ನಿರ್ಪಂತೆಪ್ರಜಾ
ಚಯಮೆಲ್ಲಂ ನಿತ್ಯನಿಯಮ
ನಿಯತರುಮಾಕಾಂತ ಭಕ್ತಿಮಾರ್ಗಾಕ್ರಾಂತರ್ ॥೮॥

ಪಕ್ಷವನಾನದವರ್ ಶಶಿ
ಪಕ್ಷಯುಗದೆ ಶುಕ್ಲಪಕ್ಷಮದನನುಕರಿಸು
ತ್ತಕ್ಷಯ ಕಳೆವಡೆಯುತೆ ತ
ಮ್ಮಕ್ಷದೊಳಾ ಕೃಷ್ಣಪಕ್ಷಮಂ ಪಿಡಿದಿರ್ಪರ್ ॥೯॥

೭. ಶ್ರೀಕೃಷ್ಣನ ಮಹತ್ತ್ವ ಅದೆಷ್ಟೆಂದರೆ – ಲೋಕದ ಜನರಲ್ಲಿ ಪ್ರೀತಿಯ ಭಾವನೆ, ಪರೋಪಕಾರಕ್ಕಿಂತಲೂ ಶ್ರೇಷ್ಠವೆನಿಸುವ ಪರಮೋಪಕಾರ, ಶತ್ರುಗಳಿಲ್ಲದಿರುವಿಕೆ. ಮನಸ್ಸಿನ ಹತೋಟಿ, ಮೃದುವಾದ ಮಾತುಗಾರಿಕೆ, ಗುರುಗಳಲ್ಲಿಯೂ ದೇವರಲ್ಲಿಯೂ ಅನುರಾಗ, ಜ್ಞಾನ, ತಪಸ್ಸು, ಸತ್ಯ, ದಯಾಗುಣ, ದಾಸಗುಣ, ಸ್ಥಿರಬುದ್ಧಿ, ಶುಚಿತ್ವ, ಪರಾಕ್ರಮ, ಆತ್ಮೀಯತೆ ಎಂಬೀ ಗುಣಗಳೇ ಮೂಡಿಬರುತ್ತಿರುವುದೆಂದು ವರ್ಣಿತರಾಗಿ ಶೋಭಿಸುವರು!

೮. ಸೂರ್ಯನು ನಿಯಮಿತವಾದ ತೇಜಸ್ಸಿನಿಂದ, ಮಾರ್ಗದಿಂದ (ಉತ್ತರಾಯನ ದಕ್ಷಿಣಾಯನಗಳಿಂದ) ಮತ್ತು ಸಮಯಬದ್ಧತೆಯಿಂದ ತನ್ನ ನಿತ್ಯವೃತ್ತಿಯನ್ನಿಟ್ಟುಕೊಂಡಿರುವಂತೆ, ಪ್ರಜೆಗಳೆಲ್ಲರೂ ತಮ್ಮ ನಿತ್ಯ ನಿಯಮಗಳಲ್ಲಿ ತತ್ಪರರಾಗಿದ್ದು (ಮಾಕಾಂತ=ಹರಿ, ಉಮಾಕಾಂತ = ಹರ) ಹರಿಹರಭಕ್ತಿ ಮಾರ್ಗವನ್ನು ಹಿಡಿದಿರುತ್ತಾರೆ.

೯. ಶ್ರೀಕೃಷ್ಣನ ಪ್ರಜೆಗಳು ಪಕ್ಷಪಾತವುಳ್ಳವರಲ್ಲ ಅಥವಾ ಆ ಪಕ್ಷ ಈ ಪಕ್ಷ ಎಂಬ ರಾಜಕೀಯ ಪಕ್ಷಕಟ್ಟಿಕೊಂಡಿರುವವರಲ್ಲ; ಕೇವಲ ನ್ಯಾಯನಿಷ್ಠರು. ಆದರೆ ಚಂದ್ರನ ವೃದ್ಧಿ ಕ್ಷಯಗಳಿರುವ ಎರಡು ಪಕ್ಷಗಳಲ್ಲಿ ಒಂದಾದ ಶುಕ್ಲಪಕ್ಷವನ್ನು ಅನುಕರಿಸುತ್ತ ಕ್ಷಯವಿಲ್ಲದಿರತಕ್ಕ ಕಾಂತಿಯನ್ನು ತಾಳಿಕೊಂಡಿರುವರು. ಚಂದ್ರನು ಕ್ಷೀಣಗೊಳ್ಳುವ ಕೃಷ್ಣಪಕ್ಷದಂತೆ ವರ್ತಿಸರು. ಆದರೆ ತಮ್ಮ ಬದುಕಿನ ಅಚ್ಚಿನಲ್ಲಿ (ನೆಲೆಯಲ್ಲಿ) ಕೃಷ್ಣನ ಪಕ್ಷವನ್ನು (ಕೃಷ್ಣನಲ್ಲಿ ಅಚಲವಾದ ಭಕ್ತಿಯನ್ನು) ವಹಿಸಿಕೊಂಡಿರುತ್ತಾರೆ.

ಹದಿಬದೆ ಪೆಣ್ ಸಂಯಶ ಬೆ
ತ್ತದಂ ಪುರುಷನುತ್ತಮೌ ಜಸಂಜನಮಾನ್ಯಂ
ಮುದದಂ ಬಾಲಂ ಗುರುಜನ
ವಿಧೇಯನುಂ ರಾಷ್ಟ್ರಭಕ್ತನಿರ್ಪಂ ಕುವರಂ ॥೧೦॥

ಇಳೆಗಭಿನುತಮೆನೆ ಸುಗುಣಾ
ವಳಿಯುಂ ಕೃಷ್ಣಪ್ರಜಾಜನವನೇ ಸಾರ್ಗುಂ
ಜಳಧಿಯ ಜಳಮೆನಿತಿರೆಯುಂ
ತಿಳಿಗೊಳದೊಳೆ ಬೆಳೆವುದಲ್ತೆ ಸಲೆ ನಳಿನಕುಳಂ ॥೧೧॥

ಬತ್ತದು ಕೆಜಿ಼ ಪೊತ್ತದು ಮನೆ
ಬತ್ತದ ತೆನೆ ಮುತ್ತದೆತ್ತಲಾದೊಡಮೆಂದುಂ
ಕುತ್ತಂ ತಲೆಯೆತ್ತದೆನಲ್
ಮತ್ತಿನ ನಾಡಿಂತುಟಲ್ತೆನಲ್ ನಾಡೆಸೆಗುಂ ॥೧೨॥

ಚಂ.ಮಾ. ಪಥವಿಡಿದಲ್ಲಿಯಲ್ಲಿ ಪೊಸ ಬಾಟಿ಼ಯ ತೆಂಗಿನ ಕೌಂಗುದೋಂಟದಿಂ
ಪೃಥುಳ ಕುಜಾಳಿಯಿಂ ಕಿಸಲಯಾಳಿಯ ಸೋಬೆಯ ಕಾಪುಗಾಡಿನಿಂ
ಮಥಿಸಿದ ಚೆಲ್ವಿನಿಂದೆಸೆವ ವಾರಿಜಷಂಡದಿನೊಪ್ಪಿ ತೋರ್ಪ ಮ
ನ್ಮಥನ ಧನುರ್ವನಂಗಳಿನದೇಂ ಸೊಬಗೊಪ್ಪಿತೊ ನಾಡೆ ನಾಡಿನಾ ॥೧೩॥

೧೦. ಮದುವೆಯಾದ ಸ್ತ್ರೀ ಪತಿವ್ರತೆಯಾಗಿರುತ್ತಾಳೆ. ಪುರುಷನು ಸಂಯಮವುಳ್ಳವನು ಮತ್ತು ಒಳ್ಳೆಯ ತೇಜೋವಂತನೂ ಜನರ ಮನ್ನಣೆಗೆ ಪಾತ್ರನೂ ಆಗಿರುತ್ತಾನೆ. ಬಾಲಕನು (ಎಳಮಗುವು) ಇತರರಿಗೆ ಸಂತೋಷಪ್ರದನು.

೧೧. ಲೋಕಕ್ಕೆ ಪ್ರಶಂಸನೀಯವಾದ ಸದ್ಗುಣಗಳ ಸಮೂಹವು ಶ್ರೀಕೃಷ್ಣನ ಪ್ರಜೆಗಳಾದ ಜನ ಸಮೂಹವನ್ನೇ ಸೇರಿಕೊಂಡಿರುವುದು. ಅದು ಹೇಗೆಂದರೆ – ಸಮುದ್ರದಲ್ಲಿ ಅದೆಷ್ಟು ನೀರಿದ್ದರೂ ತಾವರೆಯ ಸಮೂಹವು ವಿಶೇಷವಾಗಿ ತಿಳಿಗೊಳದಲ್ಲೇ ಬೆಳೆಯುವುದಲ್ಲವೆ?

೧೨. ಆ ನಾಡಿನಲ್ಲಿ ಕೆರೆಗಳು ಬತ್ತಿ ಹೋಗವು, ಮನೆಗಳು ಸುಟ್ಟುಹೋಗವು, ಗದ್ದೆಗಳಲ್ಲಿ ಬತ್ತದ ತೆನೆಗಳು ಯಾವಾಗಲೂ ಇರುತ್ತವೆ. ಜನರಿಗೆ ರೋಗವು ಎಂದಿಗೂ ಕಾಣಿಸದು. ಬೇರೆ ಯಾವ ನಾಡೂ ಈ ರೀತಿಯಾಗಿ ಇರದು ಎಂಬಂತೆ ಆ ನಾಡು ಶೋಭಿಸುವುದು.

೧೩. ಆ ನಾಡಿನೊಳಗಣ ದಾರಿದಾರಿಗಳ ಬದಿಯಲ್ಲಿ ಇರುವ ಹೊಸತಾದ ಬಾಳೆ – ತೆಂಗು – ಕೌಂಗುಗಳ ತೋಟಗಳಿಂದಲೂ ದಪ್ಪಗಾದ ಮರಗಳ ಸಮೂಹದಿಂದಲೂ ಚಿಗುರಿನ ಸಮೂಹದ ಶೋಭೆಯುಳ್ಳ ಕಾಪುಗಾಡಿನಿಂದಲೂ ಅತಿಶಯವಾದ ಸೊಗಸಿನಿಂದ ಶೋಭಿಸುವ ಸರೋವರದಿಂದಲೂ. ಸೊಗಸಾಗಿ ಕಾಣಿಸುವ ಕಬ್ಬಿನ ತೋಟಗಳಿಂದಲೂ ಆ ನಾಡಿನ ಸೊಬಗು ವಿಶೇಷವಾಗಿ ಅದೇನು ಶೋಭೆ ಬೀರುತಿದ್ದಿತೋ!

**ದ್ಯ ॥ ಅಂತು ನಾಡುಂ ಬೀಡುಮೆಸೆದಿರೆ – ಆ ಚಕ್ರಿ ಅರಮೆ ವಿನೋದ ಭಾವೋದಯನಪ್ಪುದಱಿಂ ವಿವಿಧ ಪಲ್ಲವ ಪುಷ್ಪ ಫಲ ಭಾರ ಸಂಗತ ತರುವೀರುತ್ ಪ್ರಕರ ಪರಿರಂಜಿತ ನಂದನವನಂಗಳೊಳುಚಿತ ಪರಿಮಿತ ಸತೀನಿಚಯಸಂಯುತಂ ವಿಹರಿಪಂ – ಸರಸ ವಿನಯ ವಿಜಯ ವಿಭೂಷಿತ ವಿದ್ವಜ್ಜನ ವಿಲಸಿತ ಸಭಾಮಧ್ಯದೊಳುರು ರುಚಿರ ವಚಃ ಕೌಶಲದಿಂ ಪೊಸದೇಸೆಯ ನುಡಿಕಾಱನೆನಿಪಂ ಸುಜನ ಜಗಜ್ಜನ ಹಿತಕಾರ್ಯ ಪರಂಪರಾ ನಿರತ ಲೀಲೆಯಿಂದೆ ಲೋಕಕಲ್ಯಾಣಕಾರನೆನಿಪಂ –ಆಸನ್ನಖಿನ್ನ ಜನರಂ ಪರಿಪೂರ್ಣ ಮೈತ್ರಿಯಿಂದೆ ಸಂಭಾವಿಪುದಱಿಂ ಕುಶಲಪ್ರಿಯನೆನಿಪಂ – ರಾಕ್ಷಸ ಶರೀರ ಗಿರಿಪ್ರಭೇದನ ಪ್ರಬಲ ಶಂಬಾಯುಧನೆನಿಸಿ ಖಳಾರಿಯೆನಿಪಂ – ಸ್ವಪ್ರತಿಜ್ಞಾ ಪರಿಪಾಲನಾಣನುಕೂಲ ಕಾರ್ಯೋನ್ನತ ಜಯಭಾಮಿನೀಸೇವಿತನಾಗಿ ಸತ್ಯವ್ರತನೆನಿಪಂ – ಮೇಣಾ ಶಾಂರ್ಗಧನ್ವಂ ಕೌಮೋದಕೀ ಗದಾಯುಧಂ ಪಾಂಚಜನ್ಯ ಶಂಖಿಸ್ವನ ಪ್ರಸಾರ ಸಾರ ಪ್ರಪಂಚಂ, ವಿಸ್ತಾರ ಕ್ಷೀರವಾರಾಶಿ ಡಿಂಡೀರ ಪಿಂಡ ಪಾಂಡುರ ಯಶಂ, ನಾರಾಯಣ ಶಿವ ಸ್ವರೂಪಂ , ಜ್ಞಾನಾನಂದಮಯಂ, ಸಾಂಸಾರಿಕಾಕಾರಂ, ಪಂಚ ಪಾಂಡವಸ್ನೇಹ ಮಂಡಿತ ಹೃನ್ಮಂಡಪಂ, ಪರಿಣಿತಾನೇಕ ಪ್ರಮದಾನೀಕ ಸಮಮುದಪ್ರದಂ ಬಲರಾಮಾಗ್ರ ಪ್ರತಿಷ್ಠಾನಿರತ ಸಹೋದರಂ, ಶ್ರೀಕೃಷ್ಣಂ ಸುದರ್ಶನಕರಂ ಸುದರ್ಶನಕರನಾಗಿ ದ್ವಾರಾವತೀರಾಜಧಾನಿಯೊಳ್ ವಿರಚಿಸುತ್ತಿರ್ಪನ್ನೆಗಂ–**

(ಗದ್ಯ) ಆ ರೀತಿಯಾಗಿ ದ್ವಾರಕೆಯ ನಾಡೂ ಜನರ ಬೀಡೂ ಶೋಭಿಸುತ್ತಿರಲು ಆ ಶ್ರೀಕೃಷ್ಣನು ಸ್ವಲ್ಪ ಮಟ್ಟಿಗೆ ವಿನೋದದ ಮನೋಭಾವ ಮೂಡುತ್ತಿರುವವನಾದುದರಿಂದ ಬಗೆಬಗೆಯ ಚಿಗುರು ಹೂಹಣ್ಣುಗಳ ಭಾರದಿಂದ ಕೂಡಿದ ಮರಬಳ್ಳಿಗಳ ಸಮೂಹದಿಂದ ಶೋಭಾಯಮಾನವಾದ ಇಂದ್ರನ ಉದ್ಯಾನದಂತಿರುವ ಬನಗಳಲ್ಲಿ ಉಚಿತವೂ ಪರಿಮಿತವೂ ಆದ ಪತ್ನಿಯರ ಸಮೂಹದಿಂದ ಕೂಡಿದವನಾಗಿ ತಿರುಗಾಡುವನು. ರಸಿಕತೆಯಿಂದ ಕೂಡಿ ವಿನಯಗುಣದಿಂದ ಅಲಂಕೃತರಾದ ವಿದ್ವಾಂಸರಿಂದ ಶೋಭಾಯಮಾನವಾದ ಸಭೆಯ ನಡುವೆ ಬಹಳ ಮಧುರವಾದ ಮಾತಿನ ಕುಶಲತೆಯಿಂದ ಹೊಸ ದೇಸಿಯ ಮಾತುಗಾರನೆನಿಸುವನು. ಸುಜನರಾದ ಲೊಕದ ಜನರಿಗೆ ಹಿತಕರವಾದ ಕಾರ್ಯಗಳ ಸಮೂಹದಲ್ಲಿ ತತ್ಪರವಾದ ಕ್ರೀಡೆಯಿಂದ ಲೋಕಕಲ್ಯಾಣವನ್ನು ಮಾಡುವಾತನೆನಿಸುವನು. ತನ್ನ ಬಳಿಗೆ ಬಂದ ದುಃಖಿತ ಜನರನ್ನು ತುಂಬಿದ ಗೆಳೆತನದಿಂದ ಆದರಿಸುವುದರಿಂದ ಕುಶಲಪ್ರಿಯನು (ಇತರರ ಕ್ಷೇಮದಲ್ಲಿ ಪ್ರೀತಿಯುಳ್ಳವನು) ಎನಿಸುವನು. ಅಸುರರ ದೇಹವೆಂಬ ಬೆಟ್ಟವನ್ನು ಸೀಳತಕ್ಕ ಬಲಿಷ್ಠ ವಜ್ರಾಯುಧನೆನ್ನಿಸಿ, ರಾಕ್ಷಸರ ವೈರಿಯೆನಿಸುವನು. ತಾನು ಮಾಡಿದ ಪ್ರತಿಜ್ಞೆಯನ್ನು ಈಡೇರಿಸುವುದಕ್ಕೆ ಅನುಕೂಲವಾಗುವ ಕಾರ್ಯದಿಂದ ಶ್ರೇಷ್ಠ ವಿಜಯಾಂಗನೆಯ ಸೇವೆಯನ್ನು ಕೈಗೊಳ್ಳುವವನಾಗಿ ಸತ್ಯವ್ರತವುಳ್ಳವನೆನಿಸುವನು. ಅದಲ್ಲದಾ ಆ ಶಾಂರ್ಗವೆಂಬ ಬಿಲ್ಲನ್ನು ಧರಿಸಿದಂತಹ, ಕೌಮೋದಕೀ ಎಂಬ ಗದೆಯನ್ನು ಆಯುಧವನ್ನಾಗಿ ಮಾಡಿಕೊಂಡ, ಪಾಂಚಜನ್ಯವೆಂಬ ಶಂಖಧ್ವನಿಯನ್ನು ಪ್ರಪಂಚದಲ್ಲಿ

ಮ.ಪ್ರ ವನದೊಳ್ ಕೇಕೀಸ್ವನಂ ಪುಷ್ಪವಿತತಿಯೊಳಳಿನೀ ನಿಸ್ವನಂ ಕೋಕಿಲಾಳೀ
ನಿನದಂ ಚೂತಾವನೀ ಜಾವಳಿಯೊಳಚಲ ಸಾನ್ವಂತದೊಳ್ ಕಿನ್ನರೀ ಕಾ
ಮಿನಿಯಿಂ ಗೀತಾರವಂ ಸಾರಸಕುಳ ಕಳಕೂಜದ್ರವಂ ನೀರಜಾತೋ
ದ್ವನದೊಲ್ ರಂಜಿಪ್ಪಿನಂ ರಂಜಿಸುದಿದತನುಸಂತೋಷವಂಶಂ ವಸಂತಂ ॥೧೪॥

ಪ್ರಸಾರ ಮಾಡುವವನಾದ, ವಿಶಾಲವಾದ ಹಾಲಿನ ಕಡಲಿನ ನೊರೆಯ ಪಿಂಡದಂತೆ ಬೆಳ್ಳಗಿನ ಕೀರ್ತಿಯುಳ್ಳವನಾದ, ಹರಿಹರ ಎಂಬೆರಡು ರೂಪದವನಾದ, ಜ್ಞಾನ ಆನಂದದಿಂದ ವ್ಯಾಪ್ತನಾದ, ಸಾಂಸಾರಿಕರ ರೂಪದಲ್ಲಿರತಕ್ಕ, ಪಂಚಪಾಂಡವರ ಮೇಲಣ ಸ್ನೇಹದಿಂದ ಅಲಂಕೃತವಾದ ಹೃದಯಮಂಟಪವುಳ್ಳ, ತಾನು ವಿವಾಹವಾದ ಅನೇಕ ಸ್ತ್ರೀಯರ ಸಮೂಹಕ್ಕೆಲ್ಲ ಸಮಾನವಾದ (ಹೆಚ್ಚು ಕಡಿಮೆಯಿಲ್ಲದ) ಸಂತೋಷವನ್ನು ಕೊಡುವವನಾದ, ಅಣ್ಣನಾದ ಬಲರಾಮನನ್ನೇ ಪ್ರತಿಷ್ಠೆಗೆ ಏರಿಸುವುದರಲ್ಲಿ ತತ್ಪರನಾದ ಸಹೋದರನಾದ ಶ್ರೀಕೃಷ್ಣನು ಸುದರ್ಶನವನ್ನು ಕೈಯಲ್ಲಿ ಧರಿಸಿದವನಾಗಿ ಇತರರಿಗೆ ಒಳ್ಳೆಯ ದರ್ಶನವನ್ನು ಕೊಡತಕ್ಕವನಾಗಿ ದ್ವಾರಾವತಿಯ ರಾಜಧಾನಿಯಲ್ಲಿ ಶೋಭಿಸುತ್ತಿದ್ದನು. ಹೀಗಿರಲು –

೧೪. ಕಾಡಿನಲ್ಲಿ ನವಿಲುಗಳ ಕೂಗಾಟದ ಸ್ವರವೂ, ಹೂಗಳ ಸಮೂಹದಲ್ಲಿ ಹೆಣ್ಣು ತುಂಬಿಗಳ ಸ್ವರವೂ ಮಾವಿನ ಮರಗಳ ಸಮೂಹದಲ್ಲಿ ಕೋಗಿಲೆಗಳ ಹಿಂಡಿನ ಸ್ವರವೂ ಬೆಟ್ಟಗಳ ತಪ್ಪಲುಗಳೆಡೆಯಲ್ಲಿ ಕಿನ್ನರ ಸ್ತ್ರೀಯರು ಹಾಡುವ ಹಾಡಿನ ಸ್ವರವೂ ತಾವರೆ ಕೊಳಗಳಲ್ಲಿ ಹಂಸಗಳ ಸಮೂಹವು ಇಂಪಾಗಿ ಹಾಡುವ ಸ್ವರವೂ ಶೋಭಾಯಮಾನ ವಾಗಿರಲು ಮನ್ಮಥನ ಸಂತೋಷಕ್ಕೆ ಕಾರಣವಾದ ವಸಂತ ಋತು ಶೋಭಿಸಿತು.

ಮ.ವಿ. ಅಣೆದೇಂ ತೀಡಿತೊ ಜೀವಸಂಕುಲ ಮಹೋಲ್ಲಾಸಪ್ರದಂ ನೇಹದಿಂ
ಪೋಣರ್ದಾಗಳ್ ಗೆಡೆವಕ್ಕಿಗಳ್ ಕೊಳನೊಳತ್ತಲ್ ಪೊಣ್ಮಿದಾ ಸೂಕ್ಷ್ಮವಾಃ
ಕಣದಿಂ ತಂದ ಸುಗಂಧ ವೃಕ್ಷಗಳ ಕಂಪಂ ಮಾರುತುಂ ಮಾರುತಂ ||೧೫||

ಕಂದ|| ಉತ್ತರ ಸತಿಯಂ ರವಿಯನು
ರಕ್ತತೆಯಿಂ ಸೇರ್ದೊಡವನ ಸೆಳೆಯಲ್ ಸೇವೋ
ದ್ಯುಕ್ತತೆ ತೆಂಕಣವೆಣ್ಣಿದು
ಬಿತ್ತರದಿಂ ಗಾಳಿ ಕೀಟಮಾಗಿರವೇಟ್ಕುಂ ||೧೬||

ನಳಿನಾಪ್ತಂ ಕಡುಗದಿರಂ
ತಳೆದಿರೆ ಕಡು ಸೊಂಪುಗಂಪಿನಿಂ ನಳಿನಂ ನೀ
ರ್ಗೊಳದೊಳ್ ಮೆಱೆಗುಂ ಪೊಸತೆನ
ಲಿಳೆಯೊಳ್ ಹದಿಬತೆಯ ದಮ್ಮವಿಂತಿರವೇಡಾ? ||೧೭||



೧೫. ಆಗ ಚಂಡಮಾರುತವು ಬೀಸಿತು. ಅದು ಜೀವಸಮೂಹಕ್ಕೆ ಹೆಚ್ಚಿನ ಉಲ್ಲಾಸವನ್ನು ಕೊಡತಕ್ಕ ಗಾಳಿಯಾಗಿದ್ದು, ಚಕ್ರವಾಕಗಳೆಂಬ ಜೊತೆ ಹಕ್ಕಿಗಳು ಪರಸ್ಪರವಾಗಿ ಗೆಳೆತನದಿಂದ ಹೋರಾಡುವಾಗ ಕೊಳದಲ್ಲಿ ಹೊರಹೊಮ್ಮಿದ ಚಿಕ್ಕದಾದ ನೀರಿನ ಹನಿಗಳನ್ನೂ ನೀರಿನ ಕಂಪಿನ ಗುಣವನ್ನೂ ದಕ್ಷಿಣ ದಿಕ್ಕಿನಿಂದ ತಂದ ಪರಿಮಳದ(ಗಂಧದ) ಮರಗಳ ಪರಿಮಳವನ್ನು ಅಣೆದು ಮಾರಾಟ ಮಾಡುತ್ತಾ (ಮಾಂದ್ಯ, ಶೈತ್ಯ, ಸೌಗಂಧ – ಎಂಬ ಮೂರು ಗುಣಗಳಿಂದ ಕೂಡಿದ ಗಾಳಿ) ಹೇಗೆ ಬೀಸಿತೋ!

೧೬. ಸೂರ್ಯನಿಗೆ ಉತ್ತರ ದಕ್ಷಿಣ ಎಂಬ ಇರ್ವರು ದಿಗಂಗನೆಯರು ವಸಂತಕಾಲ ಉತ್ತರಾಯಣ. ಹೀಗಿರಲು ಸೂರ್ಯನು ಉತ್ತರ ದಿಕ್ಕೆಂಬ ಸತಿಯ ಮೇಲೆ ಅನುರಾಗ ತಾಳಿ ಆಕೆಯನ್ನು ಸೇರಿಕೊಂಡಾಗ, ಅವನನ್ನು ಈ ಕಡೆಗೆ ಸೆಳೆಯಲಿಕ್ಕಾಗಿ, ಅವನ ಸೇವೆಯ ಉದ್ಯೋಗವನ್ನು ಹೀಗೆ ಈ ದಕ್ಷಿಣದಿಕ್ಕೆಂಬ ಸ್ತ್ರೀಯು ಕೈಗೊಂಡಿರುವುದಾಗಿ ಈ ತೆಂಗಾಳಿ ಬೀಸುವಿಕೆಯಾಗಿರಬಹುದು.

೧೭. ತಾವರೆಯ ಗೆಳೆಯನಾದ ಸೂರ್ಯನು ಬಹಳ ಪ್ರಕಾಶವನ್ನು ಹೊಂದಿರುವಾಗ, ತಾವರೆಯು ಕೊಳದಲ್ಲಿ ಇದು ಹೊಸತೆಂಬಂತೆ ಹೆಚ್ಚಿನ ಸೊಗಸಿನಿಂದಲೂ ಪರಿಮಳದಿಂದಲೂ ಮೆರೆಯುವುದು. ಲೋಕದಲ್ಲಿ ಪತಿವ್ರತಾಧರ್ಮವು ಹೀಗಿರಬೇಡವೆ?

ಗದ್ಯ॥ ಮತ್ತಂ ತಂಗದಿರಂಗೆ ಸೊದೆವೆಳಗಂ ಪೆರ್ಚಿಸಿ, ಮತ್ತಚಕೋರಂಗಳ್ಗೆ ನಲ್ಪಿರ್ದನಿಕ್ಕಿಯುಂ – ಸವಟ್ಟಡೆಯ ಜಡಜಾಪ್ತದೀಪ್ತಿಯಿಂ ಪೊಮ್ಮೆಯ್ಯಾಂತು ಸುತ್ತಿ ತಿರುಂಗಿ ರಯ್ಯನೆ ಪಾಡಿ ಬಂದರೆಮುಗುಳ ಕುಡಿಯನೊಡೆಯಿಸಿ ಪೂವುಡಿಯ ಕಡೆಯಂ ಕಡೆಗಣ್ಚಿ ನುರ್ಗುವ ಜೇಂಗುಡಿಗಗಡಣಕ್ಕೆ ಜಡಜದಲರೊಳ್ ಬಂಡಿನ ಬಂಡಾರಮನಿರಿಸಿಯುಂ– ಮೂಗುವಡಿಕೆಯಂ ಬಿಟ್ಟು ಗಂಟಲೊಳ್ ನಲ್ಸರಂ ಬಿಟ್ಟು, ರಾಗಮಾಲೆಗೆ ಕಯ್ಗೊಟ್ಟು ಪುಗಲ್ ಪುಗಲೆಂದು ಬಗ್ಗಿಸಲನುಗೆಯ್ವ ಕೋಗಿಲೆಗೆ ಮಾಮರನೊಳ್ ತಳಿರ್ಗಳುಮಂ ಪಣ್ಗಳುಮಂ ಪೆರ್ಚಿಸಿಯುಂ – ಕಾಗೆತ್ತೆಱಂತೆಗೆದಱಿ ಕುಣಿಯಲ್ ನೆರೆವ ಸೋಗೆಗಳ್ಗೆ ಮರದಿಂ ಮರಂದದ ಸೋನೆಯಂ ಜಿನುಂಗಿಸಿಯುಂ– ವಸಂತಸಖನ ಬೆಳ್ಪಸಮೆ ಪಕ್ಕಿಜುಗಮಾಯ್ತೆನೆ ಸೊಗಯಿಸಿ ಸೋಂಕುವ ಮರಾಳಮಿಥುನಕ್ಕೆ ಕಯ್ಗೆಯ್ದ ಬೆಳ್ದಾವರೆಯ ಸಜ್ಜೆಯ ನೇರ್ಪಡಿಸಿಯುಂ – ಹಂದದ ತವಸಿಂಗೊಳಗಾಗಿ ಯೋಗನಿರತರಾದ ಯೋಗಿಗಳ ಮನಸ್ತೂಳಮಂ ಶೃಂಗಾರೋತ್ತೇಜಕ ವಿಭಾವ ವಾಯುವಿಂ ಪಾಱಿಸಿಯುಂ – ಪೆಱ ಊರ್ಗೆ ಪೋದ ಬಗೆಯಾಣ್ಮರಂ ನೆನೆದು ದೂಱಿಸುವಿನಿಯರ ಮೆಯ್ಗಲರ್ನಿಲ್ಲನ ಕಣೆಯೇಱಿಂ ಪುದುಂಗೊಳಿಸಿ ಬಿರಯದ ಬೆಂಕೆಯಿಂ ತಪಿಸಿಯುಂ – ವಸಂತಂ ಜಸವಂತನಾಗಿರ್ಪಿನೆಗಮೊಂದು ದೆವಸಂ –

(ಗದ್ಯ) ಅದಲ್ಲದೆ – ಚಂದ್ರನಿಗೆ ಅಮೃತದಂತಹ ಪ್ರಕಾಶವನ್ನು ಹೆಚ್ಚಿಸಿ, ಮದಿಸಿದ ಚಕೋರ ಪಕ್ಷಿಗಳಿಗೆ ಒಳ್ಳೆಯ ಊಟವನ್ನು ಇಕ್ಕಿಯೂ, ಮುಂಜಾನೆಯ ಸೂರ್ಯನ ಬೆಳಕಿನಿಂದ ಹೊನ್ನಿನ (ಹೊಂಬಣ್ಣದ) ದೇಹವನ್ನು ತಾಳಿ ಸುತ್ತಾಡಿ ತಿರುಗಿ ರಮ್ಯವಾಗಿ ಹಾಡಿಕೊಂಡು ಬಂದು ಅರೆಮುಗುಳಿನ ತುದಿಯನ್ನು ಒಡೆಯುವಂತೆ ಮಾಡಿ ಹೂವಿನ ಕೇಸರದ ತಡೆಯನ್ನು ಅಲಕ್ಷ್ಯಮಾಡಿ ನುಗ್ಗುವ ತುಂಬಿಗಳ ಸಮೂಹಕ್ಕೆ ತಾವರೆ ಹೂಗಳಲ್ಲಿ ಜೇನಿನ ಭಂಡಾರವನ್ನು ಇರಿಸಿಯೂ– ಮೂಕತೆಯನ್ನು ತೊರೆದು ಗಂಟಲಲ್ಲಿ ಒಳ್ಳೆಯ ಸ್ವರವನ್ನು ಪಡೆದು ರಾಗ ಮಾಲಿಕೆಗೆ ಕೈಮಾಡಿ ಪುಗಲ್ ಪುಗಲ್ ಎಂದು ಹಾಡಲು ಅಣಿಯಾಗುವ ಕೋಗಿಲೆಗೆ ಮಾವಿನ ಮರದಲ್ಲಿ ಚಿಗುರುಗಳನ್ನೂ ಹಣ್ಣುಗಳನ್ನೂ ಹೆಚ್ಚಾಗುವಂತೆ ಮಾಡಿಯೂ – ಮಳೆಗಾಲ ಬಂತೆಂದು ಭ್ರಮಿಸಿ ರೆಕ್ಕೆ ಬಿಡಿಸಿ ನರ್ತಿಸಲು ಸಿದ್ಧವಾಗುವ ನವಿಲುಗಳಿಗೆ ಮರದಿಂದ ಪುಷ್ಪರಸದ ಮಳೆಯನ್ನು ಸುರಿವಂತೆ ಮಾಡಿಯೂ ಮನ್ಮಥನ ಧವಳಕೀರ್ತಿಯೇ ಪಕ್ಷಿದ್ವಯವಾಯಿತೆಂಬಂತೆ ಸೊಗಸಾಗಿ ಪರಸ್ಪರ ಸೋಂಕುವ ಹೆಣ್ಣು – ಗಂಡು ಹಂಸಗಳಿಗೆ ಸಿಂಗರಿಸಿದ ಬಿಳಿಯ ತಾವರೆಯ ಹಾಸಿಗೆಯನ್ನು ಸಿದ್ಧಪಡಿಸಿಯೂ – ಅಚಲವಾದ ತಪಸ್ಸಿಗೆ ಒಳಗಾಗಿ ಯೋಗದಲ್ಲಿ ತತ್ಪರರಾದ ಯೋಗಿಗಳ ಮನಸ್ಸೆಂಬ ಹತ್ತಿಯನ್ನು ಶೃಂಗಾರದ ಉತ್ತೇಜನವುಳ್ಳ ವಿಭಾವವೆಂಬ ಗಾಳಿಯಿಂದ ಹಾರಿಸಿಯೂ – ಬೇರೆ ಊರಿಗೆ ಹೋಗಿದ್ದ ಮನೋವಲ್ಲಭರನ್ನು ನೆನೆದು ದುಃಖಿಸುವ ಪ್ರಿಯೆಯರ

ಮ.ವಿ. ಕೆಲಬರ್ ಸಿಂಗರಗಜ್ಜಮಂ ಕೆಲಬರಾಮೋದ ಪ್ರಸಾರಂಗಳಂ
ಕೆಲಬರ್ ಚಾಮರಮಂ ಕೆಲರ್ ಮೃದುವಚಸ್ಸಂದೋಹದಿಂ ರಾಗಮಂ
ಕೆಲಬರ್ ನರ್ತನಮಂ ಕೆಲರ್ ಪೊಗಟುತುಂ ಕೈಗಾಣ್ಕೆಯಂ ಗೆಯ್ವಿನಂ
ಪಲಬರ್ ಪೆಂಡಿರ ತಂಡದಾ ಸಭೆಯೊಳಿರ್ದಂ ದಿವ್ಯ ಲೀಲಾಸ್ಪದಂ ॥೧೮॥

ಉ.ಮಾ. ಬೀಸುವ ಚಾಮರಾನಿಲ ಕಲತ್ ಪ್ರಮದಾಸ್ಯ ಸರೋಜ ಸೌರಭಂ
ಸೂಸುವ ಪೂವ ನವ್ಯ ಮೃಗನಾಭಿಯ ಪೊತ್ತುವ ಕಪ್ಪುರಂಗಳೋ
ಲೈಸುವ ಧೂಪದೀಪಗಳ ಸಿಂಪಿಪ ಚಂದನದಾ ಸುಗಂಧಮೊ
ಟ್ಟೈಸಿರೆ ಸೇರ್ದ ಕಂಪುಗಡಲೆಂಬವೊಲೊಪ್ಪಿದುದಲ್ಲಿಯೋಲಗಂ ॥೧೯॥

ದೇಹಕ್ಕೆ ಮನ್ಮಥನ ಬಾಣದ ಗಾಯವನ್ನುಂಟು ಮಾಡಿ ವಿರಹಾಗ್ನಿಯಿಂದ ತಾಪವನ್ನುಂಟು ಮಾಡಿಯೂ – ವಸಂತ ಋತುರಾಜನು ಕೀರ್ತಿವಂತನಾಗಿ ಇರುತ್ತಿರಲು ಒಂದು ದಿವಸ (ಹೀಗಾಯಿತು) –

೧೮. (ಶ್ರೀಕೃಷ್ಣನು) ತನ್ನ ಪತ್ನಿಯರಲ್ಲಿ ಕೆಲವರು ಶೃಂಗಾರದ ಕಾರ್ಯವನ್ನು ಮಾಡುತ್ತಿರಲು ಕೆಲವರು ಸುಗಂಧದ್ರವ್ಯಗಳನ್ನು ಪ್ರಸಾರ ಮಾಡುತ್ತಿರಲು, ಕೆಲವರು (ಕೃಷ್ಣನಿಗೆ) ಚಾಮರವನ್ನು ಬೀಸುತ್ತಿರಲು, ಕೆಲವರು ಮೃದುವಚನಗಳ ಸಮೂಹದಿಂದ ಅನುರಾಗವನ್ನುಂಟು ಮಾಡುತ್ತಿರಲು, ಕೆಲವರು ನಾಟ್ಯವಾಡುತ್ತಿರಲು, ಕೆಲವರು ಸ್ತುತಿ ಮಾಡುತ್ತಿರಲು ಮತ್ತು ಕೈಗೆ ಕಾಣಿಕೆಗಳನ್ನು ನೀಡುತ್ತಿರಲು – ದಿವ್ಯ ಲೀಲೆಗಳಿಗೆ ಆಸ್ಪದನಾದ ಕೃಷ್ಣನು ಹಲವು ಮಂದಿ ಹೆಂಡಿರ ಗುಂಪಿನ ಸಭೆಯಲ್ಲಿದ್ದನು.

೧೯. ಚಾಮರವನ್ನು ಬೀಸುತ್ತಿದ್ದಾಗ ಉಂಟಾದ ಗಾಳಿಯಲ್ಲಿ ಬೆರೆತ, ಸ್ತ್ರೀಯರ ಮುಖಕಮಲದ ಪರಿಮಳವೂ – ಚೆಲ್ಲತಕ್ಕ ಹೂವಿನ ಮತ್ತು ಹೊಸತಾದ ಕಸ್ತೂರಿಯ ಮತ್ತು ಉರಿಯುತ್ತಿರುವ ಕರ್ಪೂರಗಳ, ಜೊತೆಗೂಡಿದ ಧೂಪದೀಪಗಳ ಮತ್ತು ಸಿಂಪಡಿಸುವ ಶ್ರೀಗಂಧದ ಸುಗಂಧ– ಇವೆಲ್ಲ ಒಟ್ಟು ಸೇರಿ, ಶ್ರೀಕೃಷ್ಣ ಸಭೆ ಒಂದು ಪರಿಮಳದ ಸಮುದ್ರ ವೆಂಬಂತೆ ಶೋಭಿಸಿದ್ದಿತು.

ಕಂದ॥ ಕೋಗಿಲೆಯನಿಳಿಪ ಕೊರಲುಲಿ
ರಾಗಾಬ್ಧಿಯನುರ್ಕಿಪರ್ಥನಿರ್ಝರಿ ಹರಿಯಂ
ತೂಗಿಸೆ ನಿಜತನು ಚೆಲ್ವಿಂ
ಬೀಗಿಸಲೋರೋರ್ವರಲ್ಲಿ ಪಾಡುತ್ತಿರ್ದರ್ ॥೨೦॥

ತ್ರಿಪದಿ ಪರಮಾತ್ಮನೆಂದೆಂದು ಪರಮಾತ್ಮನೊಡನಿಂದು
ಪುರುಷರೂಪನನೇ ಸೇವಿಸಿ – ಬಹುಸುಖಾ
ಕರೆಯಾಗಿ ಬಾಳ್ವಿಂ – ಲಲಿತಾಂಗಿ ॥೨೧॥

ಉಡಲುಂಟು ತೊಡಲುಂಟು! ಕೊಡವೇಟ್ಟುದೆಲ್ಲುಂಟು
ಬಿಡದೆ ಸಂತುಷ್ಟಿ ಪಡಲುಂಟು – ಮೂಲೋಕ
ದೊಡೆಯಂ ಶ್ರೀಕೃಷ್ಣ – ಲಲಿತಾಂಗಿ ॥೨೨॥

ಶಿವನೀತಂ ಶಂಕರಂ ! ಜವನೀತಂ ಸಂಹರಂ
ಬವಸೆ ಬೇರೇಕೆ ಸೇವೆಯಿಂ – ಶ್ರೀಕೃಷ್ಣಂ
ಧವನಾಗಿರಲ್ಕೆ – ಲಲಿತಾಂಗಿ ॥೨೩॥

೨೦. ಹೀಗಿರಲು ಅಲ್ಲಿದ್ದ ಓರೋರ್ವರು ಹೆಂಗುಸರು ಕೋಗಿಲೆಯ ದನಿಯನ್ನು ಕೀಳೆಸಗುವ ಕಂಠಧ್ವನಿಯೂ ರಾಗದ (ಗೀತರಾಗದ ಅಥವಾ ಪ್ರೀತಿಯ) ಕಡಲನ್ನು ಉಕ್ಕಿಸತಕ್ಕ ಅರ್ಥದ ಪ್ರವಾಹವೂ ಶ್ರೀಕೃಷ್ಣನನ್ನು ತಲೆದೂಗಿಸುವಂತಿದ್ದುವಲ್ಲದೆ, ಆ ಹಾಡುಗಾರ್ತಿಯರ ಶರೀರವು ಸೌಂದರ್ಯವನ್ನು ಉಕ್ಕಿಸುವಂತಿದ್ದಿತು. ಆ ಹಾಡುಗಳಲ್ಲಿ ಅಡಕವಾದ ಅರ್ಥವ್ಯಾಪ್ತಿಗಳಿವು –

೨೧. ಎಲೈ ಚೆಲುವೆಯೇ, ನಾವು ಈ ಶ್ರೀಕೃಷ್ಣನನ್ನು ಪರಮಾತ್ಮನು ಎಂದುಕೊಂಡು ನಮಗೆಲ್ಲ ಪತಿಯಾದ ಈತನ ಆತ್ಮನೊಡನೆ ಇದ್ದುಕೊಂಡು, ಗಂಡುಸಿನ ರೂಪದಲ್ಲಿರುವ ಇವನ ಸೇವೆ ಮಾಡಿಕೊಂಡು ಬಹಳ ಸುಖಕ್ಕೆ ಆಶ್ರಯಳಾಗಿ ಬಾಳೋಣ.

೨೨. ನಮಗೆ ಉಟ್ಟುಕೊಳ್ಳಲು ಬೇಕಾದಷ್ಟಿವೆ, ತೊಟ್ಟುಕೊಳ್ಳಲು ಆಭರಣಗಳೂ ಇವೆ. ನಮಗೆ ಈತನು ಕೊಡಬೇಕಾದುದು ಇನ್ನೇನೂ ಉಳಿದಿಲ್ಲ. ನಿತ್ಯವೂ ಸಂತೋಷಪಡುವ ಸ್ಥಿತಿಯಲ್ಲಿದ್ದೇವೆ. ಏಕೆಂದರೆ, ನಮ್ಮ ಪತಿಯು ಮೂರು ಲೋಕಕ್ಕೂ ಒಡೆಯನಾದ ಶ್ರೀಕೃಷ್ಣ ನಿದ್ದಾನೆ.

೨೩. ಇವನು ಶಿವನು (ಮಂಗಲಕರನು), ಶಂಕರನು (ಸುಖಪ್ರದನು). ಆದರೆ (ದುರುಳರಿಗೆ) ಈತನು ಮೃತ್ಯುಸ್ವರೂಪನು, ಸಂಹಾರಕರ್ತನು. ಅಂತಹ ಶ್ರೀಕೃಷ್ಣನೇ ಪತಿಯಾಗಿರುವಾಗ ಅವನ ಸೇವೆಗಿಂತ ಬೇರೆಯಾದ ಉದ್ಯೋಗ ನಮಗೇಕೆ?

ದೇವಕೀಮುದವಿತ್ತು, ದೇವಕೀರ್ತಿತನಾದ
ದೇವನೀ ಕೃಷ್ಣಂ ಭಜಿಸುವ – ಜನಕೀತಂ
ಭಾವದಿಂದೊಲ್ದು – ಸಲಹುವಂ ॥೨೪॥

ಬ ಭಕ್ತಿಯೊಂಬತ್ತಾಗಿ, ಚಿತ್ತಶುದ್ಧಿಪ್ರದಂ
ಎತ್ತಲುಂ ನೋಡಿ ಸತಿಭಾವಂ – ಮಾಧುರ್ಯ
ಭಕ್ತಿ ಸನ್ಮಾನ್ಯವಿಳೆಯಲ್ಲಿ ॥೨೫॥

ಕಂದ॥ ಎಂತೆಂತು ನೆಗಟಿ ಕೃಷ್ಣಂ
ಸಂತಸಮಂ ಪಡೆವನಂತು ಗೆಯ್ಯುತ್ತೆ ಪ್ರಸಾ
ದಾಮತರ್ಯಜ್ಞಳ್ ನಯದಿಂ
ದಂ ತಾನೆಂದಳ್ ವನಾಟನೇಚ್ಛೆಯಿನೊರ್ವಳ್ ॥೨೬॥

ಬಯಸಿದುದಂ ಶ್ರಿತಜನ ಸಮು
ದಯಕೊದಗಿಪನಲ್ತೆ ಭಕ್ತಚಿತ್ತಜ್ಞನೆ ನಿ
ರ್ದಯೆಯಿಂ ಕೇಳ್ದು ತಿರಸ್ಕೃತಿ
ಗೆಯಲಾಗದೆನುತ್ತೆ ರಮಣ ಮೊದಲಾನೆಂಬೆಂ ॥೨೭॥

೨೪. ಈ ಕೃಷ್ಣನು ತನ್ನ ತಾಯಿಯಾದ ದೇವಕಿಗೆ ಸಂತೋಷವನ್ನುಂಟು ಮಾಡಿ, ದೇವತೆಗಳ ಕೀರ್ತನೆಗೆ ಪಾತ್ರನಾಗಿದ್ದಾನೆ. ಅಂತಹ ದೇವನೇ ಈತನು. ಭಕ್ತಜನರಿಗೆ ಈತನು ಮನವೊಲಿದು ಸಲಹುವನು.

೨೫. ಭಕ್ತಿಯು ನವವಿಧವಾಗಿದ್ದು ಮನಶ್ಶುದ್ಧಿಯನ್ನು ಮಾಡುವುದಾಗಿದೆ. ಅವನ್ನೆಲ್ಲ ಮೀರಿರುವ ಸತಿಭಾವವೆಂಬುದು ಮಾಧುರ್ಯ ಭಕ್ತಿಯೆನಿಸಿದ್ದು ಲೋಕದಲ್ಲಿ ಮಾನ್ಯವಾಗಿದೆ.

೨೬. ಹೇಗೆ ಹೇಗೆ ವರ್ತಿಸಿದರೆ ಕೃಷ್ಣನು ಸಂತುಷ್ಟನಾಗುವನೋ ಹಾಗೆಲ್ಲ ವರ್ತಿಸುತ್ತ ಅವರಲ್ಲೊಬ್ಬಳು ಕೃಷ್ಣನು ಆಂತರಿಕವಾಗಿ ಪ್ರಸನ್ನಭಾವ ತಾಳಿದುದನ್ನು ಅರಿತವಳಾಗಿ ಪುರೋದ್ಯಾನ ವಿಹಾರದಲ್ಲಿ ಇಚ್ಛೆಯಿಂದ ವಿವೇಕಯುತ ವರ್ತನೆಯಿಂದ ಹೀಗೆಂದಳು.

೨೭. ಭಕ್ತರ ಮನಸ್ಸನ್ನು ತಿಳಿದವನೆ, ನಮ್ಮ ರಮಣನೆ, ನೀನು ಆಶ್ರಿತಜನರ ಸಮೂಹಕ್ಕೆ ಅವರು ಅಪೇಕ್ಷಿಸಿದುದನ್ನು ಒದಗಿಸುವಾತನಲ್ಲವೆ? ಈಗ ನಮ್ಮೆಲ್ಲರ ಪರವಾಗಿ ನಾನು ಹೇಳುವುದನ್ನು ಕೇಳಿ ನಿರ್ದಯೆಯಿಂದ ತಿರಸ್ಕರಿಸಬಾರದು ಎಂದು ನಾನು ಮೊದಲಾಗಿ ಹೇಳುತ್ತಿದ್ದೇನೆ.

ತರುಮೂಲದೆ ತುಱುದಿಂಡಾ
ಸರಸಿಸಮೀಪದೆ ಮಲಂಗುಗುಂ ದಾರಿಗರಾ
ಮರುದನ್ವಿತ ಸಚ್ಛಾಯೆಯೊ
ಳಿರಲಾಟಿಪರರಿದು ಪಗಲ ಬಿಱುವಿಸಿಲಲ್ತೇ ॥೨೮॥

ಪಾಡುವ ಕೋಗಿಲೆ ಬಿಸಿಲಂ
ಬಾಡುವ ಗಿಳಿ ಸೆಕೆಗೆ ಮಱುಗಿ ಮಱಿಯನುಮಂ ಮು
ದ್ದಾಡದಪರಿಯಾರಯ್ಯುತೆ
ನೋಡದರಾರ್ ಪಗಲ ಬಿಸಿಲ ಬೇಗೆಯಸಹ್ಯಂ ॥೨೯॥

ಬಾಯೊಣಗಿ ಪಸಿದು ಬೆಮರೊಳ್
ತೋಯುತ್ತೆಳಗಾಯ ನೆಲ್ಲಿಗಾಯಂ ನಲ್ಮಾಂ
ಗಾಯಂ ನೀರಂ ಗೇರ ನಿ
ಕಾಯವನಱಸುತ್ತುಮಿರ್ದಪರ್ ಗಡ ಪಾಂಥರ್ ॥೩೦॥

ಮಧುಮಾಸದೆ ಮುದಮುಂ ಬಿಸಿ
ಲೊದವಿಂ ಕೋಗಿಲೆಗೆ ದುಕ್ಕಮೊದಗುವವೋಲ್ ಸಂ
ಪದದಿಂ ಸೊಗಮುಂ ಕಟ್ಟಿ
ಕ್ಕಿದ ತೆಱದಿಂದಿರ್ಪ ಕತದೆ ಮಱುಕಮುಮಕ್ಕುಂ ॥೩೧॥

೨೮. ಈ ಸಮಯದಲ್ಲಿ ಹಸುಗಳ ಹಿಂಡು ಮೇಯಲಿಕ್ಕೆ ಹೋದಾಗ ಸರೋವರದ ಹತ್ತಿರವೇ ಇರುವ ಮರಗಳ ಬುಡದಲ್ಲಿ ಮಲಗಿಕೊಳ್ಳುತ್ತವೆ. ದಾರಿಹೋಕರು ಗಾಳಿಬೀಸುತ್ತಿರುವ ಒಳ್ಳೆಯ ನೆರಳಿನಲ್ಲಿರಲು ಇಚ್ಛಿಸುತ್ತಾರೆ. ಈಗಣ ಹಗಲಿನ ಬಿರುಬಿಸಿಲು ಸಹಿಸಲು ಅಸಾಧ್ಯವಲ್ಲವೆ?

೨೯. ಹಾಡುವ ಕೋಗಿಲೆ ಬಿಸಿಲಿನಿಂದ ಬಾಡಿಹೋಗುವಂತಹ, ಗಿಳಿಯು ಸೆಕೆಯಿಂದ ದುಃಖತಾಳಿ ತನ್ನ ಮರಿಯನ್ನು ಮುದ್ದಾಡದೆ ಇರತಕ್ಕ ಪರಿಸ್ಥಿತಿಯನ್ನು ವಿಚಾರಿಸಿ ನೋಡದವರು ಯಾರು? ಹಗಲಿನ ಬಿಸಿಲಿನ ಬೇಗೆ ಸಹಿಸಲು ಸಾಧ್ಯವಿಲ್ಲ.

೩೦. ದಾರಿಹೋಕರು ಬಾಯಾರಿ, ಹಸಿದು ಬೆವರಲ್ಲಿ ಒದ್ದೆಯಾಗುತ್ತ ತೆಂಗಿನ ಎಳನೀರನ್ನೂ ನೆಲ್ಲಿಕಾಯನ್ನೂ ಒಳ್ಳೆಯ ಮಾವಿನ ಕಾಯನ್ನೂ ನೀರನ್ನೂ ಗೇರುಹಣ್ಣಿನ ಸಮೂಹವನ್ನೂ ಹುಡುಕುತ್ತಿರುವರಲ್ಲವೆ?

೩೧. ಇದೀಗ ವಸಂತಕಾಲದ ತಿಂಗಳು, ಇದು ಕೋಗಿಲೆಗೆ ಮಾವಿನ ಹಣ್ಣನ್ನು ಒದಗಿಸುವ ಮೂಲಕ ಸಂತೋಷವನ್ನೂ ಬಿಸಿಲಿನ ಪ್ರಾಪ್ತಿಯಿಂದ ದುಃಖವನ್ನೂ ಉಂಟು ಮಾಡುವ ಹಾಗೆ, ನಮಗೆ ಸಂಪತ್ತಿನ ಪ್ರಾಪ್ತಿಯಿಂದ ಸುಖವೂ ಕಟ್ಟಿಹಾಕಿದಂತೆ ಇರುವ ಕಾರಣದಿಂದ ದುಃಖವೂ ಉಂಟಾಗಿರುವುದು.

ಉ.ಮಾ. ಪೆಂಡಿರವಂತಜೆಂ ಗೃಹದೆ ಸಟ್ಟುಗವಾಂಪುದು ಮಕ್ಕಳಂ ಸೊಗಂ
ಗೊಂಡುಜಿ ಸಾಂಕಿ ಸಂಪದಮನುಣ್ಬುದು ಕೇಳ್ವುದು ಗಾನಮಂ ಮನಂ
ಗೊಂಡುದಜಿಸೋದು ಮಾ ಸಹಜ ಸುಂದರ ಬಂಧುರ ನಂದನಂಗಳೊಳ್
ಕಂಡೆಡೆಗೆಯ್ದಿಯುರ್ಕಿ ನಲಿದುಂಡ ಸುಖೋದಯಕೊಂದು ಸಾಟಿಯೇ ॥೩೨॥

ಚಂ.ಮಾ ಕಲಿಸದೆ ಬಂದ ಕೌಶಲದೆ ಪಾಡುವ ಕೋಗಿಲೆ ಮಾತನಾಡುವಾ
ನಲಿವಿನ ಬಾಸೆವಕ್ಕಿ ಪಜಿವಂಚೆ ಮೃಗಾಳಿ ಮನೋನುರಾಗದಿಂ
ದುಲಿವೆಳದುಂಬಿ ಚೆಲ್ವೆಸೆವ ಪೂಮರವಳ್ಳಿ ಕೊಳಂಗಳೆಂಬನ
ಲ್ಪೆಲಸಿರಿ ನೋಡದೀ ಮನೆಯ ಗೊಂಬೆವೊಲೆಮ್ಮ ಬಾಟಕ್ಕಿ ಬಾಟಕ್ಕಿಯೇ ॥೩೩॥

ಕಂದ॥ ಇನಿಯನ ಮಾಧವನಾಗಮ
ಘನಯೆನೆ ವನದೇವಿ ಸಿಂಗರಿಸಿ ರಾಜಿಪುದಂ
ಇನಿಯನೆ ಮಾಧವನೇ ನಾಂ
ವನವಿಹರಿಸಿ ನಾಡೆ ನೋಡಬಯಸುವೆವೀಗಳ್ ॥೩೪॥

೩೨. ನಾವು ಹೆಂಡಿರು. ಆದುದರಿಂದ ಮನೆಯಲ್ಲಿದ್ದುಕೊಂಡು ಅಡಿಗೆ ಸಟ್ಟುಗ ಹಿಡಿದಿರುವುದು, ಮಕ್ಕಳನ್ನು ಸುಖಕರವಾಗಿ ಸಲಹುತ್ತ ಸಂಪತ್ತನ್ನು ಅನುಭವಿಸುವುದು, ಹಾಡನ್ನು ಕೇಳುವುದು, ಮನಸ್ಸಿಗೆ ಮೆಚ್ಚುಗೆಯಾಗುವ ಸಾಹಿತ್ಯಪಠನ – ಇವೆಲ್ಲ ನಮಗಿವೆ. ಆದರೆ ಇವು ಪ್ರಕೃತಿ ಸೌಂದರ್ಯದಿಂದೊಪ್ಪುವ ಉದ್ಯಾನಗಳಲ್ಲಿ ಕಂಡೆಡೆಗೆಲ್ಲ ಹೋಗಿ ಉತ್ಸಾಹ ತಾಳಿ ನಲಿದಾಡಿಕೊಂಡು ಅನುಭವಿಸಿದ ಸುಖದ ಉತ್ಪಾದನೆಗೆ ಸಮಾನವಾಗುವುದೆ?

೩೩. ಉದ್ಯಾನದಲ್ಲಿ – ಕಲಿಸದೆ ಬಂದ ಕೌಶಲದಿಂದ ಹಾಡುವ ಕೋಗಿಲೆ ಇರುತ್ತದೆ. ಮಾತಾಡುವ ಗಿಳಿಯಿರುತ್ತದೆ. ಹರಿದಾಡುವ ಹಂಸೆಗಳು, ಜಿಂಕೆಗಳ ಸಮೂಹ, ಮನಃಪ್ರೀತಿಯಿಂದ ಶಬ್ದ ಮಾಡುವ ತುಂಬಿ, ಸೊಗಸಾದ ಹೂವುಗಳು – ಮರಗಳು – ಬಳ್ಳಿಗಳು – ಕೊಳಗಳು – ಇವೆಲ್ಲ ಇರತಕ್ಕ ಒಳ್ಳೆಯ ಭೂಸಂಪತ್ತನ್ನು ಕಣ್ಣಾರ ನೋಡದೆ, ಈ ಮನೆಯ ಗೊಂಬೆಯಂತೆ ಇರತಕ್ಕ ನಮ್ಮ ಬದುಕು, ಎಂತಹ ಬದುಕಿದು?

೩೪. ಇನಿಯನೆ, ಮಾಧವನೇ, ವನದೇವಿಯು ತನ್ನ ಇನಿಯನಾದ ಮಾಧವನ (ವಸಂತನ) ಬರುವಿಕೆಯಿಂದ ಘನತೆ ತಾಳಿದವಳಾಗಿ ಶೃಂಗಾರ ಮಾಡಿಕೊಂಡು ಶೋಭಿಸುವುದನ್ನು ನಾವು ವನವಿಹಾರ ಮಾಡಿ ವಿಶೇಷವಾಗಿ ನೋಡಲು ಈಗ ಬಯಸುತ್ತಿದ್ದೇವೆ.

ವಿಮಲಾಂಬುಪ್ರವಹಿತನುಂ
ಕಮಲಾಕರದಂತರಾಳಮಮಂ ಪುಗುತುಂ ವಿ
ಭ್ರಮತರ ವಿಲಾಸ ಸಂಯುತ
ಮೆಮಗನುಪಮ ವಾರಿಕೇಳಿ ತೋಷದಮಕ್ಕುಂ ॥೩೫॥

ಗದ್ಯ॥ ಎಂದೆಲ್ಲರ ಮುಖಿಯಾಗಿ ನುಡಿದ ಸಖಿಯಿಂಗಿತಮಂ ವಾಸುದೇವನಜಿತಾಗಳ್ –

ಕಂದ॥ ಕೈರವಮರಲ್ದ ಬಟಿ ನೀ
ಹಾರಕರಂ ತೋರ್ದನೆಂಬಿನಂ ಚೋದಿಸುವಾ
ನೀಱಿಯರ ಹರ್ಷದಿಂ ನೀ
ಹಾರಮಯೂಖಾಸ್ಯನೆಂದನಾ ನಗೆವಳಗಿಂ ॥೩೬॥

ಸರಸಿಜಮುಖಿಯರ್ ವಿಪರೀ
ತರಸಾನ್ವಿತೆಯರ್ ಮರಾಳಕುಳಗಾಮಿನಿಯರ್
ಪರಿವೃತ ಚಕ್ರಸ್ತನೆಯರ್
ನಿರುಪಮೆಯರ್ ನಿಮಗೆ ಕೇಳಿಗಿನ್ನೇಕೆ ಕೊಳಂ ॥೩೭॥

೩೫. ಅದಲ್ಲದೆ, ಅಲ್ಲಿ ನಮಗೆ – ನಿರ್ಮಲವಾದ ನೀರು ಹರಿಯುತ್ತಿರುವ ಸರೋವರದ ಒಳಹೊಕ್ಕು ವಿಭ್ರಮ ವಿಲಾಸಗಳಿಂದ ಕೂಡಿದ ಜಲಕೇಳಿಯಾಡುವುದು ಹೋಲಿಕೆಯೇ ಇಲ್ಲದ ಸಂತೋಷವನ್ನುಂಟು ಮಾಡುವುದು. (ಗದ್ಯ) ಈ ರೀತಿಯಾಗಿ ಎಲ್ಲ ಸ್ತ್ರೀಯರಿಗೆ ಮುಖ್ಯಸ್ಥೆಯಾಗಿ (ಅವರೆಲ್ಲರ ಬಾಯಿಯಾಗಿ) ನುಡಿದ ಗೆಳತಿಯ ಮನೋಭಿಪ್ರಾಯವನ್ನು ಶ್ರೀಕೃಷ್ಣನು ತಿಳಿದುಕೊಂಡನು. ಆಗ –

೩೬. ಚಂದ್ರನು ಕಾಣಿಸಿದ ಮೇಲೆ ನೈದಿಲೆಯರಳುವುದು ಕ್ರಮ. ಆದರೆ ಈಗ ನೈದಿಲೆಯರಳಿದ ಅನಂತರ ಚಂದ್ರನು ಕಾಣಿಸಿದನೋ ಎಂಬಂತಾಯಿತು. ಪ್ರೇರೇಪಿಸುವ ಸುಂದರಿಯರ ಸಂತೋಷದಿಂದ ಉತ್ತೇಜಿತನಾಗಿ ಚಂದ್ರನಂತಹ ಮುಖದ ಶ್ರೀಕೃಷ್ಣನು ನಗೆಯೆಂಬ ಬೆಳ್ದಿಂಗಳನ್ನು ಬೀರುತ್ತ ಹೀಗೆಂದನು –

೩೭. ನೀವೆಲ್ಲರೂ ತಾವರೆಯಂತೆ ಸುಂದರವಾದ ಮುಖವುಳ್ಳವರು, ಅಸಾಧಾರಣವಾದ ಶೃಂಗಾರಾದಿ ರಸದಿಂದ ಕೂಡಿದವರು, ಅಂಚೆವಿಂಡಿನ ನಡಿಗೆಯುಳ್ಳವರು. ಚಕ್ರವಾಕಗಳಂತೆ ಕುಚಗಳೆರಡುಳ್ಳವರು, ಹೋಲಿಕೆಯಿಲ್ಲದವರು. ಅಂತಹ ನಿಮಗೆ ಜಲಕೇಳಿಗಾಗಿ ಕೊಳದ ಆವಶ್ಯಕತೆಯೇನು? (ಈ ಮಾತಿನಲ್ಲಿ ಶ್ಲೇಷೆಯಿಂದ ಕೊಳದ ವರ್ಣನೆ ಹೀಗಿದೆ– ಕೊಳವು ತಾವರೆಯೇ ಮುಖವಾಗಿ ಉಳ್ಳುದು, (ವಿ=ಪಕ್ಷಿ, ಪರೀತ = ಆವೃತ, ರಸ = ಜಲ) ಪಕ್ಷಿಗಳಿಂದ ಆವೃತವಾದ ಜಲವುಳ್ಳುದು, ಹಂಸಗಳ ಸಮೂಹದ ನಡಿಗೆಯೇ ನಡಿಗೆಯಾಗುಳ್ಳುದು, ಆವರಿಸಿದ ಚಕ್ರವಾಕ ಮಿಥುನವೇ ಸ್ತನವಾಗುಳ್ಳುದು).

ಳಳನಾನ್ವಿತನಾ ವಚನಾ
ವಳಿ ವನಿತಾವಳಿಯ ನಾಣ್ಬೆಸುತೆ ಬಾಗಿಸುತುಂ
ಬಳೆಯಿಸಿತೊಲವಂ ಕಡಲೇಂ
ಗಳ ನಲಿಯದೆ ನಗುವ ಪೆಱೆಯನೀಕ್ಷಿಸಿದಾಗಳ್ ॥೩೮॥

ನಾಣೆಂದಿಳಿಸಿದ ಮೊಗಮಂ
ಪಾಣಿಯಿನೆತ್ತಿದೊಡೆ ತಳದ ಕೆಂಬೆಳಗಿಂ ರ
ಕ್ತೇಣಾಂಕ ಮಂಡಲಕ್ಕೇ
ನೂಣೆಯಮಂ ತಂದುವೋ ಆ ಬಟ್ಟಮೊಗಂಗಳ್ ॥೩೯॥

ನೀಲದ್ಯುತನನಪಾಂಗದೆ
ಲೋಲೆಯರೊಡನಂದು ನೋಡಿ ಗೆಲೆವಂದತ್ತಾ
ನೀಲಾದ್ರಿಯನೆಱಗುವ ತಟಿ
ದಾಲಿಯ ಮೆಯ್ಸಿರಿಯನವಱ ಕಣ್ಬೊಗರ್ದುಱುಗಲ್ ॥೪೦॥

ತೇಜಂ ವಾಯುವಿನಲ್ಲದೆ
ತೇಜದಿನಾ ವಾಯುಪೊಗೆದುದೆನಲಬಲಾದೃ
ಕ್ತೇಜಪ್ರಸಾರಮಾ ಬಟೆ
ರಾಜದ್ವನ ಸುರಭಿವಾಯು ತೀಡಿತ್ತಾಗಳ್ ॥೪೧॥

೩೮. ಸ್ತ್ರೀಯರಿಂದ ಕೂಡಿದ ಶ್ರೀಕೃಷ್ಣನ ಮಾತಿನ ಸಮೂಹವು ಸ್ತ್ರೀಸಮೂಹವನ್ನು ನಾಚಿಕೆಪಡಿಸುತ್ತಾ ಅವರನ್ನು ಬಾಗುವಂತೆ ಮಾಡಿ, ಪ್ರೀತಿಯನ್ನು ಹೆಚ್ಚಿಸಿತು. ಬೆಳ್ದಿಂಗಳಿಂದ ಕೂಡಿ ನಗುತ್ತಿರುವ ಚಂದ್ರನನ್ನು ನೋಡಿದಾಗ, ಸಮುದ್ರವು ಸಂತಸದಿಂದ ಉಬ್ಬಿ ನಲಿಯುವುದಲ್ಲವೆ?

೩೯. ಆ ಹೆಂಗುಸರು ನಾಚಿಕೆಯಿಂದ ಬಗ್ಗಿಸಿದ ಮುಖವನ್ನು ತಮ್ಮ ಕೈಯಿಂದ ಮೇಲಕ್ಕೆತ್ತಿದರು. ಆಗ ಅವರ ಅಂಗೈಯ ಕೆಂಪಾದ ಬೆಳಕಿನಿಂದ, ಅವರ ದುಂಡು ಮೊಗಗಳು ಕೆಂಪಾದ ಚಂದ್ರಮಂಡಲವನ್ನು ಸೊಬಗಿನಲ್ಲಿ ಮೀರಿಸಿದವು.

೪೦. ಅನಂತರ ಅವರೆಲ್ಲರೂ ನೀಲಿಮೆಯ ಕಾಂತಿಯುಳ್ಳ ಕೃಷ್ಣನನ್ನು ಕಡೆಗಣ್ಣಿನಿಂದ ನೋಡಿದರು. ಆಗ ಅವರ ಕಣ್ಣುಗಳ ಕಾಂತಿ ಸಮೂಹವು ನೀಲಗಿರಿಯ ಮೇಲೆರಗುವ ಮಿಂಚುಗಳ ಶೋಭೆಯನ್ನು ಗೆಲ್ಲುವಂತಾಯಿತು.

೪೧. ವಾಯುವಿನಿಂದ ಅಗ್ನಿ ಜನಿಸಿದುದು ನಿಜವಾದ ಸಂಗತಿ. ಆದರೆ ಇಲ್ಲಿ ಹಾಗಾಗದೆ, ಅಗ್ನಿಯಿಂದಲೇ ವಾಯುವುಂಟಾಯಿತೆಂಬಂತೆ, ಆ ಸ್ತ್ರೀಯರ ಕಣ್ಣುಗಳ ಕಾಂತಿಯು ಪ್ರಸಾರವಾದ ಮೇಲೆ, ಶೋಭಾಯಮಾನವಾದ ಉದ್ಯಾನದ ಕಂಪಿನ ಗಾಳಿ ಆಗ ಅಲ್ಲಿ ಬೀಸಿತು.

ಆ ವಾಯುವ ಕೆಳೆತನದಿಂ
ದ ವನದಿಂ ಕೃಷ್ಣದೇವನಂ ಕಳರವದಿಂ
ಸಾವೇಶಂ ಕರೆವ ಪಿಕಾ
ರಾವಂ ಕಿವಿಗಪ್ಪುದೆನಿಸಿ ಕೇಳಿಸಿತಾಗಳ್ ॥೪೨॥

ಗದ್ಯ॥ ಆಗಳೆ ಬಾಗಿಲಗಿತಿ ಬಂದು ಗೆಂಟಱಿಕೊಳೆ ಕುಂಬಿಟ್ಟು ದೇವ- ಪೊರವಾಗಿಲೊಳಾರವೆವಳಂ ಕಾದಿರ್ಪಂ ಪದನಱಿಯಲ್ ಬಂದೆನೆನೆ-ಬರ್ಕೆಂದೊಡೆ – ಬಾಗಿಲಗಿತಿ ಪುಗವೇೞ್ಪುದುಂ – ವನಪಾಲಕನೊಯ್ಯನೆ ಬಂದು ಬೆನ್ನಂ ಬಿಲ್ಮಾಡಿ ಕಯ್ಯುಗಿದು ಚೆನ್ನಸುಗೆವೂಗಳನಲಂಕಾರ ಪ್ರಿಯನ ಪಾದಯುಗಕ್ಕಲತಿಗೆಯಂತಿಟ್ಟು- ಸಂಪಗೆಯಂ ನಿಳಿಂಪಜನಾನುಕಂಪನ ಚರಣದ್ವಯಕ್ಕೆ ಪೊಂಗಾಣ್ಕೆಯಂತಿತ್ತು – ಮಲ್ಲಿಗೆಯಂ ಸೌರಭ ಸಾಗರ ರಮಾಲೋಲನಂಘ್ರಿಗಳ್ಗೆ ಸೊವಡನೊಡರ್ಚುವಂ ತೆ ಚೆಲ್ಲಿ ಕಮಲಮಂ ಕಮಲಾಪ್ರಿಯನ ಪಾದಕಮಲಂಗಳ್ಗೆ ಕೆಳೆಯಾಗಿಸಿ – ಮಾಂಬಳವುಂ ಮಹಾಬಳನಪ್ಪ ಚಕ್ರಿಗೆ ಸಮರ್ಪಿಸಿ – ಜೇನ್ನೆಯ್ಯಂ ಜಯರವದೊಡನಜೇಯಂಗೆ ಕೊಟ್ಟು ಮಗುೞ್ಚಿ ಪೊಡೆಮಟ್ಟು – ನಿಮ್ಮಡಿ ವಸಂತೋದಾತ್ತಮಪ್ಪ ಬಹಿರ್ನಂದನಮಂ ದೇವರ್ ಬಂದು ನೋೞ್ಪುದೆಂದು ಬಿನ್ನಪಂಗೆಯ್ಯಲಾ ವನಪಾಲಕನಂ ಪಸಾಯನಿತ್ತು ಕಳುಪಿದಾಗಳ್ –

೪೨. ಆ ಗಾಳಿಯ ಗೆಳೆತನದಿಂದ ಕೂಡಿ, ಆ ಉದ್ಯಾನದಿಂದ, ಇಂಪಾದ ಸ್ವರದಿಂದ ಕೃಷ್ಣದೇವನನ್ನು ಕರೆಯತಕ್ಕಂತಹ ಗಿಳಿಗಳ ಸ್ವರವೆಂಬಂತೆ ಕಿವಿಗೆ ಅವುಗಳ ಕಲರವವು ಕೇಳಿಸಿತು. (ಗದ್ಯ) ಆಗಲೆ ಬಾಗಿಲು ಕಾಯುವ ಹೆಂಗುಸು ಬಂದು, ದೂರದಲ್ಲೇ ನಮಸ್ಕರಿಸಿ– "ದೇವ, ಹೊರಬಾಗಿಲಿನಲ್ಲಿ ಉದ್ಯಾನಪಾಲಕನು ಕಾದಿರುವನು. ನಿಮ್ಮನ್ನು ಕಾಣುವ ಅವಕಾಶವನ್ನು ತಿಳಿಯಲು ಬಂದಿದ್ದೇನೆ" ಎಂದಳು. ಆಗ ಕೃಷ್ಣನು. "ಅವನು ಒಳಗೆ ಬರಲಿ" ಎಂದನು. ಬಾಗಿಲಿನವಳು ಹೋಗಿ, ಪ್ರವೇಶಿಸಲು ಹೇಳಿದಳು. ಆಗ ವನಪಾಲಕನು ಮೆಲ್ಲನೆ ಬಂದು, ಬಾಗಿ ಕೈಮುಗಿದು – ಕೆಂಪಾದ ಅಶೋಕಪುಷ್ಪಗಳನ್ನು ಅಲಂಕಾರದಿಂದ ಪ್ರೀತಿಯುಳ್ಳವನ (ಕೃಷ್ಣನ) ಚರಣದ್ವಯಕ್ಕೆ ಅಲಕ್ತಕದಂತೆ ಇಟ್ಟು, ಸಂಪಿಗೆಯನ್ನು ದೇವತೆಗಳ ಮೇಲೆ ಕರುಣೆಯುಳ್ಳವನ (ಕೃಷ್ಣನ) ಎರಡು ಪಾದಗಳಿಗೆ ಹೊನ್ನಿನ ಕಾಣಿಕೆಯಂತೆ ಕೊಟ್ಟು, ಮಲ್ಲಿಗೆಯನ್ನು ಪರಿಮಳ ಸಾಗರದ ಲಕ್ಷ್ಮೀಪ್ರಿಯನ (ಕೃಷ್ಣನ) ಪಾದಗಳಿಗೆ ಪರಿಮಳವನ್ನುಂಟು ಮಾಡುವಂತೆ ಚೆಲ್ಲಿ, ಕಮಲವನ್ನು ಕಮಲಾ (ಲಕ್ಷ್ಮಿಯ ಅಥವಾ ತಾವರೆಯ) ಪ್ರಿಯನ ಪಾದಕಮಲಗಳಿಗೆ ಗೆಳೆತನವನ್ನಾಗಿ ಮಾಡಿ, ಮಾವಿನ ಹಣ್ಣನ್ನು ಮಹಾಬಲಶಾಲಿಯಾದ ಚಕ್ರಪಾಣಿಗೆ (ಕೃಷ್ಣನಿಗೆ) ಅರ್ಪಣೆ ಮಾಡಿ ಜೇನುತುಪ್ಪವನ್ನು ಜಯಕಾರ ಧ್ವನಿಯೊಂದಿಗೆ ಇತರರಿಗೆ ಜಯಿಸಲು ಅಸಾಧ್ಯವಾದ ಕೃಷ್ಣನಿಗೆ ಕೊಟ್ಟು ಪುನಃ ಸಾಷ್ಟಾಂಗ ವಂದನೆ ಮಾಡಿ – " ಸ್ವಾಮೀ, ವಸಂತಋತುವಿನಿಂದ ಶ್ರೇಷ್ಟವೆನಿಸಿದ ಬಾಹ್ಯೋದ್ಯಾನವನ್ನು ದೇವರು

ಕಂದ॥ ಬಹಿರುದ್ಯಾನವನೀಕ್ಷಿಸು
ವಹಮಹಮಿಕೆಯೊಗೆದುದಷ್ಟಮಾಂಗನೆಯಜಿಕೊಳು
ತ್ಸಹಮುಣ್ಮೆ ಪೊಣ್ಮೆ ಸಿದ್ಧತೆ
ಸಹಸಾ ನಿಶ್ಚಿತ ಮನೋಯುತಂ ಹರಿಯಾದಂ ॥೪೩॥

ಮಂದಾನಿಲರಗಳೆ

ಆಗಳ್ ಪೊಜಿಮಡುವುತ್ಸವಮೆಸೆದಿರೆ
ರಾಗಧ್ವನಿ ಮಿಗೆ ಗಾನಂ ಪೊಸತಿರೆ
ಸುರುಚಿರ ಭೂಷಣ ಭಾಷಣಮೊಟ್ಟಿರೆ
ಪರಿಮಳ ವಸ್ತುಚಯಮೊಡಂಬಟ್ಟಿರೆ
ಘೋಷದೆ ವಂದಿಜನಂ ಕೈವಾರಿಸೆ
ದೋಷವಿವರ್ಜಿತಮೆನುತುಂ ಪ್ರೇರಿಸೆ
ಪುರಸೌಧಸ್ಥಿತ ನಾರೀಕರದಿಂ
ದರಲ ಮಟಿಗಳುರುಳುತ್ತಿರೆ ಭರದಿಂ
ಸತ್ತಿಗೆವೆಜನ ಚವರನೆರವಿಗಳಿಂ
ಬಿತ್ತರ ಸಿಂಗರ ಬಿನ್ನಣಿಗೆಗಳಿಂ
ಶುಕಕುಳ ವಾಕ್ಪಟುತೆಯನೇಡಿಸುತುಂ
ಪಿಕರವಮಂ ಸಲೆ ಕೀಟಿಪ್ಮಾಡಿಸುತುಂ

(ತಾವು) ಸಂದರ್ಶಿಸಬೇಕು" ಎಂದು ಬಿನ್ನವಿಸಿದನು. ಆಗ ಕೃಷ್ಣನು ಅವನಿಗೆ ಉಡುಗೊರೆಯ ಬಹುಮಾನ ಕೊಟ್ಟು ಕಳುಹಿಸಿದನು. ಆಗ –

೪೩. ಶ್ರೀಕೃಷ್ಣನ ಅಷ್ಟಮಾಂಗನೆಯರಿಗೆ ಹೊರಗಿನ ಉದ್ಯಾನವನ್ನು ಸಂದರ್ಶಿಸುವ ತವಕವುಂಟಾಯಿತು. ಕೃಷ್ಣನಿಗೂ ಉತ್ಸಾಹವುಂಟಾಗಲು ಅವನು ಬೇಗನೆ ತಕ್ಕ ಸಿದ್ಧತೆಯೊಂದಿಗೆ ಹೊರಡಲು ನಿಶ್ಚಯ ಮಾಡಿದನು.

೪೪. ಶ್ರೀಕೃಷ್ಣನು ತನ್ನ ಪತ್ನಿಯರೊಂದಿಗೆ ಉದ್ಯಾನಕ್ಕೆ ಹೊರಡುವ ಸಂಭ್ರಮ ಕಾಣಿಸಿತು. ಹೊಸತಾಗಿ ರಾಗಯುಕ್ತವಾದ ಗಾನದ ಧ್ವನಿ ಕೇಳಿಸಿತು. ಉಜ್ವಲವಾದ ಕಾಂತಿಯುಳ್ಳ ಆಭರಣಗಳು! ಅವುಗಳೊಂದಿಗೆ ಪರಸ್ಪರವಾದ ಮಾತುಗಳು. ಸುವಾಸನೆಯ ದ್ರವಗಳು ಒಟ್ಟುಗೂಡಿದ್ದವು. ಸ್ತುತಿಪಾಠಕರು ದೊಡ್ಡಸ್ವರದಿಂದ ಸ್ತುತಿಪಠನ ಮಾಡಿದರು. ನಿರ್ದೋಷಕರವಾದ ಕಾರ್ಯವಿದು ಎಂದು ಪ್ರೇರಣೆ ಮಾಡಿದರು. ಪಟ್ಟಣ ಬೀದಿಯಲ್ಲಿ ಹೋಗುತ್ತಿರುವಾಗ ಉಪ್ಪರಿಗೆ ಮನೆಗಳ ಮೇಲಿಂದ ಅಲ್ಲಿನ ಸ್ತ್ರೀಯರು ಹೂಮಳೆಯನ್ನು ತಮ್ಮ ಕೈಯಿಂದ ಸುರಿಸಿದರು. ಹೋಗುವಾಗ ಬಿಸಿಲನ್ನು ತಡೆಯಲು ಕೊಡೆಗಳಿದ್ದವು; ಸೆಕೆಯನ್ನು ಕುಗ್ಗಿಸಲು ಬೀಸಣಿಗೆ ಚಾಮರಗಳಿದ್ದವು. ಗಿಳಿವಿಂಡಿನ ಮಾತುಗಳ ಕೌಶಲವನ್ನು ಹೀನಯಿಸುತ್ತ, ಕೋಗಿಲೆಗಳ ಸ್ವರವನ್ನು ಇಂಪಿನಿಂದ ಮೀರಿಸುತ್ತ, ದೇವತೆಗಳನ್ನು ಬಿಡುಗಣ್ಣರನ್ನಾಗಿ ಮಾಡುತ್ತ, ಬೆಟ್ಟಗಳನ್ನು ಅಚಲವಾಗಿ ಮಾಡುತ್ತ, ರತಿಯ ಸೌಂದರ್ಯವನ್ನು ಗೆದ್ದವರೂ ನೋಟವೆಂಬ ಹೂಬಾಣಗಳುಳ್ಳವರೂ ಹಿತಕರವಾಗಿ

ಸುರರಂ ಬಿಡುಗಣ್ಣರನಾಗಿಸುತುಂ
ಧರಣೀಧರವನಚಲವಾಗಿಸುತುಂ
ಜಿತರತಿರೂಪರ್ ದೃಗ್ಯುಮ ರೋಷರ್
ಹಿತಸಲ್ಲಾಪರ್ ಮಾಧವನೋಪರ್
ಉಕ್ಕಿಸಿ ಮನಮಂ ಶೋಭಾಘನಮಂ
ಪೊಕ್ಕರ್ ವನಮಂ ಸದ್ಭಾವನಮಂ ॥೪೪॥

ಗದ್ಯ ॥ ಅಂತುದ್ಯಾನಮಂ ಪೊಕ್ಕಾಗಳಲ್ಲಿ –

ಸ್ರಗ್ಧರಾ. ಸೌಂದರ್ಯಂ ಕಣ್ಗೆ ಪುಷ್ಪಂಗಳ ಪರಿಮಳಮಾ ನಾಸಿಕಕ್ಕೆತ್ತಲುಂ ಪ
ಣ್ಣಿಂದಂ ಜಿಹ್ವೇಂದ್ರಿಯಕ್ಕಾ ಶುಕಪಿಕಮುಖ ಗೀತಾಳಿ ಕರ್ಣಕ್ಕೆ ಶೈತ್ಯಾ
ಮಂದಂ ಚಂದ್ರೋಪಲಂ ತ್ವಕ್ಕಿಗೆನಲೆಸೆವ ಪಂಚೇಂದ್ರಿಯಂಗಳ್ಗಮತ್ಯಾ
ನಂದಂಬೆತ್ತೇಂ ಬಸಂತಂ ಸೊಗಸೆ ಸೊಗಯಿಸಿತ್ತಲ್ಲಿಯುದ್ಯಾವನಾಂತಂ ॥೪೫॥

ಉ.ಮಾ. ತಳಿರ್ಗಳ ಕಾವಣಂ ಮರಲ ತೊಂಗಲ ಸಾಲೆಳಗಾಯ ಬಾಟ್ ಫಳಂ
ಗಳ ಪೊಡೆಸೆಂಡಿನಾಟದ ಪೊಲಂ ನಱುಗಂಪಿನೆ ಕೋಣೆ ಭೂರುಹಾ
ವಳಿಯ ಜನಸ್ಥಳಂ ಬೆಳೆವ ಬಳ್ಳಿಯ ಪಳ್ಳಿ ಸುಮಂಗಳಾಗರಂ
ತಿಳಿಗೊಳದೊಂದು ಬಾಳ್ಮನೆ ಪೊಗಟ್ತೆಯ ಸೋಬೆಗಳೆರ್ಕೆದಾಣಮುಂ ॥೪೬॥

ಸಂವಾದ ಮಾಡುವವರೂ ಆದಂತಹ, ಕೃಷ್ಣನಲ್ಲಿ ಪ್ರೀತಿಯುಳ್ಳವರಾದ ಆ ಹೆಂಗಸರು ಮನಸ್ಸಿನಲ್ಲಿ ಉತ್ತೇಜನಗೊಂಡವರಾಗಿ ಶೋಭೆಯಲ್ಲಿ ಘನತೆಯನ್ನು ತಾಳಿದ ಮತ್ತು ಸದ್ಭಾವನೆಗೆ ಎಡೆಯಾದ ಉದ್ಯಾನವನ್ನು ಹೊಕ್ಕರು.

(ಗದ್ಯ) ಹಾಗೆ ಉದ್ಯಾನದ ಒಳಗೆ ಹೋದಾಗ –

೪೫. ಆ ಉದ್ಯಾನದ ಸುತ್ತಮುತ್ತಣ ಪ್ರದೇಶವು ವಸಂತಮಾಸದ ಸೊಗಸಿನಿಂದ ಹೇಗೆ ಸೊಗಸಾಗಿದ್ದಿತೆಂದರೆ – ಆ ಸೊಗಸು ಕಣ್ಣುಗಳಿಗೂ ಹೂಗಂಪು ಮೂಗಿಗೂ ಎಲ್ಲೆಲ್ಲಿಯೂ ಕಾಣಿಸುವ ಹಣ್ಣುಗಳಿಂದ ನಾಲಗೆಗೂ ಗಿಳಿಕೋಗಿಲೆಗಳ ಮುಖದಿಂದ ಬರತಕ್ಕ ಹಾಡು ಕಿವಿಗೂ ಅತಿಶಯವಾಗಿ ಕಣ್ಣಿಗಿರುವ ಚಂದ್ರಕಾಂತಶಿಲೆ ಚರ್ಮಕ್ಕೂ – ಹೀಗೆ ಪಂಚೇಂದ್ರಿಯಗಳಿಗೂ ಸಂತೋಷವನ್ನು ಉಂಟು ಮಾಡುವುದಾಗಿ ಸುಖಕರವಾಗಿದ್ದಿತು.

೪೬. ಆ ಪ್ರದೇಶವು – ಚಿಗುರುಗಳ ಚಪ್ಪರವಾಗಿ ಹೂಗೊಂಚಲ ಸಾಲಾಗಿ, ಎಳಗಾಯಿಗಳ ಬಾಳ್ವೆಯಾಗಿ, ಹಣ್ಣುಗಳೆಂಬ ಹೊಡೆಚೆಂಡಿನ ಆಟದ ಹೊಲವಾಗಿ, ಸುವಾಸನೆಯ ಕೋಣೆಯಾಗಿ, ಮರಗಳ ಜನ್ಮಸ್ಥಳವಾಗಿ, ಬೆಳೆಯುತ್ತಿರುವ ಬಳ್ಳಿಗಳ ಹಳ್ಳಿಯಾಗಿ, ಪುಷ್ಪಗಳ ಮನೆಯಾಗಿ, ತಿಳಿಗೊಳದ ಬದುಕಿನ ಮನೆಯಾಗಿ, ಹೊಗಳಿಕೆಗೆ ತಕ್ಕುದಾದ ಶೋಭೆಗಳಿಗೆ ನೆಲೆಯ ಸ್ಥಳವಾಗಿ ಶೋಭಿಸುತ್ತಿದ್ದಿತು.

ಗಿಳಿಗಳ ಪಾಠಶಾಲೆ ಮಱಿದುಂಬಿಗಳೂಟದ ಕುಟ್ಟಿಮಂ ಪಿಕಾ
ವಳಿಗದು ಗಾಣಸಾಲೆ ವನಹಂಸಯುಗಂಗಳ ಸಜ್ಜೆಸಾಲೆ ಸಂ
ಗಳಿಸಿದ ಜಕ್ಕವಕ್ಕಿಗಳ ಬೇಟದ ಸಾಲೆ ಸುಶೀಶವಾಶದಾ
ಕುಳಗೃಹವಂಗಜಾತ ಜಿತಭೂಮಿ ವಸಂತನ ಬಾಳ್ಕೆಗಿರ್ಕೆಯುಂ ॥೪೭॥

ಗದ್ಯ॥ ಎನಿಸಿ ತದ್ವನಂ ಸೊಗಯಿಸುತಿರ್ಪುದುಂ –

ಕಂದ॥ ಮಾಧವಿಯರಲ ಜಿನುಂಗಿಂ
ಮಾಧವನಂಗಂಗಳಂದು ತೊಯ್ದಂತಿರೆ ರಾ
ಗೋದಿತ ಮಾನಸನಾ ರಾ
ಗೋದಿತಮಂ ಪುಗುವಿನಂ ವಸಂತದ ವನಮಂ ॥೪೮॥

ಆ ವನಿತಾಪಾದಸ್ಥಲಿ
ತಾವನಿಜಂ ಕೊನರ್ದುದೆಂಬವೋಲ್ ಚಿಗುರ್ಗಳ ಚೆಂ
ಬೂವಿನ ಪೊಸವೊಱಿಯಿಂದಂ
ಭೂವಿನ ಚೆಂದೋರಣಂಬೊಲೆಸೆದು ಶೋಕಂ ॥೪೯॥

ಬಳ್ಳಿಯ ಪೆಣ್ ಮೊಱಿವಾಡಿನ
ಬಳ್ಳಿಯನೆಳೆಯುತ್ತೆ ಹರಿಯ ಮುಂದೆಸೆಯಿಂದಂ
ಬೆಳ್ಳಿಯ ಮಂದಾರದ ಪೊಸ
ಬಳ್ಳಿಯ ತಳಿಗೆಯ ಮಿಳಿರ್ಚಿತಾರತಿಯೋಂಬೋಲ್ ॥೫೦॥

೪೭. ಗಿಳಿಗಳು ಪಾಠ ಮಾಡುವ ಶಾಲೆ, ಮರಿದುಂಬಿಗಳ ಊಟದ ಜಗಲಿ, ಕೋಗಿಲೆಗಳ ಗಾನಶಾಲೆ, ನೀರಿನ ಹಂಸಪಕ್ಷಿಯ ಜೊತೆಯ ಮಲಗುಮನೆ, ಅಲ್ಲಿ ಬಂದು ಸೇರಿದ ಚಕ್ರವಾಕಪಕ್ಷಿಗಳ ಶೃಂಗಾರಚೇಷ್ಟೆಯ ಶಾಲೆ, ಒಳ್ಳೆಯ ತಂಗಾಳಿಯ ಕುಲದ ಮನೆ, ಮನ್ಮಥನಿಂದ ಜಯಿಸಲ್ಪಟ್ಟ ಭೂಮಿ, ವಸಂತನ ಬದುಕಿಗೆ ಆಶ್ರಯ (ಗದ್ಯ) ಹಾಗೆನಿಸಿ ಆ ಬನವು ಸೊಗಸಾಗಿದ್ದಿತು.

೪೮. ದುಂಡುಮಲ್ಲಿಗೆಯ ಹೂವಿನ ಮಳೆಯಿಂದ ಕೃಷ್ಣನ ಮೈಯೆಲ್ಲ ಒದ್ದೆಯಾದಂತಿರಲು, ಪ್ರೀತಿಯಿಂದ ಮೂಡಿದ ಮನಸ್ಸುಳ್ಳವನಾದ ಅವನು ಆ ವಸಂತದ ಶೋಭೆಯ ಉದ್ಯಾನವನ್ನು ಪ್ರವೇಶಿಸಿದನು. ಆಗ ಏನಾಯಿತೆಂದರೆ –

೪೯. ಆ ಸ್ತ್ರೀಯರ ಪಾದವಿನ್ಯಾಸದಿಂದಲೇ ಮರವು ಚಿಗುರಿತೋ ಎಂಬ ಹಾಗೆ, ಚಿಗುರುಗಳ ಮತ್ತು ಕೆಂಪಾದ ಹೂಗಳ ಹೊಸತಾದ ಹೊರೆಯಿಂದ ಭೂಮಿಯ ಕೆಂಪು ತೋರಣವೋ ಎಂಬಂತೆ. ಅಶೋಕ ವೃಕ್ಷಗಳು ಶೋಭಿಸಿದವು.

೫೦. ಬಳ್ಳಿಯೆಂಬ ಹೆಣ್ಣು ತುಂಬಿಗಳ ಮೊರೆಯೆಂಬ ಹಾಡಿನ ಬಳ್ಳಿಯನ್ನೆಳೆಯುತ್ತ ಶ್ರೀಕೃಷ್ಣನ ಮುಂಗಡೆಯಲ್ಲಿ ಬಿಳಿಮಂದಾರದ ಹೊಸತಾದ ಬೆಳ್ಳಿಯ ತಟ್ಟೆಯಂತಿರುವ ಹೂವನ್ನು ಅಲುಗಾಡಿಸಿದಾಗ, ಅದು ಆರತಿಯೆತ್ತುವಂತೆ ಕಾಣಿಸಿತು.

ಪೊಸತಂದೆನೆ ತೀಡುವಿನಂ
ಪೊಸತಂಬೆಲರಲ್ಲಿ ಬಾೞೆ ಚವರಂಗೆಯ್ಯುಂ
ವಸುದೇವಸುತಂ ಬಂದಿರೆ
ವಸುಧೇಶಂಗಿಂತುಟೊಸಗೆಯೆಸಗಲ್ವೇಡಾ? ॥೫೧॥

ಕಿತ್ತಳಿಲ ಕಪಿಯ ಕಾಗೆಯ
ತುತ್ತಾಗಿಯುಮಮಿತ ಫಳಸಮೂಹಂಗಳುಮಂ
ಪೊತ್ತುವನೀಕ್ಷಿಸಿ ನುಡಿದನಿ
ದೊತ್ತಂಬದ ಸೌತೆವಿಂಡಿಯೆನುತುಂ ಪಲಸಂ ॥೫೨॥

ಮೊದಲೊಳ್ ಬೆಸನಂ ಬಾರ್ತೆಯೆ
ತುದಿಯಲ್ಲೆಂದಱಿಪುವಂತೆ ಮೊದಲಂ ಪೊಱೆವರ್
ತುದಿಯಿಂ ಬೆಳಸಂ ಪಡೆವರ್
ಮುದದಿಂ ಜನರೆಂದು ನೋಡಿದರ್ ಕೌಂಗುಗಳಂ ॥೫೩॥

ಕಱೆಯಂ ತಾಳ್ದಂಗಂ ಪಗ
ಲೆಱೆಯಂಗಂ ಲೋಕಹಿತರ್ಗೆಯಿನ್ನೆಳಗಾಯಂ
ಉಱದೀಯಲ್ ನೀಳ್ದುವೆನಲ್
ಮೆಱೆವಾ ತೆಂಗುಗಳನೆಯ್ದೆ ನೋಡಿದರಿನಿಸುಂ ॥೫೪॥

೫೧. ಆದಿನ ಅದು ಹೊಸತು ಎಂಬಂತೆ ಶ್ರೀಕೃಷ್ಣನು ಬಂದಾಗ, ಹೊಸ ತಂಗಾಳಿ ಬೀಸುತ್ತಿರಲು, ಬಾಳೆಗಿಡವು ಚಾಮರ ಬೀಸುತ್ತಿದ್ದಿತು. ಭೂಮಿಗೆ ಒಡೆಯನಾದವನಿಗೆ ಹೀಗೆ ಶುಭಕಾರ್ಯವನ್ನು ಮಾಡಬೇಕಲ್ಲವೆ?

೫೨. ಸಣ್ಣ ಅಳಿಲಿನ, ಮಂಗಗಳ, ಕಾಗೆಗಳ ಆಹಾರವಾಗಿಯೂ ಮಿತಿಯಿಲ್ಲದಷ್ಟು ಹಣ್ಣುಗಳ ಸಮೂಹವನ್ನು ಹೊತ್ತಂತಹ ಹಲಸಿನ ಮರವನ್ನು ನೋಡಿ, ಕೃಷ್ಣನು – " ಇದು ಒತ್ತೊತ್ತಾದ ಸೌತೆವಿಂಡಿ"– ಎಂದನು. (ದ. ಕ. ಜಿಲ್ಲೆಯ ಹಳ್ಳಿಗಳಲ್ಲಿ ಮಳೆಗಾಲದ ಉಪಯೋಗಕ್ಕೆಂದು ಮಣಗಟ್ಟಳೆ ಸೌತೆಕಾಯ್ಗಳನ್ನು ತಂದು, ಮನೆಯೊಳಗೆ ಕಂಬಕ್ಕೆ ಅಥವಾ ಗೂಟಕ್ಕೆ ಒತ್ತೊತ್ತಾಗಿ ಕಟ್ಟುವರು. ಅದಕ್ಕೆ 'ಸೌಂತೆವಿಂಡಿ' ಎಂದು ಹೆಸರು.)

೫೩. "ಕೆಲಸವೇ ಮೊದಲು, ಕೊನೆಗೆ ಆ ಕೆಲಸದ ಪ್ರಯೋಜನ"– ಎಂಬ ನೀತಿಯನ್ನು ತಿಳಿಸುವ ರೀತಿಯಲ್ಲಿ (ಅಡಕೆಮರದ) ಬುಡವನ್ನು ಪೋಷಿಸುವರು (ನೀರುಗೊಬ್ಬರ ಮುಂತಾದುವನ್ನು ಹಾಕಿ ಸಾಕುವರು). ಮರದ ತುದಿಯಿಂದ ಅಡಕೆ ಬೆಳೆಯನ್ನು ಜನರು ಸಂತೋಷದಿಂದ ಪಡೆಯುವರು – ಎಂದುಕೊಂಡು ಅಡಕೆಮರಗಳನ್ನು ಅವರು ನೋಡಿದರು.

೫೪. ಲೋಕಕ್ಕೆ ಹಿತಕಾರಿಗಳಾದ ಚಂದ್ರನಿಗೂ ಸೂರ್ಯನಿಗೂ ಸವಿಯಾದ ಎಳನೀರನ್ನು (ಬೊಂಡವನ್ನು) ತ್ವರೆಯಾಗಿ ಕೊಡುವುದಕ್ಕಾಗಿಯೇ ನೀಡಿಕೊಂಡು ಮೆರೆಯುತ್ತಿರುವ ತೆಂಗಿನ ಮರಗಳನ್ನು ಒಂದಿಷ್ಟು ಹೊತ್ತು ಅವರು ನೋಡಿದರು.

ಮ.ವಿ. ಮಕರಂದವ್ರತಗೀತದಿಂ ಸೊಗಯಿಸುತ್ತುಂ ಕೋಕಿಲಾನೀಕದು
ನ್ಮುಖ ಶಬ್ದಂಗಳಿನೆಲ್ಲರಂ ಕರೆಯುತುಂ ಚಂಚಚ್ಚುಕಧ್ವಾನದಿಂ
ಸೊಗಮಂ ಕೇಳ್ವ ವಿಧಾನದಿಂದೆಸೆದು ಪೂವಿಂ ಪಲ್ಲವಾನೀಕದಿಂ
ದೆ ಘನಾಂತಸ್ಥ ಫಲಂಗಳಿಂ ವನದೆ ಚೂತಂ ಪ್ರೀತಿಯಂ ಸೂಚಿಕುಂ ॥೫೫॥

ಗದ್ಯ॥ ಎಂದು ಮುಂತಾಗಿ ಭಾವನಾಲೋಕದಿಂ ಸಮವಲೋಕಿಸಿ ಮನಸ್ತ್ರಪ್ರಿಯಂ ತಾಳ್ದು ಪೆಂಪಂ ಪೊಗೞ್ದುಮಲ್ಲಿ– ಗಾಳಿಯಂತೆ ಯಥೇಚ್ಛಮಾಗಿಯುಂ, ಕಾರ ಮೞೆಯಂತೆಲ್ಲೆಡೆ ವಿಡಿದುಂ, ರವಿದ್ಯುತಿಯಂತನರ್ಗಲ ವ್ಯಾಪಾರಕೆಯಿಂದೆಯುಂ, ಸಿಂಧುವಿನಂತೆ ರಸರಾಶಿ ಕುಂದದೆಯುಂ, ತುಂಬಿವಿಂಡಿನಂತನುಕ್ರಮದಿಂದೆಯುಂ, ಸಸ್ತ್ರೀಜನಂ ವಿನೋದಕರಣಂ ಶ್ರೀರಮಣಂ ವಿಂಡಿನಂತನುಕ್ರಮದಿಂದೆಯುಂ, ಸಸ್ತ್ರೀಜನಂ ವಿನೋದಕರಣಂ ಶ್ರೀರಮಣಂ ವಿಹರಿಪುದುಂ – ತತ್ಸುದತಿಯರ್ ಪೂಗೊಯ್ಯಲ್ ತಱಿಸಂದು –

ಕಮದ॥ ಬಾೞೆಯ ಕಿತ್ತೆಲೆಯುಂ ಪೊಸ
ಬಾೞೆಯ ನಾರುಂ ಕರಾಬ್ಜರುಚಿ ಮಸುಳ್ವಿನೆಗಂ
ಬಾಳೆಯರೊಳೆಸೆಯೆ ಶಶಿನಿಭ
ಫಾಳೆಯರಂದಲ್ಲಿ ಕೊಯ್ದರಿಚ್ಚೆಯ ಪೂವಂ ॥೫೬॥

೫೫. ತುಂಬಿಗಳ ಗೀತದಿಂದ ಸೊಗಸಾಗಿದ್ದುಕೊಂಡು, ಕೋಗಿಲೆಗಳ ಸಮೂಹದ ಮೇಲೆತ್ತಿದ ಬಾಯ್ಗಳಿಂದ ಬಂದ. ಶಬ್ದಗಳಿಂದ ಎಲ್ಲರನ್ನೂ ಬರಲು ಕರೆಯುತ್ತ, ಅಲುಗುವ ಗಿಳಿಗಳ ಸ್ವರದಿಂದ ಸೌಖ್ಯ ಪ್ರಶ್ನೆಯನ್ನು ಕೇಳುವ ರೀತಿಯಿಂದ ಶೋಭಿಸುತ್ತಾ – ಹೂವಿನಿಂದಲೂ ಚಿಗುರಿನ ಸಮೂಹದಿಂದಲೂ ಒಳಗಡೆ ಗಟ್ಟಿಯಾದ ಗೊರಟುಳ್ಳ ಹಣ್ಣುಗಳಿಂದಲೂ ಕೂಡಿರುವ ಮಾವಿನ ಮರವು ಆ ಉದ್ಯಾನದಲ್ಲಿ ಪ್ರೀತಿಯನ್ನುಂಟು ಮಾಡುವುದು. (ಗದ್ಯ) ಇತ್ಯಾದಿಯಾಗಿ ಭಾವನೆಯ ನೋಟದಿಂದ ಸರಿಯಾಗಿ ನೋಡಿ, ಮನಸ್ಸಿನಲ್ಲಿ ತೃಪ್ತಿ ತಾಳಿ, ಆ ಉದ್ಯಾನದ ಹಿರಿಮೆಯನ್ನು ಹೊಗಳಿ ಅಲ್ಲಿ ಗಾಳಿಯ ಹಾಗೆ ಯಥೇಚ್ಛೆಯಾಗಿಯೂ ಕಾರ್ದಿಂಗಳ ಮಳೆಯ ಹಾಗೆ ಎಲ್ಲಾ ಕಡೆಯನ್ನು ಬಿಡದೆಯೂ ಸೂರ್ಯನಂತೆ ತಡೆಯಿಲ್ಲದ ವರ್ತನೆಯಿಂದಲೂ ಸಮುದ್ರದಂತೆ ರಸದ (ನೀರಿನ) ರಾಶಿಗೆ ಕೊರತೆ ಬಾರದ ಹಾಗೆಯೂ ತುಂಬಿಗಳ ಹಿಂಡಿನಂತೆ ಅನುಕ್ರಮದಿಂದಲೂ ಹೆಂಗುಸರನ್ನು ಕೂಡಿಕೊಂಡು ವಿನೋದದ ಅಂತಃಕರಣವುಳ್ಳ ಶ್ರೀಕೃಷ್ಣನು ವಿಹಾರವನ್ನು ಮಾಡುತ್ತಿರಲು – ಆ ಹೆಂಗುಸರು ಹೂಗೊಯ್ಯಲು ನಿಶ್ಚಯ ಮಾಡಿಕೊಂಡು–

೫೬. ಬಾಳೆಯೆಲೆಯ ಕೀತು, ಹೊಸತಾದ ಬಾಳೆನಾರು – ಇವೆರಡೂ ಆ ಸ್ತ್ರೀಯರ ಕರಕಮಲದ ಕಾಂತಿಮಸುಕಾಗುವಂತೆ ಅವರ ಕೈಗಳಲ್ಲಿರಲು, ಚಂದ್ರನಂತಹ ಹಣೆಯುಳ್ಳ ಆ ಹೆಂಗುಸರು ತಮ್ಮ ಇಚ್ಛೆಗೆ ಬಂದ ಹೂಗಳನ್ನು ಕೊಯ್ದರು.

ಮ.ವಿ. ಮನಮಂ ಮೋಹಿಸುಗುಂ ಸಖೀಪ್ರಿಯತೆಯಂ ಪೆರ್ಚಿಕ್ಕುಮಾನಂದಮಂ
ಜನಿಯಿಕ್ಕುಂ ಸುವಿಲಾಸಮಂ ಮಿಗಿಸುಗುಂ ಸೌಂದರ್ಯವಿಸ್ತಾರವ
ರ್ತನಮಂ ಮಾಡಿಸುಗುಂ ಸುಸೌರಭವನುನ್ಮೀಲಿಕ್ಕುಮೀ ಪುಷ್ಪಮೆಂ
ದೆನುತುಂ ಮಲ್ಲಿಗೆವೂವನಲ್ಲರಸಿ ಕೊಯ್ದರ್ ಮಲ್ಲಿಕಾಂಗಾಂಗಿಯರ್ ॥೫೭॥

ಉ.ಮಾ. ಇಡು ವನಕಾಂತಿದಾಯಿಯಿದು ನಾರಿಯ ಸೃಪಿನೊಡರ್ಪು ರಂಜಿಪಿಂ
ತಿದನತಹಾರ್ಯ ಪುಷ್ಪರಸಸಂಯುತಮಿಂತಿದು ಪೆಂಡಿರೊಳ್ ಸಮಂ
ತೊದವಿದ ಕೋಪಣ ರಮಣೀಯತೆಗಂ ನೆಲೆಯೆಂದು ಕೊಯ್ದರಂ
ದದೆ ಕಡುಪೆಂಪಿನಿಂ ಮಲೆಯೆ ನಾಸಿಕಕೆ ಸಂಪಗೆವೂ ಮುಗುಳ್ಗಳಂ ॥೫೮॥

ಕಂದ॥ ಪಲದೆವಸಮುಳ್ಳ ಕಂಪುಂ
ತೊಲಗದ ಚೆಲ್ವುಂ ಕಟಿಲ್ಚದಿರ್ಪವಯವಮಂ
ತಲೆಯೊಳ್ ಸೂಡಿದೊಡೊಳವೆಂ
ದಲಂಪಿನಿಂದೊರ್ವಳಲ್ಲಿ ಸುರಯಿಯನಾಯ್ದಳ್ ॥೫೯॥

೫೭. ಮಲ್ಲಿಗೆಯಂತೆ ಕೋಮಲವೂ ಸುಗಂಧಯುಕ್ತವೂ ಆದ ಅವಯವಗಳಿಮದ ಕೂಡಿದ. ಆ ಮಾನಿನಿಯರು – "ಈ ಹೂವು ಮನಸ್ಸನ್ನೂ ಮೋಹಗೊಳಿಸುವುದು, ಸಖೀ ಪ್ರೀತಿಯನ್ನು ಹೆಚ್ಚಿಸುವುದು, ಸಂತೋಷವನ್ನು ಹುಟ್ಟಿಸುವುದು, ಒಳ್ಳೆಯ ಶೋಭೆಯನ್ನು ವೃದ್ಧಿಪಡಿಸುವುದು, ಸೌಂದರ್ಯವನ್ನು ವಿಸ್ತರಿಸುವುದು, ಒಳ್ಳೆಯ ಪರಿಮಳವನ್ನು ಅರಳಿಸುವುದು – ಎನ್ನುತ್ತಾ ಆ ಉದ್ಯಾನದಲ್ಲಿ ಹುಡುಕಿ ಮಲ್ಲಿಗೆ ಹೂವನ್ನು ಕೊಯ್ದರು.

೫೮. ಇದು ಉದ್ಯಾನಕ್ಕೆ ಕಾಂತಿಯನ್ನು ಕೊಡುವಂಥದು, ಇದು ಹೆಂಗುಸಿನ ಪುಣ್ಯದ ಸೃಷ್ಟಿ, ಶೋಭಾಯಮಾನವಾದ ಇದು ತುಂಬಿಗೆ ಒಯ್ಯಲು ಸಾಧ್ಯವಿಲ್ಲದ ಮಕರಂದವುಳ್ಳುದು, ಇದು ಹೆಂಗುಸರಲ್ಲಿ ಉಂಟಾದ ಸಿಟ್ಟನ್ನು ಹೋಗಲಾಡಿಸುವಂಥದು, ಮನಸೆಳೆವ ಗುಣಕ್ಕೆ ನೆಲೆಯಾದುದು – ಎಂದು ಕೊಂಡು ಆ ಸ್ತ್ರೀಯರು ತಮ್ಮ ಮೂಗಿಗೆ ಮಾರ್ಮಲೆವಂತಿರುವ ಸಂಪಗೆಯ ಹೂವಿನ ಮುಗುಳುಗಳನ್ನು ಗೌರವಭಾವದಿಂದ ಕೊಯ್ದರು.

೫೯. ಆ ಹೆಂಗುಸರಲ್ಲಿ ಒಬ್ಬಳು ಸುರಗಿಯ ಹೂವನ್ನು ಕಂಡು – "ಇದನ್ನು ತಲೆಯಲ್ಲಿ ಮುಡಿದುಕೊಂಡರೆ, ಹಲವು ದಿನಗಳವರೆಗೆ ಇರತಕ್ಕ ಪರಿಮಳವೂ ತೊಲಗದಿರುವ ಚೆಲುವೂ ಕಳಚದಿರುವ ಎಸಳುಗಳೂ ಇರುತ್ತವೆ" ಎಂದುಕೊಂಡು ಸಂತೋಷದಿಂದ ಸುರಗಿ ಹೂವನ್ನು ಆಯ್ದುಕೊಂಡಳು.

ಶಚಿ ಸೂಡುವ ಪೂವೆಂದ
ಲ್ಲಿ ಚದುರೆಯಾ ಪಾರಿಜಾತ ಸುಮಮಂಜರಿಯಂ
ರುಚಿ ಧವಳೀಕೃತ ಶೀತಲ
ರುಚಿಕರಿಯಂ ಕೊಯ್ಯೆ ಗಂಧಸಂಪತ್ಕರಿಯಂ ॥೬೦॥

ಅಚ್ಚರಸಿಯ ಪೊಸ ಚೆಲ್ವಂ
ಪೆರ್ಚಿಪ ಪೂವೊಂದನಾಯ್ದು ಕೊಯ್ದಳದೊರ್ವಳ್
ಅಚ್ಚರಸಿಯ ಪೊಸ ಚೆಲ್ವಂ
ತುಚ್ಛೀಕರಿಪಂತೆ ಸೂಡಿ ಗಾಡಿಯಿನೆಸೆದಳ್ ॥೬೧॥

ಗದ್ಯ॥ ಅಂತು ಸಿಕ್ಕಿಸಿಕ್ಕಿದ ತಕ್ಕಿನ ಪೂಗಳನೆಕ್ಕೆಕ್ಕೆಯಿಂ ಕುಯ್ದು ಕುಯ್ದು ಬಾಟಿಯ ಮೇಣ್ ಬಿಸನಾಳದ ಕಂತುವಿಂ ಬಿಗಿದು ಪೂಮಾಲೆಗಳನಪೂರ್ವ ದೇಶಿಗಳನೆಸಗಿ ಮುಡಿದಲಂಕರಿಸಿ ಸೊಬಗನವಲೋಕಿಸಿ ತಾಮೆ ಮೆಚ್ಚಿ ತೂಗಿ ನಲಿದುಕ್ಕಿ ತದ್ವನಾಂತರಮಂ ಸುತ್ತುತ್ತಿರ್ಪ ವನದೇವತೆಯರೆ ಪುಷ್ಪದೇವತೆಯರಾದರೆನಿಸಿ ರಂಜಿಸುತ್ತಿರೆ – ಮತ್ತಂ ಬಿಕ್ಕಿಯಳಲ್ವ ಕೂಸು ಬಱಿಯುಟ್ಕಿಱಿಂ ತಣಿಯದೆಂಬಂತನಿತ್ತುಂ ಪರಿಕರಂಗಳಿಂ ತೃಪ್ತಿಯುರಾಗದ ನಿಜಾಪ್ತೆಯರೊತ್ತಾಯದಿಂದಾ ಚಕ್ರಿಯುಂ ಚಕ್ರವಾಕಮಿಥುನ ವಿಕ್ರಮ ಧಾಮಮಪ್ಪದೊಂದು ವನಜವನಕ್ಕೆ ಬಂದಾಗಳ್ –

೬೦. ಅಲ್ಲಿ ಚತುರೆಯಾದ ಓರ್ವಳು ಇದು ಇಂದ್ರನ ಪತ್ನಿಯಾದ ಶಚೀದೇವಿ ಮುಡಿದು ಕೊಳ್ಳುವ ಹೂವು ಎಂದು ಕೊಂಡು, ತನ್ನ ಕಾಂತಿಯಿಂದ ಚಂದ್ರನ ಕಾಂತಿಯನ್ನು ಬಿಳಿದು ಮಾಡತಕ್ಕ ಪಾರಿಜಾತದ ಹೂಗೊಂಚಲನ್ನು ಕೊಯ್ದಳು. ಆಗ ಇನ್ನೊಬ್ಬಳು–

೬೧. ದೇವಸ್ತ್ರೀಯ ಹೊಸ ಚೆಲುವನ್ನು ಹೆಚ್ಚಿಸತಕ್ಕ ಒಂದು ಹೂವನ್ನು ಆಯ್ದು ಕೊಯ್ದಳಲ್ಲದೆ, ಅದನ್ನು ಮುಡಿದು ದೇವತಾಸ್ತ್ರೀಯ ಹೊಸ ಚೆಲುವನ್ನು ಕೀಳಾಗಿ ಮಾಡುವ ಹಾಗೆ ಸೊಗಸಿನಿಂದ ಶೋಭಿಸಿದಳು.

(ಗದ್ಯ) ಹಾಗೂ ಸಿಕ್ಕಿ ಸಿಕ್ಕಿದ ಯೋಗ್ಯವಾದ ಹೂಗಳನ್ನು ಒಂದರ ಮೇಲೊಂದರಂತೆ ಕೊಯ್ದು ಬಾಳೆನಾರು ಮತ್ತು ತಾವರೆದಂಟಿನ ನಾರಿನಿಂದ ಕಟ್ಟಿ ಅಪೂರ್ವದೇಶಿಗಳ ರೂಪದ ಹೂಮಾಲೆಗಳನ್ನು ಮಾಡಿ ತಲೆಯಲ್ಲಿ ಮುಡಿದು ಅಲಂಕಾರ ಮಾಡಿ, ತಮ್ಮ ಸೊಬಗನ್ನು ತಾವೇ ನೋಡಿ ಮೆಚ್ಚಿ, ತಲೆದೂಗಿ ನಲಿದು ಹಿಗ್ಗಿ ಆ ವನದ ಪರಿಸರವನ್ನು ಸುತ್ತಾಡುತ್ತಿರುವ ವನದೇವತೆಯರೆ ಹೂವಿನ ದೇವತೆಯರಾದರೆಂದೆನಿಸಿ ರಂಜಿಸುತಿದ್ದರು. ಹೀಗಿರುತ್ತ ಅದಲ್ಲದೆ ಬಿಕ್ಕುತ್ತ ಅಳುವ ಮಗು ಬರಿಯ ಪ್ರೀತಿಯಿಂದ ತೃಪ್ತಿಗೊಳ್ಳದಿರುವಂತೆ, ಅಷ್ಟೊಂದು ಸಲಕರಣೆಗಳಿಂದಲೂ ತೃಪ್ತಿಗೊಳ್ಳದ ತನ್ನ ಪ್ರಿಯೆಯರ ಒತ್ತಾಯಕ್ಕೆ ಮಣಿದ ಶ್ರೀಕೃಷ್ಣನು ಚಕ್ರವಾಕ ಮಿಥುನದ ಪರಾಕ್ರಮದ ಸ್ಥಳವಾದ ಅದೊಂದು ಸರೋವರದ ಕಡೆಗೆ ಬಂದನು., ಆ ಸರೋವರ ಹೇಗಿದ್ದಿತೆಂದರೆ –

ಮ. ಸ್ರ. ಇದು ಮೂಲೋಕಾಂಬುಜಾರಣ್ಯದ ಸೊಬಗುಗಳೊಂದಾಗಿ ನಿಂದಿರ್ಪ ತಾಣಂ
ವಿಧುಕಾಂತಿ ಕ್ಷಾಳಿತೇಂದೂಪಳದೊಜಿತದ ಶುಭ್ರಾಂಬುಗಿಂಬಾದ ತಾಣಂ
ಮದನಾವೇಗಾತಿ ಶಾಂತಿಪ್ರದದಮಗುಣಮೇ ನೀರರೂಪಾಂತ ತಾಣಂ
ವಿಧಿಕೌಶಲ್ಯ ಪ್ರಕಾಶಂ ವಿಮಳತೆಯ ನಿವಾಸಂ ಕೃತಾಮಂದ ತೋಷಂ ॥೬೨॥

ಕಂದ॥ ಸುತ್ತಣ ಗಿಡುಮರವಳ್ಳಿಯ
ಕುತ್ತುಜ ಪಸುರ್ಗತ್ತಲಿರ್ಪ ತಡಿಯಂ ಕೃಷ್ಣಂ
ಚಿತ್ತಹರಮೆಸಗಿ ರವಿವಿಲ
ಸತ್ತೇಜೋಮಧ್ಯ ಸರಸಿಯಂ ನಿಟ್ಟಿಪುದುಂ ॥೬೩॥

ಶಾ.ವಿ. ಪೂವಿಂ ಪೂವಿಗೆ ಪಾರ್ದು ಪಾರ್ದು ಪೊಸ ಬಂಡಂ ಪೀರ್ವ ಬಲ್ದುಂಬಿ ನೀ
ರ್ವೂವಂ ಸಜ್ಜೆಯ ಮಾಳ್ಪ ಸಾರಸದೆ ಕೋಪಂದಾಳ್ದು ಗುಂಪಾಗಿ ಬಂ
ದೇವೆಂ ಪಾಸದೆ ಕಟ್ಟುತಿರ್ದಪುದೋ ಬೆಳ್ವಂ ತಾಂ ಕರಂಗಿಪ್ಪುದೆಂ
ಬಾ ಪೋಲ್ ಮುತ್ತುಗುಮಾರ್ಗುಮೇಂ ಸಹಿಕುಮೇ ಕರ್ತವ್ಯವಿಚ್ಛೇದಮಂ ॥೬೪॥

೬೨. ಇದು ಮೂರುಲೋಕಗಳ ಸರೋವರಗಳ ಸೊಬಗುಗಳೆಲ್ಲ ಒಂದಾಗಿ ನಿಂತಿರುವ ಸ್ಥಳವೆಂಬಂತೆಯೂ ಬೆಳ್ದಿಂಗಳಿಂದ ತೊಳೆಯಲ್ಪಟ್ಟ ಚಂದ್ರಕಾಂತ ಶಿಲೆಯಿಂದ ಒಸರಿದ ಶುದ್ಧ ನೀರಿಗೆ ಆಶ್ರಯವಾದ ಸ್ಥಳವೆಂಬತೆಯೂ ಕಾಮದ ಆವೇಗವನ್ನು ಶಾಂತಗೊಳಿಸುವ ಇಂದ್ರಿಯನಿಗ್ರಹ ಗುಣವೇ ನೀರಿನ ರೂಪತಾಳಿದ ಸ್ಥಳವೆಂಬಂತೆಯೂ ಸೃಷ್ಟಿಕರ್ತನ ಕೌಶಲವನ್ನು ಪ್ರಕಾಶಿಸುವಂತಹದೂ ನೈರ್ಮಲ್ಯದ ನೆಲೆಯೂ ಅತಿಶಯ ಸಂತೋಷಕರವೂ ಆಗಿದ್ದಿತು.

೬೩. ಸುತ್ತಲೂ ಇರತಕ್ಕ ಗಿಡ ಮರ ಬಳ್ಳಿ ಪೊದರುಗಳ ಹಸುರಗತ್ತಲೆಯಿಂದ ಕೂಡಿರತಕ್ಕ ದಡವನ್ನು ನೀಲವರ್ಣನಾದ ಕೃಷ್ಣನು ಮತ್ತಷ್ಟು ಮನೋಹರಗೊಳಿಸುವವನಾಗಿ ಸೂರ್ಯ ಬಿಸಿಲಿನಿಂದ ಶೋಭಿಸುವ ಮಧ್ಯಭಾಗವುಳ್ಳ ಸರೋವರವನ್ನು ನಿಟ್ಟಿಸಿದಾಗ –

೬೪. ಒಂದು ತಾವರೆ ಹೂವಿನಿಂದ ಇನ್ನೊಂದು ಹೂವಿಗೆ ಹಾರುತ್ತಾ ಹೊಸ ಜೇನನ್ನು ಹೀರುವ ಬಲಿಷ್ಠವಾದ ತುಂಬಿಯು, ತಾವರೆಯನ್ನು ತನ್ನ ಶಯ್ಯೆಯಾಗಿ ಮಾಡತಕ್ಕ ಹಂಸಪಕ್ಷಿಯ ಮೇಲೆ ಕೋಪಗೊಂಡು, ಗುಂಪಾಗಿ ಬಂದು ಹಗ್ಗದಿಂದ ಬಂಧಿಸುತ್ತಿರುವುದೋ ತಾವರೆಯ ಬಿಳುಪನ್ನು ಕಪ್ಪು ಮಾಡುವುದೋ ಎಂಬಂತೆ ಮುತ್ತುತ್ತಿರುವುದು, ಮತ್ತು ಕೂಗುತ್ತಿರುವುದು. ತನ್ನ ಕೆಲಸಕ್ಕೆ ತೊಂದರೆಯೊಡ್ಡುವುದನ್ನು ಅದು ಸಹಿಸುವುದೇ?

ಕೂಜದ್ರಾಜಮರಾಳದಿಂ ರತುನದಾ ಸೋಪಾನದಿಂ ಪಾನದಿಂ
ಸಾಜಂ ತೃಪ್ತಿಯನಾಂತ ಜೀವತತಿಯಿಂದಾಮೋದದಿಂ ಮೋದದಿಂ
ಭೂಜ ಪ್ರಾಂತದೊಳಾಡಿ ತೀಡುವ ಸಮೀರಾಮಂದದಿಂದಂದದಿಂ
ರಾಜದ್ರಾಜಸರಂ ರಜಃಪುಳಿನಮಿಶ್ರಂ ಕೂಲದಿಂ ಕೂಲದಿಂ ॥೬೫॥

ಗದ್ಯ॥ ಮತ್ತಮದು ಕುಜನಪರಿವೃತಮಾಗಿಯುಂ ಸದಾಳಿಸಂಗತಮುಂ – ಪಂಕಜಯುತಮಾಗಿಯುಂ ನಿರ್ಮಳಮುಂ – ಸಮರ್ಥ ಚಕ್ರಯುತಮಾಗಿಯುಂ ವಿಜಯೇಚ್ಛಾರಹಿತಮುಂ – ಸಾರಸಹಿತಮಾಗಿಯುಂ ಗೌರವಾನಕಾಂಕ್ಷಿಯುಂ – ಷಟ್ಪದನಾದಯುತಮಾಗಿಯುಂ ದ್ವಿಪಾದಬಹುಭಾಷಿತವುಮೆನಿಸಿದುದು. ಅಲ್ಲಿಯಾ ಸುದತಿಯರ ಪರಿಹೃತ ನೂತನಾಭಿಲಾಷಾನ್ವಿತೆಯರಪ್ಪುದಜೆಂದೆ ನೀರಾಟಮಂ ಬಯಸುವುದುಂ–

೬೬. ಎಡೆಯೊಳ್ ತೊಟ್ಟನೆ ಮೇಲೆವರ್ಪ ಕಿರುಕೆಮ್ಮೀನ್ ಬಂಬಲೇ ತಂಬುಲಂ
ಸಿಡಿವಂತೊಪ್ಪಿರೆ ಬಾಯಿನಲ್ಲಿ ಪರಿವಾಮೇಳಂಬದಾಳಂಬನಂ॥
ಕಡೆಗಣ್ಣಂತಿರೆ ನೀರಜಾನನೆಯ ಚಕ್ರಸ್ತನ್ಯೆಯಂ ಕನ್ಯೆಯಂ ತಡಿಯಿಂ
ನೋಡಿದರಲ್ಲಿ ಸೂತ್ರ ಕಟಿಯಂ ಸ್ಯಂಗಾರಕಾಸಾರೆಯಂ ॥೬೬॥

೬೫. ಶೋಭಾಯಮಾನವಾದ ಆ ಸರೋವರವು ಕೂಗುವ ರಾಜಹಂಸದಿಂದಲೂ ರತ್ನದ ಮೆಟ್ಟಿಲುಗಳಿಂದಲೂ ಜಲಪಾನದಿಂದ ಸಹಜವಾಗಿ ತೃಪ್ತಿ ತಾಳಿದ ಜೀವಿಗಳಿಂದಲೂ ಪರಿಮಳದಿಂದ ಮತ್ತು ಸಂತೋಷದಿಂದ ಮರಗಳಿರುವ ಪ್ರದೇಶದಲ್ಲಿ ಸುತ್ತಾಡಿ ಬೀಸುತ್ತಿರುವ ಮಂದಮಾರುತದಿಂದಲೂ ಅಂದದಿಂದಲೂ ಅದು ಅನುಕೂಲಕರವಾಗಿ ಪುಷ್ಪರೇಣುವಿನಿಂದ ಮಿಶ್ರಿತವಾದ ದಡದಿಂದಲೂ ಕಂಗೊಳಿಸುವುದು. (ಗದ್ಯ) ಅದಲ್ಲದೆ ಆ ಸರೋವರವು ಕುಜನದಿಂದ (ಕೆಟ್ಟ ಜನರಿಂದ ; ಮರಗಳಿಂದ) ಆವರಿಸಿಕೊಂಡಿದ್ದರೂ ಸದಾಳಿಯಿಂದ (ಸತ್ಪುರುಷರ ಸಮೂಹದಿಂದ ; ಯಾವಾಗಲೂ ತುಂಬಿಗಳಿಂದ) ಕೂಡಿದುದಾಗಿದೆ. ಪಂಕಜ (ಕೆಸರಲ್ಲಿ ಹುಟ್ಟಿದುದು, ತಾವರೆ)ಗಳಿಂದ ಕೂಡಿದುದಾಗಿಯೂ ನಿರ್ಮಲವಾಗಿದೆ. ಸರಿಯಾದ ಅರ್ಥವುಳ್ಳ ಚಕ್ರ (ಚಕ್ರವಾಕ ಪಕ್ಷಿ, ಸೈನ್ಯ)ದಿಂದ ಕೂಡಿದುದಾಗಿಯೂ ಜಯಿಸುವ ಇಚ್ಛೆಯಿಲ್ಲದುದಾಗಿದೆ. ಸಾರಸಹಿತ (ಸತ್ವಯುಕ್ತ; ಹಂಸಗಳಿಗೆ ಹಿತ) ಆಗಿದ್ದರು, ಗೌರವವನ್ನು ಬಯಸದೆ ಇರುವಂಥದಾಗಿದೆ. ಷಟ್ಪದನಾದ (ಆರುಪಾದಗಳ ಪದ್ಯವನ್ನು ವಾಚನ ಮಾಡುವ ಸ್ವರ; ತುಂಬಿಗಳ ಮೊರೆತ)ದಿಂದ ಕೂಡಿದ್ದರೂ ದ್ವಿಪಾದ (ಎರಡು ಪಾದವುಳ್ಳದು; ಪಕ್ಷಿಗಳ) ಕಿಲಕಿಲ ಭಾಷೆಯಿಂದ ಕೂಡಿದುದಾಗಿದೆ. ಅಲ್ಲಿ ಆ ಹೆಂಗಸರು ತಮ್ಮ ಹೊಸದಾದ ಅಪೇಕ್ಷೆ ಪರಿಹಾರವಾಗದೆ ಇರುವವರಾದುದರಿಂದ ಜಲಕೇಳಿಯನ್ನು ಬಯಸಿದರು. ಆಗ ಕೃಷ್ಣನು ಹೀಗೆಂದನು –

೬೬. ಎಡೆಯಲ್ಲಿ ಒಮ್ಮೆಲೇ ಚಿಕ್ಕದಾದ ಕೆಮ್ಮೀನೊಂದು ಮೇಲೆ ಬರಲು ತಾಂಬೂಲ ಸಿಡಿದ ಬಾಯಿಯಂತೆ, ಹರಿಯುವ ನೀರಲ್ಲಿರುವ ತಾವರೆಯು ಕಡೆಗಣ್ಣಿನಂತೆ,

ಕಂದ॥ ಅಗಲಲ್ಕೇವಂ ಕೂಡಿದೊ
ಡೊಗೆಗುಂ ನಿಚ್ಚಂ ಪೊಣರ್ಕೆಯೀವಕ್ಕಿಗಳೊಳ್ ॥
ಜಗದೊಳ್ ಮಾನಿಸರೊಳಮೆಂ
ದಗಲದೆ ಪೊಣರ್ವಕ್ಕಿಜುಗಮನೀಕ್ಷಿಸುತಿರ್ದರ್ ॥೬೭॥

ಗದ್ಯ॥ ಮತ್ತಮದು ಕುಜನಪರಿವೃತಮಾಗಿಯುಂ ಸದಾಳಿಸಂಗತಮುಂ–ಪಂಕಜ ಯುತಮಾಗಿಯುಂ ನಿರ್ಮಳಮುಂ–ಸಮರ್ಥಚಕ್ರಯುತಮಾಗಿಯುಂ ವಿಜಯೇಚ್ಛಾರಹಿತಮುಂ–ಸಾರಸಹಿತಮಾಗಿಯುಂ ಗೌರವಾನಕಾಂಕ್ಷಿಯುಂ–ಪಟ್ಪದನಾದಯುತಮಾಗಿಯುಂ ದ್ವಿಪಾದ ಬಹುಭಾಷಿತಮುಮೆನಿಸಿದುದು. ಅಲ್ಲಿಯಾ ಸುದತಿಯರ ಪರಿಹೃತ–ನೂತನಾಭಿಲಾಷಾನ್ವಿತೆಯರಪ್ಪುದರಿಂದೆ ನೀರಾಟಮಂ ಬಯಸುವುದುಂ–

ಕಂದ॥ ಅರಮನೆಯೊಳವನೆಯಂ ಪೊಱ
ಟರಸನೊಡನೆ ಕೂಡಿಯಾಡಿ ಬನಮಂ ಪೊಕ್ಕುಂ
ಚರಿಸಿಯುಮಾಸಱ್ ಮಾಣದೆ
ಶರಕೇಳಿಯ ಬಯಸೆ ಬಯಕೆಗೇಂ ಕೊನೆಯುಂಟೇ? ॥೬೮॥

ತಳದಿಂದ ನೋಡಿದರೆ ಕಟಿಸೂತ್ರವನ್ನು ಕಟ್ಟಿಕೊಂಡ ದುಂಡು ಕುಚದ ಕನ್ಯೆಯಂತೆ ಆ ಸರೋವರವು ಶೋಭಿಸಿತು.

೬೭. ಜುಗುಪ್ಸೆಪಟ್ಟು ಅಗಲದೇ ನಿತ್ಯವೂ ಜೊತೆಯಾಗಿರುವ ಎಣೆವಕ್ಕಿಗಳಂತೆ ಲೋಕದಲ್ಲಿ ಮಾನವರು ಇರಲು ಸಾಧ್ಯವೆ? ಎಂದು ಕೊಂಡು ಆ ಪಕ್ಷಿಯುಗ್ಮವನ್ನು ನೋಡುತ್ತಿದ್ದರು.

೬೮. ಅಂತಃಪುರದಿಂದ ಹೊರಗೆ ಬಂದು ತಮ್ಮ ಪತಿಯ ಜೊತೆಗೂಡಿ ಸಂಚರಿಸುತ್ತಾ ಉದ್ಯಾನದ ಒಳಹೊಕ್ಕು ಸುತ್ತಾಡಿಯೂ ಬಾಯಾರಿಕೆ (ಅಪೇಕ್ಷೆ) ನಿಲ್ಲದೆ, ಈಗ ಕೊಳದಲ್ಲಿ ನೀರಾಟವಾಡಲು ಬಯಸುವುದಾದರೆ, ನಿಮ್ಮ ಬಯಕೆಗೇನು ಕೊನೆಯಿದೆಯೆ? (ಗದ್ಯ) ಹಾಗಾದರೆ, ನೀವು ಜಲಕೇಳಿಯಾಡಿ, ಬೇಗನೆ ತಂಪಿನ ಮನೆಗೆ ಬನ್ನಿ ಎಂದು ಆ ಗೋಪಿಯರ ಒಡೆಯನಾದ ಕೃಷ್ಣನು ಎಚ್ಚರಿಕೆಯನ್ನು ಹೇಳಿ, ಹೋದನು. ಆಗ ಆ ಹೆಂಗುಸರು ತಮ್ಮ ವಿಶೇಷದ ವೇಷಭೂಷಣಗಳನ್ನು ಕೊಳದ ದಡದಲ್ಲಿಟ್ಟು ಈಜಲು ಅನುಕೂಲವಾಗುವ ವೇಷದಿಂದ ಉತ್ಸಾಹಗೊಂಡವ ರಾದರು. ಆಗ ತಮ್ಮ ಕೊಂಕುಗುರುಳು ಬಣ್ಣದಲ್ಲಿ ತುಂಬಿಯನ್ನು ಗೆಲ್ಲುವಂತಿದ್ದಿತು. ಮುಖಕಮಲಗಳು ಕಮಲಗಳ ಹಿರಿಮೆಯನ್ನು ಹಿಂಗಿಸುವಂತಿದ್ದವು. ಕೆಂದುಟಿಗಳು ಕೆಂದಾವರೆಯ ಎಸಳುಗಳನ್ನು ಮಸುಕಾಗಿಸುವಂತಿದ್ದವು. ಮುಗುಳಿನಂತಹ ಮೊಲೆಗಳು ತಾವರೆಯ ಮುಗುಳುಗಳನ್ನು ಪ್ರತಿಭಟಿಸುವಂತಿದ್ದವು. ಕೆನ್ನೆಗಳೆಂಬ ಕನ್ನಡಿಗಳು ನೀರಿನ ನಿರ್ಮಲತೆಯನ್ನು ರೂಪುಗೆಡಿಸಿದವು. ಹೊಕ್ಕುಳವು ಆ

ಗದ್ಯ॥ ಅಂತಪ್ಪೊಡೆ ನೀರಾಟವಾಡಿ ಚೆಚ್ಚರದಿಂ ಕುಳಿವನೆಗೆ ಬರ್ಪುದೆಂದಾ ಗೋಪೀನಾಥನೆಟ್ಟಿರಿಸಿ ಪೋಪುದುಂ – ವಿಶೇಷ ವೇಷಭೂಷಣಂಗಳಂ ಕೂಲದೊಳ್ ಪತ್ತುವಿಟ್ಟನುಕೂಲ ವೇಷಾವೇಶಿತರಾಗಿ – ಕುಡುಗುರುಳಾಬಿಡಿಯಂ ಗೆಲೆಯುಂ – ವದನಪದ್ಮಂ ಪದ್ಮಂಗಳ ಪೆಂಪಂ ಪಿಂಗಿಸೆಯುಂ – ಚೆಂಬಾಯ್ದೆಱೆಗಳ್ ಕೆಂದಾವರೆಯೆಸಳ್ಗಳಂ ಮಸುಳಿಸೆಯುಂ – ಮುಗುಳ್ಮೊಲೆ ನೀರ್ವೂಮುಗುಳ್ಗಳಂ ಮಾರ್ಮಲೆಯೆಯುಂ – ಕೆಕ್ಕೆಗನ್ನಡಿ ನೀರವೈಮಲ್ಯಮಂ ರೂಪುಗಿಡಿಸೆಯುಂ – ಪೊರ್ಕುಳ್ ನೀರ್ಗೊಳನ ಗುಣ್ಪಂ ಪಟಿಯೆಯುಂ – ತುಂಗನಿತಂಬಂ ಮಣಲ ದಿನ್ನೆಯನಿಳಿಕೆಯ್ಯೆಯುಂ ಕೋಮಳಪಾಣಿ ಕಮಳನಾಳದ ಗಾಡಿಯಂ ಸೇಡಿಸೆಯುಂ ತೋರದೊಡೆ ತೀರದ ಬಾಟೆಯಂ ಸೋಲಿಸೆಯುಂ – ಕಂಕಣರವಂ ಕಂಕಣರವಮಂ ಸ್ಪರ್ಧಿಸೆಯುಂ – ಮೆಲ್ನಡೆಗಳಂಚೆಗಳಂ ಮೆಲ್ಲನೋಡಿಸೆಯುಂ – ಜಡಜಾಕ್ಷಿಯರಾ ದಡದಿಂದೆ ಜಡಜಾಕರಕ್ಕಿಳಿವಾಗಳ್ –

ಉ.ಮಾ. ಒಂದೆ ಶಶಾಂಕಬಿಂಬಮತಿದೂರ ನಭಸ್ಥಿತಮಾದೊಡಂ ವಿಕಾ
ಸಂದಳೆಯಲ್ಕೆ ಕೈರವಕುಲಂ ಪಲವಿಂದುಮುಖಂ ಸಮೀಪಿಸಿ
ತ್ತೆಂದೊಡೆ ಪೇೞ್ವುದೇನನೊಡನಾ ಲಲನಾಜನ ವಕ್ತ್ರಚಂದ್ರರುಗ್
ವೃಂದಮರಲ್ಚಿತಾ ಪಗಲೊಳಂ ಜಳಜಾಕರಕೈರವಂಗಳಂ ॥೬೯॥

ಕಂದ ॥ ಮೊದಲುತ್ಸವಮಾದುದು ತತ್
ಸುದತಿಯರ್ಗೋರ್ಮೋದಲೆ ಸೋಜಿದಂತರಮಂ ಬೇ
ಗದಿನಾಂ ಮುನ್ನೆಂದೀಸುವ
ಮುದದೊಳ್ ಸವತಿಯರ ತುರಿಪವನ್ನೀಕ್ಷಿಸುತುಂ ॥೭೦॥

ನೀರಿನ ಕೊಳದ ಆಳವನ್ನು ನಿಂದಿಸಿದವು. ಎತ್ತರವಾದ ನಿತಂಬಗಳು ಮಳಲಿನ ದಿಣ್ಣೆಯನ್ನು ಕೀಳು ಮಾಡುವಂತಿದ್ದವು. ಕೋಮಲವಾದ ಕೈಗಳು ತಾವರೆದಂಟಿನ ಸೊಬಗನ್ನು ಹೀಯಾಳಿಸಿದವು. ದಪ್ಪವಾದ ತೊಡೆಗಳು ಕೊಳದ ತಡಿಯ ಬಾಳೆಯನ್ನು ಸೋಲಿಸಿದವು. ಕೈಕಡಗಗಳ ಶಬ್ದವು (ಕಂಕಣ– ನೀರಿನ ಕಣ) ನೀರ ಹನಿಗಳ ಶಬ್ದದೊಡನೆ ಸ್ಪರ್ಧೆ ಮಾಡಿತು. ಅವರ ಮೆಲು ನಡೆಗಳು ರಾಜಹಂಸಗಳನ್ನು ಮೆಲ್ಲನೆ ಓಡಿಸಿದವು. ಹೀಗಿರಲು ಕಮಲಮುಖಿಯರು ಆ ಸರೋವರದ ದಡದಿಂದ ಸರೋವರಕ್ಕೆ ಇಳಿಯುವಾಗ –

೬೯. ಒಂದೇ ಒಂದು ಚಂದ್ರಬಿಂಬವು ಅತಿದೂರದ ಆಕಾಶದಲ್ಲಿದ್ದರೂ ಅದರ ಕಾಂತಿಯಿಂದ ನೈದಿಲೆಯ ಸಮೂಹವು ಅರಳುವುದು. ಹೀಗಿರುವಾಗ ಹಲವು ಚಂದ್ರ ಮುಖಗಳು ಹತ್ತಿರಕ್ಕೆ ಬಂದಾಗ ಹೇಳುವುದೇನು! ಆ ಕ್ಷಣವೇ ಆ ಹೆಂಗುಸರ ಮುಖಗಳೆಂಬ ಚಂದ್ರರ ಬೆಳಕಿನ ಸಮೂಹವು ಆ ಹಗಲಿನಲ್ಲಿ ಕೂಡ ಸರೋವರದ ನೈದಿಲೆಗಳನ್ನು ಅರಳುವಂತೆ ಮಾಡಿತು.

೭೦. ಈಜಾಡಲು ನೀರಿಗಿಳಿದ ಆ ಸ್ತ್ರೀಯರಿಗೆ ಮೊತ್ತ ಮೊದಲು ತಂತಮ್ಮ ಸವತಿಯರ ಈಜಾಟದ ತ್ವರೆಯನ್ನು ನೋಡುತ್ತಾ, ನಿಶ್ಚಿತವಾದ ದೂರದವರೆಗೆ ನಾನು ಮುಂದೆ ನಾನು ಮುಂದೆ ಎನ್ನುತ್ತ ಈಸುವ ಉತ್ಸಾಹವುಂಟಾಯಿತು.

ಉ.ಮಾ. ಸ್ಪರ್ಧಿತ ದೀರ್ಘಕಾಲ ಜಳಮಗ್ನ ಮಹೋತ್ಸವರಾಗ ಹರ್ಷಿತರ್
ವರ್ಧಿತ ಲೋಲವೀಚಿ ತನು ತಾಡಿತ ವಾರಿಗಳಂಗಮಂದು ಕ
ರ್ಚಿರ್ದುದಱಿಂದೆ ಪೆರ್ಚಿದತಿಸೌರಭಯುಕ್ತ ಜಲರ್ ಮುದಂಮನಂ
ಬೊರ್ದೆ ಸುವಸಿನೀಜನರೊರಲ್ದು ಸರೋವರದಲ್ಲಿಯಾಡಿದರ್ ॥೭೧॥

ಪಾಯ್ದು ಮುಳುಂಗಿ ಪೋಗಿಯಡಿನೀರೊಳಗಾಡುತೆ ಮೀಂಗಳಂತೆಯಾ
ರಯ್ದು ತದಡ್ಡದೊಲ್ ಪಱಿವ ಕಟ್ಟುತೆ ಮೇಗೆಯೆ ಗೊತ್ತನಾಯುತುಂ
ಸುಯ್ದು ಮಹೋತ್ಸವಂಬೆರಸು ತೆಂಕುತೆ ಮುತ್ತಿತರುಂಗುತೀಸುತುಂ
ಮುಗ್ಧೆಯರಲ್ಲಿ ನೀರ ಕೊಳದಲ್ಲಿ ಕರಂ ಶರಕೇಳಿಯಾಡಿದರ್ ॥೭೨॥

ಕಂದ॥ ಆಳದ ನೀರಲಿ ಮೀಪಂ
ತಾಳದ ನೆಲೆಯಲಿಯೆನಿಪ್ಪ ಪಾಡಿನ ತೆಱನೆಂ
ದಾಳದ ನೀರಾಟಕೆ ಪುದು
ವಾಳದ ಸವತಿಯನದೊರ್ವಳಿಳಿಸಿದಳಾಗಳ್ ॥೭೩॥

ಗದ್ಯ॥ ಮತ್ತಮೊರ್ವಳೆಂತಾನುಮಿನಿಸುಂ ತೆಂಕಲಱಿಯದೆ ಸೊಗಂಗೆಟ್ಟು ಸುಯ್ಯು ತ್ತಿರ್ಪನೆಗಂ –

೭೧. ಆ ಸುವಾಸಿನಿಯರು ಹೆಚ್ಚು ಹೊತ್ತು ನೀರಲ್ಲಿ ಮುಳುಗುವ ಉತ್ಸಾಹದ ಸ್ಪರ್ಧೆಯಲ್ಲಿ ಹರ್ಷ ಪಡುವವರಾಗಿಯೂ ದೇಹದ ಹೊಡೆತದಿಂದ ನೀರಿನಲ್ಲಿ ಚಂಚಲವಾದ ಅಲೆಗಳನ್ನು ಹೆಚ್ಚಿಸುವವರಾಗಿಯೂ ತಮ್ಮ ಮೈತೊಳೆದುದರಿಂದ ನೀರಿನ ಸುವಾಸನೆಯನ್ನು ಹೆಚ್ಚಿಸುವರಾಗಿಯೂ ಇದ್ದು ಮನಸ್ಸಿಗೆ ಮನಸ್ಸಂತೋಷವುಂಟಾಗಲು ಪ್ರೀತಿಪಟ್ಟು ಆ ಸರೋವರದಲ್ಲಿ ನೀರಾಟವಾಡಿದರು.

೭೨. ದಡದಿಂದ ನೀರಿಗೆ ಹಾರಿ ಮುಳುಗಿ ನೀರಿನ ಒಳಗಣ ಭಾಗದಲ್ಲೇ ಮೀನಿನಂತೆ ಈಜುತ್ತಿರುವಾಗ, ಇನ್ನೊಬ್ಬಳು ಮೇಲಿನಿಂದಲೇ ಆಕೆಯು ಹೋಗುವ ಗೊತ್ತನ್ನು ವಿಚಾರಿಸಿಕೊಂಡು, ಆಕೆಗೆ ಅಡ್ಡವಾಗಿ ಬಂದು ಅವಳ ಮುಂದುವರಿಕೆಯನ್ನು ತಡೆಯುತ್ತಿದ್ದಳು. ಆ ಮೇಲೆ ಉಸಿರುಕಟ್ಟಿದ್ದರಿಂದ ನಿಟ್ಟುಸಿರು ಬಿಡುತ್ತ ತೇಲುತ್ತಲೂ ತಿರುಗಿ ಈಜಾಡುತ್ತಲೂ ಆ ಮುಗ್ಧ ಸ್ತ್ರೀಯರು ಸರೋವರದಲ್ಲಿ ಜಲಕೇಳಿಯನ್ನಾಡಿದರು.

೭೩. ಆಳವಾದ ನೀರಿನಲ್ಲಿ ಜಲಕೇಳಿಗೆ ಹೊಂದಿಕೊಳ್ಳದ ಓರ್ವ ಸವತಿಯೊಡನೆ ಇನ್ನೊಬ್ಬಳು – "ಆಳವಾಗಿ ನೀರಿಲ್ಲದೆ ಕಡೆ ಮೀಯುವುದೆಂದರೆ – ತಾಳದ ನೆಲೆಯಿಲ್ಲವೆನಿಸುವ ಹಾಡಿನ ರೀತಿ" ಎಂದು ಹೀನಾಯಿಸಿದಳು.

(ಗದ್ಯ) ಅನಂತರ ಒಬ್ಬಳು ಹೇಗೂ ಒಂದಿಷ್ಟು ತೇಲಲು (ಈಜಲು) ತಿಳಿಯದೆ ಬೇಸರಿಸಿ ನಿಟ್ಟುಸಿರು ಬಿಡುತ್ತಿರಲು –

ಕಂದ॥ ಒಣತೆಂಗಾಯ್ ಝುಗಮಂ ತಳೆ
ಮುಣುಂಗದದು ಕಲ್ವ ರೀತಿಯೆಳಗಾಂಚುಂತೀ
ಪೊಣರ್ವೆದೆಯ ಭಾರಮೀಗಳ್
ಮುಣುಂಗಿಕುಂ ನಿನ್ನ ತನುವನೆಂದಳದೊರ್ವಳ್ ॥೭೪॥

ಮೆಲ್ಲನೆ ಮುಳುಂಗಿಯೊರ್ವಳ
ದೆಲ್ಲರ್ ಸುಸ್ಫಟಿಕಲಿಂಗಮೊಂದುದ್ಭವಿಸಿ
ತ್ತಲ್ಲೆಂದೀಕ್ಷಿಸೆ ತಂದಳ್
ಖಲ್ಲನೆನಗೆ ಕಲ್ಲನೊಂದನೆತ್ತುತ್ತಾಗಳ್ ॥೭೫॥

ತಾವರೆ ಸೆಟ್ಟೆಲೆ ನೀರಂ
ತಾವರೆಬರ್ ಮೊಗಕೆ ಚಿಮ್ಮಿ ತಾವರೆಯೆಲೆಯಿಂ
ತಾವರೆಬರ್ ತಡೆಯುತ್ತುಂ
ತಾವರ ಸೆಟ್ಟೆಲೆಯ ನೀರನೆಱಚುತ್ತಿರ್ದರ್ ॥೭೬॥

ಪನಿಯಂ ಪಾಜೆಪಿನಂ ಜೇಂ
ಬನಿಯಂ ಪೀರ್ವಳಿಗೆ ತಾವರೆಯ ಕೊಡೆವಿಡಿದುಂ
ದನಮಂ ಕಾಯಲ್ ಗೋವ
ರ್ಧನಮಂ ಹರಿಯಿಂತು ತಳೆದನೆಂದಳದೊರ್ವಳ್ ॥೭೭॥

೭೪. "ನಿನಗೆ ಈಜಲು ಬರುವುದಿಲ್ಲ. ಅದಕ್ಕಾಗಿ ನೀನು ಸಿಪ್ಪೆಯಿರುವ ಒಣತೆಂಗಿನ ಕಾಯಿಗಳೆರಡನ್ನು ಕಟ್ಟಿ ಧರಿಸಿಕೊಳ್ಳು. ಆಗ ಮುಳುಗಲಿಕ್ಕಿಲ್ಲ. ಇದು ಈಜಲು ಕಲಿವ ವಿಧಾನ. ಆದರೆ ಎಳಗಾಯಿಗಳಂತೆ ಜೋಡಿಯಾಗಿರುವ ನಿನ್ನ ಮೊಲೆಗಳ ಎದೆಯ ಭಾರವು ನಿನ್ನನ್ನು ಮುಳುಗಿಸುತ್ತಿದೆ" ಎಂದು ಒಬ್ಬಳು ಹೇಳಿದಳು.

೭೫. ಒಬ್ಬಳು ನೀರಿನಲ್ಲಿ ಮುಳುಗಿ ಒಂದು ಬಿಳಿಯ ಕಲ್ಲನ್ನು ಹೆಕ್ಕಿ ಮೇಲಕ್ಕೆ ತಂದಾಗ, ಎಲ್ಲರೂ ಈ ನೀರಿನಿಂದ ಒಂದು ಸ್ಫಟಿಕ ಲಿಂಗವು ಉದ್ಭವಗೊಂಡಿತು ಎಂದು ಹೇಳುತ್ತಾ ನೋಡಿದರು ಮತ್ತು ಗೊಳ್ಳನೆ ನಕ್ಕರು.

೭೬. ಕೆಲವರು ತಾವರೆಯೆಲೆಯ ದೊನ್ನೆಯಿಂದ ಇತರರ ಮುಖಕ್ಕೆ ನೀರನ್ನು ಹಾರಿಸುತ್ತಿರಲು ಕೆಲವರು ಅದನ್ನು ತಾವರೆಯ ಎಲೆಯಿಂದ ತಡೆಯುತ್ತಾ ಕೈಯಲ್ಲಿರುವ ತಾವರೆಯೆಲೆ ದೊನ್ನೆಯಿಂದ ನೀರನ್ನು ಎರಚುತ್ತಿದ್ದರು.

೭೭. ಹೀಗೆ ನೀರಹನಿಗಳನ್ನು ಪರಸ್ಪರವಾಗಿ ಎರಚುತ್ತಿದ್ದಾಗ, ಒಬ್ಬಳು ತಾವರೆಯ ಮಕರಂದದ ಹನಿಯನ್ನು ಹೀರತಕ್ಕ ತುಂಬಿಗೆ ಒಂದು ತಾವರೆಯೆಲೆಯನ್ನು ಕೊಡೆಯಾಗಿ ಹಿಡಿದು "ಇಂದ್ರನು ಸುರಿಸಿದ ಮಳೆಯಿಂದ ಗೋವುಗಳನ್ನು ರಕ್ಷಿಸುವುದಕ್ಕಾಗಿ ಶ್ರೀಕೃಷ್ಣನು ಗೋವರ್ಧನಪರ್ವತವನ್ನು ಎತ್ತಿ ಹಿಡಿದುದು ಹೀಗೆ" ಎಂದಳು.

ಲೋಲೆಯದೊರ್ವಳ್ ತೇಲ್ವ ಮೃ
ಣಾಲಕೆ ತಡಿಯಿಂದೆ ನೆಗೆದು ಮುಳುಗುತ್ತೆಟ್ಬಾ
ಕಾಲಿಯ ಮರ್ದನಮಂ ಗುಣ
ಶೀಲಂಗೆಯ್ದಂದಮೆಂದು ನಗೆಯಿಂದೆಂದಳ್ ॥೭೮॥

ಅಡಕೆಯ ಕುಜುಗಿಡ ಜುಗದೊಳ್
ತೊಡರ್ದೊಂದಾಯತದ ಲತೆಯನೆಳೆದೊಡೆ ಗಿಡುಗಳ್
ಅಡಿಯಿಂ ಮಗುಳ್ಚೆ ಮತ್ತಿಯ
ಜಡಜಾಕ್ಷಂ ಮುರಿದ ತೆಱನಿದೆಂದಳದೊರ್ವಳ್ ॥೭೯॥

ಗದ್ಯ॥ ಅಂತು ನಿಜವಲ್ಲಭನುಂ ಜಗದ್ವಲ್ಲಭನುಮಪ್ಪ ಶ್ರೀಕೃಷ್ಣನ ಪಲವಾನುಂ ದಿವ್ಯಲೀಲೆಗಳಂ ತಮ್ಮ ಲೀಲೆಗಳೊಳನುಕರಿಸುತ್ತುಮಾತ್ಮತೃಪ್ತಿಯಂ ಬಿತ್ತರಿಸುತ್ತಿರ್ದು –

ಕಂದ॥ ಬಿಂಬಾಧರರಾಗಂ ನೀ
ಳ್ದಂಬಕದೊಳ್ ಮತ್ತಮಂಬಕದ ಧಾವಳ್ಯಂ
ಬಿಂಬಾಧರದೊಳಗೆಸೆಯೆ ನಿ
ತಂಬನಿಯರ್ ನೀರ ಕೇಳಿಯಿಂ ತಣಿದೆಟ್ದರ್ ॥೮೦॥

ಗದ್ಯ॥ ಅಂತೆಟ್ದು ತಂತಮ್ಮ ವೇಷಭೂಷಣ ಪರಿಮಳಾನುಲೇಪನಾದಿಯಿಂ ಪುನರಲಂಕಾರ ಶ್ರೀಯನಪ್ಪುಗೆಯ್ದು ತಟ್ವದಂತೆ ನಲ್ಲಂ ಪೇಟ್ದಲ್ಲಿಗೆಯ್ದಿವರ್ಪುದುಂ –

೭೮. ಓರ್ವ ಸ್ತ್ರೀಯು ತೇಲುತ್ತಿರುವ ತಾವರೆದಂಟಿಗೆ ಕೊಳದ ದಡದಿಂದ ಹಾರಿ ಮುಳುಗಿ ಮೇಲಕ್ಕೆ ಎದ್ದು ಗುಣವಂತನಾದ ಕೃಷ್ಣನು ಕಾಳಿಯಮರ್ದನ ಮಾಡಿದ ವಿಧಾನವೆಂದು ನಗುತ್ತ ಹೇಳಿದಳು.

೭೯. ಆ ಕೊಳದ ಬದಿಯಲ್ಲಿ ಎರಡು ಅಡಕೆಗಿಡಗಳಿದ್ದವು. ಒಂದು ವಿಸ್ತಾರವಾದ ಬಳ್ಳಿ ಆ ಗಿಡಗಳಲ್ಲಿ ಸಿಕ್ಕಿಕೊಂಡಿದ್ದಿತು. ಆ ಬಳ್ಳಿಯನ್ನು ಒಬ್ಬಳು ಎಳೆದಾಗ ಆ ಗಿಡಗಳು ಅಡಿ ಕಿತ್ತು ಮಗುಚಿ ಬಿದ್ದವು "ಕಮಲಾಕ್ಷನಾದ ಕೃಷ್ಣನು ಮತ್ತಿಮರಗಳನ್ನು ಮುರಿದ ರೀತಿಯಿದು"– ಎಂದು ಅವಳೊಬ್ಬಳು ಹೇಳಿದಳು. (ಗದ್ಯ) ಅಂತು ತಮ್ಮ ಒಡೆಯನೂ ಲೋಕಗಳ ಒಡೆಯನೂ ಆಗಿರುವ ಶ್ರೀಕೃಷ್ಣನ ಹಲವು ದಿವ್ಯಲೀಲೆಗಳನ್ನು ತಮ್ಮ ಲೀಲೆಗಳಲ್ಲಿ ಅನುಕರಣೆ ಮಾಡುತ್ತ ಅವರು ಆತ್ಮತೃಪ್ತಿಯನ್ನು ವಿಸ್ತಾರ ಪಡಿಸುತ್ತಿದ್ದರು.

೮೦. ಆ ಸ್ತ್ರೀಯರು ತಮ್ಮ ತೊಂಡೆಹಣ್ಣಿನಂತಹ ಕೆಳದುಟಿಯ ಕೆಂಪು ತಮ್ಮ ವಿಶಾಲವಾದ ಕಣ್ಣಿನಲ್ಲಿಯೂ ಕಣ್ಣಿನ ಬಿಳುಪು ಬಿಂಬಾಧರದಲ್ಲಿಯೂ ಅದಲು ಬದಲಾಗಿ ಶೋಭಿಸುತ್ತಿರಲು ಜಳಕೇಳಿಯಿಂದ ತೃಪ್ತಿಗೊಂಡು ಎದ್ದು ಬಂದರು. (ಗದ್ಯ) ಹಾಗೆ ಎದ್ದು ಬಂದು ತಮ್ಮ ತಮ್ಮ ವೇಷಭೂಷಣಗಳಿಂದಲೂ ಸುವಾಸನೆಯ ದ್ರವ್ಯಗಳ ಹಚ್ಚುವಿಕೆಯಿಂದಲೂ ಪುನಃ ತಮ್ಮ ಅಲಂಕಾರ ಸಂಪತ್ತನ್ನು ಹೊಂದಿದವರಾಗಿ, ಮತ್ತೆ ತಡಮಾಡದೆ ಪ್ರಿಯನಾದ ಕೃಷ್ಣನು ಹೇಳಿದಲ್ಲಿಗೆ ಬಂದರು.

ಕಂದ॥ ಭೂತಳದೆಲ್ಲಾ ಶೀತಳ
ಕಾಕಳಮೆಯಶೀತಳಾಂಶುಗಂ ಬೆಳ್ಕಱುತಂ
ತಾ ತಳಮನೆಯ್ದಿದಂತೆ ಸು
ವಾತಳತಾ ಕುಂಜ ಶೀತಳ ಸ್ಥಳಮೆಸೆಗುಂ ॥೮೧॥

ಉ.ಮಾ. ಅಲ್ಲಿ ಸುರತ್ನಪೀಠಮದಱಿೊಳ್ ತಳಿರ್ವಾಸಿರೆ ಬಾಱೆಗಂಬಮುಂ
ಮಲ್ಲಿಗೆವಂದರಂ ಮಿಸುಪಶೋಕದ ರತ್ನದ ಭಿತ್ತಿ ಕೌಂಗುಗಳ್
ಅಲ್ಲಿಯ ಲೋವೆ ನೇಲ್ವಗಜೆವೂ ಮರವೇಲಿ ಮನೋಜ್ಞಮಾಗಲಾ
ವಲ್ಲೆಯರೊಂದಿ ಬಳ್ಳಿವನೆಯಲ್ಲಿರೆ ಶ್ರೀಹರಿ ಚೆಲ್ವು ಚೆಲ್ವವೋಲ್ ॥೮೨॥

ಮ.ಸ್ರ. ಪಿರಿದೊಂದುದ್ವೃತ್ತ ಬುದ್ಧಿ ಪ್ರಹತ ನಿಜಮನಂ ಸಾಂಪ್ರತಂ ಪೋಗಲೆಂಬಾ
ಗುರುವಾಕ್ಯೋಲ್ಲಂಘನಂ ಖೇಚರರ್ಗವಿಷಯ ಭೂಭಾಗಸಂಚಾರ ಚಿತ್ತಂ
ಪರಿಮಾಣೋತ್ತೀರ್ಣ ವೇಗಾನ್ವಿತ ಕಠಿನಹಯಂ ತನ್ನೊಳಿರ್ದಂತಜೆಂದು
ತ್ತರ ದಿಕ್ಪಾಲಾತ್ಮಜಂ ನಿರ್ಭಯ ವಿನಯ ಗಯಂ ಬೀಗಿ ಗರ್ವಾಪ್ರಮೇಯಂ ॥೮೩॥

೮೧. ಒಳ್ಳೆಯ ಗಾಳಿಯಿಂದ ಕೂಡಿದ ಆ ಬಳ್ಳಿವನೆಯ ತಂಪಿನ ಸ್ಥಳವು– ಭೂಮಂಡಲದ ಎಲ್ಲಾ ತಂಪಿನ ಸ್ಥಳಗಳು ಸೂರ್ಯನ ಬಿಸಿಲಿಗೆ ಹೆದರಿ ಆ ಸ್ಥಳಕ್ಕೆ ಬಂದು ಸೇರಿದಂತಿದ್ದಿತು.

೮೨. ಆ ಬಳ್ಳಿ ಮನೆಯಲ್ಲಿ ಒಂದು ರತ್ನಮಯವಾದ ಪೀಠವಿದ್ದಿತು. ಅದರ ಮೇಲೆ ಚಿಗುರನ್ನು ಹಾಸಲಾಗಿದ್ದಿತು. ಬಾಳೆಯ ಕಂಬಗಳಿದ್ದವು. ಮಲ್ಲಿಗೆ ಹಬ್ಬಿದ ಚಪ್ಪರವಿದ್ದಿತು. ಹೊಳೆಯುವ ಅಶೋಕ ಪುಷ್ಪಗಳು ರತ್ನದ ಗೋಡೆಯಂತೆ ಕಾಣಿಸುತ್ತಿದ್ದವು. ಇಳಿಜಾರು ಸೂರಾಗಿ ಅಡಕೆಮರಗಳಿದ್ದವು. ಜೋತಾಡುವ ಕೇದಗೆ ಹೂಗಳು ಮರದ ಬೇಲಿಯಂತಿದ್ದವು – ಇವೆಲ್ಲವುಗಳಿಂದ ಮನೋಹರವಾದ ಆ ಬಳ್ಳಿವನೆಯಲ್ಲಿ ಕೃಷ್ಣನು ತನ್ನ ನಲ್ಲೆಯರೊಂದಿಗೆ ಸೌಂದರ್ಯವೇ ಚಲ್ಲುವ ರೀತಿಯಲ್ಲಿ ಅಲ್ಲಿದ್ದನು. ಆಗ ಏನಾಯಿತೆಂಬುದನ್ನ ಮುಂದೆ ಹೇಳಲಾಗಿದೆ. ಗಯನ ವಿಚಾರ–

೮೩. ಹೆಚ್ಚಾದ ದುರಾಚಾರ ಬುದ್ಧಿಯ ಹೊಡೆತದಿಂದ ಕೂಡಿದ ತನ್ನ ಮನಸ್ಸು, ಈಗ ನೀನು ಹೋಗುವುದು ಬೇಡ – ಎನ್ನತಕ್ಕ ಹಿರಿಯರ ಮಾತಿನ ಉಲ್ಲಂಘನೆ, ಆಕಾಶದಲ್ಲಿ ಸಂಚರಿಸ ತಕ್ಕವರಿಗೆ ವಿಷಯವಲ್ಲದ ಭೂಭಾಗದಲ್ಲಿ ಸಂಚರಿಸುವ ಮನೋಭಾವ, ಪರಿಮಿತಿಯನ್ನು ಮೀರಿದ ವೇಗದಿಂದ ಕೂಡಿದ ಬಿರುಸಾದ ಕುದುರೆ

ಮ.ವಿ. ಸುಚಿರಾಂಭೋನಿಧಿದುರ್ಗ ಭೂವಳಯಮಂ ನಿಶ್ಶಂಕೆಯಿಂದೊಂದೆ ಅ
ರ್ಧ್ವ ಚಣಂ ಸುತ್ತುವ ವೇಗಸಮ್ಮಿಳಿತ ದೀರ್ಘಾಂಗಾಖ್ಯಮಂ ವಾಜಿಯಂ
ರುಚಿಯೊಪ್ಪುತ್ತಿದೆ ಪಲ್ಲಣಂ ಬಿಗಿದು ತಾನಾರೋಹಿಸುತ್ತುಂ ವನಾ
ಳಿಚರದ್ವಾರಣದಂತೆ ದೋರಗೆಗೆವಂದಂ ಸ್ವೇಚ್ಛೆಯಿಂ ಧಾತ್ರಿಯೊಳ್ ॥೮೪॥

ಎಂಬಲ್ಲಿಗೆ ಸತ್ತ್ವಾಲೋಕನ ಕಾವ್ಯದೊಳ್
ವನವಿಹಾರ ವಿನೋದವರ್ಣನಂ
ದ್ವಿತೀಯಾಶ್ವಾಸಂ

– ಇವೆಲ್ಲವೂ ತನ್ನಲ್ಲಿದ್ದುದರಿಂದ ಭಯ ವಿನಯಗಳಿಲ್ಲದವನಾದ, ಕುಬೇರನ ಮಗನಾದ ಗಯನೆಂಬವನು ಅಳತೆಗೆ ಮೀರಿದ ಗರ್ವದಿಂದ ಕೊಬ್ಬಿದವನಾಗಿದ್ದನು.

೮೪. ಎಂದೆಂದೂ ಇರತಕ್ಕ ಸಮುದ್ರವೇ ಜಲ ದುರ್ಗವಾಗಿರತಕ್ಕ ಭೂಮಂಡಲವನ್ನು ನಿಸ್ಸಂದೇಹವಾಗಿ ಒಂದು ಅರೆಕ್ಷಣದಲ್ಲಿ ಸುತ್ತಿ ಬರತಕ್ಕ ಗಮನವೇಗದಿಂದ ಕೂಡಿದ ದೀರ್ಘಾಂಗ ಎಂಬ ಹೆಸರಿನ ಕುದುರೆಯನ್ನು ಕಾಂತಿ ಶೋಭಿಸುವಂತೆ ಅದಕ್ಕೆ ಹಲ್ಲಣವನ್ನು ಕಟ್ಟಿ, ಗಯನು ಅದನ್ನೇರಿ ಕಾಡುಗಳ ಸಮೂಹದಲ್ಲಿ ಸಂಚರಿಸುವ ಆನೆಯಂತೆ ಸ್ವೇಚ್ಛೆಯಿಂದ ಕೂಡಿದವನಾಗಿ ಭೂಲೋಕದಲ್ಲಿರತಕ್ಕ ದ್ವಾರಕೆಗೆ ಬಂದನು.

ಸತ್ತ್ವಾಲೋಕನ ಕಾವ್ಯದಲ್ಲಿ ವನವಿಹಾರ ವಿನೋದ ವರ್ಣನವೆಂಬ ಎರಡನೆಯ ಆಶ್ವಾಸ ಮುಗಿಯಿತು.

*****

# ತೃತೀಯಾಶ್ವಾಸಂ

(ಗಯಪರಿಭ್ರಮಣಂ – ಶಿವಾನುಗ್ರಹಂ)

ಕಂ॥ ಶ್ರೀರಮಣನೇಟಿ ಪೋಗುವ
ಗಾರುಡವೇಗಂ ಸ್ವವಾಜಿವೇಗಕೆ ವೇಗ
ಪ್ರಾರಂಭದೊಳೇ ಕೀಳೆಂ
ದೋರಂತಿರೆ ಗರ್ವಿಯಾದನಾಗಲ್ ಬಹುದೇ? ॥೧॥

ಮ.ವಿ. ನಡೆಬೇಗಂ ನಡೆಯಿಂದೆ ಗಾಡಿ ನಡೆಯಿಂದಂ ಗಾಡಿಯಿಂದೆಣ್ಣೆದೇರ್
ನಡೆಯಿಂ ಗಾಡಿಯಿನೆಣ್ಣೆದೇರ ಗತಿಮೀರ್ಗುಂ ದೂವೆದೇರೆತ್ತಲುಂ
ನಡೆಯಿಂ ಗಾಡಿಯಿನೆಣ್ಣೆದೇರ್ಪೊಗೆಯ ತೇರಿಂ ವ್ಯೋಮಯಾನಂ ದಲಂ
ದಡರಲ್ಕಾ ಹರಿ ವೇಗದಿಂದಿವುಗಳಂ ಮೀರ್ವಂತದೇನೋಡಿತೋ! ॥೨॥

ಮ.ಸ್ರ ಖುರಘಾತೋದ್ಧೂತ ಪಾಂಸುವ್ರಜಮೊಗೆವ ಮೊದಲ್ ಗಾವುದಂ ದಾಂಟಿತೆಂಬೋಲ್
ಧರೆಯಂ ಘೋಟಾಖುರಂ ಸ್ಪರ್ಶಿಷುದತ್ತಿಭರದಿಂ ಸಂದೆಯಂ ಮಾಡೆಯುಂ ವಿ
ಸ್ತರ ಮಾರ್ಗೋಪಾಂತಭೂಜಾವಳಿಯೆ ರಭಸಮಂ ತಾಳ್ದು ಪಾರ್ವಂತೆ ಕಾಣು
ತ್ತಿರೆ ವೇಗಕ್ಕುತ್ತರಾಶಾಧಿಪಸುತ ತುರಗಂ ವೇಗದಿಂ ಪಾಯ್ದುದಾಗಳ್ ॥೩॥

೧. ಶ್ರೀಯರಸನು ಹತ್ತಿ ಕುಳಿತು ಪಯಣಿಸತಕ್ಕ ಗರುಡನ ವೇಗವು ತನ್ನ ಕುದುರೆಯ ವೇಗಕ್ಕೆ ಅದರ ವೇಗದ ಪ್ರಾರಂಭದಲ್ಲಿಯೇ, ಕೆಳಗಿನ ಮಟ್ಟದ್ದೆಂದು ಗಯನು ಒಂದೇ ಸವನೆ ಗರ್ವಗೊಂಡನು. ಹಾಗೆ ಗರ್ವ ತಾಳುವುದು ಸರಿಯೇ?

೨. ವೇಗದ ಪರಿಗಣನೆಯಲ್ಲಿ ನಮ್ಮ ನಡಿಗೆಯೇ ವೇಗವಾದುದೆಂದು ಇಟ್ಟುಕೊಂಡರೆ, ಆ ನಡಿಗೆಯಿಂದ ಹೆಚ್ಚಿನ ವೇಗವುಳ್ಳದು ಗಾಡಿ. (ಕುದುರೆಗಾಡಿ) ಗಾಡಿಯಿಂದ ಹೆಚ್ಚಿನ ವೇಗವುಳ್ಳದು ಎಣ್ಣೆದೇರು (ಅಂದರೆ ಬಸ್ಸು, ಕಾರು, ವ್ಯಾನು ಮುಂತಾದವು). ನಡೆ, ಗಾಡಿ ಎಣ್ಣೆದೇರುಗಳ ವೇಗವನ್ನು ಮೀರುವಂತಹದು ಧೂಮಶಕಟ (ಹೊಗೆಬಂಡಿ ಅಥವಾ ರೈಲು) ಇವೆಲ್ಲವನ್ನು ಮೀರುವಂತಹದು ವಿಮಾನ – ಇದು ನಿಶ್ಚಯ. ಅಂದು ಗಯನು ಕುದುರೆಯನ್ನೇರಿದಾಗ ವೇಗದಲ್ಲಿ ಇವೆಲ್ಲವನ್ನು ಮೀರುವ ಹಾಗೆ ಅದೇನು ಓಡಿತೋ!

೩. ಆ ಕುದುರೆಯ ವೇಗ ಅಸಾಮಾನ್ಯ, ಅದರ ಗೊರಸಿನ ಪೆಟ್ಟಿನಿಂದ ಮೇಲೇಳುವ ಧೂಳು ಉಂಟಾಗುವುದರೊಳಗೆ ಒಂದು ಗಾವುದವನ್ನೇ ದಾಟಿತೆಂಬಂತೆಯೂ ಕುದುರೆಯ ಗೊರಸು ನೆಲವನ್ನು ಸ್ಪರ್ಶಿಸುವುದೇ ಸಂದೇಹವನ್ನುಂಟು ಮಾಡತಕ್ಕ ತ್ವರೆಯಿಂದಲೂ ಕುದುರೆ ಓಡುವ ಮಾರ್ಗದ ಸಮೀಪದ ಮರಗಳ ಸಮೂಹವು ಅತ್ಯಂತ ರಭಸದಿಂದ ಓಡುತ್ತಿರುವಂತೆ ಕಾಣುತ್ತಿರಲು ಅಷ್ಟೊಂದು ವೇಗದಿಂದ ಆ ಕುಬೇರನ ಮಗನ ಕುದುರೆಯು ಓಡಿತು.

ಮ.ವಿ. ರಜಮಾಗುತ್ತೆಯಮರ್ತ್ಯವಿಷ್ಟಪವನೀ ಭೂಮಂಡಲಂ ಸಾರ್ವುದುಂ
ರಜದಾ ಭಾರದ ಭಾರಣ್ಣಿಕ್ಕೊಡನೆ ಬೀಟ್ವಾ ಭಾರದಿಂ ಪೃಷ್ಟ ಭೂ
ಮಿ ಜವಂಗುಂದಿ ವಿದಾರಣಂದಳೆಗುಮೆಂಬಂತಾ ಕ್ಷಣಂ ಭೂಮಿಯಿಂ
ರಜಮೆಟ್ಟಿತ್ತಕಟಾ ದಿವಕ್ಕೆ ಗಯನೇರ್ದಾ ವಾಜಿ ಸಾಮಾನ್ಯಮೇ? ॥೪॥

ಚಂ.ಮಾ. ದೆಸೆಗೆಡಿಸಿತ್ತನೇತರುಮನಾಸ್ಯಕೆ ವಸ್ತ್ರವನೊತ್ತಿ ಪತ್ತಿಸಿ
ತುಸಿರ್ಗುರೆಬಾಧೆಗೆಯ್ಯಿಸಿಯೆ ಥೂಕರಿಸಿತ್ತೆಮೆಯಂ ಪೊರಳ್ಚಿ ಪು
ಟ್ಟಿಸಿದುದು ಬಯ್ಗುಳನ್ನೊಗಡಿಸಿತ್ತಿಳೆಗದ್ಭುತ ದುಃಖಜಾಲಮಂ
ಮಸಗಿಸತಂತು ಪರ್ಬಿತು ರಜಂ ಖುರತಾಡಿತ ಭೂಪ್ರದೇಶಜಂ ॥೫॥

ಚಳಿಸುವ ವಾಹನಕ್ಕೆ ಹಯಕಾವುದು ನೀತಿಯದಾವ ಪಾರ್ಶ್ವಸಂ
ಚಳನಮಯುಕ್ತಮಾವ ಗತಿ ತಕ್ಕುದದಾವೆಡೆ ನಿಲ್ತು ಸುತ್ತಿಯಾ
ಪೊಟಲೊಳದೆತ್ತವೋಗೆಸರಿಯೆಂಬುದಲಕ್ಷಿತಮಾಯ್ತು ಕಟ್ಟು ತೊ
ತ್ತುಳದುಟಿದತ್ತು ತತ್ತುರಗದೈತ್ಯಮದೊತ್ತಿನ ಬೀದಿಲೋಗರಂ ॥೬॥

೪. ಕುದುರೆಯ ಗೊರಸಿನ ತುಳಿತದಿಂದ ಎದ್ದ ದೂಳಿನ ಅತಿಶಯೋಕ್ತಿ ವರ್ಣನೆಯಿದು – ಈ ಭೂಮಂಡಲವೆ ಧೂಳಾಗಿ ದೇವಲೋಕವನ್ನು ಸೇರಿದಾಗ, ಆ ದೂಳಿನ ಭಾರದ ಹೆಚ್ಚಳದಿಂದಾಗಿ ದೇವಲೊಕವೇ ಕೆಳಗೆ ಬೀಳುವಾಗ, ಅಧೋಲೋಕವು ಸತ್ವಕುಂದಿ ಸೀಳಿಹೋಗುವುದು ಎಂಬ ಹಾಗೆ ಅಂದರೆ ಮೂಲೋಕವೂ ನಾಶವಾಗುವಂತೆ, ಆ ಸಂದರ್ಭದಲ್ಲಿ ಭೂಮಿಯಿಂದ ಆಕಾಶಕ್ಕೆ ದೂಳೆದ್ದಿತು. ಅಯ್ಯೋ, ಗಯನು ಹತ್ತಿ ಕುಳಿತ ಕುದುರೆ ಸಾಮಾನ್ಯವಾದುದೇ?

೫. ಕುದುರೆಯ ಗೊರಸಿನ ತಾಡನಗೊಂಡ ನೆಲದಿಂದ ಹುಟ್ಟಿದ ದೂಳು ಮುಸುಕಿ ಅನೇಕರನ್ನು ದಿಕ್ಕುಗೆಡಿಸಿತು, ಅನೇಕರು ಮುಖಕ್ಕೆ ಬಟ್ಟೆಯನ್ನು ಒತ್ತಿಹಿಡಿಯುವಂತೆ ಮಾಡಿತಲ್ಲದೆ ಉಸಿರಾಡಲು ತಡವಾಗುವಂತೆ ಮಾಡಿತು; ಥೂ ಎಂದು ಉಗುಳುವಂತೆ ಮೂಡಿತು, ಕಣ್ಣ ರೆಪ್ಪೆ ಹೊರಳುವಂತೆ ಮಾಡಿ, ಅವರಿಂದ ಬೈಗುಳೆನ್ನು ಹುಟ್ಟಿಸಿತು. ಲೋಕಕ್ಕೆ ಅದ್ಭುತವಾದ ದುಃಖಸಮೂಹವನ್ನು ಓಕರಿಸಿತು, ದುಃಖವನ್ನು ಹೆಚ್ಚಿಸಿತು. ಆ ರೀತಿಯಲ್ಲಿ ದೂಳು ಹಬ್ಬಿತು.

೬. ಆ ಪಟ್ಟಣದಲ್ಲಿ ಸಂಚರಿಸುವ ವಾಹನಕ್ಕೆ, ಕುದುರೆಗೆ ಬೀದಿಯಲ್ಲಿ ಹೋಗಲು ಯಾವುದು ನೀತಿ? ಯಾವ ಬದಿಯಲ್ಲಿ ಸಂಚಾರ ಸರಿಯಲ್ಲ, ಯಾವ ವೇಗ ತಕ್ಕುದು, ಯಾವ ಕಡೆ ನಿಂತು, ಯಾವ ಕಡೆ ಸುತ್ತು ಹಾಕಿ, ಆ ಪಟ್ಟಣದಲ್ಲಿ ಯಾವ ಕಡೆಗಾಗಿ ಹೋದರೆ ಸರಿ ಎಂಬ ನಿಬಂಧನೆ ಅಲಕ್ಷಿಸಲ್ಪಟ್ಟಿತು. ಆ ಕುದುರೆ ತನ್ನ ಓಟದ ಸಂದರ್ಭದಲ್ಲಿ ಬೀದಿಯ ಜನರನ್ನೆ ತೊತ್ತಳದುಳಿಯಿತು (ಅನೇಕರು ಅದರ ಗೊರಸಿನ ತುಳಿತಕ್ಕೆ ಒಳಗಾದರು).

ಕಂದ॥ ಎಡೆವಿಡದ ಜನದ ಸಂದಣಿ
ಯಡಿಯಿಡುವೆಡೆ ಬಗಿದು ಚಿಗಿದು ಗಯನ ಹಯಂ ಸೊ
ರ್ಕ್ಕಿಡಿದತಿಭರದಿಂದೋಡುತೆ
ಕೆಡಪಿತು ಮಡುಪಿತ್ತು ತುಟಿದು ಕೊಳಗಿಂ ಜನಮಂ ॥೭॥

ಚಂ.ಮಾ ತೆಗಟ್ವಿರ ಮಾತುಮಂ ಕಿವಿಗೆ ಕೊಳ್ಳದೆ ಬೀಱುತೆ ಸಾವರಂ ಮನ
ಕ್ಕೊಗೆದಳಲಿಂದೆ ನೋಡದೆ ಕೃಪಾಕ್ಷಿಯೊಳೀಕ್ಷಿಸಿ ಕಾಯೊ ತಕ್ಕುದಂ
ನೆಗಟಿದೆ ನಿಲ್ವೊಡಕ್ಕುಮೆ ಜನೇಶ ಎನುತ್ತಮೆ ಕೃಷ್ಣನಂ ಶರಣ್
ಬುಗುವರಲಕ್ಷ್ಯಮಾಗಿರೆ ಬರುತ್ತಿರೆ ಮಾರ್ಗದೆ ನಿರ್ಭಯಂ ಗಯಂ ॥೮॥

ಗದ್ಯ॥ ಅಂತಾ ದೋರಗೆಯಂ ಗೋಳ್ಗುಡಿಸುತ್ತೆ ಚಣದೊಳೆ ಸುತ್ತುತ್ತೆ ಪಿಂದೆರಳುತ್ತಿರಲಲ್ಲಿ
ವಲ್ಲೀಗೃಹದಲ್ಲಿರ್ದ ಜನಕಾಂತನಪ್ಪ ಶ್ರೀಕಾಂತಂ ತಿಳಿದು –

ಚಂ.ಮಾ. ಇದು ಪಿರಿದಪ್ಪ ಗರ್ವಮಿದು ಲೋಕಕಶಾಂತಿಯನುಂಟು ಮಾಳ್ಕುಮಿಂ
ತಿದು ನಿಜ ಭೂಪ್ರಜಾಜನಕೆ ಕಷ್ಟವನೀವುದು ಮತ್ಪರಾಭವಾ
ಸ್ಪದಮಿದು ವಿಕ್ರಮಕ್ಕೆಡರಹಸ್ಯಮಿದಿಂದು ಮನಕ್ಕೆ ಮೆಚ್ಚನಾ
ಸುದತಿಯರ್ಗಂ ವಿರಾಗಕರಮೆಂದೆನುತಾಂತನುದಗ್ರ ರೌದ್ರಮಂ ॥೯॥

೭. ಒತ್ತೊತ್ತಾದ ಜನರ ಗುಂಪು ನಡೆದುಕೊಂಡು ಹೋಗುವ ಕಡೆಗಳಲ್ಲಿ ಗಯನ ಕುದುರೆ ಗರ್ವಪಟ್ಟುದರಿಂದಾದ ಅತಿವೇಗದಿಂದ ಓಡುತ್ತ ತನ್ನ ಗೊರಸಿನಿಂದ ಜನವನ್ನು ತುಳಿದು ಬೀಳಿಸಿತು, ಕೊಂದುಬಿಟ್ಟಿತು.

೮. ತನ್ನನ್ನು ಬಯ್ಯುವವರ ಮಾತನ್ನು ಕಿವಿಗೆ ಹಾಕಿಕೊಳ್ಳದೆ, ಗೊರಸಿನ ತುಳಿತಕ್ಕೆ ಬಿದ್ದು ಸಾಯುವವರನ್ನು ಮನೋವ್ಯಥೆಪಟ್ಟು ನೋಡದೆ, "ಎಲೈ ಜನರ ಒಡೆಯನಾದ ಕೃಷ್ಣನೇ, ಕರುಣೆಯ ಕಣ್ಣಿನಿಂದ ನೋಡಿ ನಮ್ಮನ್ನು ಕಾಪಾಡೋ, ಈ ದುರುಳನಿಗೆ ತಕ್ಕ ಶಾಸ್ತಿಯನ್ನು ಮಾಡದೆ ನೀನು ಸುಮ್ಮನಿರಬಹುದೆ?" – ಎನ್ನುತ್ತ ಶ್ರೀಕೃಷ್ಣನಿಗೆ ಶರಣಾಗುವವರು ತನಗೆ ಅಲಕ್ಷ್ಯವಾಗಿರಲು ಗಯನು ತನ್ನ ಕುದುರೆ ಸವಾರಿಯ ಮಾರ್ಗದುದ್ದಕ್ಕೂ ಹೆದರದೆಯೇ ಇದ್ದನು.

(ಗದ್ಯ–೧) ಅಂತು ಆ ಗಯನು ದ್ವಾರಕೆಯ ಜನರಂ ಗೋಳುಗುಡಿಸುತ್ತ ಬಲುಬೇಗನೆ ಪುರವನ್ನು ಸುತ್ತುತ್ತ ಹಿಂದೆರಳುತ್ತಿರಲು, ಆ ಉದ್ಯಾನದಲ್ಲಿ ಬಳ್ಳಿಮನೆಯಲ್ಲಿದ್ದ ಜನರೊಡೆಯನಾದ ಶ್ರೀಯರಸನು ಇದನ್ನು ತಾನಾಗಿಯೆ ತಿಳಿದು –

೯. ಇದು ಹಿರಿದಾದ ಗರ್ವವೇ ಸರಿ. ಇದು ಲೋಕಕ್ಕೆ ಅಶಾಂತಿಯನ್ನುಂಟು ಮಾಡುವುದು, ಹೀಗೆ ಇದು ನನ್ನ ಭೂಮಿಯ ಪ್ರಜೆಗಳಿಗೆ ಕಷ್ಟವನ್ನುಂಟು ಮಾಡುವುದು, ನನ್ನ ಅಪಜಯಕ್ಕೆ ಆಸ್ಪದ. ಇದು ನನ್ನ ಪರಾಕ್ರಮಕ್ಕೆ ವಿಘ್ನ. ಇದು ಈ ದಿನ ನನ್ನ ಮನಮೆಚ್ಚಿನ ಸ್ತ್ರೀಯರಿಗೆ ಪ್ರೀತಿ ಭಂಗಮಾಡುವುದು – ಎಂದುಕೊಂಡು ಶ್ರೀ ಕೃಷ್ಣನು ಅತಿಶಯ ಕೋಪವನ್ನು ತಾಳಿದನು.

ಉ.ಮಾ. ಮತ್ತಚಕೋರನೇತ್ರನುದಿತಾಯಸಗಾಢವಿಮುಷ್ಟಿ ಭಂಗಿತೋ
ದ್ವೃತ್ತಲಲಾಟನುದ್ಧರ ಸಮುಚ್ಛ್ವಸಿತಂ ಪರಿಜಾಲ ದೇಹನಾ
ಯತ್ತ ಶರೀರ ಕೋಪಪುಳಕಂ ರದನ ಸ್ಫುಟಿತಾಧರಂ ದ್ವಿಷದ್
ವೃತ್ತಹರಂ ಮುರಾಸುರಹರಂ ಹರನಂತಿರೆ ಬಲ್ಲನೇ ಗಯಂ? ॥೧೦॥

ಕೋಪವನಾಂತನೋ ಬೆದರ್ದನೋ ಪಗೆಗೊಂಡನೊ ಮೆಚ್ಚುಗೊಂಡನೋ
ಚಾಪವನೆತ್ತಿಕೊಂಡನೊ ಸುದರ್ಶನಮಂ ಪಿಡಿದಟ್ಟಿ ಬಂದನೋ
ರೂಪದೆ ಕೆಟ್ಟು ಕೊಟ್ಟುದಿದನೋ ಕೊಲಟ್ಟನೊಲಿಸೂರುಳೊಂದನೆಂ
ದೀ ಪರಿಯೊಂದುಮಂ ಮನದೆ ಭಾವಿಸನಾ ಗಯನಂದು ಗರ್ವದಿಂ ॥೧೧॥

ಸಂಪದಮುಂಟು ತನ್ನ ಬಗೆಗೊಪ್ಪುವ ಪೆಂಡಿರ ಮೇಳಮುಂಟು ತಾ
ತಂ ಪರಮೇಶಮಿತ್ರನೆನಿಪೊಪ್ಪುವ ಪೆರ್ಮೆಯುಮುಂಟು ಸರ್ವರಿಂ
ದಂ ಪದಪೊಂದಿದೊಂದು ಕುಲಮುಂ ಚಲಮುಂ ಬಲಮುಂ ನೆಗಟ್ತೆಯುಂ
ಟಿಂ ಪೆಱತೇಕೆ ಜವ್ವನಮಿರಲ್ ಮದಮಿಲ್ಲದ ಬಾಟ್ಕೆಯಿರ್ಪುದೇ? ॥೧೨॥

ಗದ್ಯ॥ ಅಂತಾ ಖೇಚರಂ ಗೋಳಾಯ್ಲನಾಗಿ ರಯದಿಂ ಪಾಯ್ದು ಪೋಪಿನೆಗಂ –

೧೦. ಮದಗೊಂಡ ಚಕೋರಪಕ್ಷಿಯಂತೆ ಕೆಂಪಾದ ಕಣ್ಣುಗಳುಳ್ಳವನೂ ಕಬ್ಬಿಣದಂತೆ ಗಟ್ಟಿಯಾದ ಮುಷ್ಟಿಯುಳ್ಳವನೂ ಭಂಗಗೊಂಡು ಉದ್ರಿಕ್ತವಾದ ಹಣೆಯುಳ್ಳವನೂ ಹೆಚ್ಚಾದ ನಿಟ್ಟುಸಿರುಳ್ಳವನೂ, ಅತ್ತಿತ್ತ ಅಲುಗುವ ದೇಹವುಳ್ಳವನೂ ದೇಹದಲ್ಲಿ ಕೋಪದ ರೋಮಾಂಚನವುಳ್ಳವನೂ, ತುಟಿಗಚ್ಚಿದವನೂ ಆಗಿ, ಶತ್ರುಗಳ ವರ್ತನೆಯನ್ನು ನಾಶಗೊಳಿಸುವವನಾದ ಮುರಾಸುರನನ್ನು ಕೊಂದವನಾದ ಕೃಷ್ಣನು ವಿಲಯಕಾರಿ ಪರಮೇಶ್ವರನಂತಿರಲು, ಗಯನು ಈ ಸಂಗತಿಯನ್ನು ಬಲ್ಲನೆ?

೧೧. ಕೃಷ್ಣನು ತನ್ನ ಮೇಲೆ ಸಿಟ್ಟಾದನೋ ಹೆದರಿದನೋ, ಹಗೆತನವನ್ನು ತಾಳಿದನೋ, ಮೆಚ್ಚಿದನೋ, ಬಿಲ್ಲನ್ನು ಹಿಡಿದನೋ, ಶ್ರೇಷ್ಠವಾದ ಸುದರ್ಶನ ಚಕ್ರವನ್ನು ಹಿಡಿದು ಬೆನ್ನಟ್ಟಿಕೊಂಡು ಬಂದನೋ, ಕೋಪದಿಂದ ವಿರೂಪನಾಗಿ ಮನಸ್ಸಿನಲ್ಲೆ ಕೂಳಿನಂತೆ ಕುದಿದನೋ, ನನ್ನನ್ನು ಕೊಲ್ಲಲು ಪ್ರತಿಜ್ಞೆ ಮಾಡಿದನೋ – ಎಂದು ಇದ್ಂದನ್ನು ಆ ಗಯನು ತನ್ನ ಗರ್ವದಿಂದ ಭಾವಿಸದೆ ಇದ್ದನು.

೧೨. ಇದಕ್ಕೆ ಕಾರಣವೇನು? ತನ್ನಲ್ಲಿ ಸಂಪತ್ತಿದೆ, ತನ್ನ ಮನಕ್ಕೆ ಒಪ್ಪುವ ಹೆಂಡಿರ ಮೇಳವಿದೆ, ತನ್ನ ತಂದೆಯಾದ ಕುಬೇರನು ಪರಮೇಶ್ವರನ ಗೆಳೆಯನೆಂಬ ಹಿರಿಮೆಯಿದೆ, ಎಲ್ಲರಿಂದಲೂ ಒಲವಿಗೆ ಕಾರಣವಾದ ಕುಲ – ಚಲ – ಬಲ– ಕೀರ್ತಿಗಳಿವೆ, ಇನ್ನು ಬೇರೆ ಏಕೆ? ಯೌವನವೂ ಇರುವಾಗ ಮದವಿಲ್ಲದ ಬದುಕು ಇರುವುದೇ?

(ಗದ್ಯ–೨) ಆ ರೀತಿಯಾಗಿ ಆ ಖೇಚರನು (ಆಕಾಶ ಸಂಚಾರಿ) ಕುದುರೆ ಸವಾರನಾಗಿ ವೇಗದಿಂದ ನೆಗೆದುಕೊಂಡು ಹೋಗುತ್ತಿರಲು –

ಕಂದ॥ ಆ ಕೃಷ್ಣನ ಕೋಪಾಕ್ಷರ
ವಾಕೃತಿಯಂ ತಳೆದು ಮುನಿಪನಾದತ್ತೆನಲ
ಪ್ರಾಕೃತ ತನು ಪರಮಾತ್ಮಾ
ಜ್ಞಾಕೃತ ನಟನೆನಿಪ ನಾರದಂ ಕಣ್ಗೆಸೆದಂ ॥೧೩॥

ಗದ್ಯ॥ ಅಂತಾ ನಾರದಂ ದೂರದ ನೀರದಪಥದಿಂದಿಳಿದು ಭಟಿಯೊಳೆ ಮೆಯ್ದೋಱೆ ನಿಲ್ ನಿಲೆಂದೆಣ್ಣಿದೇರ್ಗೆ ಮಾರ್ಗದೊಳ್ ಪಯಣಿಗರಂತೆ ಕಯ್ಯೆತ್ತಿ ಸನ್ನೆಗೆಯ್ದೊಡಂ ಗಯನೆವೆಯೆತ್ತಿಯುಂ ಸಮೀಕ್ಷಿಸದಿರ್ಪುದುಂ –

ಕಂದ॥ ಸಂಚಿತ ಭಗವದ್ಗೀತೋ
ದಂಚಿತ ಮಹಿಮಾ ವಿಶೇಷದಿಂ ತ್ರಿಭುವನಮಂ
ಸಂಚರಿಪನನೀಕ್ಷಿಸದಂ
ಪಂಚಾಮೃತಮೆರೆದೊಡುಗುಟ್ವಗಾವಿಲನಲ್ತೇ? ॥೧೪॥

ಹಿತಮಂ ಗೆಯ್ಯಲ್ ಕಿತ್ತಡಿ
ಪಥದೊಳ್ ಮೆಯ್ದೋಱೆ ಲೆಕ್ಕಿಸಂ ಗಯನವನಂ
ಸದೆವಿನಮುಣ್ಣಿಯನಾಂ ಬಹು
ವಿಧದಿಂದೆಳಗಱು ಕಡಂಗಿ ಚಡಪಡಿಸುವವೋಲ್ ॥೧೫॥

೧೩. ಆ ಶ್ರೀಕೃಷ್ಣನು ಸಿಟ್ಟಿನಿಂದ ಆಡಿದ ಅಕ್ಷರವೇ ಆಕಾರವನ್ನು ತಳೆದು ಮುನಿಪತಿಯಾಯಿತೆಂಬಂತೆ ಅಸಾಮಾನ್ಯ ಶರೀರವುಳ್ಳವನೂ ಪರಮಾತ್ಮನ ಆಜ್ಞೆಯನ್ನೆ ನಟಿಸಿ ತೋರುವವನಾದ ನಾರದನು ಕಾಣಿಸಿದನು.

(ಗದ್ಯ–೩) ಅಂತು ಆ ನಾರದನು ದೂರದ ಆಕಾಶದಿಂದಿಳಿದು ಹತ್ತಿರದಲ್ಲೇ ಕಾಣಿಸಿಕೊಂಡು – "ನಿಲ್ಲು, ನಿಲ್ಲು" ಎಂದು ಪ್ರಯಾಣ ಬಸ್ಸಿಗೆ ಮಾರ್ಗದಲ್ಲಿರುವ ಪಯಣಿಗನಂತೆ ಕೈಯೆತ್ತಿ ಸನ್ನೆ ಮಾಡಿದರೂ ಗಯನು ಆ ಕಡೆಗೆ ಕಣ್ಣೆವೆಯೆತ್ತಿಯೂ ನೋಡದೆ ಇದ್ದನು.

೧೪. ಭಗವಂತನನ್ನು ಕುರಿತು ಗಾನ ಮಾಡುವುದರಿಂದ ಉಂಟಾದ ವಿಶೇಷವಾದ ಮಹಿಮೆಯ ಸಂಚಯನದಿಂದ ಮೂರು ಲೋಕವನ್ನು ಸಂಚಾರ ಮಾಡತಕ್ಕ ನಾರದ ಮಹರ್ಷಿಯನ್ನು ಎದುರಲ್ಲಿದ್ದರೂ ನೋಡದವನು ಪಂಚಾಮೃತತೀರ್ಥದ ರಸವನ್ನು ಬಾಯಿಗಿಸಿಕ್ಕಿದಾಗ ಉಗುಳುವಂತಹ ಮೂಢನಲ್ಲವೆ?

೧೫. ತನಗೆ ಹಿತವನ್ನು ಮಾಡಲೆಂದೇ ಆ ಮುನಿಯು ದಾರಿಯಲ್ಲಿ ಕಾಣಿಸಿಕೊಂಡಾಗ, ಗಯನು ಅವನನ್ನು ಅಲಕ್ಷ್ಯಮಾಡಿದನು. ಅದು ನಾವು ಎಳಗರುವಿನ ಮೈಯಲ್ಲಿರುವ ಉಣ್ಣಿಯನ್ನು ನಾಶ ಮಾಡಲು ಉದ್ಯುಕ್ತರಾದಾಗ, ಉತ್ಸಾಹದಿಂದ ಅತ್ತಿತ್ತ ಒದ್ದಾಡುವ ರೀತಿಯಾಗಿರುತ್ತದೆ.

ಮೂಱುಂ ಮತ್ತಂ ನಾಲ್ಕನೆ
ಮೂಱುಂ ಗಳಿಗೆಯೊಳೆ ಮುತ್ತಿರೆಯ ಚರಿಸುವುದಂ
ಮೀಱುವೆನೆಂದೆನ್ನಂ ಮುನಿ
ಮಾರಾಯಂ ತಡೆಯಲಾರ್ಪನುಱಿ ಮಚ್ಚರದಿಂ ॥೧೬॥

ಗದ್ಯ॥ ಎಂದಾತಂ ತಡೆಯದೋಡುತ್ತಿರೆಯಿರೆ –

ಕಂದ॥ ವೇಗಸ್ತಂಭನ ಶಕ್ತಿಯಿ
ನಾ ಗುಣಿಮುನಿ ನಾರದಂ ಹಯಂದಡೆದೆಂದಂ
ವೇಗದೆ ಬರೆ ನೀಂ ಕೇಡೊಗೆ
ದಾಗಳೆ ಕೇಳ್ ನಿನ್ನೊಳಿಂದು ಕೃಷ್ಣಂ ಮುಳಿದಂ ॥೧೭॥

ನಿನ್ನೈಸಿರಿಯೊಟ್ಟಜಿ ದ
ರ್ಪೋರ್ಣ್ನತಿ ದುರ್ನೀತಿಯದಟನೆನ್ನೊಳ್ ತೋರ್ದೈ
ಎನ್ನವರಂ ಪೀಡಿಸಿದೈ
ನಿನ್ನನ್ನೆಂಟನೆಯ ದೆವಸಮಳಿಸದೆ ಮಾಣೆಂ ॥೧೮॥

ಗದ್ಯ॥ ಎಂದು ಸೂರುಳಿಟ್ಟನದಲ್ಲದೆ ನಿನತವಿಚಾರಂ ಪಿರಿದುಂ ಪೊಲ್ಲದಾಯ್ತಾತನ ಪತ್ತನದ ನೇಮವನಱಿವೊಡೆ –

೧೬. ಗಯನ ಮನಸ್ಸಿನಲ್ಲಾದ ಭಾವನೆಯಿದು. ಈ ನಾರದನು ಮೂರುಮುಕ್ಕಾಲು ಗಳಿಗೆಯಲ್ಲಿ ಮೂರು ಲೋಕವನ್ನೂ ಸಂಚರಿಸುವನೆನ್ನುವರು. ಇದೀಗ ನಾನು ವೇಗದಲ್ಲಿ ಅವನನ್ನೂ ಮೀರಿಸಿ ಬಿಡುವೆನೆಂದು ನನ್ನನ್ನು ತಡೆಯಲು ಆ ಮುನಿಮಹಾರಾಜನು ಮತ್ಸರದಿಂದ ಹೀಗೆ ಬೊಬ್ಬಿಡುತ್ತಿರುವನು. (ಗದ್ಯ) ಎಂದುಕೊಂಡು ಗಯನು ನಿಲ್ಲದೆಯೇ ಕುದುರೆಸವಾರಿಯಲ್ಲಿ ಓಡುತ್ತಿರಲು,

೧೭. ಗುಣವಂತನಾದ ಆ ನಾರದಮುನಿಯು ತನ್ನಲ್ಲಿರುವ ವೇಗಸ್ತಂಭನ ವಿದ್ಯೆಯ ಶಕ್ತಿಯಿಂದ ಕುದುರೆಯನ್ನು ಅಲ್ಲೇ ನಿಲ್ಲುವಂತೆ ಮಾಡಿ ಹೀಗೆಂದನು–" "ನೀನು ವೇಗದಿಂದ ಬಂದಾಗ ಕೆಡುಕು ಉಂಟಾಯಿತು. ಎಲವೋ ಕೇಳು. ಕೃಷ್ಣನು ಆಗಲೆ ಈ ದಿನ ನಿನ್ನ ಮೇಲೆ ಕೋಪಗೊಂಡನು, ಮತ್ತು ಹೀಗೆಂದನು –

೧೮. ನಿನ್ನ ಐಶ್ವರ್ಯವನ್ನೂ ಮೇಲ್ಮೆಯನ್ನೂ ದರ್ಪದ ಹೆಚ್ಚಳವನ್ನೂ ಕೆಟ್ಟನೀತಿಯನ್ನೂ ಪರಾಕ್ರಮವನ್ನೂ ನನ್ನಲ್ಲಿ ತೋರಿಸಿದೆಯಾ? ಶ್ರೇಷ್ಠಪ್ರಜೆಗಳನ್ನು ಪೀಡಿಸಿದೆಯಾ? ಇಂದಿಗೆ ಎಂಟನೆಯ ದಿನದಂದು ಕೊಲ್ಲದಿರೆನು. (ಗದ್ಯ) ಎಂದು ಕೃಷ್ಣನು ಪ್ರತಿಜ್ಞೆಮಾಡಿದ್ದಾನೆ. ಅದಲ್ಲದೆ ನಿನ್ನ ವಿಚಾರಹೀನವಾದ ವರ್ತನೆ ಕೆಟ್ಟದಾಯಿತು. ಅವನ ಪಟ್ಟಣದ ನಿಯಮವನ್ನು ತಿಳಿಯುವುದಾದರೆ–

ಕಂದ॥ ಅನಿಲಂ ತಾಂ ಪ್ರತಿಹತಗತಿ
ಯೆನಿಪಂ ಶ್ರೀಕೃಷ್ಣನಿತ್ತಡಂಗುರದಿಂದಂ
ಜನಿಯಿಸನಾತಂ ರಜಮಂ
ಜನಕ್ಕೆ ಹಿತಮಾಗೆ ವಾಹನಂಗಳ್ ಚಲಿಕುಂ ॥೧೯॥

ಜನರೊಳ್ ಸ್ವಧರ್ಮಮನುಶಾ
ಸನಮುಂಟುತ್ತೀಡೆಯಿಲ್ಲಮೀ ದೋರಗೆಯೊಳ್
ವನಧಿ ನಭೋನಿಲಶಿಖಿ ಮೇ
ದಿನಿಗಳ್ ತಪ್ಪದಿರೆ ತಪ್ಪಿ ನೀಂ ನಡೆಯುವುದೇ? ॥೨೦॥

ಅಱಿತುಂ ಪೇಱದ ತಪ್ಪಿಂ
ಗೆಱಿವಟ್ಟಾದಪೆನದಲ್ಲದೆನುತುಂ ನಿನಗಾ
ನಱಿಪಿದ ತಪ್ಪಂ ಮನ್ನಿಪು
ದಱಿದೇಕೆಯೊ ನಿಲ್ವೆಮುಂದೆ ಧಾವಿಸ ಜವದಿಂ ॥೨೧॥

ಗದ್ಯ॥ ಎಂಬುದುಮಾ ನಾರದೇರಿತಂ ಮರ್ದುಗುತ್ತಿನಂತೆಯುಂ ಕೂರ್ಪುಣಂಬುವೆಟ್ಟಿದಂತೆಯುಂ ಕೂರ್ವಾಳ ಕಡಿತದಂತೆಯುಂ ಕಿರ್ಚಿನ ಚುರ್ಚುಂ ಬೇನೆಯಂತೆಯುಂ – ಭೋಂಕನೆ ಗಯನ ಮನಕ್ಕೆ ಪುಗುತೆವಡೆವುದುಂ – ಭೋರನೆ ಮುನಿಚರಣಕ್ಕೆಱಗಿ ಪೋಗದಂತೆ ಗಟ್ಟಿವಿಡಿದು ಗುಂಡಿಗೆ ಕೆಡೆದ ಸೊಂಡಿಲನಂತೆಯುಂ – ಬಲೆಗೆ ಸಿಲ್ಕಿದೆರಲೆಯಂತೆಯುಂ – ಬಾವಿಗೆ ಬಿೞ್ದ ಮಂಕಡನಂತೆಯುಂ – ಸಂಪಗೆಗೆಱಗಿದಳಿಯಂತೆಯುಂ– ಸೊರ್ಕನುಳಿದು,

೧೯. ವಾಯು ಕೂಡ ತಡೆಯುಳ್ಳ ವೇಗವುಳ್ಳವನಾಗಿದ್ದಾನೆ. ಶ್ರೀಕೃಷ್ಣನು ಮೊದಲೇ ಸಾರಿರುವುದರಿಂದ ದೂಳನ್ನೆಬ್ಬಿಸನು; ಜನರಿಗೆಲ್ಲ ಹಿತವಾಗುವಂತೆ ವಾಹನಗಳು ಚಲಿಸುತ್ತವೆ.

೨೦. ಈ ದ್ವಾರಾವತಿಯಲ್ಲಿರುವ ಜನರಲ್ಲಿ ಸ್ವಧರ್ಮದ ಅನುಸರಣೆಯಿದೆ, ಅನುಶಾಸನವೂ ಇದೆ. ಇತರರಿಗೆ ಮಾಡತಕ್ಕ ಹೆಚ್ಚಿನ ತೊಂದರೆಗಳಿಲ್ಲ. ಪರಮಾತ್ಮನ ಸೃಷ್ಟಿಯ ಸಮುದ್ರ, ಆಕಾಶ, ವಾಯು, ಅಗ್ನಿ, ಭೂಮಿ–ಇವು ಯಾವುವೂ ನಿಯಮ ತಪ್ಪದೆ ಇರುವಾಗ ನೀನು ಮಾತ್ರ ತಪ್ಪಿ ನಡೆಯಬಹುದೆ?

೨೧. ಈ ಸಂಗತಿಯನ್ನು ನಿನಗೆ ನಾನು ಹೇಳದಿದ್ದರೆ – ತಿಳಿದೂ ಹೇಳದೆ ಇದ್ದ ತಪ್ಪಿಗೆ ಆಶ್ರಯನಾಗುವೆನು ಎಂಬುದರಿಂದಾಗಿ, ನಿನಗೀಗ ನಾನು ಹೇಳಿದೆನು, ಇದು ನನ್ನ ತಪ್ಪು; ಇದನ್ನು ನೀನು ಕ್ಷಮಿಸು. ಈ ಸಂಗತಿ ಗೊತ್ತಾದ ಮೇಲೆ, ಇನ್ನೇಕೆ ನಿಂತಿರುವೆ? ವೇಗದಿಂದ ಮುಂದೆ ತೆರಳು! (ಗದ್ಯ) ಹೀಗೆನ್ನಲು, ನಾರದನೆಂದ ಮಾತು ಚುಚ್ಚುಮದ್ದಿನಂತೆಯೂ ಚೂಪಾದ ಬಾಣ ಹೊಡೆದಂತೆಯೂ ಹರಿತವಾದ ಕತ್ತಿಯ ಕಡಿತದಂತೆಯೂ ಬೆಂಕಿ ಉರಿದ ನೋವಿನಂತೆಯೂ ಬೇಗನೆ ಗಯನ ಮನಸ್ಸಿನೊಳಗೆ ಪ್ರವೇಶಿಸಲು, ಅವನು ತಡಮಾಡದೆ ನಾರದನ ಪಾದಕ್ಕೆ ಎರಗಿ, ಅವನು ಹೋಗದಂತೆ ಗಟ್ಟಿಯಾಗಿ ಹಿಡಿದುಕೊಂಡನು. ಆಳವಾದ ಗುಳಿಗೆ ಬಿದ್ದ ಆನೆಯಂತೆಯೂ ಬೀಸುಬಲೆಗೆ ಸಿಕ್ಕಿದ ಜಿಂಕೆಯಂತೆಯೂ ಬಾವಿಗೆ ಬಿದ್ದ

ಗರಂಬೊಯ್ದನಂತೆಯುಂ–ಬೂತಂಬಿಡಿದನಂತೆಯುಂ – ಮುಚ್ಚೆವೋದನಂತೆಯುಂ ಮಿಡುಕಲಱಿಯದೆ – ಕುಳಿರ್ಕೊಡಿದನಂತೆಯುಂ – ಪಗೆಗೆ ಸಿಲ್ಕಿದ ಪೆಂಬೇಡಿಯಂತೆಯುಂ – ಪಾವಿನ ನಂಜುವಲ್ ಕೊಂಡನಂತೆಯುಂ ಬೂತಮಂ ಕಣ್ಕಂಡನಂತೆಯುಂ ಭಯಜ್ವರಂಗೊಂಡು ನಡುನಡುಗಿ ಕಣ್ಗೆ ಚಂಡಾಂಶು ರಶ್ಮಿವೊಕ್ಕಂತೆಯುಂ– ಪೊಗೆ ಕವಿದಂತೆಯುಂ– ಕಸಂ ಸಿಲ್ಕಿದಂತೆಯುಂ – ಮುಳ್ ನಾಂಟಿದಂತೆಯುಂ – ಕಲ್ ಪೊರಳ್ಚಿದಂತೆಯುಂ – ಕುತ್ತಂ ಬಿಗಡಿಸಿದಂತೆಯುಂ ಕಂಬನಿವೊನಲಂ ಕಱಿದು, ಬಸಂಗೆಟ್ಟು, ಮೆಯ್ಯಱಿದು, ಚೇತರಿಸಿ, ನಿಟ್ಟುಸಿರುಟ್ಟು, ತನ್ನಯೆ ಕೀಳ್ಗೆಯ್ಮೆಗೆ ತಾನೆ ಮಱುಕಂದಾಳ್ದು, ಬಟಿಕ್ಕಂ ನೆಗಟ್ಟಿಯಱಿವುಂ ದೊರೆಕೊಳೆ, ಮುನಿಗಿಂತೆಂಗುಂ–

ಕಂದ॥ ಉಳಿಸುವೊಡಮಳಿಸುವೊಡಮಾ
ನಳಿನಾಂಬಕ ಶೂಲಿ ಭಕ್ತ ನಿನಗಾಯತ್ತಂ
ಬಳವತ್ ಪಾವನ ನಯನಂ
ಗಳೊಳೀಕ್ಷಿಸಲಾಯ್ತು ಪೂರ್ವಫಲದಿಂ ನಿನ್ನಂ ॥೨೨॥

ಮಂಗನಂತೆಯೂ ಸಂಪಗೆ ಹೂವಿಗೆ ಎರಗಿದ ತುಂಬಿಯಂತೆಯೂ ಗರ್ವಭಂಗವಾಗಿ ಕೆಟ್ಟಗ್ರಹ ಹೊಡೆದಂತೆಯೂ ಭೂತ ಹಿಡಿದಂತೆಯೂ ಪ್ರಜ್ಞೆ ತಪ್ಪಿದವನಂತೆಯೂ ಅತ್ತಿತ್ತ ಅಲ್ಲಾಡಲು ತಿಳಿಯದೆ ಶೀತವೇರಿದವನಂತೆಯೂ ಶತ್ರುವಿಗೆ ಸಿಕ್ಕಿದ ಹೇಡಿಯಂತೆಯೂ ಹಾವಿನ ವಿಷದ ಹಲ್ಲು ತಗಲಿದವನಂತೆಯೂ ಭೂತದ ಸ್ವರೂಪವನ್ನು ಕಣ್ಣಲ್ಲಿ ಕಂಡವನಂತೆಯೂ ಭಯದ ಜ್ವರವನ್ನು ತಾಳಿ ನಡುಗಿ ಕಣ್ಣಿಗೆ ಸೂರ್ಯನ ರಶ್ಮಿ ಹೊಕ್ಕಂತೆಯೂ ಕಣ್ಣಿಗೆ ಹೊಗೆ ಕವಿದಂತೆಯೂ ಕಣ್ಣಿಗೆ ಕಸ ಸಿಕ್ಕಿದಂತೆಯೂ ಮುಳ್ಳು ಚುಚ್ಚಿದಂತೆಯೂ ಕಣ್ಣಿಗೆ ಕಲ್ಲು ಸಿಕ್ಕಿ ಹೊರಳಿಸಿದಂತೆಯೂ ರೋಗವು ಬಿಗಡಾಯಿಸಿದಂತೆಯೂ ಕಣ್ಣೀರಿನ ಹೊನಲನ್ನು ಸುರಿಸಿ, ವಶತಪ್ಪಿ ಮೈಮರೆತು ಆಮೇಲೆ ಚೇತರಿಸಿ ನಿಟ್ಟುಸಿರುಬಿಟ್ಟು ತನ್ನದೇ ಆದ ಕೀಳುಗೆಲಸಕ್ಕೆ ತಾನೇ ಮರುಗುತ್ತ ಆ ಮೇಲೆ ಕಾರ್ಯಮಗ್ನತೆಯ ಅರಿವು ಉಂಟಾಗಲು ಗಯನು ನಾರದಮಹರ್ಷಿಗೆ ಹೀಗೆಂದನು.

೨೨. ನನ್ನನ್ನು ಉಳಿಸುವುದಾದರೂ ಅಳಿಸುವುದಾದರೂ ಆ ಶ್ರೀಕೃಷ್ಣನ ಮತ್ತು ಶಿವನ ಭಕ್ತನಾದ ನಿನಗೇ ಸೇರಿದುದಾಗಿದೆ. ನನ್ನ ಪೂರ್ವಪುಣ್ಯಫಲದಿಂದ ಈಗ ಬಲಿಷ್ಠವಾದ ಪಾಪ ಮಾಡಿದ ಕಣ್ಣುಗಳಿಂದ ನಿನ್ನನ್ನು ನೋಡುವಂತಾಯಿತು.

ಅಱಿವಪ್ಪೊಡೆ ಸುರಮುನಿಪಂ
ಬಱಿಗೇಕೆಯೊ ಬರ್ಕುಮಿವನ ದರ್ಶನದಿಂದಂ
ಅಱಿವಱಿಗುಮೆನಗದೇಂ ಪು
ಚ್ಚಱಿಯಪ್ಪುದೆ ಬೆಳೆವ ಬೆಳೆ ಸಕಾಲದ ಮೞೆಯಿಂ? ॥೨೩॥

ಗದ್ಯ॥ ಎಂದಾತಂ ಮನದೊಳ್ ಪರಿಭಾವಿಸಿ –

ಕಂದ॥ ಎಂತಾದೊಡಮಾಂ ನಿನ್ನಂ
ಪಿಂತವಗಣಿಸಿರ್ದ ತಪ್ಪನವಗಣಿಸುತ್ತುಂ
ಸಂತಸದಿನನುಗ್ರಹಿಪುದು
ಸಂತನೆ ಎನೆ ನಾಣನಱಿವುದೇ ಆರ್ತಜನಂ? ॥೨೪॥

ಗದ್ಯ॥ ಆಗಳಾ ಬ್ರಹ್ಮಪುತ್ರಂ ಲೋಕಕಲ್ಯಾಣ ಚಿತ್ತಂ ಸುಲಭೋದಿತ ದಯಾರಸಾರ್ದ್ರಹೃದಯನಾಗಿಯೂ ಖೇಚರಂಗೆ ಧೈರ್ಯಮನೊರೆದು ತನ್ನಱಿವುೞಿವಿಂಗೆ ತಾನೆ ಶರಣನೆಂಬುದಱಿಂದೆಯುಂ – ಬರ್ದನೆ ಪರಮನೆಂಬುದಱಿಂದೆಯುಂ– ಶ್ರೀಕೃಷ್ಣನತ್ತಣಿಂದೆ ಕ್ಷಮೆ ಬೇಡು– ಆತನ ಪೂಣ್ಕೆಯೊಳೇನಾನುಂ ಬರ್ದುಂಕಲೆಡೆಯಿರ್ಕುಂ–ದೇವನಂ ನಂಬಲಾವುದಾನುಂ ಬಗೆಗೊಡರ್ಗುಂ – ಎಂದು ಕರ್ತವ್ಯಮನೊರೆದು ಪರಸಿ–ಕರಧೃತವೀಣಾಗಾನ ಮಿಳಿತ ಮೃತ್ಯುಂಜಯ ಸ್ತೋತ್ರನಾಗಿಯಾ ವಿಯತ್ತಳಕ್ಕೆ ನೆಗೆದೆಯ್ದುವುದುಂ – ಗಯನಾಗಳತ್ಯಂತಾಕುಲಚಿತ್ತನಾಗಿಂತೆಂದಂ –

೨೩. ಹೀಗೆಂದ ನಂತರ ಗಯನು ತನ್ನ ಮನಸ್ಸಿನಲ್ಲೇ ಹೀಗೆಂದನು. ನನಗೆ ಮರಣವುಂಟಾಗುವುದಾದರೆ, ಈ ನಾರದನು ನನ್ನ ಬಳಿಗೇಕೆ ಬರುತ್ತಾನೆ? ಇವನನ್ನು ಕಂಡುದರಿಂದ ನನಗೆ ಬರಬಹುದಾದ ಸಾವು ಅಳಿಯುವುದು. ಬೆಳೆವ ಬೆಳೆಗೆ ಸಕಾಲದ ಮಳೆಯಿಂದ ಕೇಡಾಗುವುದೆ? (ಗದ್ಯ) ಹೀಗೆಂದು ಅವನು ಮನಸ್ಸಿನಲ್ಲಿ ಯೋಚಿಸಿ ನಾರದನೊಡನೆ ಹೀಗೆಂದನು –

೨೪. "ಎಲೈ ಸಂತನಾದ ನಾರದಮುನಿಯೇ, ಹೇಗಾದರೂ ನಾನು ನಿನ್ನನ್ನು ಹಿಂದೆ ಅಲಕ್ಷ್ಯಮಾಡಿದ್ದ ತಪ್ಪನ್ನು ಅಲಕ್ಷ್ಯಮಾಡಿ ಸಂತೋಷದಿಂದ ನನ್ನನ್ನು ಅನುಗ್ರಹಿಸಬೇಕು" – ಎನ್ನಲು ಆಪತ್ತಿಗೆ ಗುರಿಯಾದ ವ್ಯಕ್ತಿಯು ನಾಚಿಕೆಯನ್ನು ಬಲ್ಲುದೆ? (ಗದ್ಯ) ಆಗ ಬ್ರಹ್ಮನ ಮಗನಾದ ನಾರದನು ಲೋಕಕಲ್ಯಾಣದಲ್ಲಿ ಮನಸ್ಸುಳ್ಳವನೂ ಸುಲಭವಾಗಿ ಉಂಟಾದ ದಯೆಯಿಂದ ಒದ್ದೆಯಾದ ಹೃದಯವುಳ್ಳವನಾಗಿ, ಗಗನಸಂಚಾರಿಯಾದ ಗಯನಿಗೆ ಧೈರ್ಯವನ್ನು ಹೇಳಿ, ತನ್ನ ಅಳಿವಿಗೂ ಉಳಿವಿಗೂ (ಸಾವಿಗೂ ಬದುಕಿಗೂ) ತಾನೇ ಕಾರಣನು ಎಂಬುದರಿಂದಲೂ ಬದುಕಿದವನೇ ಶ್ರೇಷ್ಠನೆಂಬುದರಿಂದಲೂ ನೀನು ಶ್ರೀಕೃಷ್ಣನಿಂದ ಕ್ಷಮಾಯಾಚನೆ ಮಾಡು. ಅವನ ಪ್ರತಿಜ್ಞೆಯಲ್ಲಿ ಏನಾದರೂ ಬದುಕಲು ಎಡೆ ಇದ್ದೀತು. ದೇವರನ್ನು ನಂಬಿದರೆ ಯಾವುದಾದರೂ ವಿಚಾರವು ಉಂಟಾದೀತು–ಎಂದು ಕರ್ತವ್ಯವನ್ನು ತಿಳಿಸಿ, ಆಶೀರ್ವದಿಸಿ, ಕೈಯಲ್ಲಿ ಧರಿಸಿದ ವೀಣೆಯ ಗಾನದಲ್ಲಿ ಬೆರೆತ ಮೃತ್ಯುಂಜಯ ಸ್ತೋತ್ರವುಳ್ಳವನಾಗಿ ಆ ಆಕಾಶಕ್ಕೆ ನೆಗೆದು ತೆರಳಿದನು. ಆಗ ಗಯನು ಅತ್ಯಂತ ವ್ಯಥೆಯ ಮನಸ್ಸಿನವನಾಗಿ ಹೀಗೆಂದನು –

ಕಂದ॥ ತೋಷಿತನೊಳ್ ಬಹು ಚಿಂತಾ
ದೂಷಿತನೊಳ್ ಮಮತೆ ದೈನ್ಯಮಾಗದು ಬಹುಧಾ
ತೋಷಿತನೇಗಳ್ ಚಿಂತಾ
ದೂಷಿತನಾ ನುಡಿಗೆ ತಾನುದಾಹೃತನಲ್ತೇ? ॥೨೫॥

ಶಾ.ವಿ॥ ಓವುತ್ತೇತಳಕಾವತೀ ವಿಭವದಿಂ ಸೊಕ್ಕೇರಿತೋ ತಂದೆಗಳ್
ತಾವೆಂದೊಳ್ಪಿನ ಮಾತನೇಕೆ ಪಿಡಿಯಂ ಮೆಯ್ಮೀಟೆ ಗೊಳಾಯ್ಲ ನೆಂ
ದಾ ವೈಮಾನವನೇಕೆ ಬಿಟ್ಟ ನುಟಿದರ್ಗಾಪತ್ತನೇಂ ಲೆಕ್ಕಿಸಂ
ಭೂ ವೈಹಾಳಿಯನೇಕೆ ಗೆಯ್ದು ಗಯನಿಂತೀ ಬನ್ನಮಂ ಪೊತ್ತನೋ ॥೨೬॥

ಗದ್ಯ॥ ಎಂದು ತನ್ನನೆ ಸಂಬೋಧಿಸುತ್ತೆ ಮಱುಗಿ ಪುದಿದವಟಲಿಂ ಕುದಿದು ದ್ವಾರಾವತಿ ಪುರೋಪವನಮಂ ಪೊಕ್ಕಲ್ಲಿ ರುದ್ರರೂಪನಪ್ಪ ಗೋಪಾಲಕೃಷ್ಣನಡಿಗೆ ಶರಣೆಂದು ನೀಡುಂ ಮೊಟ್ಗಿ–ತನ್ನ ಗೆಯ್ದ ತಪ್ಪಂ ನೆನೆದು ಪಲತೆಱದಿನಾ ಶರಣಾಗತರಕ್ಷತನಂ ನುತಿಸಿ –

೨೫. ಸಂತೋಷ ಪಟ್ಟವನಲ್ಲಿ ಅಹಂಕಾರವೂ ಬಹಳ ದುಃಖದಿಂದ ದೂಷಣೆ ಗೊಂಡವನಲ್ಲಿ ದೈನ್ಯವೂ ಇರುತ್ತವೆ. ಆದರೆ ಹಾಗಿರಬಾರದು. ಏಕೆಂದರೆ, ಬಹಳವಾಗಿ ಸಂತೋಷಮತ್ತನಾದವನು ಯಾವಾಗಲೂ ದುಃಖದಿಂದ ದೂಷಿತನಾಗುವನು ಎಂಬುದಕ್ಕೆ ಈ ಗಯನು (ನಾನು) ಉದಾಹರಣೆಯಾಗಿರುವನಲ್ಲವೆ?

೨೬. ತನ್ನನ್ನೆ ಸಂಬೋಧಿಸುತ್ತ ಗಯನು ಹೇಳುತ್ತಾನೆ. ಈ ಗಯನಿಗೆ ಅಳಕಾವತಿಯ ಐಶ್ವರ್ಯದ ಹೆಚ್ಚಳದಿಂದ ಏಕೆ ಗರ್ವವು ತಲೆಗೇರಿತೋ! ತಂದೆಯವರು ತಾವಾಗಿ ಭೂಲೋಕದಲ್ಲಿ ನಿನ್ನ ಕುದುರೆಸವಾರಿಯ ಪ್ರದರ್ಶನ ಮಾಡುವುದು ಬೇಡವೆಂದು ಹೇಳಿದ ಒಳ್ಳೆಯ ಮಾತನ್ನು ಏಕೆ ಕೈಗೊಳ್ಳದಾದನೋ! ಸೊಕ್ಕಿನಿಂದ ತಾನೇ ಕುದುರೆಸವಾರಿಯಲ್ಲಿ ಅಗ್ರಗಣ್ಯನೆಂದು ಭಾವಿಸಿದವನಾಗಿ ಯಾರಿಗೂ ಬಾಧೆಯಾಗದ ವಿಮಾನಸಂಚಾರವನ್ನೇಕೆ ಬಿಟ್ಟನೋ? ಇತರರಿಗೆ ಕೇಡಾಗುವುದನ್ನೇಕೆ ಲೆಕ್ಕಿಸದಾದನೋ? ಭೂಲೋಕದಲ್ಲಿ ವೈಹಾಳಿಯನ್ನು ಮಾಡಿ ಹೀಗೆ ಈ ಗಯನು (ನಾನು) ಏಕೆ ಸಂಕಷ್ಟವನ್ನು ಹೊತ್ತುಕೊಂಡನೋ! (ಗದ್ಯ) ಹೀಗೆ ತನ್ನನ್ನು ತಾನೆ ಸಂಬೋಧಿಸುತ್ತ ವ್ಯಥಿಸುತ್ತ ಕವಿದ ದುಃಖದಿಂದ ಕುದಿದು, ದ್ವಾರಕಾಪತ್ತನದ ಉದ್ಯಾನವನ್ನು ಹೊಕ್ಕನು. ಅಲ್ಲಿ ರುದ್ರರೂಪನಾದ ಶ್ರೀಕೃಷ್ಣನ ಪಾದಕ್ಕೆ 'ಶರಣು' ಎಂದು ಉದ್ದಂಡ ನಮಸ್ಕಾರ ಮಾಡಿದನು. ತಾನು ಮಾಡಿದ ತಪ್ಪನ್ನು ನೆನಸಿಕೊಂಡು ಶರಣಾಗತರಕ್ಷಕನನ್ನು ಹಲವು ವಿಧದಿಂದ ಸ್ತುತಿಸಿ, ಹೀಗೆಂದನು.

ಕಂದ॥ ಎನ್ನರುಮಂ ಮಱೆವೊಕ್ಕರ
ಮನ್ನಣೆಯಿಂ ಕಾವ ಬಿರುದರೆಱೆಯನೆ ದಯೆಯಿಂ
ದೆನ್ನಂ ಕಾಯನುಪಮಗುಣ
ಎನ್ನಂ ಪೊರೆ ಸಲಪು ದೇವದೇವೆಂಬಿನೆಗಂ ॥೨೭॥

ಗದ್ಯ॥ ನೀನಿನ್ನೇಂಗೆಯ್ದೊಡಮಪ್ಪುದು ತಪ್ಪದು – ಮೇಣೆನ್ನ ಪೊಣ್ದ ಪೂಣ್ಕೆ ಬಂಜೆಯಾಗದು – ಪೆಱತೇಂ? ಕಾವರನರಸಿ ಮಱೆವುಗು– ಪೋಗೆಂದಟ್ಟಿದಾಗಳ್ –

ಶಾ.ವಿ. ವಾಣೀನಂದನ ಧೈರ್ಯವಾಗುದಕಮಾ ಚಿಂತಾಗ್ನಿಯಂ ತೊಯ್ದೊಡಂ
ವಾಣೀನಾಥನ ತಂದೆಯೆಂದುದು ಪುನಃ ಪ್ರಾಜ್ವಲ್ಯಮಂ ಮಾಡೆ ನಿ
ರ್ವಾಣಾಲಾತ ಸಶೇಷ ವಹ್ನಿಯನಿಲಾಘಾತಕ್ಕೆ ಪಕ್ಕಾದವೋಲ್
ಪ್ರಾಣ ತ್ರಾಣ ಸಮರ್ಥತಾಹತಿಯನೆ ತಾಳ್ದಿರ್ದನಂದಾ ಗಯಂ ॥೨೮॥

೨೭. ಎಂತಹ ತಪ್ಪು ಮಾಡಿದವರಾಗಿದ್ದರೂ ಅವರು ಮರೆಹೊಕ್ಕರೆ, ಅವರನ್ನು ಮರ್ಯಾದೆಯಿಂದ ಕಾಪಾಡತಕ್ಕ ಬಿರುದಿನ ಒಡೆಯನೆ, ದಯೆಯಿಂದ ನನ್ನನ್ನು ಕಾಪಾಡು. ಹೋಲಿಕೆಯಿಲ್ಲದ ಗುಣಸಂಪನ್ನನೆ, ನನ್ನನ್ನು ಕಾಪಾಡು, ದೇವಾ, ದೇವಾ, ನನ್ನನ್ನು ಕಾಪಾಡು – ಎಂದು ಹೇಳುತ್ತಿರಲು –

(ಗದ್ಯ) "ಇನ್ನು ನೀನು ಏನು ಮಾಡಿದರೂ ಆಗಲಿರುವುದು ತಪ್ಪದು. ಮತ್ತು ನಾನು ಮಾಡಿದ ಪ್ರತಿಜ್ಞೆ ಈಡೇರದಿರದು. ಬೇರೇನು? ನಿನ್ನನ್ನು ಕಾಪಾಡತಕ್ಕವರನ್ನು ಹುಡುಕಿ ಹಿಡಿದು, ಅವರನ್ನು ನೀನು ಮರೆಹೊಗು, ಹೋಗು" – ಎಂದು ಕಳುಹಿಕೊಟ್ಟನು. ಆಗ –

೨೮. ಗಯನಿಗೆ ಬರಲಿದ್ದ ಪ್ರಾಣಾಪಾಯದ ಬೆಂಕಿಯೆಂಬ ಬೆಂಕಿಯನ್ನು ನಾರದನ ಧೈರ್ಯದ ಮಾತೆಂಬ ನೀರು ನಂದಿಸಿದ್ದರೂ ಈಗ ಶ್ರೀಕೃಷ್ಣನು ಹೇಳಿದ ಮಾತು ಅದೇ ಬೆಂಕಿಯನ್ನು ಪುನಃ ಪ್ರಜ್ವಲಿಸುವ ಹಾಗೆ ಮಾಡಿತು. ಅದು ನಂದಿಸಿದ ಕೊಳ್ಳಿಯಲ್ಲಿ ಸ್ವಲ್ಪವಾಗಿ ಉಳಿದ ಬೆಂಕಿ ಗಾಳಿಯ ಹೊಡೆತಕ್ಕೆ ಸಿಕ್ಕಿದ ಹಾಗಾಯಿತು. ಇದರಿಂದಾಗಿ ಗಯನು ತನ್ನ ಪ್ರಾಣರಕ್ಷಣೆಯ ಸಾಮರ್ಥ್ಯ ನಾಶವನ್ನು ಹೊಂದಿದನು. ಪ್ರಾಣರಕ್ಷಣೆ ಅಸಾಧ್ಯವೆಂಬ ಸ್ಥಿತಿಗೆ ಒಳಗಾದನು.

ಕಂದ॥ ಆವ ಕಾವಂ ಜಗಮಂ
ಕಾವಂ ಕೊಲ್ವೆಂ ದಲೆಂದ' ಬಟಿಕಾನೇವೆಂ
ಕಾವರ ಮಱವುಗು ಎಂದುದು
ನೋವೊಗೆಯಿಪ ನೆಱನ ಮಾತೆ ನೆರವಿನ ಘಾತೇಂ? ॥೨೯॥

ಗದ್ಯ॥ ಎಂದು ಕಿಂಕರ್ತವ್ಯ ವಿಮೂಢನಾಗಿ ನೊಂದು – ಬಿನ್ನನಾಳೋಚಿಸಿ, ಪೊಗಟ್ತೆ ಯಱವಂ ಪಡೆದು – ಬಲ್ಲರಱತದಿಂ ಮಱುಕಮೇ ಜರೆಯೆಂದದಂ ಜಱದು – ದೇವನಂ ನಂಬುವುದೆಂಬ ಮುನಿವಾಗ್ರತ್ನಮಂ ಬೆಲೆಗಟ್ಟಿಯಮೋಘಚಿತ್ತಂ ಗಯಂ, ಮಂಗಳಮ ನೊಡರ್ಚುವ ಸರ್ವಮಂಗಳಾಲಿಂಗಿತನಂ ಗಂಗೋತ್ತಮಾಂಗನಂ ಪಂಚಲಿಂಗನಂ ಮನೋಮಂದಿರದೊಳ್ ನಿಲಿಸುತ್ತಂ ಬೆಳ್ಳಿವೆಟ್ಟಮಂ ಗುಱಮಾಡಿ ಬರೆವರೆಯದೊಂದು ಕುಂಬಱವನೆಯಂಗಣದೆಡೆಯೊಳ್ –

೨೯. ಲೋಕವನ್ನು ಕಾಪಾಡತಕ್ಕವನಾದ ಶ್ರೀಮನ್ನಾರಾಯಣಸ್ವರೂಪನಾದ ಶ್ರೀಕೃಷ್ಣನು 'ನಿಶ್ಚಯವಾಗಿಯೂ ನಿನ್ನನ್ನು ಕೊಲ್ಲುವೆನು' ಎಂದು ಹೇಳಿರುವಾಗ ನಾನು ಏನು ತಾನೇ ಮಾಡಬಲ್ಲೆನು? "ನಿನ್ನನು ಕಾಪಾಡತಕ್ಕವರನ್ನು ಮರೆಹೋಗು" ಎಂದಿರುವುದು ನನ್ನ ಮನಸ್ಸಿಗೆ ನೋವನ್ನುಂಟು ಮಾಡುವ ಮರ್ಮೋದ್ಘಾಟನದ ಮಾತಲ್ಲದೆ, ನನಗೆ ಸಹಾಯವನ್ನುಂಟು ಮಾಡುವ ಮಾತಲ್ಲವಲ್ಲಾ!–ಎಂದು ಕೊಂಡನು.

(ಗದ್ಯ) ಹೀಗೆಂದುಕೊಂಡು ಮುಂದೆ ತಾನು ಏನು ಮಾಡಬಹುದೆಂಬುದನ್ನು ತಿಳಿಯದೆ, ಮೌನವಾಗಿ ಯೋಚಿಸಿದನು. ಪ್ರಶಂಸಾರ್ಹವಾದ ಪ್ರಜ್ಞೆಯನ್ನು ತಾಳಿದನು. ಬಲ್ಲವರ ಪ್ರಜ್ಞೆಯಂತೆ ಮರುಕವೇ ಮುಪ್ಪು ಎಂದು ಅದನ್ನು ನಿಂದಿಸಿಕೊಂಡನು. 'ನೀನು ದೇವನನ್ನು ನಂಬು' ಎಂದು ಹೇಳಿರುವ ನಾರದಮುನಿಯ ಮಾತೆಂಬ ರತ್ನಕ್ಕೆ ಬೆಲೆಗಟ್ಟಿದನು– ಅನುಸರಣೀಯವೆಂದು ನಿರ್ಣಯಿಸಿಕೊಂಡನು. ವ್ಯರ್ಥವಾಗದ ಮನೋನಿಶ್ಚಯದ ಗಯನು ಮಂಗಳವನ್ನುಂಟು ಮಾಡತಕ್ಕವನಾದ ಸರ್ವಮಂಗಳಾದೇವಿಯ ಅಪ್ಪುಗೆಯುಳ್ಳವನಾದ ಗಂಗೆಯನ್ನು ತಲೆಯಲ್ಲಿ ಧರಿಸಿದವನಾದ ಪಂಚಲಿಂಗಪರಮೇಶ್ವರನನ್ನು ತನ್ನ ಹೃದಯದಲ್ಲಿ ಧ್ಯಾನಿಸುತ್ತ ರಜತಾದ್ರಿಯನ್ನು ತನ್ನ ಪಯಣಕ್ಕೆ ಗುರಿಯನ್ನಾಗಿ ಮಾಡಿಕೊಂಡು ಬರುತ್ತಾ ಇದ್ದನು. ಹಾಗೆ ಬರುತ್ತಿರುವಾಗ ಅದೊಂದು ಕುಂಬಾರನ ಮನೆ ಕಾಣಿಸಿತು. ಆ ಮನೆಯ ಅಂಗಣದಲ್ಲಿ ಒಂದು ವಿಶೇಷದ ಘಟನೆ ಅವನಿಗೆ ಕಾಣಿಸಿತು.

ಕಂದ॥ ಉಱಿದೆಯೆ ಕಾಕಂ ಕೋೞಿಯ
ಮಱಿಯೊಂದಂ ಕೊಳ್ಗೆಗೆಯ್ಯಲೆನುತುಂ ಭರದಿಂ
ದೆಱಗುವುದಂ ಕಂಡೊಡನಾ
ಮಱಿ ತಾಯ್ಗಱಿವೊಕ್ಕು ತಾಂ ಬರ್ದುಂಕಿದುದಾಗಳ್ ॥೩೦॥

ಗದ್ಯ॥ ಅದಂ ಗಯನೀಕ್ಷಿಸಿ, ದುರ್ಬಳಮಪ್ಪ ಮಱಿ ಸ್ವಬುದ್ಧಿ ಪ್ರಯತ್ನೋಪಾಯದಿಂ ಬರ್ದುಂಕಿತೆಂದು ಮುಂಬೋಪುದುಮತ್ತಲೊಂದು ನೀರ್ದಾಣದ ಬೞಿಯೊಳ್ –

ಕಂದ॥ ಹೋರೆತ್ತು ಹಾಯೆ ಭರದಿಂ
ಭೋರನೆ ಬೆರ್ಚುತ್ತೆ ಬಚ್ಚನೋಡಿ ಕೆಳೆಯ ಬ
ಲ್ಪೋರಿಯ ಮಱಿಯಂ ಸಾರ್ದೊಡೆ
ಹೋರಿದುವೆರಡಲ್ಲಿ ನೋಯದುೞಿದುದು ಬಚ್ಚಂ ॥೩೧॥

ಗದ್ಯ॥ ಈ ಸಂಗತಿಗಳ ಸಂಕೇತಾರ್ಥಮುಂ ಕಳ್ಕನೆ ಗಯನ ಮನಮಂ ಪುಗುಪ್ಪುದುಂ –

ಶಾ.ವಿ. ಬಚ್ಚಂಬೋರಿಯನಿಲ್ಲಿ ಕೋೞಿಮಱಿಯಲ್ಲಾ ಕಾಗಯಿಂ ಬಳ್ದುವಾ
ಬಿಚ್ಚಂಡಂ ಬೞಿದಾಯ್ತು ಪೊಕ್ಕು ಮಱಿಯಂ ಬಾಳೆಂದು ಕಂಸಾಂತಕಂ
ಮೆಚ್ಚಿಂ ಪೇೞ್ದುದನಿಲ್ಲಿಯೀ ಪ್ರಕೃತಿಯೇ ಪೇೞ್ಗುಂ ದಿಟಂ ಮದ್ಧಿತಂ
ಪೊಚ್ಚಂಬೊತ್ತನ ಪೇೞ್ಕೆಯೆಂದಱಿದಪೆಂ ನಂಬಿರ್ಪೆ ನಾನಾತನಂ ॥೩೨॥

೩೦. ಒಂದು ಕಾಗೆ ವೇಗವಾಗಿ ಬಂದು ಒಂದು ಕೋಳಿಮರಿಯನ್ನು ತನ್ನ ಕೊಳ್ಳೆಯನ್ನಾಗಿ ಮಾಡಲು ಹಾರಿಬಂದು ಎರಗಿತು. ಅದನ್ನು ಕಾಣುತ್ತಲೇ ಆ ಮರಿ, ತನ್ನ ತಾಯ ಗರಿಯ ಒಳಹೊಕ್ಕು ಬದುಕಿಕೊಂಡಿತು. (ಗದ್ಯ) ಅದನ್ನು ಗಯನು ನೋಡಿ, ಹೀಗೆಂದು ಕೊಂಡನು "ಬಲಹೀನವಾದ ಕೋಳಿಮರಿ ತನ್ನ ಪ್ರಯತ್ನದಿಂದಲೆ ತಕ್ಕುದಾದ ಉಪಾಯದಿಂದ ಬದುಕಿ ಕೊಂಡಿತು". ಹೀಗೆನ್ನುತ್ತ ಮುಂದೆ ತೆರಳಿದನು. ಅತ್ತಲಾಗಿ ಒಂದೆಡೆ, ಒಂದು ಕೆರೆಯ ಬಳಿ ಇನ್ನೊಂದು ಘಟನೆಯನ್ನು ಕಂಡನು.

೩೧. ಒಂದು ಹಸುಕರು ಒಂದು ಎತ್ತಿನ ಬಳಿಗೆ ಬಂದಾಗ ಹೋರಾಡುವ ಸ್ವಭಾವದ ಆ ಎತ್ತು ಭರದಿಂದ ಕರುವಿಗೆ ಹಾಯಲು ಬಂದಿತು. ಕರು ಬೆಚ್ಚಿಕೊಂಡು ಓಡುತ್ತ ಇನ್ನೊಂದು ಬಲಿಷ್ಠವಾದ ಎತ್ತನ್ನು ಆಶ್ರಯಿಸಿತು. ಆಗ ಆ ಎರಡು ಎತ್ತುಗಳೂ ಹೋರಾಟ ಮಾಡಿದವು. ಈ ಕರು ಮಾತ್ರ ನೋಯದೆ ಉಳಿದು ಕೊಂಡಿತು.

(ಗದ್ಯ) ಈ ಸಂಗತಿಗಳ ಸಾಂಕೇತಿಕವಾದ ಅರ್ಥವು ತತ್‌ಕ್ಷಣದಲ್ಲೇ ಗಯನ ಮನಸ್ಸಿಗಾಯಿತು.

೩೨. ಅವನು ಹೀಗೆಂದುಕೊಂಡನು – ಇಲ್ಲೊಂದು ಕರುವು ಹೋರೆತ್ತಿನಿಂದ ಪಾರಾಗಿ, ಅಲ್ಲೊಂದು ಕೋಳಿಮರಿಯು ಕಾಗೆಯ ಆಕ್ರಮಣದಿಂದ ಪಾರಾಗಿ ಬದುಕಿಕೊಂಡವು. ಹೊಟ್ಟೆಕಿಚ್ಚು ವ್ಯರ್ಥವಾಯಿತು... ಶ್ರೀಕೃಷ್ಣನು ನನ್ನೊಡನೆ "ನೀನು ಯಾರನ್ನಾದರೂ ಮರೆಹೊಕ್ಕು ಬದುಕಿಕೋ ಎಂದು ನನ್ನನ್ನು ಮೆಚ್ಚಿಯೇ ಹೇಳಿದುದನ್ನು ಇಲ್ಲಿ ಪ್ರಕೃತಿಯೇ ನನಗೆ ಹಿತಕರವಾಗಿ ಹೇಳುತ್ತಿದೆ, ನಿಜ. ಇದು ಗಂಗಾಧರನಾದ ಶಿವನ ಹೇಳಿಕೆಯೆಂದೇ ತಿಳಿಯುತ್ತೇನೆ. ನಾನು ಆತನನ್ನು ನಂಬಿಕೊಂಡಿದ್ದೇನೆ.

ಉ.ಮಾ. ನಿಕ್ಕುವಮೀಗಳೆಯ್ದಿ ಬಳರಂ ಮಱಿವೊಕ್ಕೊಡೆ ಬಾಟ್ವದೊಂದು ಸೈ
ಪಕ್ಕುಮದಂತಜೆಂದೆ ಧರಣೀತಳದೊಳ್ ಭುಜಗೇಂದ್ರಲೋಕದೊಳ್
ಮಿಕ್ಕಿನ ನಾಕದೊಳ್ ದೊರೆಯರಾವಗಮಾರ್ಪನೆನಿಪ್ಪನಂ ಶರಣ್
ಬೊಕ್ಕಪೆನಂತಕಾಂತಕನ ಶಂಕರನಂ ಶಿವನಂ ಮಹೇಶನಂ ॥೩೩॥

ಗದ್ಯ॥ ಎಂದು ತಜಿಸಂದು ಮನೋವೇಗದ ನಿಡುವಯಣದಿಂ ಪಲವುಂ ನಾಟ್ಗಳಂ
ಪೇರಡವಿಗಳಂ ಬೆಟ್ಟುಗಳಂ ಕಳಿದು – ಬೆಳ್ಳಿವೆಟ್ಟದೆಡೆಗೆ ಬರೆವರೆ –

ಕಂದ॥ ಆಡುವ ಕಿನ್ನರಿಯರ ನಿ
ಟ್ಟೋಡುವ ಕಾಟ್ಮರೆಯ ಮೆಱಿವ ವಾರಣಘಟೆಯಾ
ಪೂಡಿ ಧನುಸ್ಸಂ ಚರಿಸುವ
ಬೇಡರ ಪಿಂಡೊಪ್ಪಿ ತಪ್ಪಲೊಪ್ಪಿದುದದಱಾ ॥೩೪॥

ಶಾ.ವಿ. ಗಂಗಾಸೀಕರಸಿಕ್ತನುತ್ತಮವಿಭೂತಿ ಪ್ರೇಮಿ ಪನ್ನಂಗದಿಂ
ಶೃಂಗಾರಂ ಹತಶಂಬರಾರಿಯಚಲಂ ಗೌರಾತ್ಮದೇಹಂ ಗುಹೋ
ತ್ತುಂಗಂ ನಿತ್ಯಸುಮಂಗಳಾಯುತನು ಮೇಗಳ್ ಭೂತನಾಥಾನ್ವಿತಂ
ತಾಂ ಗಂಧರ್ವಸುಕೀರ್ತಿತಂ ಹರನವೋಲ್ ತತ್ಪರ್ವತಂ ರಂಜಿಕುಂ ॥೩೫॥

೩೩. ನಿಶ್ಚಯವಾಗಿಯೂ ಈಗ ನಾನು ಬಲಿಷ್ಠರನ್ನು ಮರೆಹೊಕ್ಕೆನಾದರೆ ಬದುಕಿ ಉಳಿಯುವ ಅದೊಂದು ಪುಣ್ಯವುಂಟಾದೀತು. ಆದುದರಿಂದ ಈ ಭೂಮಂಡಲದಲ್ಲಿ, ಪಾತಾಳಲೋಕದಲ್ಲಿ, ಮೇಲಿನ ಸ್ವರ್ಗಲೋಕದಲ್ಲಿ ಅಂಥವರು ನನಗೆ ದೊರೆಯಲಾರರೆಂದೇ ತೋರುತ್ತದೆ. ಆದುದರಿಂದ ಅತ್ಯಂತ ಸಮರ್ಥನೂ ಮೃತ್ಯುದೇವತೆಗೆ ಮೃತ್ಯುರೂಪನೂ ಶಂಕರನೂ (ಸುಖವನ್ನೀಯುವವನೂ), ಮಹೇಶ್ವರನೂ ಆದ ಶಿವನನ್ನೇ ಶರಣಾಗತನಾಗುವೆನು. (ಗದ್ಯ) ಹೀಗೆಂದು ನಿಶ್ಚಯಿಸಿ ಮನೋವೇಗದ ದೀರ್ಘ ಪ್ರಯಾಣ ಹಲವಾರು ನಾಡುಗಳನ್ನೂ ದೊಡ್ಡ ಕಾಡುಗಳನ್ನೂ ದಾಟಿ ರಜತಾದ್ರಿಯ ಕಡೆಗೆ ಬರುತ್ತಿದ್ದನು.

೩೪. ಆ ಬೆಳ್ಳಿಬೆಟ್ಟದ ತಪ್ಪಲು ಆಟವಾಡುವ ಕಿನ್ನರಿಯರ, ನೇರವಾಗಿ ಓಡುವ ಕಾಡು ಜಿಂಕೆಗಳ, ಮೆರೆಯುತ್ತಿರುವ ಆನೆಗಳ ಹಿಂಡಿನ, ಬಿಲ್ಲಿಗೆ ಬಾಣ ಹೂಡಿಕೊಂಡು ಸಂಚರಿಸುವ ಬೇಡರ ಹಿಂಡುಗಳಿಂದ ಶೋಭಿಸುತ್ತಿದ್ದಿತು.

೩೫. ಆ ಪರ್ವತವು ಇವನ ಹಾಗೆಯೇ ಗಂಗಾನದಿಯ ತುಂತುರುಹನಿಯಿಂದ ಒದ್ದೆಯಾಗಿಯೂ ಶ್ರೇಷ್ಠವಾದ ದಿವ್ಯ ಐಶ್ವರ್ಯದಲ್ಲಿ ಪ್ರೇಮವುಳ್ಳುದಾಗಿಯೂ ಹಾವುಗಳಿಂದ ಶೃಂಗಾರಗೊಂಡುದಾಗಿಯೂ ಕಾಮನನ್ನು (ಕಾಮವನ್ನು) ಹತಿಗೊಳಿಸಿದುದಾಗಿಯೂ, ಸ್ಥಿರವಾಗಿರುವುದಾಗಿಯೂ ಬಿಳಿದಾದ ತನ್ನ ದೇಹವುಳ್ಳುದಾಗಿಯೂ ಗುಹ (ಗುಹೆಗಳಿಂದ) ಎತ್ತರವಾಗಿರುವುದಾಗಿಯೂ ನಿತ್ಯವೂ ಸುಮಂಗಲಕೆ (ಸುಮಂಗಳೆಗೆ) ಮನೆಯಾಗಿಯೂ

ಚಂ.ಮಾ. ಗಸಣಿಗಳಿಂದೆ ಕೂಡಿದ ಮಹೋನ್ನತಮಾದ ಹಿಮಾಳಿಯಿಂ ಪೊದ
ಱ್ದಿಸೆದತಿವಾರಿಶೈವಲದೆ ಜಾಱುವ ಬೆಳ್ಪಳಿಕಿಂದಮೊಪ್ಪುವಾ
ಪೊಸ ನಡೆದಾರಿಯುಳ್ಳ ಬಿಳಿವೆಟ್ಟು ಗಯಂಗದು ಪುಟ್ಟ ತಿಟ್ಟೆನಲ್
ತಿಸುಳಿಯ ಮೈಮೆಯಿಂದಡರ್ದನಾ ಗಿರಿಯಂ ಪರಮೇಶ ಭಕ್ತಿಯಂ ॥೩೬॥

ಮಾಲಿನೀ. ಮುಳಿಸು ಪಗೆಗಳಂ ಬಿಟ್ಟಿರ್ಪುವೆತ್ತಲ್ ಮಿಗಂಗಳ್
ಫಳಿತತರುಸಮೇತಂಗಳ್ ತಪಃಕಾನನಂಗಳ್
ಬಳೆದ ತವಸಿನಿಂದಂ ಧ್ಯಾನದಾನಂದದಿಂದಂ
ಚಳಿಸದ ಮನದಿಂದಲ್ಲಿರ್ಪುದಾ ಯೋಗಿವೃಂದಂ ॥೩೭॥

ಮ.ವಿ. ಸುರಭೂಮೀರುಹಮೇ ತಪೋವನಮಹೀಜಂ ಧೇನುವೇ ಗೋವ್ರಜಂ
ಪರುಷಂ ಪೇರಱೆ ಬೆಳ್ಳಿಯೊಪ್ಪುವ ನೆಲಂ ನಲ್ಮೇಕೆಯುಂ ಸೋಗೆಯುಂ
ಪಿರಿದಪ್ಪಟ್ಟಿಱಿ ಮಂಕಡಂಗಳನಿಶಂ ಸಂದಾ ತಪೋರಾಜ್ಯದೊಳ್
ಹರಭಕ್ತರ್ ಕಡುಜೋಗದೊಳ್ ಮೆಱೆವಿನಂ ಬೀಯಕ್ಕವೆಂ ಬೇಟ್ಕುಮೇ? ॥೩೮॥

ಭೂತನಾಥನಿಂದ (ಭೂತಗಳ ಒಡೆಯರುಗಳಿಂದ) – ಶಿವನಿಂದ ಕೂಡಿದುದಾಗಿಯೂ ಗಂಧರ್ವರಿಂದ ಕೀರ್ತಿಸಲ್ಪಟ್ಟುದಾಗಿಯೂ ಶೋಭಿಸುತ್ತಿದ್ದಿತು.

೩೬. ಗಸಣಿಗಳಿಂದ (ಕಲ್ಲಕೊಟಕುಗಳಿಂದ) ಕೂಡಿದುದಾಗಿ ಬಹಳ ಎತ್ತರವಾದ, ಹಿಮದ ಸಮೂಹದಿಂದ ವ್ಯಾಪ್ತವಾಗಿ ಶೋಭಿಸಿದ, ಹೆಚ್ಚಾದ ನೀರಿನ ಹಾವಸೆಯಿಂದ ಜಾರುವಂತಹ, ಬಿಳಿಯ ಸ್ಫಟಿಕಶಿಲೆಯಿಂದ ಒಪ್ಪುವಂತಹ ಹೊಸತಾದ ನಡೆದಾರಿಯುಳ್ಳ ರಜತಾದ್ರಿಯು ಗಯನಿಗೆ ತ್ರಿಶೂಲಿಯ ಮಹಿಮೆಯಿಂದ ಚಿಕ್ಕದಾದ ತಿಟ್ಟೆನಿಸಿತು. ಆದುದರಿಂದ ಗಯನು ಶಿವಭಕ್ತಿಯುಕ್ತನಾಗಿ ಆ ಬೆಟ್ಟವನ್ನೇರಿದನು.

೩೭. ಅಲ್ಲಿ ಎಲ್ಲಿ ನೋಡಿದರೂ ಇರತಕ್ಕ ಮೃಗಗಳು ಪರಸ್ಪರ ಕೋಪದ್ವೇಷಗಳನ್ನು ಬಿಟ್ಟಿರುತ್ತವೆ. ತಪೋವನಗಳು ಹಣ್ಣುಗಳಿಂದ ಕೂಡಿದ ಮರಗಳಿಂದ ಕೂಡಿವೆ. ಅಲ್ಲಿರತಕ್ಕ ಯೋಗಿಗಳ ಸಮೂಹವು ವೃದ್ಧಿಗೊಂಡ ತಪಸ್ಸಿನಿಂದಲೂ ಧ್ಯಾನದ ಸಂತೋಷದಿಂದಲೂ ಚಾಂಚಲ್ಯವಿಲ್ಲದ ಮನಸ್ಸಿನಿಂದಲೂ ಇರುವುದು.

೩೮. ಕಲ್ಪವೃಕ್ಷಗಳೇ ಆ ತಪೋವನದಲ್ಲಿರತಕ್ಕ ಮರಗಳು. ಕಾಮಧೇನುಗಳೇ ಹಸುಗಳ ಹಿಂಡು. ಪರುಷ(ಸ್ಪರ್ಶದಿಂದ ಕಬ್ಬಿಣವನ್ನು ಚಿನ್ನವನ್ನಾಗಿಸುವ)ಕಲ್ಲೇ ಅಲ್ಲಿರತಕ್ಕ ಹೆಬ್ಬಂಡೆಗಳು. ನೆಲವೆಲ್ಲಾ ಬೆಳ್ಳಿ. ಸಾಧುಜೀವಿಗಳಾದ ಒಳ್ಳೆಯ ಮೇಕೆ, ನವಿಲು, ಬಹಳ ಪ್ರೀತಿಮಾಡುವ ಮಂಗಗಳು. ಯಾವಾಗಲೂ ಕಾಣಿಸುತ್ತಿರುವ ಆ ತಪಸ್ಸಿನ

ಕಂದ॥ ಸದನದಿನುನ್ನತ ಗಿರಿಯ
ಗ್ರದತ್ತಣಿಂ ಬಕುತರೆರೆದುದಂ ಕುಡಲಿಳಿವಾ
ಸದಯ ಶಿವಂಗದು ಪಥಮೆನೆ
ವಿದಿತ ಕ್ರತುಧೂಮಮೆಸೆವುದಾ ಮುನಿವನದೊಳ್ ॥೩೯॥

ಅದು ತಪ್ಪಿದು ನೇರ್ಪದು ಸ
ಲ್ಲದು ಸಲ್ವುಮಿದೀಗನರ್ಥಮದುವಿದು ಸಾರ್ಥಂ
ಅದು ದೋಷಮಿದೇ ಪುಣ್ಯ
ಪ್ರದಮೆಂಗುಂ ಬಾಸೆವಕ್ಕಿ ರಿಸಿಬನದೆಡೆಯೊಳ್ ॥೪೦॥

ಕಪಿಗಳ್ ಪಳಾಶ ಸಮಿಧಾ
ಸುಫಳ ಕುಶೌದುಂಬರಾದಿಯಂ ತಂದೀಗುಂ
ತಪಿಪರ್ಗಿಂಧನಮೀಗುಂ
ದ್ವಿಪಂಗಳಾ ವನದೆ ತಪದ ಮಹಿಮೆಯಿನೇಗಳ್ ॥೪೧॥

ರಾಜ್ಯದಲ್ಲಿ ಶಿವಭಕ್ತರು ಅತ್ಯಂತ ಯೋಗನಿರತರಾಗಿರುತ್ತಿರುವಾಗ ಅವರ ವೆಚ್ಚಕ್ಕಾಗಿ ಅವಾವುದಾದರೂ ಬೇಕಾಗುವುದೆ? (ಬೇಕಾಗಿಲ್ಲ–ಎಂದರ್ಥ).

೩೯. ಮುನಿಗಳ ಆಶ್ರಮದಲ್ಲಿ ಯಾವಾಗಲೂ ಯಜ್ಞವಾಗುತ್ತಿದ್ದಿತು. ಆ ಯಜ್ಞದಿಂದೆದ್ದ ಹೊಗೆಯು ಎತ್ತರವಾದ ಬೆಟ್ಟದಲ್ಲಿರುವ ತನ್ನ ಮನೆಯಿಂದ ಭಕ್ತರ ಇಷ್ಟಾರ್ಥವನ್ನು ಕೊಡುವುದಕ್ಕಾಗಿ ದಯಾಳುವಾದ ಶಿವನಿಗೆ ಕೆಳಗಿಳಿದು ಬರತಕ್ಕ ದಾರಿಯಂತೆ ಕಂಗೊಳಿಸುವುದು.

೪೦. ಆ ಋಷಿಗಳ ಆಶ್ರಮದಲ್ಲಿರತಕ್ಕ ಗಿಳಿಗಳು ವೇದಮಂತ್ರಗಳನ್ನು ಕೇಳಿ ಕೇಳಿ ಕಲಿತವುಗಳಾಗಿ ಋಷಿಗಳು ಮಂತ್ರೋಚ್ಚಾರ ಮಾಡುವಾಗ – "ಅದು ತಪ್ಪು, ಇದು ಸರಿ; ಅದು ಸಲ್ಲದು, ಇದು ಸಲ್ಲುವಂಥದು; ಇದೀಗ ಅರ್ಥಹೀನ, ಅದು ಅರ್ಥವುಳ್ಳುದು; ಅದು ಪಾಪಕರ, ಇದೇ ಪುಣ್ಯಕರ" ಎಂದು ಹೇಳುತ್ತಿವೆ.

೪೧. ಆ ಆಶ್ರಮದಲ್ಲಿ ತಪಸ್ಸಿನ ಮಹಿಮೆಯಿಂದಾಗಿ, ಕೋತಿಗಳು ಮುನಿಗಳಿಗೆ ಬೇಕಾಗುವ ಪಲಾಶ, ಸಮಿತ್ತು, ಹಣ್ಣು, ದರ್ಭೆ, ಅತ್ತಿಯ ಕುಡಿ ಮುಂತಾದುವನ್ನು ತಂದು ಕೊಡುತ್ತಿದ್ದುವು. ಆನೆಗಳು ಆ ತಪಸ್ವಿಗಳಿಗೆ ಯಾಗಕ್ಕೆ ಬೇಕಾಗುವ ಸೌದೆಯನ್ನು ತಾವೇ ತಂದು ಕೊಡುತ್ತಿದ್ದವು.

ಮ.ವಿ. ಎಸೆಗುಂ ಬಚ್ಚಣೆಗೆಯ್ದುವೋಲಮರ್ದಿನಿಂ ರೋಮಾಳಿ ಪೂವಿಲ್ಲ ತುಂ
ಡಿಸಿದಂತಾ ನಿಜಿಗೊಂಡ ಪುರ್ವು ಸೆರೆಗಳ್ ಷಡ್ವೈರಿಯಂ ಕಟ್ಟಿದಾ
ಪೊಸವಗ್ಗಂಗಳ ಮಾಟಕ್ಕಿಯಿಂ ತಪದೆ ಮೇಲೆಳ್ದೆಲ್ವುಗಳ್ ಧ್ಯೇಯದೊಳ್
ಬೆಸೆವಂತೇರ್ವ ಮನಕ್ಕೆ ಮೆಟ್ಟೆನೆ ತಪೋನಿಷ್ಠಾಪಿತ ಸ್ವಾಂತರಾ ॥೪೨॥

ಗದ್ಯ॥ ಮತ್ತಮಲ್ಲೊಂದಸುಗೆ ಮರದಡಿಯೊಳ್ ಕಿತ್ತಡಿಮುದುಕನೊರ್ವಂ –

ಮ.ಸ್ರ. ರುಜುದೇಹಂ ನೀಳೆ ಪದ್ಮಾಸನದೊಳಚಲಿತಂ ಪುತ್ತಮೆಳ್ದಪ್ಪೆ ಜೇಂಬುಳ್
ನಿಜಗೇಹಂ ಗೆಯ್ದು ಮೂಗಿಂ ನೆಗೆಯುತುಮಿರೆ ತನ್ನಾಸಿಕಾಗ್ರಸ್ಥದೃಷ್ಟಿ
ಧ್ವಜನೊರ್ವಂ ಬಾಹ್ಯರಾಗಂಗಳನುಟಿದೆಸೆದಂ ಯೋಗದೊಳ್ ನಿರ್ಮಲಂ ಯೋ
ಗಿಜನಾಚಾರಂ ಮಹಾಮುಕ್ತಿಯ ಘನಪದವೀ ಪೀಠದಾರೋಹಮಲ್ತೇ? ॥೪೩॥

ಗದ್ಯ॥ ಮತ್ತಂ ಪೆಱತೊಂದೆಡೆಯೊಳೊಂದು ಪಾಲ್ಮರನಡಿಯೊಳುನ್ನತ ಸ್ಫಟಿಕ ಗ್ರಾವದೊಳಾಸನಂ ಮಾಡಿ – ಕೆಂಜೆಡೆಯನಂ ಜಿತೇಂದ್ರಿಯತ್ವದಿಂ ಪೂಜಿಸಿ ಸೂಡಿದ ಚೆಂದಾವರೆಯೆಸಟಿಂದೊಪ್ಪುವ ಕೆಂಜೆಡೆಯಿಂ – ಪಂಚಾನನ ಸಪರ್ಯಾ ಮಂತ್ರೋಚ್ಚಾರಣ ನಿಯಂತ್ರಣ ಗಂಭೀರ ಧ್ವನಿ ಪ್ರಕಟನಾನನದಿಂ – ಶಿವಪೂಜಾಪುಷ್ಪರಜೋವಿರಾಜಿತ ಹಸ್ತೋದ್ಯಮನ ಗಣಿತಮಾದುದಜಿಂ

೪೨. ತಪೋನಿಷ್ಠೆಯಲ್ಲಿದ್ದ ಅಂತಃಕರಣದ ಮುನಿಗಳ ದೇಹದ ರೋಮಗಳು ಅಮೃತಲೇಪನ ಮಾಡಿದಂತೆ ಬೆಳ್ಳಗಿದ್ದವು. ಅವರ ಹುಬ್ಬುಗಳು ನಿರಿಗೆಗೊಂಡು ಕಾಮನ ಹೂವಿನ ಬಾಣಗಳ ಬಿಲ್ಲನ್ನು ತುಂಡರಿಸಿದಂತಿದ್ದುವು. ಶರೀರದ ನಾಡಿಗಳು ಕಾಮ–ಕ್ರೋಧ–ಲೋಭ–ಮೋಹ–ಮದ–ಮತ್ಸರ ಎಂಬ ಆರು ಶತ್ರುಗಳನ್ನು ಬಂಧಿಸಿದ ಹೊಸತಾದ ಹಗ್ಗಗಳಂತಿದ್ದುವು. ತಪೋಮಗ್ನತೆಯಿಂದಾಗಿ ಶರೀರವು ಕೃಶವಾಗಿ ಮೇಲೆದ್ದು ತೋರುವ ಎಲುಬುಗಳು ಧ್ಯೇಯದೆಡೆಗೆ ಹೋಗಿ ಸೇರುವುದಕ್ಕಾಗಿ ಹತ್ತಲು ಮನಸ್ಸಿಗೆ ಇರುವ ಮೆಟ್ಟಿಲುಗಳೋ ಎಂಬಂತೆ ಶೋಭಿಸುತ್ತಿದ್ದವು. (ಗದ್ಯ) ಆಮೇಲೆ ಅಲ್ಲಿ ಒಂದು ಅಶೋಕವೃಕ್ಷದ ಬುಡದಲ್ಲಿ ಒಬ್ಬ ಮುದುಕನಾದ ತಪಸ್ವಿ ಕಾಣಿಸಿದನು. ಅವನು ಹೀಗಿದ್ದನು –

೪೩. ಅವನ ನೆಟ್ಟಗಿನ ಶರೀರವು ಉದ್ದವಾಗಿ ಕಾಣಿಸುವಂತೆ ಅವನು ಪದ್ಮಾಸನದಲ್ಲಿ ಅಲುಗಾಡದೆ ಕಾಣಿಸುತ್ತಿದ್ದನು. ಹುತ್ತವೆದ್ದು ಅವನನ್ನು ಅಪ್ಪುತ್ತಿತ್ತು. ಜೇನಿನ ಹುಳುಗಳು ಅವನ ಮೂಗಿನೊಳಗೆ ಮನೆ ಮಾಡಿ ಹಾರಾಡುತ್ತಿದ್ದುವು. ಹಾಗಿದ್ದರೂ ಮುನಿಯು ವಿಚಲಿತನಾಗದೆ ಮೂಗಿನ ತುದಿಯಲ್ಲಿ ದೃಷ್ಟಿಯನ್ನಿಟ್ಟುಕೊಂಡವನಾಗಿ, ಹೊರಗಣ ಪ್ರೀತಿಯನ್ನೆಲ್ಲ ತ್ಯಜಿಸಿದವನಾಗಿ ಯೋಗಾಭ್ಯಾಸದಲ್ಲಿ ಪರಿಶುದ್ಧನಾಗಿ ಶೋಭಿಸುತ್ತಿದ್ದನು. ಯೋಗಿಗಳ ಆಚಾರವೆಂಬುದು ಸಾಮಾನ್ಯವೆ? ಅದು ಶ್ರೇಷ್ಠವಾದ ಮೋಕ್ಷದ ಘನಪದವಿಯ ಪೀಠವನ್ನು ಏರುವಂತಹದಲ್ಲವೆ? (ಗದ್ಯ) ಆ ಮೇಲೆ ಬೇರೊಂದು ಕಡೆಯಲ್ಲಿ ಒಂದು ಹಾಲುಮರದ

ಕೆಂಪಾಗಿ, ನೀರಜಚುಬಿತಾಳಿಮಾಲೆಯಂತೆಸೆದು ತೆಗಲೆಯ ಬೂದಿಯನೊರಸುವ ಜಪಮಾಲೆಯಿಂದೆಸೆವ ತೋರಗೊರಲಿಂ– ಹಸ್ತಮುದ್ರೋದ್ಯಮನ ಚಾಲಿತ ಪರಿಪೂತಪಾಣಿಯಿ– ತ್ಯಕ್ತಾಹಾರಾಮೋಹ ಕೃಶೋದರದಿಂ – ರಕ್ತಪಲ್ಲವಾಸನಾಂ ತರೋನ್ನತಾಸ್ಪಷ್ಟ ರಾಜಿತ ಪಾದದಿಂದೆಸೆವ ಪಾರಲೌಕಿಕ ಜ್ಞಾನಿಯಿರ್ದನವನೊತ್ತಿನೊಳ್ – ರಿಪುದಂಡನ ಸಮರ್ಥಮಪ್ಪ ಯೋಗದಂಡಮುಂ – ಕಡುದವಸಿಂ ಮರುವುಟ್ಟಂ ಕುಟ್ಟಿ ಸುಟ್ಟು ಬೂದಿಗೆಯ್ದು ಕುಱುಪೆನಿಪ್ಪ ಬೂದಿಮರಿಗೆಯುಂ – ಪುಣ್ಯಾಂಬುಭರಿತಮಾಗಿ ಮೈಮೆಗೆ ಕಂಡಿಯೆನಿಪ್ಪ ತವಸುಗಿಂಡಿಯುಂ – ಚೆಲ್ವಾದ ಜೋಗವಾವುಗೆಯುಮೊರ್ಪಿರ್ದುವಲ್ಲದೆ –

ಬುಡದಲ್ಲಿ ಎತ್ತರದ ಸ್ಫಟಿಕಶಿಲೆಯ ಮೇಲೆ ಆಸನವನ್ನು ಮಾಡಿಕೊಂಡ ಪಾರಲೌಕಿಕ ಜ್ಞಾನಿಯಾದ ಋಷಿ ಈ ರೀತಿಯಲ್ಲಿದ್ದನು – ಕೆಂಪು ಜಡೆಯ ಶಿವನನ್ನು ಇಂದ್ರಿಯವಿಜಯದಿಂದ ಪೂಜಿಸಿ ಮುಡಿದುಕೊಂಡ ಕೆಂದಾವರೆಯ ಎಸಳಿಂದ ಶೋಭಿಸುವ ಕೆಂಜೆಡೆ ಅವನಿಗಿದ್ದಿತು. ಪಂಚಮುಖನ ಸೇವೆಯ ಮಂತ್ರೋಚ್ಚಾರಣೆ ನಿಯಂತ್ರಣದಿಂದ ಗಂಭೀರವಾದ ಧ್ವನಿಯನ್ನು ಹೊರಡಿಸುವ ಬಾಯಿ ಇದ್ದಿತು. ಶಿವಪೂಜೆಯ ಹೂವುಗಳ ಧೂಳಿಯಿಂದ ವಿರಾಜಿಸುವ ಕೈಯಿಂದೆತ್ತುವುದರಿಂದ ಕೆಂಪಾಗಿ, ತಾವರೆಯನ್ನು ಚುಂಬಿಸುವ ತುಂಬಿಗಳ ಮಾಲೆಯಂತೆ ಕಾಣಿಸುತ್ತ ಎದೆಯ ವಿಭೂತಿಯನ್ನು ಉಜ್ಜುವ ಜಪಸರದಿಂದ ಶೋಭಾಯಮಾನವಾದ ದಪ್ಪದ ಕತ್ತು ಅವನಿಗಿದ್ದಿತು. ವಿವಿಧ ಹಸ್ತಮುದ್ರೆಗಳನ್ನೆತ್ತಿ ಚಾಲನೆ ಮಾಡುವುದರಿಂದ ತುಂಬ ಪವಿತ್ರವಾದ ಕೈಯಿದ್ದಿತು. ಆಹಾರದ ಮೋಹವನ್ನೇ ಬಿಟ್ಟುದರಿಂದ ಹೊಟ್ಟೆ ಬಡವಾಗಿದ್ದಿತು. ಕೆಂಪಾದ ಚಿಗುರುಗಳ ಆಸನದಲ್ಲಿದ್ದು ಸ್ವಲ್ಪ ಎತ್ತರವಾಗಿಯಾದರೂ ಅಸ್ಪಷ್ಟವಾಗಿ ಕಾಣಿಸುವ ಪಾದವುಳ್ಳವನಾಗಿದ್ದನು. ಅಂತಹ ಪಾರಲೌಕಿಕ ಜ್ಞಾನಿಯಾದ ಆ ಮುನಿಯ ಸಮೀಪದಲ್ಲಿ ಷಡ್ವೈರಿಗಳನ್ನು ದಂಡಿಸಲು ಸಮರ್ಥನಾದ ಯೋಗದಂಡವು ಕಠಿನ ತಪಸ್ಸಿನಿಂದ ಪುನರ್ಜನ್ಮವನ್ನು ಕುಟ್ಟಿ ಸುಟ್ಟು ಬೂದಿಮಾಡಿದ ಚಿಹ್ನೆಯೆನಿಸತಕ್ಕ ವಿಭೂತಿಯ ಮರಿಗೆಯೂ ಪುಣ್ಯಜಲದಿಂದ ತುಂಬಿ ಮಹಿಮೆಗೆ ಗನಿಯೆನಿಸ ತಕ್ಕ ಕಮಂಡಲುವೂ ಸೊಗಸಾದ ಯೋಗದ ಪಾದುಕೆಯೂ ಶೋಭಿಸುತ್ತಿದ್ದವು. ಅದಲ್ಲದೆ ಆ ತಪಸ್ವಿ ಹೀಗಿದ್ದನು –

ಚಂ.ಮಾ. ಕುಳಗಿರಿಮಧ್ಯದಲ್ಲಿ ಕನಕಾದ್ರಿಯೊ ಬಾನೊಳಚೆಲ್ಗಳೊಪ್ಪುವ
ಲ್ಲೆಳವೆಱೆಯೋ ಪ್ರವಾಳರುಚಿರಾವಳಿ ಮಧ್ಯದ ರನ್ನವೋ ಎನಲ್
ಬಳಸಿರೆ ಶಿಷ್ಯರೋಳಿಯಚಲಂ ವಿಮಳೋನ್ನತ ಧರ್ಮನೀತಿಯಂ
ತಿಳಿಪುವನೊಪ್ಪಿದಂ ತವಸಿಗಂ ಪರಿಭಾಷಿತತೇಜನಗ್ನಿವೋಲ್ ॥೪೪॥

ಕಂದ॥ ಇನ್ನರ್ ನೋಡಿದ ಮಾತ್ರದೊ
ಳುನ್ನತಿಯುಂ ಬನ್ನದಟೆವುಮೊಲ್ದೊಡೆ ಮತ್ತಾ
ರೆನ್ನನ್ನರೆನುತೆ ಖಚರಂ
ಮುನ್ನಮೆ ಕಡುಬಕುತಿಯಿಂದೆ ಪಾದಕೆ ಮಣಿದಂ ॥೪೫॥

ಗದ್ಯ॥ ಅಂತು ಮಣಿದು ತನಗೆ ತಕ್ಕುದನುಪದೇಶಂಗೆಯ್ದು ಪರಸುವುದೆಂದು ಭಕ್ತಿಯಿಂ ಕೆಯ್ಮುಗಿದನನಾಗಳಾ ಅಮಾನುಷದಯಾರಸಾರ್ದ್ರಮಾನಸಂ – ಮುನಿಜನ ಮನಸ್ಸರೋಜಮಾನಸಂ – ಮುನಿನಾಥನಾತನಂ ಕಿರಿದೆಡೆ ಕುಳ್ಳಿರವೇಳ್ದು ಮತ್ತಂ ಕಿರಿದಱಿಕೊಳೆ ಪಿರಿದನಱೆಪಲ್ ಬಗೆದೆಂದಂ –

೪೪. ಕುಲಪರ್ವತಗಳ ನಡುವೆ ಇರುವ ಕನಕಾದ್ರಿಯೋ, ಆಕಾಶದಲ್ಲಿ ನಕ್ಷತ್ರಗಳು ಶೋಭಿಸುವಲ್ಲಿ ಇರತಕ್ಕ ಬಾಲಚಂದ್ರನೋ ಹವಳಗಳ ಹೊಳಪಿನ ಮಾಲೆಯ ನಡುವೆ ಇರುವ ರತ್ನವೋ ಎಂಬಂತೆ ಆ ತಪಸ್ವಿಯಿದ್ದನು. ಅವನನ್ನು ಶಿಷ್ಯರ ಸಮೂಹವು ಬಳಸಿದ್ದಿತು. ಅಲುಗಾಡದೆ ಇದ್ದುಕೊಂಡು, ಆ ಶಿಷ್ಯರಿಗೆ ನಿರ್ಮಲವೂ ಶ್ರೇಷ್ಠವೂ ಆದ ಧರ್ಮನೀತಿಗಳನ್ನು ಅವನು ಬೋಧಿಸುತ್ತಿದ್ದನು. ಅವನು ಅಗ್ನಿಯಂತೆ ಅತ್ತಿತ್ತ ಪ್ರಕಾಶಿಸುವ ತೇಜೋವಂತನಾಗಿದ್ದನು.

೪೫. ಇಂಥವರು ನಮ್ಮನ್ನು ನೋಡಿದರೆ ಸಾಕು, ನಮ್ಮ ಉದ್ಧಾರವಾಗುವುದು, ಕಷ್ಟಗಳು ಅಳಿಯುವವು, ಒಲಿದರೆ – ನನ್ನಂತಹ ಪುಣ್ಯಶಾಲಿಗಳು ಯಾರು? ಎಂದು ಆ ಖಚರನು (ಗಯನು) ಅತಿ ಭಕ್ತಿಯಿಂದ ಪ್ರಾರಂಭದಲ್ಲೇ ಪಾದಕ್ಕೆರಗಿದನು. (ಗದ್ಯ) ಹಾಗೆ ನಮಸ್ಕರಿಸಿ ತನಗೆ ತಕ್ಕುದಾದ ಉಪದೇಶ ನೀಡಿ ಆಶೀರ್ವದಿಸಬೇಕೆಂದು ಭಕ್ತಿಯಿಂದ ಕೈ ಮುಗಿದನು. ಆಗ ಅಮಾನುಷವಾದ ಕರುಣಾರಸದಿಂದ ನನೆದ ಮನಸ್ಸಿನವನೂ ಮುನಿಗಳ ಮನಸ್ಸೆಂಬ ತಾವರೆಗೆ ಮಾನಸಸರೋವರದಂತೆ ಇರುವವನೂ ಆದ ಆ ಮುನೀಂದ್ರನು ಸ್ವಲ್ಪ ಹೊತ್ತು ಕುಳ್ಳಿರಲು ಹೇಳಿದನು. ಅನಂತರ ಸಂಕ್ಷೇಪವಾಗಿ ಶ್ರೇಷ್ಠ ವಿಚಾರವನ್ನು ತಿಳಿಸಲು ಮನದಲ್ಲಿ ನಿಶ್ಚಯಿಸಿ ಹೀಗೆಂದನು –

ಕಂದ॥ ಹಿತದಹಿತದ ತಗುವತಗದೊ
ಳ್ಳಿತಂ ಕೆಡುಕನಾಯ್ವ ಬಿಡುವ ಕಜ್ಜಮನಱೆವಾ
ಮತಿಯುತಮನುಜಂ ಸ್ವಮನ
ಸ್ಥಿತಿಯಂ ತಿರ್ದುವುದೆ ಮೊದಲ ಶುದ್ಧಿಯ ಕಾರ್ಯಂ ॥೪೬॥

ಶುದ್ಧಯಿಸೆ ಮನೋಭಾವ ಲ
ಸದ್ದರ್ಪಣಮಂ ಸುಬುದ್ಧಿಗೊಡನೆಯೆ ತೋರ್ಕುಂ
ಶುದ್ಧಾತ್ಮಬಿಂಬಮದಱೆಂ
ಶುದ್ಧಯಿಸುವ ವಿಮಲ ಶೀಲಮಂ ವಿವರಿಸುವೆಂ ॥೪೭॥

ದೇವನದೃಶ್ಯಂ
ಜೀವ ಶರೀರಾ ದೃಶ್ಯಂ ಶರೀರಮವನಂಶಮಿದಂ
ಭಾವಿಸಿ ಸರ್ವೋಚಿತ ಸಮ
ಭಾವದೆ ತನ್ನಂತೆ ಪೆಱರನಱೆವುದೆ ಶೀಲಂ ॥೪೮॥

ಹಿತಮೆಲ್ಲರ್ಗದು ಧರ್ಮಮ
ಹಿತಮಪ್ಪುದಧರ್ಮಮಪ್ಪುದೆಂಬ ವಿವೇಕಂ
ಜಿತರಿಪುವಲ್ಲದ ದುರ್ಮತಿ
ಮತಿಗೇಂ ತೋಱುಗುಮೆ ತೋರ್ದೊಡಂ ಕೃತಿಗುಂಟೇ? ॥೪೯॥

೪೬. ಹಿತವಾದುದನ್ನು ಮತ್ತು ಹಿತವಲ್ಲದುದನ್ನು, ತಕ್ಕುದನ್ನು ಮತ್ತು ತಕ್ಕುದಲ್ಲದುದನ್ನು, ಒಳ್ಳೆಯದನ್ನು ಮತ್ತು ಕೆಟ್ಟದನ್ನು ಯಾವುದೆಂದು ಪರಿಶೀಲಿಸಿ, ಆಯ್ಕೆ ಮಾಡುವ ಮತ್ತು ಬಿಟ್ಟು ಬಿಡುವ ಕಾರ್ಯವನ್ನು ತಿಳಿಯತಕ್ಕ ಬುದ್ಧಿಯುಳ್ಳ ಮನುಷ್ಯನು ಮೊದಲು ತನ್ನ ಮನಸ್ಸಿನ ಸ್ಥಿತಿಯನ್ನು ತಿದ್ದಿಕೊಳ್ಳುವುದೇ ಮೊತ್ತಮೊದಲ ಶುದ್ಧತೆಯ ಕಾರ್ಯವೆನಿಸುವುದು.

೪೭. ಮನೋಭಾವವೆಂಬ ಶೋಭಾಯಮಾನವಾದ ಕನ್ನಡಿಯನ್ನು ಶುದ್ಧಪಡಿಸಿದೊಡನೆಯೇ ಒಳ್ಳೆಯ ಬುದ್ಧಿಯುಂಟಾಗಿ ಆ ಬುದ್ಧಿಗೆ ಶುದ್ಧವಾದ ಆತ್ಮ ಬಿಂಬ (ಆತ್ಮ ಸ್ವರೂಪ) ಕಾಣಿಸುವುದು. ಆದುದರಿಂದ ಮನಸ್ಸನ್ನು ಶುದ್ಧ ಪಡಿಸುವ ನಿರ್ಮಲವಾದ ಶೀಲವನ್ನು ವಿವರಿಸುವೆನು.

೪೮. ಪರಮಾತ್ಮನು ಕಣ್ಣಿಗೆ ಕಾಣಿಸದವನೂ ಆಗಿದ್ದಾನೆ. ಕಾಣಿಸುವವನೂ ಆಗಿದ್ದಾನೆ. ಸಕಲ ಜೀವಿಗಳ ಶರೀರವೂ ಶರೀರವಲ್ಲದ ವಿಷಯಗಳೂ ಆ ಪರಮಾತ್ಮನ ಅಂಶಗಳೇ ಆಗಿವೆ. ಇದನ್ನು ಭಾವಿಸಿಕೊಂಡು ಎಲ್ಲರಿಗೂ ಉಚಿತವೆನಿಸುವ ಸಮಾನಭಾವನೆಯಿಂದ ತನ್ನ ಹಾಗೆಯೇ ಇತರರು ಎಂದು ತಿಳಿದುಕೊಳ್ಳುವುದೇ ಶೀಲವಾಗಿರುತ್ತದೆ.

೪೯. ಸರ್ವರಿಗೂ ಹಿತವಾಗಿರುವಂತಹದೇ ಧರ್ಮ. ಅಹಿತವಾದುದು ಅಧರ್ಮವಾಗುವುದು. ಈ ವಿವೇಕವು ಷಡ್ರಿಪುಗಳನ್ನು ಗೆಲ್ಲಲಾರದವನಾದ ದುರ್ಬುದ್ಧಿಯವನ ಬುದ್ಧಿಗೆ ತೋರಲಾರದು. ಒಂದು ವೇಳೆ ತೋರಿದರೂ ಆಚರಣೆಗೆ ಅದು ಬರಲಾರದು.

ನ್ಯಾಯಮನೆ ಪಿಡಿದು ಸತ್ಯಾ
ಧ್ಯಾಯದೊಳಡಿಯಿಟ್ಟು ಚಾಗಮಂ ತಾಳ್ಮೆಯುಮುಂ
ಆಯುತೆ ದೇವಪ್ರಿಯನ
ಕ್ಕಾಯತಮತಿ ನಿರ್ಮಲಾಂತರಂಗಂ ಮನುಜಂ ||೫೦||

ಗದ್ಯ|| ಎಂದಾ ತಪೋಧನಂ ಸಾರ್ವಕಾಲಿಕಮುಂ ಸಾರ್ವತ್ರಿಕಮುಂ ಸಾರ್ವಜನಿಕಮುಂ ಸಂಗೃಹೀತಮುಮಪ್ಪ ನೀತಿಯನಱುಪಿ, ಚಿತ್ತಜಹರಂ ನಿನ್ನ ಚಿತ್ತಕೊಡರ್ಚುಗೆ ಶುಭಮನೆಂದು ಪರಸಿ ಕಳುಪಲೊಡಂ –

ಕಂದ|| ಅಡಿಗಡಿಗೆ ನೆನೆಯುತುಂ ಬೆ
ಳ್ಳಡಿಯನನ್ನಲ್ಲಲ್ಲಿ ಮೆಱೆವ ರಿಸಿಬನದೆ ತಪಂ
ಬಡುವಱಿಕೆಯ ಕಿತ್ತಡಿಗಳ
ನೊಡನೀಕ್ಷಿಸುತುಂ ಗಿರೀಶನೆಡೆಗೈತಂದಂ ||೫೧||

ಗದ್ಯ|| ಅಂತು ಬರುತುಂ ಪೊಱ ಅಂಗಣದಿಂದಮೆ ಕಾಮುದನಪ್ಪ ಸೋಮನಂ ಭಕ್ತಿಮನನಾಗಿ ಸ್ತುತಿಸಿದನದೆಂತೆನೆ –

ಸ್ರಗ್ಧರಾ ನಾನಾಬ್ರಹ್ಮಾಂಡಮಂ ಸಂಜನಿಯಿಪ ಪೊರೆವಾ ನಾಶಮಂಗೆಯ್ವ ವಾಗ್ದೇ
ವೀನಾಥಂ ಶ್ರೀವರಂ ಪಾರ್ವತಿಯ ವರನುಮೀ ಮೂವರುಂ ನಿನ್ನ ಲೀಲಾ
ನೂನಾನುಷ್ಠಾನದಿಂದಂ ಜನಿಸಿರೆ ತಿರೆಯೊಳ್ ಬಳ್ದುದುತ್ಕೃಷ್ಟಧರ್ಮಂ
ನೀನಾ ತ್ರೈಮೂರ್ತಿಗಳ್ಗಂ ಬೆಸಸುವನಱಿತೆಂ ನಂಬಿದೆಂ ನಿನ್ನನೀಗಳ್ ||೫೨||

೫೦. ವಿಶಾಲವಾದ ಬುದ್ಧಿಯುಳ್ಳ ನಿರ್ಮಲವಾದ ಹೃದಯವುಳ್ಳ ಮನುಷ್ಯನು ನ್ಯಾಯವಾದುದನ್ನು ಮಾತ್ರವೇ ಕೈಗೊಂಡು ಸತ್ಯದ ಅಧ್ಯಾಯದಲ್ಲೆ ಹಜ್ಜೆಯಿಟ್ಟು ತ್ಯಾಗ ಮತ್ತು ತಾಳ್ಮೆ ಎಂಬ ಸದ್ಗುಣಗಳನ್ನು ಆಯ್ದು ಸ್ವೀಕರಿಸಿ ವರ್ತಿಸಿ ಪರಮಾತ್ಮನಿಗೆ ಪ್ರಿಯನಾಗುವನು, ಹಾಗೆ ಆಗಲಿ! (ಗದ್ಯ) ಹೀಗೆಂದು ತಪಸ್ಸೇ ಐಶ್ವರ್ಯವೆನಿಸಿದ ಆ ಮುನೀಶನು ಎಲ್ಲ ಕಾಲಗಳಿಗೂ ಕಡೆಗಳಿಗೂ ಜನಗಳಿಗೂ ಅನ್ವಯಿಸತಕ್ಕ ಸಂಗ್ರಹರೂಪದ ನೀತಿಯನ್ನು ಬೋಧಿಸಿದನು. ಕಾಮವೈರಿಯಾದ ಪರಶಿವನು ನಿನ್ನ ಮನಸ್ಸಿಗೆ ಶುಭವನ್ನುಂಟು ಮಾಡಲಿ! ಎಂದು ಅಶೀರ್ವದಿಸಿ ಗಯನನ್ನು ಕಳುಹಿಸಿದನು.

೫೧. ಗಯನು ತದನಂತರ, ಶಿವನನ್ನೆ ಅಡಿಗಡಿಗೆ ಧ್ಯಾನಿಸುತ್ತ ಅಲ್ಲಲ್ಲಿಯ ಋಷ್ಯಾಶ್ರಮಗಳಲ್ಲಿ ತಪೋನಿರತರಾದ ಪ್ರಖ್ಯಾತ ಋಷಿಗಳನ್ನು ಸಂದರ್ಶಿಸುತ್ತಾ ಶ್ರೀ ಪರಮೇಶ್ವರನಿರುವಲ್ಲಿಗೆ ಬಂದನು. (ಗದ್ಯ) ಹಾಗೆ ಬರುತ್ತಾ ಕಾಮಿತಗಳನ್ನು ದಯಪಾಲಿಸತಕ್ಕ ಉಮಾದೇವೀಸಹಿತನಾದ ಶಿವನನ್ನು ಭಕ್ತಿಯುಕ್ತವಾದ ಮನಸ್ಸಿನಿಂದ ಹೊರಗಣ ಅಂಗಣದಿಂದಲೇ ಸ್ತುತಿಸಿದನು. ಅದು ಹೇಗೆಂದರೆ –

೫೨. ಎಷ್ಟೋ ಬ್ರಹ್ಮಾಂಡಗಳ ಸೃಷ್ಟಿ ಸ್ಥಿತಿಲಯಗಳನ್ನು ಮಾಡತಕ್ಕ ಬ್ರಹ್ಮ, ವಿಷ್ಣು, ಶಿವ ಎಂಬ ಈ ಮೂವರೂ ನಿನ್ನ ವಿನೋದಲೀಲೆಯ ಆಚರಣೆಯಿಂದಲೇ ಜನಿಸಿರುತ್ತಾರೆ. ಇದರಿಂದಾಗಿ ಈ ಲೋಕದಲ್ಲಿ ಶ್ರೇಷ್ಠವಾದ ಧರ್ಮವು ಬಳೆದು ಬಂದಿದೆ. ನೀನು – ಆ ತ್ರಿಮೂರ್ತಿಗಳಿಗೂ ಆಜ್ಞೆ ನೀಡುವವನಾಗಿ ಇರುತ್ತೀಯೆಂದು ನಾನು ತಿಳಿದಿರುತ್ತೇನೆ. ನಾನೀಗ ನಿನ್ನನ್ನೇ ನಂಬಿದ್ದೇನೆ.

ಆ ಕಾರಾತೀತನೆಂದುಂ ವಿಗತ ಭವಭಯಾನೀಕನೆಂದುಂ ಸ್ವಬಾಹ್ಯಾ
ಲೋಕಂ ಮೀರ್ದಾತನೆಂದುಂ ಗುಣವಿರಹಿತನೆಂದುಂ ಮಹಾಯೋಗಿಗಳ್ ಜ್ಞಾ
ನಾಕಾರಾಂತರ್ಯದೊಳ್ ನಿನ್ನಯೆ ದಿಟವರಿಜಂ ದ್ಯೋತಮಂ ಕಾಂಬರೆಂಬರ್
ಸಾಕಾರಂ ಭಕ್ತವರ್ಗಕ್ಕೆನಿಪ ಮಹಿಮನೇ ನಂಬಿದೆಂ ನಿನ್ನನೀಗಳ್ ॥೫೩॥

ಮ.ವಿ. ಭವಮೆಂಬಂಬುನಿಧಾನದೊಳ್ ನೆಗೆವ ಭಂಗಂ ಪೋಲ್ವ ಸಂತೋಷದಿಂ
ಕವಿದುಂ ಮತ್ತದಱಿಂ ಬಳಲ್ದು ನಿಜದಿಂದುದ್ಧಾರಮಂ ಗೊಂಬ ಚಾ
ರುವಿವೇಕಂಬಡೆದಂದು ನಿನ್ನ ಪದಮಂ ಜೀವಾಳಿ ಸಾರ್ದಾಗಳಾ
ಭವಮಂ ಪಿಂಗಿಪ ದೇವ ನೀನಭವನೈ ಭಕ್ತಾರ್ತಿ ವಿಧ್ವಂಸನೈ ॥೫೪॥

ಕಂದ॥ ಬುಸುಗುಟ್ಟುವ ಬಿಸದೆಲರುಣಿ
ಪೊಸ ಪಚ್ಚಮದಾಗೆ ಪೆಗಲನೇರ್ದೊಡೆಯುಂ ನೀಂ
ಮಸಗದೆ ಪೇಸದೆಯುಂ ಕಿ
ಟ್ಕಿಸೆಯದೆ ತಾಳ್ದಿರ್ಪ ಪಾಂಗು ಪೆಱರ್ಗರಿದಲ್ತೇ ॥೫೫॥

೫೩. ಮಹಾಯೋಗಿಗಳು ನಿನ್ನನ್ನು ನಿರಾಕಾರನೆಂದೂ ಸಂಸಾರಭಯ ಸಮೂಹವಿಲ್ಲದವನೆಂದೂ ತಮ್ಮ ಹೊರಗಣ್ಣಿಗೆ ಕಾಣಿಸದವನೆಂದೂ ತ್ರಿಗುಣಾತೀತನಾದ ಶುದ್ಧ ಸತ್ವಗುಣನೆಂದೂ ತಮ್ಮ ಜ್ಞಾನಾಕಾಶ ಪ್ರದೇಶದಲ್ಲಿ ಜ್ಯೋತಿರೂಪವಾದ ನಿನ್ನ ದೇಹದ ಆಕೃತಿಯನ್ನು ಕಾಣುವರೆಂದು ಹೇಳುತ್ತಾರೆ. ಆದರೆ ನೀನು ಭಕ್ತರ ವರ್ಗಕ್ಕೆ ಪ್ರತ್ಯಕ್ಷವಾಗಿ ಕಾಣಿಸುವವನಾಗಿರುತ್ತೀ. ಈಗ ನಿನ್ನನ್ನೇ ನಂಬಿರುತ್ತೇನೆ.

೫೪. ಎಲೈ ದೇವನೇ, ಜೀವಿಗಳು (ಮಾನವರು) ಸಂಸಾರಸಾಗರದಲ್ಲಿ ಏಳುವ ಅಲೆಯನ್ನು ಹೋಲುವ (ಕ್ಷಣಿಕವಾದ) ಸಂತೋಷದಿಂದ ಕವಿದು, ಅದರಿಂದಲೇ ಆಯಾಸಗೊಂಡು ವಾಸ್ತವಿಕವಾಗಿ ಉದ್ಧಾರಗೊಳ್ಳುವ ಮನೋಹರವಾದ ಯುಕ್ತಾಯುಕ್ತ ಪರಿಜ್ಞಾನವನ್ನು ಪಡೆದು ನಿನ್ನ ಪಾದವನ್ನು ಸೇರುತ್ತಾರೆ. ಅಂಥವರ ಭವ (ಸಂಸಾರ ಬಾಧೆ)- ವನ್ನು ಹಿಂಗಿಸತಕ್ಕವನಾದ ನೀನು ಅಭವನೆನಿಸಿರುತ್ತೀ. ಭಕ್ತರ ಸಂಕಷ್ಟವನ್ನು ಇಲ್ಲದಂತೆ ಮಾಡುವವನಾಗಿರುತ್ತೀ.

೫೫. ಬುಸುಗುಟ್ಟುವ ವಿಷಸರ್ಪವೇ ಹೊಸತಾದ ಭೂಷಣವೆನಿಸುವಂತೆ. ನಿನ್ನ ಹೆಗಲ ಮೇಲೇರಿದಾಗಲೂ ನೀನು ಕೋಪಗೊಳ್ಳದೆ, ಹೇಸಿಕೆಗೊಳ್ಳದೆ, ಅದನ್ನು ಕಿತ್ತು ಅತ್ತ ಬಿಸಾಡದೆ, ಅದನ್ನು ಧರಿಸಿಕೊಂಡೇ ಇರುವ ಕ್ರಮವು, ನಿನಗೆ ಮಾತ್ರ ಸಾಧ್ಯ, ಇತರರಿಗೆ ಅಸಾಧ್ಯವಲ್ಲವೆ?

ಅಚ್ಚಿಯ ಕಿರ್ಚಿಂ ಚುರ್ಚಿದೆ
ಯಿಚ್ಚೆಗನಂ ಮಿಳ್ತುವಂ ಮಿಕಂಡಣುಗನನೋ
ವಿಚ್ಚೆಯಿನಟಿದೈ ನಿನ್ನಂ
ನರ್ಚಿದರ್ಗೇಂ ಬರ್ಪುದೊಂದು ಮುಚ್ಚಟಿಯುಂಟೇ ॥೫೬॥

ಶಾ.ವಿ. ಗಿರಿಯೊಳ್ ನಿಂದೊಡಮೆಲ್ಲರಂ ಸಲಹುವೈ ಚರ್ಮಾಂಬರೋಪೇತನಾ
ಗಿರೆಯುಂ ಚಾರುದುಕೂಲದಾನಗುಣನೈ ಪನ್ನಂಗದಿಂ ಭೂಷ್ಯನಾ
ಗಿರೆಯುಂ ದಿವ್ಯವಿಭೂಷಣಪ್ರದನೆಲೈ ಸಂಪತ್ತಿಯೇನಿಲ್ಲದಾ
ಗಿರೆಯುಂ ಬೇಟ್ಪುದನೀವನೈ ಮರುಳ್ಗಳಂ ಕೂಡಿರ್ದೊಡಂ ಕಾಂಕ್ಷ್ಯನೈ ॥೫೭॥

ನಿನ್ನೊಂದಕ್ಕರಮಂ ಸಮುಚ್ಚರಿಸಿದಂ ನಿಷ್ಪಾಪನೈ ಭಕ್ತಿಯಿಂ
ನಿನ್ನಾ ನಾಮವ ಪಾಡಿದಂ ಸುಕೃತವಂತಂ ಮುಕ್ತಿಯಂ ಪೊರ್ದುವಂ
ನಿನ್ನಂ ಸನ್ನುತಿಪಂ ಸುಸಾಧುಗುಣನೈ ಸತ್ಕಾರ್ಯ ಸಿದ್ಧಿಸ್ಥಿತಂ
ನಿನ್ನಿಂ ರಕ್ಷಿತನಲ್ತೆ ನಿನ್ನಯ ಮಹತ್ತ್ವಂ ದೇವಸಾಮಾನ್ಯಮೇ ॥೫೮॥

೫೬. ನಿನ್ನ ಮಹಿಮೆ ಅಸಾಧಾರಣ! ನೀನು ನಿನ್ನ ನೇತ್ರಾಗ್ನಿಯಿಂದ ಮನ್ಮಥನನ್ನು ದಹಿಸಿದೆ. ಮಾರ್ಕಂಡೇಯನನ್ನು ಕಾಪಾಡುವ ಇಚ್ಛೆಯಿಂದ ಮೃತ್ಯುವನ್ನೇ ವಧಿಸಿದೆ. ನಿನ್ನನ್ನು ಭಕ್ತಿಯಿಂದ ನಂಬಿದವರಿಗೆ ಬರತಕ್ಕ ಕೇಡು ಇದೆಯೇ? ಇಲ್ಲವೇ ಇಲ್ಲ.

೫೭. ಕೈಲಾಸಪರ್ವತದಲ್ಲಿ ನೆಲಸಿದ್ದರೂ ಲೋಕದ ಸಜ್ಜನರನ್ನೆಲ್ಲ ಕಾಪಾಡುತ್ತಿರುವೆ! ತೊಗಲಿನ ಉಡಿಗೆಯವನಾಗಿದ್ದರೂ ಒಳ್ಳೆಯ ರೇಷ್ಮೆವಸ್ತ್ರ ನೀಡಬಲ್ಲ ಗುಣವಂತನು. ಸರ್ಪಭೂಷಣನಾದರೂ ದಿವ್ಯವಾದ ತೊಡಿಗೆಗಳನ್ನು ಕೊಡಬಲ್ಲವನು. ಐಶ್ವರ್ಯವೇನೂ ಇಲ್ಲದಿದ್ದರೂ ಭಕ್ತರು ಬೇಡಿದುದನ್ನು ಕೊಡುವವನು. ಭೂತಪಿಶಾಚಿಗಳಿಂದ ಕೂಡಿದವನಾದರೂ ಭಕ್ತರಿಂದ ಕಾಂಕ್ಷಿಸಲ್ಪಡುವವನಾಗಿರುತ್ತೀ!

೫೮. ದೇವನೇ ನಿನ್ನ ನಾಮದ ಒಂದು ಅಕ್ಷರವನ್ನೂ ಭಕ್ತಿಯಿಂದ ಉಚ್ಚಾರಣೆ ಮಾಡಿದವನು ಪಾಪ ಪರಿಹಾರಗೊಳ್ಳುವನು. ನಿನ್ನ ನಾಮಕೀರ್ತನ ಮಾಡಿದವನು ಪುಣ್ಯಶಾಲಿ; ಅವನು ಮೋಕ್ಷಪಡೆಯುವನು. ನಿನ್ನನ್ನು ಸ್ತುತಿಸುವವನು ಒಳ್ಳೆಯ ಸಾಧುಗುಣವಂತನು ಮತ್ತು ತನ್ನ ಸತ್ಕಾರ್ಯ ಸಿದ್ಧಿಯಾಗತಕ್ಕವನು, ಅವನು ನಿನ್ನಿಂದ ರಕ್ಷಿತನಾಗುವನು ಅಲ್ಲವೆ? ನಿನ್ನ ಮಹತ್ವ ಸಾಮಾನ್ಯವೆ ? (ಇತರ ದೇವತೆಗಳಿಗೆ ಇರಬಲ್ಲುದೆ?)

ಮ.ವಿ. ಪೊಗಟಲ್ ಶೇಷನ ಜಿಹ್ವೆಯುಂ ಗ್ರಹಿಸೆ ವಾಣೀ ಬುದ್ಧಿಯುಂ ಲೇಖಿಸಲ್
ನೆಗಟ್ಬಾ ಬಾಣಕರಂಗಳುಂ ಮಸಿಯದೊಂದಂಭೋಧಿಯುಂ ಲೆಕ್ಕಣಿ
ಕ್ಕೆಗಳುಂ ಲೋಕದೊಳುಳ್ಳವುಂ ಬರೆಯೆಂ ಬಾನುಂ ಸಾಲದಾ ನಿನ್ನ ಕೀ
ರ್ತಿಗಳಂ ಬಣ್ಣಿಸಲಾರ್ಪೆನೇನಜಿತನೈ ನೀನೆನ್ನ ಸರ್ವಾರ್ಥಮಂ ॥೫೯॥

ಅರಲರಗಳೆ

ಜಯ ಕೇವಲಾನಂದ ವಿಮಳಹೃದಯ
ಜಯ ಶಮನಶಮನ ಸದ್ವಿಲಸಿತದಯ
ಜಯ ವರಪ್ರದ ಮುದದ ಕರುಣೆ ಶಿವನೇ
ಜಯ ಕೃತಾಖಿಳ ಪುಣ್ಯಭವನ ಭವನೇ
ಜಯ ತನುದ್ಯುತಿ ಜಿತಾಮಿತ ಶಶಿರವಿ
ಜಯ ವಿಗತ ತಾಪನೇ ಖಳನಿರಿಪದಿ
ಜಯ ದುರಿತ ತಿಮರ ರವಿಕಿರಣಚರಣ
ಜಯ ಧೃತಾಖಿಳ ಸುಗುಣ ಶರಣ ಭರಣ
ಜಯ ಸುಖವಿತತಿ ಮರುತನಿಲಯ ಮಲಯ

೫೯. ನಿನ್ನನ್ನು ಹೊಗಳಲು ಆದಿಶೇಷನ ಸಾವಿರ ನಾಲಗೆಗಳಿಗೂ ಸಾಧ್ಯವಾಗದು! ಮನಸ್ಸಿನಲ್ಲಿ ಸರಿಯಾಗಿ ಗ್ರಹಿಸಿಕೊಳ್ಳಲು ಆ ವಾಗ್ದೇವಿ ಬುದ್ಧಿಯೂ ಸಾಲದು! ನಿನ್ನ ಹಿರಿಮೆಯನ್ನು ಲೇಖನಿ ಹಿಡಿದು ಬರೆಯಲು ಆ ಲೋಕದಲ್ಲೆಲ್ಲಾ ಇರುವ ಲೇಖನಿಗಳೇ ಸಾಲವು! ಬಾಣನ ಸಾವಿರ ಕೈಗಳೂ ಸಾಲವು. ಆ ಲೇಖನಿಗಳಿಗೆ ಮಸಿ (ಶಾಯಿ) ಒಂದು ಸಮುದ್ರದಷ್ಟು ಇದ್ದರೂ ಸಾಕಾಗದು! ಬರೆವ ಕಾಗದರೂಪವಾಗಿ ಆಕಾಶವೇ ಇದ್ದರೆ ಸಾಲದು! ಅಂತಹ ನಿನ್ನ ಕೀರ್ತಿಗಳನ್ನು ನನಗೆ ವರ್ಣಿಸಲು ಸಾಧ್ಯವಾಗುವುದೇ? ನೀನು ನನ್ನ ಅಪೇಕ್ಷೆಯನ್ನು ಎಲ್ಲವನ್ನೂ ತಿಳಿದವನೇ ಸರಿ.

೬೦. ಅತಿಶ್ರೇಷ್ಠವಾದ ಕೈವಲ್ಯ(ಮೋಕ್ಷ)ದ ಆನಂದಸ್ವರೂಪವೇ ನಿರ್ಮಲ ಮನಸ್ಸಿನವನೇ ಜಯ ಜಯ! ಯಮನಿಗೆ ಯಮಸ್ವರೂಪನೇ, ಒಳ್ಳಿತಾಗಿ ಶೋಭಿಸುವ ಕರುಣೆಯುಳ್ಳವನೇ, ವರವೀಯುವವನೇ ಸಂತೋಷಪ್ರದನೆ, ಕರುಣೆಯುಳ್ಳವನೇ, ಶಿವನೇ (ಮಂಗಳಕರನೇ), ಮಾಡಿದ ಎಲ್ಲ ಪುಣ್ಯಕ್ಕೂ ಆಗರವಾದವನೇ, ಭವನೇ, ದೇಹಕಾಂತಿಯಿಂದ ಎಷ್ಟೋ ಸೂರ್ಯಚಂದ್ರರ ಕಾಂತಿಯನ್ನು ಜಯಿಸಿದವನೇ, ತಾಪವಿಲ್ಲದವನೇ, ಅಸುರರೆಂಬ ಪರ್ವತಕ್ಕೆ ವಜ್ರಾಯುಧದಂತಿರುವವನೆ, ಪಾಪವೆಂಬ ಕತ್ತಲೆಗೆ ರವಿರಶ್ಮಿಯಂತಿರುವ ಪಾದವುಳ್ಳವನೇ, ಎಲ್ಲಾ ಸದ್ಗುಣಗಳನ್ನು ತಾಳಿದ ಶರಣರಿಗೆ ಪೋಷಕನೇ, ಸುಖಸಮೂಹವೆಂಬ ಗಾಳಿಗೆ ನೆಲೆಯೆನಿಸಿದ ಮಲಯಾದ್ರಿಯಂತೆ ಇರುವವನೇ. ಮುನಿಸಮೂಹದ ಧ್ಯಾನ ಹೃದಯದಲ್ಲಿ ನೆಲೆಯಾಗಿರುವವನೇ, ತಲೆಯಲ್ಲಿ

ಜಯ ಮುನಿಗಣಧ್ಯಾನ ಹೃದಯ ನಿಲಯ
ಜಯ ಶಿರೋಧೃತ ನದಿಯೆ ಧರೆಗೆ ಹಿತನೇ
ಜಯ ಮಂಗಳಾರ್ಧಾಂಗ ಹಸಿತವದನ
ಜಯ ಸಪ್ರಸಾದ ವದನ ಗಜವದನ
ಜಯ ಯಕ್ಷ ಕಿನ್ನರ ಸ್ತುತನೆ ಹರನೆ
ಜಯ ದೇವ ಮೆಯ್ದೋರ್ವುದಭಯಕರನೆ ॥೬೦॥

ಗದ್ಯ॥ ಎಂದಚಂಚಲ ಚಿತ್ತದಿಂ ನುತಿಪ ನುತಿಯಾ ಚಿತ್ತಜಾರಾತಿಯ ದಯಾಮಯಚಿತ್ತಮಂ ಸೆಳೆವುದುಂ –

ಮ.ವಿ. ಹರಿಯೆನ್ನಂಶಕನೊಳ್ಳಿದರ್ ಮೆಱೆವಿನಂ ಕೃಷ್ಣಾಖ್ಯೆಯಿಂ ಪುಟ್ಟಿ ದು
ಷ್ಟರನುನ್ಮೂಲಿಸುತಿರ್ದು ಭಾರತಮಹಾ ಸಂಗ್ರಾಮದೊಳ್ ನೇಹಿಗಂ
ನರನಿಂದೆಯ್ದೆ ಪೋಣರ್ಚಿಸಲ್ಕವನ ಬಲ್ಪುಂ ಸಾಸಮುಂ ಶೌರ್ಯಮು
ಗ್ರರಣಾಟೋಪಮದೆಂದತುಟೆಂದಱಿಯಲೀ ಭೂಭಾಗದೊಳ್ ಕಾಂಕ್ಷಿಪಂ ॥೬೧॥

ಗದ್ಯ॥ ಅದಱಿಂದೀ ಖಚರಸಂದರ್ಭಮಾ ಬಯಕೆಗನುಕೂಲಿಸಿದುದು. ಮೇಣೆನಗೀಗಳಾ ಬಯಕೆವಳ್ಳಿಯಂ ಬೆಳೆಯಿಪ ನೀರೆರೆವೆಡೆ ಕಯ್ಗೂಡಿದುದೆಂದು ಬಗೆದಂದು –

ಗಂಗಾನದಿಯನ್ನು ಧರಿಸಿದವನೇ, ಲೋಕಕ್ಕೆ ಹಿತಕರನೇ, ಲೋಕಹಿತವೆಂಬ ಕಣ್ಗಳಿರುಳ್ಳವನೇ, ಮಂಗಳಾದೇವಿಯ ಅರ್ಧಾಂಗವುಳ್ಳವನೇ, ನಗುಮೊಗದವನೇ, ಪ್ರಸನ್ನವಾದ ಮುಖವುಳ್ಳ ಗಣೇಶನಿಂದ ಕೂಡಿದವನೇ, ಯಕ್ಷರಿಂದಲೂ ಕಿನ್ನರರಿಂದಲೂ ಸ್ತುತಿಗೊಳ್ಳುತ್ತಿರುವವನೇ, ಹರನೇ, ಅಭಯಹಸ್ತನೇ, ದೇವನೇ, ನನಗೆ ಪ್ರತ್ಯಕ್ಷನಾಗು ಜಯ ಜಯ! (ಗದ್ಯ) ಈ ರೀತಿಯಾಗಿ ಸ್ಥಿರಮನಸ್ಸಿನಿಂದ ಸ್ತುತಿಸತಕ್ಕ ಸ್ತುತಿಯು ಕಾಮವೈರಿಯಾದ ಶಿವನ ಕರುಣಾಮಯವಾದ ಮನಸ್ಸನ್ನು ಸೆಳೆಯಲು (ಶಿವನು ಮನಸ್ಸಿನಲ್ಲಿ ಹೀಗೆಂದನು) –

೬೧. ಶ್ರೀಹರಿಯು ನನ್ನ ಅಂಶದವನೇ ಆಗಿದ್ದು ಲೋಕದಲ್ಲಿ ಸತ್ಪುರುಷರು ಮೆರೆಯುವಂತೆ ಮಾಡುವುದಕ್ಕಾಗಿ ಕೃಷ್ಣನಾಗಿ ಹುಟ್ಟಿರುತ್ತಾನೆ. ಅವನು ದುರುಳರನ್ನು ಮೂಲೋತ್ಪಾಟನ ಮಾಡುತ್ತಾ ಇದ್ದು ಇದೀಗ ಭಾರತಮಹಾಯುದ್ಧದಲ್ಲಿ ತನ್ನ ಗೆಳೆಯನಾದ ಅರ್ಜುನನಿಂದ ಹೋರಾಟ ನಡೆಸಲು ಯೋಜಿಸಿರುತ್ತಾನೆ. ಅದಕ್ಕಾಗಿ ಅವನ (ಅರ್ಜುನನ) ಸಾಮರ್ಥ್ಯವೂ ಸಾಹಸವೂ ಶೌರ್ಯವೂ ಯುದ್ಧದ ಆಟೋಪವೂ ಹೇಗಿವೆಯೆಂದು ತಿಳಿಯಲು ಭೂಲೋಕದಲ್ಲಿ ಅಪೇಕ್ಷಿಸಿರುತ್ತಾನೆ. (ಗದ್ಯ) ಆದುದರಿಂದ ಈ ಖಚರನ (ಗಯನ) ಸಂದರ್ಭವು ಆ ಅಪೇಕ್ಷೆಗೆ ಅನುಕೂಲಕರವಾಗಿದೆ. ಆ ಅದಲ್ಲದೆ ಅಪೇಕ್ಷೆಯೆಂಬ ಬಳ್ಳಿಯನ್ನು ಬೆಳೆಯಿಸುವುದಕ್ಕಾಗಿ ನೀರನ್ನೆರೆವ ಸಂದರ್ಭವೂ ಕೈಗೂಡಿದೆ – ಹೀಗೆ ಶಿವನು ಭಾವಿಸಿಕೊಂಡನು.

ಕಂದ॥ ತಲೆಯ ಪೊಟಿೞಯ ನೀರ್ ಸೀರ್ದಂ
ದಲೆ ಸಸಿಗದಿರಿಂದೆ ತಪಹರ ಸುಧೆಯೆನಿಸಲ್
ಬಲದೊಳ್ ಸತಿ ರಂಜಿಸೆ ಮಗ
ನಿಲಿದೇರಂಬೆರಸು ಭವಹರಂ ಕಣ್ಗೆಸೆದಂ ॥೬೨॥

ಅತ್ತಲ್ ಮುನಿಸಂಸ್ತುತಿ ಮ
ತ್ತಿತ್ತಲ್ ಗಾಂಧರ್ವಗಾನ ನಿಸ್ವನ ತತಿಯ
ಲ್ಲೆತ್ತಲ್ ಜಯತೂರ್‍ಯರವಂ
ಮುತ್ತಿದುವೊತ್ತಿದುವು ಕುತ್ತಿದುವು ಕಿವಿಯೆಡೆಯಂ ॥೬೩॥

ಉ.ಮಾ. ಕಾಮಿತಮಂ ನತರ್ಗ್ಗೆ ಕುಡೆ ನೀಳ್ದುದು ಕೈ ನಿಜಭಕ್ತಸನ್ನುತಿ
ಸ್ತೋಮವನಾಲಿಸಲ್ಕಗಲಿತಾ ಕಿವಿ ವಿಘ್ನತಮೋವಿತಾನ ನಿ
ರ್ನಾಮವ ಮಾಡಲಾದುದತಿತೇಜಮಿವಂಗೆನೆ ದಂತಿವಕ್ತ್ರನಾ
ದಾ ಮಹಿಮಂ ಗಣೇಶನೊಡನೊಪ್ಪಿದನುನ್ನ ಸಿದ್ಧಿದಾಯಕಂ ॥ ೬೪॥

೬೨. ತಲೆಯಲ್ಲಿರುವ ಚಂದ್ರನ ಕಿರಣದಿಂದ, ತಲೆಯ ಗಂಗಾಜಲದ ತುಂತುರು-ಹನಿಗಳು ಗಯನ ಶಾಪನಿವಾರಕವಾದ ಅಮೃತದ ಹನಿಗಳಂತಿದ್ದವು. ಬಲಗಡೆಯಲ್ಲಿ (ಶಿವನ ಎಡಗಡೆ) ಪಾರ್ವತಿಯಿದ್ದಳು. ಮಗನಾದ ಮೂಷಿಕವಾಹನ ಗಣೇಶನು ಸಹಿತವಾಗಿ ಶಿವನು ಪ್ರತ್ಯಕ್ಷನಾದನು.

೬೩. ಆ ಕಡೆಯಲ್ಲಿ ಮುನಿಗಳ ಸ್ತುತಿಯ ಸ್ವರಗಳು ಮುತ್ತಿದವು. ಈ ಕಡೆಯಲ್ಲಿ ಗಾಂಧರ್ವಗಾನದ ಸ್ವರಸಮೂಹ ಒತ್ತಿ ಬಂದವು. ಉಳಿದ ಎಲ್ಲಾ ಕಡೆಯೂ ಜೈಕಾರದ ತುತ್ತೂರಿ ಸ್ವರಗಳು ಕಿವಿಯೊಳಗೆ ನುಗ್ಗಿದವು.

೬೪. ಶಿವನೊಂದಿಗೆ ಸಿದ್ಧಿಪ್ರದನಾದ ಗಣೇಶನೂ ಇದ್ದನು. ಅವನು ಹೇಗಿದ್ದನೆಂದರೆ – ತನ್ನನ್ನು ವಂದಿಸುವವರಿಗೆ ಇಷ್ಟಾರ್ಥ ನೀಡುವುದಕ್ಕಾಗಿಯೇ ಅವನ ಕೈ (ಸೊಂಡಿಲು) ನೀಡಿದ್ದಿತು. ತನ್ನ ಭಕ್ತರ ಸ್ತುತಿಗಳ ಸಮೂಹವನ್ನು ಕೇಳುವುದಕ್ಕಾಗಿ ಕಿವಿಗಳು ಮೊರದಂತೆ ಅಗಲವಾಗಿದ್ದವು. ಭಕ್ತರಿಗೆ ಬರತಕ್ಕ ವಿಘ್ನವೆಂಬ ಕತ್ತಲೆಯ ಸಮೂಹವನ್ನು ಇಲ್ಲದಂತೆ ಮಾಡುವುದಕ್ಕಾಗಿ ಅತಿಶಯ ತೇಜಸ್ಸು ಇವೆಲ್ಲ ಈಶನಿಗೆ ಆಗಿವೆ ಎಂಬ ಹಾಗೆ, ಆನೆಯ ಮುಖದವನಾಗಿ ಆ ಗಣೇಶನಿದ್ದನು.

ಗದ್ಯ॥ ಆಗಳ್ ನಿರ್ಭರ ಭಯಭರಿತ ಭಕ್ತಿಯಿಂ ಮೊಟ್ಗಿದ ರಾಜರಾಜಾತ್ಮಜನಂ ರಾಜೋತ್ತಮಾಂಗಂ ಪಿಡಿದೆಟ್ಟಿಸಿಯಭಯಪ್ರದನಾಗಿಂತೆಂದಂ –

ಸ್ರಗ್ಧರಾ

ಏವಂ ಮಾಣ್ ದ್ವೈತಮೆಂಬಾಟವಿಯೊಳೆಸೆದಪಂ ಸೋದರೋಪೇತ ಪಾರ್ಥಂ
ಕಾವಂ ಮದ್ಭಕ್ತನುಂ ಶಾಪಿತಸುಜನಶರಣ್ಯಂ ಮಹಾಸತ್ವಯುಕ್ತಂ
ಭೂವಿಸ್ತಾರಪ್ರಕೀರ್ತ್ಯನ್ವಿತನಭಯತೆಯಿನ್ನಾತನಿಂದಕ್ಕೆ ಗರ್ವೋ
ದ್ಭಾವಂ ತ್ವತ್ಪಾಪಮಿಂದೆನ್ನಯೆ ಬಕುತಿಯೊಳೇ ಪೋ ಪಡಲ್ವಟ್ಟುದೀಗಳ್ ॥೬೫॥

ಗದ್ಯ॥ ಎಂಬುದುಂ ಯುಯುತ್ಸುವಾದ ತನ್ನೋಪನೊಳಾ ಪರಾಕ್ರಮಿಯಪ್ಪ ಕಿರೀಟಿ ಪಿಂದೆಗೆಯದೆ ಕಾದಿದುದಂ ರುದ್ರಾಣಿಯುಂ ನೆನಪಿಂಗೆ ತಂದು ನಿನಗದಜೆ ನೊಳ್ಳಿತಪ್ಪುದೆಂದು ತಾನುಮನುಮೋದಿಸುವುದುಂ –

(ಗದ್ಯ) ಆಗ ಅತಿಶಯ ಭಯಭರಿತ ಭಕ್ತಿಯಿಂದ ನಮಸ್ಕರಿಸಿದ ಕುಬೇರಪುತ್ರನನ್ನು ಚಂದ್ರಧರನು ಹಿಡಿದೆಬ್ಬಿಸಿ, ಅಭಯವನ್ನು ನೀಡುವವನಾಗಿ ಹೀಗೆಂದನು –

೬೫. ನಿನ್ನ ದುಃಖವನ್ನು ಬಿಡು. ದ್ವೈತಾರಣ್ಯದಲ್ಲಿ ತನ್ನ ಸೋದರರೊಂದಿಗೆ ಅರ್ಜುನನಿದ್ದಾನೆ. ಅವನು ನಿನ್ನನ್ನು ಕಾಪಾಡುವವನು. ಅವನು ನನ್ನ ಭಕ್ತನು. ಶಾಪಕ್ಕೆ ಒಳಗಾದ ಒಳ್ಳೆಯ ಜನರಿಗೆ ಆಶ್ರಯನು. ಮಹಾಸತ್ತ್ವಶಾಲಿ ಭೂಮಿಯಲ್ಲಿ ವಿಸ್ತಾರಗೊಂಡ ಕೀರ್ತಿಯುಳ್ಳವನು. ನಿನಗೆ ಅವನಿಂದ ಅಭಯವುಂಟಾಗಲಿ. ಗರ್ವದಿಂದಾಗಿ ಉಂಟಾದ ನಿನ್ನ ಪಾಪವು ಈ ದಿನ ನನ್ನ ಮೇಲಣ ಭಕ್ತಿಯಿಂದಾಗಿ ಚೆದರಿಹೋಯಿತು. (ಗದ್ಯ) ಹೀಗೆನ್ನಲು, ರುದ್ರಾಣಿಯು (ಪಾರ್ವತಿಯು) ಯುದ್ಧದಲ್ಲಿ ಉತ್ಸುಕನಾಗಿದ್ದ ತನ್ನ ಪ್ರಿಯನೊಡನೆ ಆ ಪರಾಕ್ರಮಿಯಾದ ಅರ್ಜುನನು ಹಿಂಜರಿಯದೆ ಹೋರಾಡಿದುದನ್ನು ಜ್ಞಾಪಿಸಿಕೊಂಡು –" ನಿನಗೆ ಇದರಿಂದ ಒಳಿತಾಗುವುದು" ಎಂದು ತಾನೂ ಅನುಮೋದಿಸಿ ನುಡಿದಳು.

ಕಂದ॥ ಎಡರೆಡೆಯೊಳಡಸದಿರ್ಕೆಮ
ನಡೆ ನೀನಾ ಪಾರ್ಥನೆಡೆಗೆ ತಡೆಯೇಕೆಂದಂ
ಎಡಗೇಡಿ ತಂದೆ ಶಿವನೋ
ಲ್ವೆಡೆಯೊಳ್ ಮಗನಪ್ಪ ಬೆನಕನೊಲವೇನಿಥದೇ? ॥೬೬॥

ಗದ್ಯ॥ ಮತ್ತಂ ವಿಶೇಷ ಪುರುಷಕಾರ್ಯ ತತ್ಪರನಪ್ಪಾ ಅಂಬರಚರನುಪಪಾದಿತ ದೈವಪ್ರಸಾದನುಂ ಧ್ವಸ್ತಪಾಪನುಮಾಗಿ –

ಶಾ.ವಿ. ದೇವಾವಾಸಗಿರೀಂದ್ರದಿಂದಿಳಿದು ಕಂದರ್ಪಾರಿಯೊಳ್ ತನ್ಮನೋ
ಭಾವಂ ಬೂದಿವೊಲಿರ್ಪಿನಂ ಸುಮತಿ ತತ್ಸಾನ್ನಿಧ್ಯದೊಳ್ ಬೆಳ್ಳಿಯಂ
ತಾವಾಸಂ ನೆಗಟ್ದಿರ್ಪಿನಂ ನಿಜಶರೀರ ತ್ರಾಣ ಚಿತ್ತಾನ್ವಿತಂ
ಶೈವಾನುಗ್ರಹ ಪುಣ್ಯಯುಕ್ತಕರಣಂ ಬಂದಂ ಮಹೋತ್ಸಾಹದಿಂ ॥೬೭॥

ಎಂಬಲ್ಲಿಗೆ ಸತ್ತ್ವಾಲೋಕನ ಕಾವ್ಯದೊಳ್
ಗಯಪರಿಭ್ರಮಣಂ ಶೈವಾನುಗ್ರಹಂ

ತೃತೀಯಾಶ್ವಾಸಂ

೬೬. ಆಗ ವಿಘ್ನನಾಶಕನಾದ ಗಣೇಶನು. "ನಿನಗೆ ನಿನ್ನ ಪ್ರಯತ್ನಗಳ ನಡುವೆ ಏನೊಂದು ವಿಘ್ನವುಂಟಾಗದಿರಲಿ! ನೀನು ಆ ಅರ್ಜುನನ ಬಳಿಗೆ ತೆರಳು, ತಡಮಾಡದಿರು" – ಎಂದನು. ತಂದೆಯಾದ ಶಿವನು ಒಲಿಯುವ ಸಂದರ್ಭದಲ್ಲಿ ಅವನ ಮಗನಾದ ವಿನಾಯಕನು ಒಲಿಯದಿರುವನೇ? (ಗದ್ಯ) ಆಮೇಲೆ ವಿಶೇಷವಾದ ಪುರುಷಪ್ರಯತ್ನದಲ್ಲಿ ತತ್ಪರನಾದ ಗಯನು ದೈವಾನುಗ್ರಹವನ್ನು ಸಂಪಾದಿಸಿದವನೂ ಪಾಪವನ್ನು ಧ್ವಂಸಮಾಡಿದವನೂ ಆಗಿ (ತೆರಳಿದನು).

೬೭. ಶಿವನ ಆ ವಾಸಸ್ಥಾನವಾದ ಕೈಲಾಸಪರ್ವತದಿಂದ ಕೆಳಗಿಳಿದನು. ತನ್ನ ಮನೋಭಾವವು ಶಿವನಲ್ಲಿ ವಿಭೂತಿಯಂತೆ ಇರುತ್ತಿರಲು, ಅವನ ಸನ್ನಿಧಿಯಲ್ಲಿಯೇ ತನ್ನ ಸದ್ಬುದ್ಧಿಯು ಬೆಳ್ಳಿಯಂತೆ ನೆಲೆಗೊಂಡಿರಲು, ತನ್ನ ದೇಹರಕ್ಷಣೆಯಲ್ಲಿ ಮನಸ್ಸುಳ್ಳವನಾಗಿ ಶಿವನ ಅನುಗ್ರಹದ ಪುಣ್ಯದಿಂದ ಕೂಡಿದ ಅಂತಃಕರಣನಾಗಿ ಮಹಾ ಉತ್ಸಾಹದಿಂದ ಬಂದನು.

ಇಲ್ಲಿಗೆ ತೃತೀಯಾಶ್ವಾಸ ಮುಗಿಯಿತು.

*****

# ಚತುರ್ಥಾಶ್ವಾಸಂ

(ಅಭಯ ಪ್ರದಾನಂ – ನಾರದಾಗಮನಂ)

ಕಂದ॥ ಶ್ರೀ ಪರಮೇಶಸ್ತೋತ್ರಾ
ಳಾಪಂ ನಿರ್ದುಷ್ಟನ ಬಳ ಸೌಜನ್ಯ ಗುಣಂ
ಗಾಪತ್ತತಿಯಾಮೋದಿತ
ಧೂಪದೆ ದುರ್ಗಂಧದಂತೆ ಕಿಡಿಸಲ್ ಪಡೆಗುಂ ॥೧॥

ಗದ್ಯ ॥ ಎಂದು ಪ್ರತ್ಯಯಂಬಡೆದು ತದ್‌ದ್ವೈತಾರಣ್ಯಮಂ ಗಯಂ ಪುಗುವುದುಂ –

ಪಿರಿಯಕ್ಕರ. ದೆಸೆವೆಣ್ಗಳ ಮೊಗಮಂ ಬಾಸಣಿಸಿ ಕಾರಿರುಳ್ಗೈವ ಭೂಮಿರುಹಂಗಳಿಂದಂ
ಪೊಸ ಮಿಂಚೆಂಬಂತೆ ಬೆಳಗುವ ದಿವ್ಯೌಷಧಿವ್ರಾತದೆ ಭಯಂಕರ ಶಬ್ದದಾ
ವಿಸರಂ ಪುಟ್ಟೆ ಗರ್ಜಿಸುವ ಭೀಕರ ಜಂತು ವಿತತಿಯಿಂದಮಿತಭೂರುಹವಲ್ಲಿಯಾ
ಕುಸುಮವ್ರಾತಗಳನ್ಮಧುವಾರಿವರ್ಷಗಳಿಂ ವಿಪಿನಂ ರಾಜಿಕುಮೇಗಳುಂ ॥೨॥

೧. ಶ್ರೀ ಪರಮೇಶ್ವರನ ಸ್ತೋತ್ರಸಮೂಹವುಳ್ಳವನೂ ದುರುಳನಲ್ಲದವನೂ ಎಲ್ಲಾ ಬಗೆಯ ಸೌಜನ್ಯಗುಣಯುಕ್ತನೂ ಆದವನಿಗೆ ಬಂದ ಆಪತ್ತುಗಳು ಸುವಾಸನೆಯ ಧೂಪದಲ್ಲಿ ದುರ್ವಾಸನೆಯಂತೆ ನಾಶವಾಗುವವು. (ಗದ್ಯ) ಹೀಗೆ ಮನಸ್ಸಿನಲ್ಲಿ ವಿಶ್ವಾಸ ಪಟ್ಟು ಗಯನು ಪಾಂಡವರಿರತಕ್ಕ ಆ ದ್ವೈತಾರಣ್ಯವನ್ನು ಹೊಕ್ಕನು.

೨. ದಿಕ್ಕುಗಳೆಂಬ ಹೆಂಗುಸರ ಮುಖವನ್ನು ಕವಿದು ಕಗ್ಗತ್ತಲೆಯನ್ನುಂಟು ಮಾಡತಕ್ಕ ಮರಗಳಿಂದಲೂ ಹೊಸ ಮಿಂಚೋ ಎಂಬಂತೆ ಪ್ರಕಾಶ ಬೀರುವ ದಿವ್ಯ ಔಷಧ ಸಸ್ಯಗಳಿಂದಲೂ ಭಯಂಕರ ಶಬ್ದಗಳನ್ನು ಉತ್ಪಾದಿಸುವಂತೆ ಗರ್ಜಿಸುವ ಭೀಕರ ಮೃಗಗಳ ಸಮೂಹದಿಂದಲೂ ಅತಿಶಯವಾದ ಮರಬಳ್ಳಿಗಳ ಹೂವುಗಳಿಂದ ಕೆಳಗೆ ಬೀಳುವ ಪುಷ್ಪರಸದ ಮಳೆಗಳಿಂದಲೂ ಆ ಕಾಡು ಯಾವಾಗಲೂ ಶೋಭಿಸುತ್ತಿರುವುದು. (ಗದ್ಯ) ಅದಲ್ಲದೆ, ಆ ಕಾಡಿನ ಕತ್ತಲೆ ಹೀಗಿದ್ದಿತು – ಅಡವೀರಾಯನು ತುಂಬಿಗಳ ಕಪ್ಪಿನ ಕರಿಮಣ್ಣಿನಿಂದ ಮಾಡಿ ಬೆಂಕಿಯಲ್ಲಿ ಬೆಂದು ಆರಿದ ಓಡನ್ನು (ಕರಿಹೆಂಚನ್ನೂ) ಮನೆಯ ಮಾಡಿಗೆ ಹಾಕಿಸಿದಂತೆಯೂ ಅಡವಿಯೆಂಬ ವಿದ್ಯಾರ್ಥಿಯು ಒಳಿತಾಗಿ ಬರೆಯಲೆಂದು ಶಾಯಿಗಾಗಿ ಅಣಿಲೆಕಾಯನ್ನು ಕಬ್ಬಿಣದ ತಗಡಿನಲ್ಲಿ ತೇದಿದಾಗ ಚೆಲ್ಲಿ ಹೋದಂತೆಯೂ ಕಾಡಿನಲ್ಲಿ ವಾಸಿಸುವ ಮುನಿಪತ್ನಿಯರು

ಗದ್ಯ॥ ಮತ್ತಂ ಬನರಾಯಂ ಮೇಳಂಬಂಗಳ ಕರ್ಪಿನ ಕಮ್ಮಣ್ಣಿಂ ಮಾಡಿ ಸೂಡೊಳ್ ಬೆಂದಾರಿದೋಡಂ ಮಾಡಿಂಗಿಕ್ಕಿಸಿದಂತೆಯುಂ – ವನವಿದ್ಯಾರ್ಥಿ ನಲ್ಪರೆ ಪಕ್ಕಳಲೆಗಾಯನಯಃ ಫಳಕದೊಳ್ ತೀಡಿದೊಡೆ ಚೆಲ್ಲಿವೋದಂತೆಯುಂ – ವನವಾಸಿಗಳಪ್ಪ ಮುನಿವನಿತೆಯರೆತ್ತಲುಂ ಕರ್ಪುಸಾರಣೆಗೆಯ್ದಂತೆಯುಂ – ಬನವೆಜಂ ಬೇಸಗೆಯ ಮರಂಗಳ್ಗೆ ಬಾಡುಂಗುತ್ತಂ ಬಾರದಂತಿರುಳ ತಿರುಳ ಕಸಾಯದಿಂ ಮಿಸಿಸಿದಂತೆಯುಂ – ಬನಮಡಿವಳಂ ಬನರಾಯನ ತಮೂಲನೀಲ ದುಕೂಲಮಂ ಕರ್ಚಿ ಕರ್ವಗ್ರದೊಳಾರಿಸುವಂತೆಯುಂ ಬನದೇವಿ ಬಿಸುಮೆಯ್ಯುತ್ತದಿಂ ಕಾರ್ಗಂಬಳಿಯಂ ಮುಸುಂಕಿಟ್ಟಂತೆಯುಂ – ಕರಂಗಿ ಕಟ್ತಲಿಸಿ ತೋರ್ದುದಲ್ಲದೆಯುಂ –

ಕಂದ॥ ಪೂಗೊಳನಂ ಕಂಗದಿರ್ಗಳ್<br>
ತಾಗದೊಡಂ ದಡದೆ ಬೆಳೆದ ಚಂಪಕಕುಜದಾ<br>
ಪೊಗೊಂಚಲ್ಗಳ್ ಬಿರಿಯಿಪು<br>
ವೇಗಳ್ ಬೆಳ್ಪಿಂದಮಾ ವಲಂ ತದ್ವನದೊಳ್ ॥೩॥

ಇರುಳಿನ ಪನಿಯುರುಳ್ದುರುಳ್ದಾ<br>
ಮರದೆಲೆಯಿಂ ಪಗಲೊಳಲ್ಲಿ ಬೀೞ್ದುದರಿಂದಂ<br>
ಸರಸೀರುಹಮುಕುಳಂಗಳ್<br>
ಬಿರಿವುದಕರಿದಾದುದಲ್ಲಿ ಶರಜಾಕರದೊಳ್ . ॥೪॥

ಎಲ್ಲೆಡೆಯೂ ನೆಲಕ್ಕೆ ಕಪ್ಪುಸಾರಣೆ ಮಾಡಿದಂತೆಯೂ ಕಾಡುವೈದ್ಯನು ಬೇಸಗೆಯಲ್ಲಿ ಮರಗಳಿಗೆಲ್ಲ ಬಾಡುವ ರೋಗ ಬಾರದಂತೆ, ಅದಕ್ಕಾಗಿ ಕತ್ತಲೆಯ ತಿರುಳಿನ ಕಷಾಯವನ್ನು ಮಾಡಿ ಅವನ್ನು ಮೀಯಿಸಿದಂತೆಯೂ ಕಾಡೆಂಬ ಮಡಿವಾಳನು ಅಡವಿರಾಯನ ತಮಾಲದಂತೆ ಕಪ್ಪಾದ ವಸ್ತ್ರವನ್ನು ತೊಳೆದು ಮರಗಳ ತುದಿಯಲ್ಲಿ ಅವನ್ನು ಒಣಗಿಸಲು ಹಾಕಿದಂತೆಯೂ ವನದೇವಿಯು ಜ್ವರದಿಂದ ಕೂಡಿದವಳಾಗಿ ಕರಿಗಂಬಳಿಯನ್ನು ಮುಸುಕು ಹಾಕಿಕೊಂಡಂತೆಯೂ ಆ ಕಾಡು ಕರಿದಾಗಿ ಕತ್ತಲಿಸಿ ತೋರುತ್ತಿದ್ದಿತು. ಅದಲ್ಲದೆ –

೩. ಆ ಕಾಡಿನಲ್ಲಿರುವ ಸರೋವರಕ್ಕೆ ಚಂದ್ರನ ಕಿರಣಗಳು ತಗಲುವುದಿಲ್ಲ. ಆದರೆ ದಡದಲ್ಲಿ ಬೆಳೆದಿರುವ ಸಂಪಗೆ ಮರದ ಹೊಗೊಂಚಲುಗಳು ಬೆಳ್ದಿಂಗಳಂತೆ ಕಾಣಿಸುವುದರಿಂದ ಅವು ಆ ಸರೋವರದ ನೈದಿಲೆಯ ಹೂಗಳನ್ನು ಬಿಳಿಪಿನಿಂದ ಯಾವಾಗಲೂ ಅರಳಿಸುತ್ತಿದ್ದವು.

೪. ರಾತ್ರಿಕಾಲದ ನೀರ ಹನಿಗಳು ಮರದ ಎಲೆಗಳಿಂದ ಕೆಳ ಕೆಳಗಾಗಿ ಉರುಳುತ್ತಾ ಬೆಳಗಾಗುವಾಗ ನೆಲಕ್ಕೆ ಬೀಳುತ್ತಿದ್ದುದರಿಂದ ಅಲ್ಲಿದ್ದ ತಾವರೆ ಮುಗುಳುಗಳು ಅರಳಲಾರದಂತಿದ್ದುವು, ಅವುಗಳಿಗೆ ಹಗಲಾದುದು ಗೊತ್ತಾಗದಂತೆ ಇರುತ್ತಿತ್ತು.

ಉರಿಯುತ್ತಿರೆ ಕಾಡುರಿ ವನ
ತರುವಂ ನಿರ್ಯಾಸಧೂಮಗಂಧವ್ಯಾಪ್ತಾಂ
ತರದೊಳ್ ವನದೊಳ್ ನೊಳ ನುಸಿ
ಯಿರದಾಯ್ತಾರೋಗ್ಯಕರಮರಣ್ಯಮಗಣ್ಯಂ ॥೫॥

ಗಜತತಿಯ ಮೆಯ್ಗೆ ತದ್ಭೂ
ಮಿಜದ್ರವಂ ಸುರಿಯೆ ತನ್ನ ಕಂಡೂಯನದಿಂ
ಕುಜಮಂ ಘರ್ಷಿಸುತಿರ್ಕುಂ
ನಿಜಮದಮಂ ಮೆಱೆಯಿಪಂತೆ ತದ್ವನದೆಡೆಯೊಳ್ ॥೬॥

ತಲೆ ಮುತ್ತು ಪವಳಮುದಿರ್ದೊಣ
ಎಲೆದಳಿರ್ಗಳ್ ಕೇಸರಂಗಳುಂ ಕಡು ಕೆಂಕಂ
ನಿಲಲಾನೆಗಳಂ ಬನದೊಳ್
ಕೊಲೆಗೆಯ್ಗುಂ ಪೊಡೆದು ರೌದ್ರರಂಹಂ ಸಿಂಹಂ ॥೭॥

ನಡೆವಾವೆಯಾದೊಡಂ ಕೊಂ
ಡೊಡಲಂ ತಣಿಪುಗ್ರ ಪನ್ನಗಂ ತದ್ವನದೊಳ್
ಜಡಜಜನಱಿತಾ ಪಕ್ಕಿಯ
ಗಡಣಕ್ಕಾಗಸದೊಳಾಡ ಮಾಡಿದನಜಡಂ ॥೮॥

೫. ಒಮ್ಮೊಮ್ಮೆ ಕಾಡುಗಿಚ್ಚುತ ಉಂಟಾಗಿ ಕಾಡಿನ ಮರವನ್ನು ಸುಡುತ್ತಿದ್ದಾಗ ಆ ಮರಗಳ ಮಯಣದ ವಾಸನೆ ಹರಡಿದ ವನಾಂತರದಲ್ಲೆಲ್ಲಾ ನೊಣಗಳಾಗಲೀ ಸೊಳ್ಳೆಯಾಗಲೀ ಇರದಂತೆ ಆಗುತ್ತಿತ್ತು. ಇದರಿಂದ ಕಾಡು ಅತ್ಯಂತ ಆರೋಗ್ಯಕರ ಪ್ರದೇಶವೆನಿಸುತ್ತಿದ್ದಿತು.

೬. ಆ ಕಾಡಿನ ಮರಗಳ ಮಯಣವು ಹಿಂಡಿನ ದೇಹಕ್ಕೆ ಸುರಿದಾಗ ಉಂಟಾದ ತುರಿಕೆಯಿಂದ ಆನೆಗಳು ಮರಕ್ಕೆ ಮೈಯುಜ್ಜುತ್ತಿರುವುದು ತಮ್ಮ ಮದವನ್ನು ಮೆರೆಯಿಸುವಂತೆ ತೋರುತ್ತಿದ್ದಿತು.

೭. ಆ ಕಾಡಾನೆಗಳನ್ನು ರೌದ್ರತೆಯ ಆವೇಗದಿಂದ ಸಿಂಹವು ಹೊಡೆದು ಕೊಲ್ಲುವಾಗ ಆನೆಗಳ ತಲೆಯೊಳಗಣ ಮುತ್ತು ಹವಳಗಳು ಉದುರಿ ಕೆಳಗಿರುವ ಒಣಎಲೆಗಳು ಚಿಗುರುಗಳು ಮತ್ತು ಸಿಂಹದ ಕೇಸರಗಳು ರಕ್ತದಿಂದ ಕೆಂಪಾಗುತ್ತಿದ್ದವು.

೮. ಆ ಕಾಡಿನಲ್ಲಿ ನಡೆದುಕೊಂಡು ಹೋಗತಕ್ಕ ಯಾರನ್ನೇ ಅಥವಾ ಯಾವುದನ್ನೇ ಆದರೂ ಕೊಂದು ಹೊಟ್ಟೆಯನ್ನು ತಣಿಸುವ ಭಯಂಕರವಾದ ಹಾವುಗಳಿದ್ದುವು. ಬ್ರಹ್ಮನು ಇದನ್ನು ಮೊದಲೇ ತಿಳಿದಿದ್ದುದರಿಂದ ಪಕ್ಷಿಗಳಿಗೆ ಆಕಾಶದಲ್ಲಿ ಸಂಚಾರಮಾಡುವಂತೆ ಮಾಡಿರುತ್ತಾನೆ. ಅವನು 'ಜಡಜಜ'ನಾಗಿದ್ದರೂ ಅಜಡ (ಜಡತೆಯಿಲ್ಲದವ, ಬುದ್ಧಿವಂತ) ಎಂಬುದು ನಿಜ. (ಗದ್ಯ) ಅಂತು ಯಾರ ಕಣ್ಣಿಗೂ ಮನಸ್ಸಿಗೂ ಭಯವನ್ನುಂಟು ಮಾಡತಕ್ಕ ಆ ದ್ವೈತಾರಣ್ಯದಲ್ಲಿ ನೆಲವನ್ನು ಮುಟ್ಟದೆ ಸಂಚಾರ ಮಾಡಲು ಸಮರ್ಥನಾದ ಗಯನು ಬಂದು ಪಾಂಡವರು ವಾಸ ಮಾಡತಕ್ಕ ಸ್ಥಳವನ್ನು ಕಂಡು ಆಶ್ಚರ್ಯಪಟ್ಟನು. ಅವನು ಹೀಗೆಂದು ಕೊಂಡನು –

ಗದ್ಯ॥ ಅಂತಾರ ಕಣ್ಣಿಂ ಮನಕಂ ಭಯಾಜನಕಮಪ್ಪಾ ವನದೊಳ್ ಭೂಮಿ ಗಮನ ಸಮರ್ಥನಪ್ಪ ಗಯಂ ಬಂದು ಪಾಂಡವನಿವಾಸಸ್ಥಾನಮಮಂ ಕಂಡಚ್ಚರಿವಟ್ಟೆಂದಂ –

ಚಂ.ಮಾ ಸನಿಯದೊಳಿರ್ದೊಡಂ ಕುದುರೆಗಳ್ ಗರುಡಾಗ್ರಜನುಂ ಪ್ರಚಂಡತೇ
ಜನ ಬಿಸುಪಿಂಗೆ ಬಾಡದವೊಲೀ ವನದಾರುಣ ಭೀತಿಸಂಕಟಂ
ತನುಮನದತ್ತ ಪಾಂಡವರ ಪೊರ್ದದೆ ನಿಂದುದೆನಲ್ಕೆ ನಾಡೆ ಸ
ಜ್ಜನ ಸಮುದಾಯಕೇಂ ಪ್ರಕೃತಿಮಾತೆಯ ಸೌಖ್ಯಮನೀವಳಲ್ಲಮೇ ॥೯॥

ಮ.ವಿ. ಗಿರಿಶೋದ್ಭೂಷಿತ ಪೂತ ಶೀತಕರವಂಶೋದ್ಭೂತರಾಕ್ರಾಂತ ಭೂ
ವರ ನಾಗೇಂದ್ರ ಪುರೇಶ ಜಾತರಖಿಳೋರ್ವೀ ವ್ಯಾಪ್ತ ಕೀರ್ತಿಸ್ತವಾ
ಕರರೆಂದುಂ ಹರಭಕ್ತರುತ್ತಮ ಗುಣರ್ ಶ್ರೀ ಕೃಷ್ಣ ಚಿತ್ತಪ್ರಿಯರ್
ಬೆರತಿರ್ದೆಲ್ಲರರಣ್ಯದೊಳ್ ನೆಲಸುವರ್ ದೈವಾಗ್ರಹಂ ಲಂಘ್ಯಮೇ? ॥೧೦॥

ಫಲಮೂಲಾಭ್ಯವಹಾರಿಗಳ್ ನೃಪಸುತಾಲಂಕಾರಬಾಹ್ಯರ್ ಮಹೀ
ತಲಶಯ್ಯಾಸಹಿತರ್ ಮೃಗಪ್ರತತಿಸಖ್ಯರ್ ವನ್ಯವಾಸರ್ ಮಹಾ
ಬಲಿಗಳ್ ಶೂರರವಾರ್ಯವೀರ್ಯರಿವರೂರ್ಧ್ವಜ್ವಾಲ್ಯಮಂ ನೀಗದಾ
ಜ್ವಲನಂಬೋಲಿವರಲ್ಲಿ ತಾಳ್ದು ಕೆಡುಕಾಂಪಂ ಕೌರವಂ ವೈರವಂ ॥೧೧॥

೯. ರಥದ ಕುದುರೆಗಳು ಮತ್ತು ಸಾರಥಿಯಾದ ಅರುಣನು ಸಮೀಪದಲ್ಲೇ ಇದ್ದರೂ ಸೂರ್ಯನ ಜಳಕ್ಕೆ ಬಾಡದೆ ಇರುವಂತೆ, ಈ ಕಾಡಿನ ಕಠಿನವಾದ ಭಯ ಸಂಕಷ್ಟಗಳು ಪಾಂಡವರ ತನುಮನಗಳಿಗೆ ಬಾಧಿಸದೆ ನಿಂದಿರುತ್ತವೆ. ಅದೇಕೆಂದರೆ ಸಜ್ಜನರ ಸಮೂಹಕ್ಕೆ ವಿಶೇಷವಾಗಿ ಪ್ರಕೃತಿಮಾತೆ ಬಾಧಕಳಾಗಿರದೆ ಸೌಖ್ಯವನ್ನೇ ನೀಡುವವಳಾಗಿ ಇರುತ್ತಾಳೆ, ಅಲ್ಲವೇ?

೧೦. ಶಿವನಿಂದ ಶಿರೋಭೂಷಿತನಾದ ಪವಿತ್ರನಾದ ಚಂದ್ರನ ವಂಶದಲ್ಲಿ ಹುಟ್ಟಿದವರು, ಇಡೀ ಭೂಮಂಡಲವನ್ನೇ ವಶಮಾಡಿ ಆಳತಕ್ಕ ಹಸ್ತಿನಾಪುರದರಸನ ಸಂತತಿಯವರು, ಸಮಸ್ತ ಭೂತಳದಲ್ಲಿ ವ್ಯಾಪಿಸಿದ ಕೀರ್ತಿ ಸ್ತುತಿಗಳುಳ್ಳವರು. ಯಾವಾಗಲೂ ಶಿವಭಕ್ತರು, ಉತ್ತಮವಾದ ಗುಣವುಳ್ಳವರು, ಶ್ರೀಕೃಷ್ಣನ ಮನಸ್ಸಿಗೆ ಮೆಚ್ಚಿನವರು, ಅಂತಹ ಪಾಂಡವರು ಎಲ್ಲರೂ ಒಟ್ಟಾಗಿ ಈ ಕಾಡಿನಲ್ಲಿ ವಾಸಿಸುತ್ತಿದ್ದಾರೆ. ದೈವಾಗ್ರಹವನ್ನು ಮೀರಲು ಸಾಧ್ಯವೇ!

೧೧. ಈ ಪಾಂಡವರು ಹಣ್ಣು ಬೇರುಗಳ ಆಹಾರವುಳ್ಳವರು, ರಾಜಕುಮಾರರಿಗೆ ತಕ್ಕುದಾದ ಅಲಂಕಾರಕ್ಕೆ ಹೊರಗಾದವರು, ನೆಲವೇ ಹಾಸುಗೆಯಾಗಿರುವವರು. ಮೃಗಗಳ ಸ್ನೇಹಿತರು, ಕಾಡಿನಲ್ಲಿ ವಾಸಿಸತಕ್ಕವರು. ಆದರೆ ಮಹಾಬಲಶಾಲಿಗಳು, ಶೂರರು, ಇತರರಿಗೆ ಸೋಲಿಸಲಿಕ್ಕಾಗದ ವೀರರು ಇವರಾಗಿದ್ದಾರೆ. ಇವರು ಮೇಲ್ಗಡೆಗೆ ಉರಿಯುವಿಕೆಯನ್ನು ನೀಗದಿರತಕ್ಕ ಅಗ್ನಿಯಂತಿದ್ದಾರೆ. ಇವರಲ್ಲಿ ಆ ಕೌರವನು ವೈರವನ್ನು ತಾಳಿ ಕೇಡನ್ನು ಪಡೆಯಲಿದ್ದಾನೆ.

ಗದ್ಯ॥ ಎಂದಾ ಪಾಂಡುಪುತ್ರರಂ ತನ್ನವರಂ ಮಾೞ್ಪಂತಲಂಪಿನಿಂದವರ ಸುಗುಣಕ್ಕೆ ಮೆಚ್ಚಿ
ತಲೆಯ ನೊಲೆಯುತ್ತುಂ ಬಂದು ನರಂಗೆ ಪುಯ್ಯಲ್ಚಲ್ ಬಗೆದು –

ಮ.ವಿ. ಯಮಜಾತಂಗಿದು ಶೂನ್ಯಮಾದಪುದೊ ಭೀಮಂಗಂ ತಿರಸ್ಕಾರದು
ದ್ಯಮಮಾದಪ್ಪುದೊ ಫಲ್ಗುಣಂಗೊಡನಸಹ್ಯತ್ವಂ ದಲಾದಪ್ಪುದೋ
ಯಮಳರ್ಗಂಗಮೊ ವಹ್ನಿ ಜಾತೆ ಬೆರಗಂ ತಾಳ್ದಪ್ಪಳೋ ಎಂಬ ಶಂ
ಕೆ ಮನಕ್ಕಾಗೆ ಕಿರೀಟಿಯೆಕ್ಕಟಿಯನಂದಾ ಖೇಚರಂ ಪಾರಿದಂ. ॥೧೨॥

ಕಂದ॥ ಗಾಳಿಯ ಬಿಱುಮಳೆಗೆಱಗಿದ
ಬಾಟಿಯವೋಲ್ ದೊಪ್ಪನಡಿಗೆಡೆದು ಕಂಬನಿಗಳ್
ಬೀೞುತ್ತಿರೆ ಗಯನಂ ನರ
ನೇಟಿೀಟೀನಾದುದೆಂದು ಬೆಸಗೊಳುತಿರ್ದಂ ॥೧೩॥

(ಗದ್ಯ) ಹೀಗೆ ಹೇಳುತ್ತ ಗಯನು ಆ ಪಾಂಡವರನ್ನು ತನ್ನವರನ್ನಾಗಿ ಮಾಡುವಂತೆ ಪ್ರೀತಿಯಿಂದ ಅವರ ಒಳ್ಳೆಯ ಗುಣಕ್ಕೆ ಮೆಚ್ಚಿ ತಲೆಯಲ್ಲಾಡಿಸಿದನು. ಮುಂದೆ ಬಂದು ಆ ಅರ್ಜುನನಿಗೆ ಮೊರೆಯಿಡಲು ಭಾವಿಸಿದನು. ಹೀಗೆ ಯೋಚಿಸಿದನು –

೧೨. ಐವರೂ ಒಟ್ಟಿಗೆ ಇರುವಾಗ ಹೋಗಿ ಅರ್ಜುನನಿಗೆ ಮೊರೆಯಿಡುವುದೆಂದರೆ – ಈ ವರ್ತನೆಯು ಧರ್ಮರಾಯನಿಗೆ ಶೂನ್ಯತೆಯ ಭಾವವನ್ನುಂಟು ಮಾಡುಬಹುದೆ? ಭೀಮನಿಗೆ ತಿರಸ್ಕಾರದ ಕಾರ್ಯವೆನಿಸಬಹುದೆ? ಇದರಿದಾಗಿ ಅರ್ಜುನನಿಗೆ ಅಸಹನೀಯವೆನಿಸಬಹುದೆ? ನಕುಲಸಹದೇವರಿಗೆ ಒಪ್ಪಿಗೆಯಾದೀತೆ? ದ್ರೌಪದಿ ಆಶ್ಚರ್ಯತಾಳಬಹುದೆ? ಹೀಗೆಲ್ಲ ತನ್ನ ಮನಕ್ಕೆ ಸಂಶಯವುಂಟಾಗಿ, ಗಯನು ಅರ್ಜುನನ ಏಕಾಂತಿಕವನ್ನು ಪ್ರತೀಕ್ಷಿಸಿದನು.

೧೩. ಅಂತಹ ಸಂದರ್ಭ ಸಿಕ್ಕಿದೊಡನೆ ಗಯನು ಬಿರುಗಾಳಿ ಮಳೆಯ ಹೊಡೆತಕ್ಕೆ ಕೆಳಗೆ ಬೀಳುವ ಬಾಳೆಯಂತೆ ದೊಪ್ಪನೆ ಅರ್ಜುನನ ಪಾದಕ್ಕೆ ಬಿದ್ದನು. ಕಣ್ಣೀರನ್ನು ಸುರಿಸಿದನು. ಆಗ ಅರ್ಜುನನು ಗಯನನ್ನು ಕುರಿತು "ಏಳೇಳು! ಏನಾಯಿತು?" ಎಂದು ಕೇಳುತ್ತಿದ್ದನು.

ಉ.ಮಾ. ಪೆರ್ಚಿದುದೇಕೆ ಸುಯ್ಯುವೆನತಂಘ್ರಿಗಳಂ ಗಳದಶ್ರುಧಾರೆಯೇಂ
ಕರ್ಚುವುದಸ್ಫುಟಂ ಪ್ರವಚನಂ ನೆನೆಯುತ್ತೆ ಪರಾಭವಂಗಳಂ
ಬೆರ್ಚುವೆಯೇತಱಿಂದೆ ನಿನಗೀ ಪರಿಪಾಡೊದಗಿತ್ತು ನೀನದಾರ್
ಚುರ್ಚುವ ನೋವದೇಂ ಖಚರನಾಗಿರೆ ಬಂದುದದಾವ ಸಂಕಟಂ ॥೧೪॥

ಗದ್ಯ॥ ಎಂದೊಡಾಂ ಖೇಚರನಪ್ಪ ಗಯನೆನ್ನ ವೈರಿ ಕೊಲಲ್ ಸೂರುಳಿಟ್ಟೊಡೆ ಕಾವರ
ನಾರಯುತೆ ಭಗವದ್ಭವಾನೀ ವಲ್ಲಭನಂ ಕಂಡೊಡಾತಂ ನಿನ್ನಂ ಕುಱುಪುವೇೞ್ದು
ಬಟಿಕೆನ್ನನಿಲ್ಲಿಗೆ ಕಳುಪಿದನದಱಿಂ ಶರಣನಸುವಂ ಕಾಯವೇೞ್ಪುದೆನೆ-

ಕಂದಂ॥ ತರದಿಂ ವಿವರಿಸು ನಿನ್ನಂ
ಕಱುವಂದದೆ ಕಾವೆನೋವೆನಾಂ ದುರ್ಗಾಶ್ರೀ
ವರರಡಿಯಾಣೆಯಿದೋ ಬೆ
ಳ್ಕಱದಿರ್ ಶರಣಾಗತರ್ಕಳಂ ಕಾವನೆನಾಂ ॥೧೫॥

ಅನಕೃತನಹ ನಿನ್ನೊಳದಾ
ವನ ಬಲವತ್ ಕೃತಿ ಮಹಾದವಾಗ್ನಿಯೆನಿಸಲುಂ
ನಿನಗೊಡರಲ್ಬಿಡೆನಾಂ ಸ್ವವ
ಚನಮಂ ನಡಪುವುದೆ ನಾಡೆ ನಲ್ತೊಡವಲ್ತೇ? ॥೧೬॥

೧೪. ಎಲೈ, ನಿನ್ನ ಉಸಿರಾಟ ಇದೇಕೆ ಹೆಚ್ಚಾಯಿತು? ನಿನ್ನ ಕಣ್ಣೀರ ಧಾರೆ ನನ್ನ ಪಾದಗಳನ್ನು ಅದೇಕೆ ತೊಳೆಯುತ್ತಿದೆ? ನಿನ್ನ ಮಾತುಗಳು ಅಸ್ಪಷ್ಟವಾಗಿವೆಯಲ್ಲಾ! ಏನೋ ಸೋಲಗಳನ್ನು ನೆನಸಿಕೊಂಡು ಬೆಚ್ಚಿಬೀಳುವೆಯಲ್ಲಾ! ಇಂತಹ ಪರಿಸ್ಥಿತಿ ನಿನಗೆ ಯಾವುದರಿಂದ ಆಯಿತು? ನೀನು ಯಾರು? ನಿನ್ನನ್ನು ಚುಚ್ಚುವ ನೋವು ಅದಾವುದು? ಆಕಾಶಗಾಮಿಯಾಗಿರುವ ನಿನಗೆ ಅದಾವ ಸಂಕಷ್ಟ ಬಂತು? ತಿಳಿಸಬಾರದೆ?

(ಗದ್ಯ) ಅರ್ಜುನನು ಹೀಗೆಂದಾಗ ಗಯನು – ನಾನು ಖೇಚರನಾದ ಗಯನೆಂಬಾತನು. ನನ್ನ ಶತ್ರು ನನ್ನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ್ದಾನೆ. ನಾನು ನನ್ನ ರಕ್ಷಕರನ್ನು ವಿಚಾರಿಸುತ್ತಾ ಭಗವಾನ್ ಶಿವನನ್ನು ಕಂಡಾಗ, ಆತನು ನಿನ್ನ ಗುರುತನ್ನು ಹೇಳಿ, ನನ್ನನ್ನು ಇಲ್ಲಿಗೆ ಕಳುಹಿಸಿರುತ್ತಾನೆ. ಆದುದರಿಂದ ಈ ಶರಣಾಗತನ ಪ್ರಾಣ ರಕ್ಷಣೆಯನ್ನು ನೀನು ಮಾಡಬೇಕು – ಎಂದನು. ಆಗ ಅರ್ಜುನನು ಹೀಗೆಂದನು –

೧೫. ಅನುಕ್ರಮವಾಗಿ ವಿವರಪಡಿಸು. ನಿನ್ನನ್ನು ನಾನು ಹಸುವಿನ ಕರುವಿನಂತೆ ರಕ್ಷಿಸುವೆನು, ಪ್ರೀತಿಸುವೆನು. ಇದೋ ಹರನ ಮತ್ತು ಹರಿಯ ಪಾದದಾಣೆ! ಭಯ ಪಡದಿರು. ಶರಣು ಬಂದವರನ್ನು ಕಾಪಾಡುವವನೇ ನಾನಾಗಿದ್ದೇನೆ.

೧೬. ಅಕೃತ್ಯವನ್ನೇನೂ ಮಾಡದ ನಿನ್ನ ಮೇಲೆ ಅದಾವಾತನ ಬಲವಂತಿಕೆಯ ಕಾರ್ಯವು ಮಹಾ ಕಾಡುಗಿಚ್ಚೇ ಆದರೂ ನಿನ್ನನ್ನು ಬಾಧಿಸಲು ಬಿಡೆನು. ಆಡಿದ ಮಾತನ್ನು ನಡೆಸಿಕೊಡುವುದೇ ವಿಶೇಷವಾಗಿ ನನಗೆ ಒಳ್ಳೆಯ ಭೂಷಣವಲ್ಲವೆ?

ಸಸಿ ಸುಡುಗೆ ನಡೆಗೆ ಬೆಟ್ಟಂ
ನಿಸಿವಗೆಯಂ ತಣಿಗೆ ಪುಳಿಗೆಯಿಂಗಡಲ ಜಲಂ
ಸಸಿವಜೆಯೊಳ್ ಪುಟ್ಟಿದ ಸಾ
ಹಸಧನನೀ ಪೂಣ್ಕೆ ಬಂಜೆಯೇನಾದಪುದೇ? ॥೧೭॥

ಇಂತೆಂದೊಡಮಾ ಖೇಚರ
ನಂತರ್ಭ್ಯದಧೀರನಾಗಿ ಮಿಡುಕುತೆ ತಾನಂ
ತಿಂತೇನೆನದಿರೆ ಶೌರ್ಯವ
ಶಂ ತಾಳ್ದಂ ಘೋರಶಪಥಮಂ ಕೌಂತೇಯಂ ॥೧೮॥

ಮ.ವಿ. ಶಿವಕೇಳ್ ನಂದಕುಮಾರ ಕೇಳ್ ಕಮಲಜಾ ನೀಂ ಕೇಳ್ ಹಿಮದ್ಯೋತಿ ಕೇಳ್
ರವಿ ಕೇಳ್ ಕೇಳ್ವುದು ಪಂಚಭೂತತತಿಯಿಂದೆನ್ನಂ ಶರಣ್ಬೊಕ್ಕನಂ
ಇವನಂ ಕಾವೆನದಾವೆಯಾದೊಡರಿಯಿಂ ಮೇಣೀ ಪ್ರತಿಜ್ಞಾಕ್ಷರಂ
ತವಿಲಂದಾಳ್ದೊಡೆ ಮಾಣದೇರ್ಪಡಿಸಿ ಚುರ್ಚುಂಗೊಂಡಮಂ ಪೊಕ್ಕಪೆಂ ॥೧೯॥

ಗದ್ಯ॥ ಎಂದು ಮೂಲೋಕಮಱಿವಂತೆ ಪೂಣ್ದು ಧೈರ್ಯಮನೊರೆದು ನಿನ್ನ ವೈರಿ ಯಾರ್ಗೆ ಪೇೞೆನೆ – ಗಯಂ ತನ್ನ ಪರಿಭವ ಪ್ರಪಂಚಮೆಲ್ಲಮಂ ಯಥಾವರ್ಣನಂಗೆಯ್ದಾ ವಾಸುದೇವನೆ ತನಗೆ ತಪೆಯಾದನೆಂಬುದುಮಭಯವನಿತ್ತಾ ವಿಜಯಂಗುಭಯಸಂಕಟಮೊದಗಿ – ಮನಂ ಜುಮ್ಮೆನೆ ಮುಂಗಾಣದೆ ವಿಷಾದ ಜಡಧಿಯೊಳ್ ಕೆಡೆದಂತಾಗಿ ತಾನಿಂತೆಂದಂ –

೧೭. ಚಂದ್ರನು ಸುಡುವವನಾಗಲಿ, ಬೆಟ್ಟವೇ ನಡೆಯ ತೊಡಗಲಿ, ಸೂರ್ಯನು ತಣ್ಣಗಾಗಲಿ, ಕ್ಷೀರಸಾಗರವು ಹುಳಿಯಾದರೆ ಆಗಲಿ – ಚಂದ್ರವಂಶಜನಾದ ಸಾಹಸವೇ ಐಶ್ವರ್ಯವೆನಿಸಿದವನಾದ ನನ್ನ ಪ್ರತಿಜ್ಞೆ ಬಂಜೆಯಾದೀತೆ? ಎಂದೂ ಆಗದು.

೧೮. ಅರ್ಜುನನು ಹೀಗೆನ್ನಲು, ಗಯನು ಮನಸ್ಸಿನಲ್ಲೇ ಹೆದರಿ ಮಿಡುಕುತ್ತಾ ಅಂತೂ ಇಂತೂ ಏನನ್ನು ಹೇಳದಿರಲು, ಅರ್ಜುನನು ಶೌರ್ಯಾಧೀನನಾಗಿ ಒಂದು ಘೋರ ಪ್ರತಿಜ್ಞೆಯನ್ನು ಮಾಡಿದನು.

೧೯. ಶಿವನೇ ಕೇಳು, ಶ್ರೀಕೃಷ್ಣನೇ ಕೇಳು, ಬ್ರಹ್ಮದೇವನೇ ನೀನು ಕೇಳು, ಚಂದ್ರನೇ ಕೇಳು, ಸೂರ್ಯನೇ ಕೇಳು, ಪಂಚಭೂತಗಳೇ ಕೇಳಿ. ಈ ದಿನ ನನ್ನನ್ನು ಮೊರೆಹೊಕ್ಕ ಇವನನ್ನು – ಇವನ ಶತ್ರು ಯಾವನೇ ಆಗಿದ್ದರೂ ಅಂಥವನಿಂದ ಕೇಡಾಗದಂತೆ, ಕಾಪಾಡುವೆನು. ನನ್ನ ಈ ಪ್ರತಿಜ್ಞೆಯ ಮಾತು ವ್ಯರ್ಥವಾದಲ್ಲಿ ಕೂಡಲೇ ಅಗ್ನಿಕುಂಡವನ್ನು ಏರ್ಪಡಿಸಿ, ಅದನ್ನು ಪ್ರವೇಶಿಸುವೆನು.

(ಗದ್ಯ) ಅರ್ಜುನನು ಹೀಗೆ ಮೂರುಲೋಕವೂ ತಿಳಿಯುವಂತೆ ಪ್ರತಿಜ್ಞೆ ಮಾಡಿದನು. ಗಯನಿಗೆ ಧೈರ್ಯಹೇಳಿ "ನಿನ್ನ ಶತ್ರು ಯಾರು? (ಯಾರ ಸಂಬಂಧಿ) ಹೇಳು" ಎಂದಾಗ , ಗಯನು ತನ್ನ ಸೋಲಿನ ಸಂಗತಿಯೆಲ್ಲವನ್ನೂ ಯಥಾರೀತಿಯಾಗಿ ವರ್ಣಿಸಿ. "ಶ್ರೀಕೃಷ್ಣನೇ ನನಗೆ ಶತ್ರುವಾಗಿದ್ದಾನೆ" ಎಂದನು. ಆಗ ಅಭಯವನ್ನು ನೀಡಿದ ವಿಜಯನಿಗೆ ಉಭಯಸಂಕಟವಾಯಿತು. ಮನಸ್ಸು ಜುಮ್ಮೆಂದಿತು. ಮುಂದುಗಾಣದೆ ದುಃಖಸಾಗರದಲ್ಲಿ ಬಿದ್ದಂತಾಯಿತು. ಅವನು ಹೀಗೆಂದನು –

ಕಂದ॥ ಯುದ್ಧಕ್ಕಂಜುವನಲ್ಲೆಂ
ಮದ್ಧಿತನೊಳ್ ಪತ್ನಿಯಗ್ರಜನ್ಮನೊಳಾನೆಂ
ತುದ್ಧತನಂತಿರೆ ಪೋಣರ್ವೆಂ
ಮುಗ್ಧನೆನೇಂ ವಿಧಿಯ ವಿಧಿಯದೀ ತೆಱನಾಯ್ತೇ? ॥೨೦॥

ತಕ್ಕುದನೆಳೆಯೊಳ್ ಜನನಿತ
ರಕ್ಕಱೆಯಂ ದೇಶಕಾಲ ಪಾತ್ರಮನಱೆತೀ
ಯಲ್ಕೆನಗೀ ವಿಧಿಯಂ ತಂ
ದಿಕ್ಕಿದ ವಿಧಿಯೇಕೆ ವಾಣಿಯಂ ವರಿಸಿದನೋ! ॥೨೧॥

ಶಾ.ವಿ. ಕೋಪಾಟೋಪದೊಳಿಂದು ಕೌರವರೊಳೇ ಪ್ರೋನ್ಮತ್ತ ದಿಗ್ದೇಶ ಭೂ
ಮೀಪಾಲರ್ಕಳೊಳೇ ಕಡಂಗಿ ಪೋಣರ್ವೆಂ ಪಂಚೇಂದ್ರಿಯ ವ್ರಾತದಂ
ತೀ ಪಾಂಡೂದ್ಭವರೆಮ್ಮನೊಲ್ದು ಪೊರೆವಾ ಶ್ರೀಕೃಷ್ಣನಂ ಭಾವನಂ
ಗೋಪೀನಾಥನನೆಂತು ಕೂಗಿ ಕರೆವಂ ಮೇಣೆಂತು ಮಾರಾಂಪೆನೋ ॥೨೨॥

ಗದ್ಯ॥ ಎಂಬನ್ನೆಗಮಾ ಅವ್ಯವಸ್ಥಾಂತರಂಗ ಭಾವರಸವೀಚಿಯುಂ ಚಿಂತಾವಾಚಿಯುಮಾಗಿರ್ದ ಸವ್ಯಸಾಚಿಯ ಶೌರ್ಯಸಂಕಲ್ಪ ಮವನಣ್ಣಂದಿರ ತಮ್ಮಂದಿರ ಕರ್ಣಮುಮಂ ಪೊಕ್ಕು ಮನೋರ್ಣವಮಂ ಬಿಱುಗಾಳಿ ಪೊಯ್ದಂತೆ ಪಳಂಚಿಸೆ ತಡೆಯದೆ ಬಟೆಗೆವಂದು ಧರ್ಮಪುತ್ರನಿಂತೆಂದಂ –

೨೦. ಯುದ್ಧಕ್ಕೆ ನಾನೇನೂ ಹೆದರುವವನಲ್ಲ. ಆದರೆ ನನ್ನ ಹಿತವಂತನೂ ಹೆಂಡತಿಯ (ಸೌಭದ್ರೆಯ) ಅಣ್ಣನೂ ಆದವನೊಡನೆ ಉದ್ಧತನಂತೆ ಹೇಗೆ ತಾನೇ ಕಾದುವೆನು? ಮೂಢನಾದೆನಲ್ಲವೆ? ನನಗೆ ವಿಧಿಯು ವಿಧಿಸಿದುದು ಈ ರೀತಿಯಾಯಿತೇ!

೨೧. ಆ ಬ್ರಹ್ಮನು ಲೋಕದಲ್ಲಿ ಜನರಿಗೆ ದೇಶ–ಕಾಲ ಪಾತ್ರಗಳನ್ನು ಅರಿತು ಏನೇನು ಕೊಡಬೇಕೆಂಬುದನ್ನು ತಿಳಿಯದವನಾಗಿದ್ದಾನೆ. ನನಗೆ ಈ ವಿಧಿಯನ್ನು ವಿಧಿಸಿದ ಆ ಬ್ರಹ್ಮನು ಅದೇಕೆ ವಿದ್ಯಾದೇವತೆಯಾದ ವಾಣಿಯನ್ನು ಮದುವೆಯಾದನೋ!

೨೨. ನಾನೀಗ ಯುದ್ಧಮಾಡಬೇಕಾದುದು ಯಾರೊಡನೆ? ಕೋಪದ ಅಬ್ಬರದಿಂದ ಆ ಕೌರವರೊಡನೆಯೇ? ಬಹಳ ಉನ್ಮತ್ತರಾದ ದಿಗ್ದೇಶಗಳ ರಾಜರೊಡನೆಯೇ? ಉತ್ಸಾಹದಿಂದ ಹೋರಾಡುವೆನು. ಪಾಂಡುಪುತ್ರರಾದ ನಮ್ಮನ್ನು ತನ್ನ ಪಂಚೇಂದ್ರಿಯಗಳಂತೆ ಕಾಪಾಡುವ ಶ್ರೀಕೃಷ್ಣನನ್ನು, ಭಾವನನ್ನು ಗೋಪಿಯರ ವಲ್ಲಭನನ್ನು 'ಬಾ, ನನ್ನೊಡನೆ ಯುದ್ಧಕ್ಕೆ ನಿಲ್ಲು' ಎಂದು ಹೇಗೆ ತಾನೇ ಕೂಗಿ ಕರೆಯುವೆನು ಮತ್ತು ಹೇಗೆ ಪ್ರತಿಭಟಿಸುವೆನೋ! (ಗದ್ಯ) ಹೀಗೆನ್ನುತ್ತಿರಲು, ಅವ್ಯವಸ್ಥೆಗೊಂಡ ಮನಸ್ಸಿನ ಭಾವರಸದ ಅಲೆಗಳುಳ್ಳವನೂ ಚಿಂತೆಯನ್ನೇ ನುಡಿಯತಕ್ಕವನೂ ಆದ ಅರ್ಜುನನ ಶೌರ್ಯದ ಸಂಕಲ್ಪವು ಅವನ ಅಣ್ಣ ತಮ್ಮಂದಿರ ಕಿವಿಗಳಿಗೂ ಹೊಕ್ಕು ಅವರ ಮನಸ್ಸಮುದ್ರವನ್ನು ಬಿರುಗಾಳಿ ಹೊಡೆದಂತೆ ಅಲ್ಲೋಲ ಕಲ್ಲೋಲಗೊಳಿಸಿತು. ಒಡನೆಯೇ ಹತ್ತಿರಕ್ಕೆ ಬಂದು ಧರ್ಮರಾಯನು ಹೀಗೆಂದನು –

ಉ.ಮಾ. ನೀಂ ಪಡಿಯಾಡೆ ನಾಡೆ ತಿರೆಯಂ ಕಳೆದಾತನೆನಾನೆ ಸೋಲ್ತನ
ಪ್ಪೆಂ ಪರಿಯೆಲ್ಲಮಂ ಮೊದಲೆ ಭಾವಿಸಿ ನೋಡದೆಯುಂತೆ ಸೂರುಳಂ
ಪೆಂಪಿನೊಳಿಟ್ಟು ಗೆಯ್ದವಿವೇಕತೆಯಂ ಬಜುವರ್ ದಲಾವದೆಂ
ತಾಂಪೆವು ಶೌರಿಯೊಳ್ ಮೊನೆಯ ಮುಳ್ಳಿದು ಸೋಲಗಾಯದೊಳ್ ! ॥೨೩॥

ಕಂದ॥ ಬರೆದುದು ಬಗೆದುದು ಮಾಜಲ್
ನೆರೆಗುಂ ನುಡಿ ಮಾಜಲರಿದು ನಮ್ಮನ್ನರ್ಗ್ಗೆಂ
ದಱಿದುಂ ನೀನಾರ್ತನ ನೆಲೆ
ಯಱಿಯದೆ ಪೂಣ್ದಾಯ್ತಮೋಘ ಸಂಕಟಮಲ್ತೇ? ॥೨೪॥

ಮ.ವಿ. ಎನೆ ಕೇಳರ್ಜುನ ಬಾಹುಶಕ್ತ್ಯನಲನೀ ವಾತೋದ್ಭವ ಪ್ರೇರಿತಂ
ಮೊನೆಯೊಳ್ ದ್ವಿಟ್ಕುಲ ಶುಷ್ಕಪತ್ರತತಿಯಂ ಪ್ರಧ್ವಂಸಮಂ ಮಾಡುಗುಂ
ಮನದೊಳ್ ನಿರ್ಭಯರಪ್ಪ ಬೀರದರವಕ್ಕಳ್ಗುತ್ಸವಂ ಜುದ್ದಮಾಂ
ಬನಮಂ ಸಾರ್ದಿರೆವೇಂ ಮುಳುಂಗೆ ಕುಳಿರೇನೇಕಾಂಗರೇನಳ್ಕಱೇ? ॥೨೫॥

೨೩. ತಮ್ಮನಾದ ಅರ್ಜುನನೇ, ನನ್ನ ಮಾತಿಗೆ ನೀನು ಪ್ರತ್ಯುತ್ತರ ಕೊಟ್ಟರೆ, ನಾನೇ ಸೋಲುವೆನು. ಏಕೆಂದರೆ, ನಾನು ವಿಶೇಷವಾಗಿ ರಾಜ್ಯವನ್ನೇ ಕಳೆದುಕೊಂಡವನು. ಅದು ಹಾಗಿರಲಿ, ಪ್ರಕೃತ, ನೀನು ಸಂಗತಿಯೆಲ್ಲವನ್ನು ಮೊದಲೇ ಕೇಳಿ ತಿಳಿದು, ಭಾವಿಸಿ ನೋಡದೆ, ಹಿರಿಮೆಯಿಂದ ವ್ಯರ್ಥವಾಗಿ ಪ್ರತಿಜ್ಞೆ ಮಾಡಿ, ಅವಿವೇಕತೆಯನ್ನು ಪ್ರದರ್ಶಿಸಿರುತ್ತೀ. ನಾವು ರಾಜಸಂಪತ್ತೇನೂ ಇಲ್ಲದ ಟೊಳ್ಳು ಜನರಾಗಿದ್ದೇವೆ. ಆ ಶ್ರೀಕೃಷ್ಣನೊಡನೆ ಹೇಗೆ ತಾನೆ ಕಾದಾಡುವೆವು? ಮೊದಲೇ ರಾಜ್ಯ ಸೋತವರಾದ ನಮಗೆ ಸೋಲದ ಗಾಯದ ಮೇಲೆ ಇದೊಂದು ಯುದ್ಧ ಎಂಬ ಮುಳ್ಳು ನಾಟಿದ ಹಾಗಾಯಿತಲ್ಲವೆ?

೨೪. ನಮ್ಮಂಥವರಿಗೆ ಕೈಯಲ್ಲಿ ಲೇಖನಿ ಹಿಡಿದು ಬರೆದುದನ್ನು ಮನಸ್ಸಿನಲ್ಲಿ ಒಮ್ಮೆ ಭಾವಿಸಿದುದನ್ನು ಮಾಜಿಸಬಹುದು. (ಅಳಿಸಬಹುದು). ಆಡಿದ ಮಾತನ್ನು ಮಾಜಿಸಲು ಸಾಧ್ಯವಿಲ್ಲ. ಇದನ್ನು ನೀನು ತಿಳಿದೂ ಆ ಗಯನ ನೆಲೆಯನ್ನು ಮೊದಲೇ ತಿಳಿದುಕೊಳ್ಳದೆ ಶಪಥ ಮಾಡಿದುದರಿಂದ ಭಾರಿ ದೊಡ್ಡ ಸಂಕಷ್ಟವೊದಗಿತಲ್ಲವೇ?

೨೫. ಆಗ ಭೀಮನು ಹೀಗೆಂದನು – ನನ್ನ ಮಾತನ್ನು ಕೇಳು, ಅರ್ಜುನನ ಭುಜಬಲವೆಂಬ ಅಗ್ನಿಯು ಈ ವಾತೋದ್ಭವ (ಗಾಳಿಯಿಂದಾದ, ಭೀಮನಿಂದಾದ) ಪ್ರೋತ್ಸಾಹದಿಂದ ಯುದ್ಧದಲ್ಲಿ ಶತ್ರುಸಮೂಹವೆಂಬ ತರಗೆಲೆಯ ಸಮೂಹವನ್ನು ದಹಿಸಿಬಿಡುವುದು. ಮನಸ್ಸಿನಲ್ಲಿ ನಿರ್ಭಯರಾದ , ವೀರರಾದ ರಾಜಪುತ್ರರಿಗೆ (ನಮಗೆ) ಯುದ್ಧವೆಂಬುದು ಒಂದು ಉತ್ಸಾಹ ಸಂಗತಿಯಾಗಿದೆ. ನಾವೀಗ ನಾಡನ್ನು ಬಿಟ್ಟು ಕಾಡನ್ನು ಸೇರಿದ್ದೇವೆ. ಮುಳುಗಾದ ಮೇಲೆ ಚಳಿಯುಂಟೇ? ನಾವು ಏಕಾಂಗಿಗಳಾದರೇನಾಯಿತು? ನಮಗೆ ಭಯವಿದೆಯೇ?

ಗದ್ಯ॥ ಎಂದಾ ಮಾರುತಕುಮಾರಂ ಬೀರವಾತಂ ಬೀಱಲೊಡಂ –

ಕಂದ॥ ಪಲವೇಂ ಕ್ಷಾತ್ರತೆಯಿಂದೆ ನ
ಕುಲನೆಂದಂ ಗಯನನಂತು ನಾಮಾರಯ್ವಂ
ಕೊಲಲೈತರೆ ಕೃಷ್ಣನೊಳಂ
ಮಲೆದಾಂಪಂ ಬೆದರ್ದು ನುಡಿಯನಡಿಗಿಕ್ಕುವೆವೇ? ॥೨೬॥

ಉ.ಮಾ. ಬೇಸಗೆ ಕಾಯ್ದು ತಾಪಿಸಿದೊಡಂ ನೆಲನಂ ಮೞೆಗಂ ನಿಮಿತ್ತಮಾ
ಬೇಸಗೆಯಪ್ಪವೋಲ್ ಹರಿಯೊಳಾಹವದಿಂದತಿ ಕಷ್ಟಮಾದೊಡಂ
ಗಾಸಿಗಳಾಗವಲ್ಲಿ ಬೞಿಕಂ ಸೊಗಮುಪ್ಪುದು ತಪ್ಪದಣ್ಣ ಏಂ
ದೋಸಮಿದೆಂದನಂದು ಸಹದೇವನಮೇಯ ಸುಬುದ್ಧಿ ಭಾವನಂ ॥೨೭॥

ಗದ್ಯ॥ ಅಂಕಾ ಮುಂಚಿ ಮಿಂಚುವ ಸಂಘಟ್ಟಣೆಗೆ ಕೊಂಚಮಾದೊಡಂ ಪಿಂಚದೆ ಸಂಚಿತ
ಮನೋಬಲದಿಂದಾ ಕೊಂತಿಮಕ್ಕಳೈವರುಮೈಕಮತ್ಯಂಬಿಡಿದಿರೆ –

(ಗದ್ಯ) ಹೀಗೆಂದು ಭೀಮನು ವೀರತೆಯ ಮಾತನ್ನಾಡಿದಾಗ –

೨೬. ಹೆಚ್ಚು ಮಾತೇಕೆ? ಎನ್ನುತ್ತ ಕ್ಷಾತ್ರೋಚಿತವಾಗಿ ನಕುಲನೂ ಹೀಗೆಂದನು – ಗಯನಿಗೆ ಆಶ್ರಯ ಕೊಟ್ಟು ಆದುದರಿಂದ ಅವನನ್ನು ರಕ್ಷಿಸುತ್ತಾ ನೋಡಿ ಕೊಳ್ಳೋಣ. ಅವನನ್ನು ಕೊಲ್ಲಲು ಬಂದಲ್ಲಿ ಕೃಷ್ಣನೊಡನಾದರೂ ಎದುರಾಗಿ ಕಾದೋಣ. ಕೃಷ್ಣನಿದ್ದಾನೆ ಎಂದು ಹೆದರಿ ಆಡಿದ ಮಾತನ್ನು ತುಳಿದು ಹಾಕಲಾರೆವು!

೨೭. ಸಹದೇವನು ಆಗ ಹೀಗೆಂದನು –

ಬೇಸಗೆಯು ಕಾದು, ನೆಲವನ್ನು ಬಿಸಿಯೇರಿಸಿದರೂ ಅದೇ ಬೇಸಗೆ ಮುಂದೆ ಮಳೆಗೂ ನಿಮಿತ್ತವಾಗುವುದಲ್ಲವೆ ? ಅದರಂತೆ ಕೃಷ್ಣನೊಡನೆ ಮಾಡತಕ್ಕ ಯುದ್ಧವು ಅತಿ ಕಷ್ಟಕರವಾದರೂ ಅದರಿಂದ ಅಂತಹ ತೊಂದರೆಗಳೇನೂ ಆಗಲಾರವು. ಅಣ್ಣಾ, ಅದರಿಂದ ಮುಂದೆ ಸುಖವಾಗುವುದು ತಪ್ಪದು. ಇದರಿಂದೇನೂ ಕೇಡಾಗದು ಎಂದು ಒಳ್ಳೆಯ ಬುದ್ಧಿ ಭಾವನೆಗಳುಳ್ಳವನಾದ ಸಹದೇವನು ಹೇಳಿದನು. (ಗದ್ಯ) ಹಾಗೆ ಮುಂದೆ ಬರತಕ್ಕ ಸಂಘರ್ಷಣೆಗೆ ಸ್ವಲ್ಪವೂ ಎದೆಗುಂದದೆ, ಶೇಖರಿಸಲಾದ ಮನೋಬಲವುಳ್ಳವರಾಗಿ ಪಾಂಡವರು ಐವರು ಏಕಮತದವರಾಗಿದ್ದರು.

ಚಂ. ಮಾ. ನರನೊಸೆದಂ ಸ್ವಕಾರ್ಯಮನೆ ಮೀವಿನಮುಂಬಿಮಲಂಗುವಾಗಳಾ
ಗಿರಿಶನನರ್ಚಿಪಾಗಳಿರುಳುಂ ಪಗಲುಂ ಮಱವಿಲ್ಲದಾ ನಭ
ಶ್ಚರನನೆ ರಕ್ಷಿಪಂ ನೆಲಕಲಂ ಪಣಮಂ ಪರಿರಕ್ಷಿಪಂದದಿಂ
ಧರಿಸಿರೆ ಪೂರ್ಣ ಕಜ್ಜವೊರೆಯಂ ಸಲೆ ತೀರ್ಚದೆಯೇಂ ಬಱುಂಬನೇ? ॥೨೮॥

ಗದ್ಯ॥ ಅನ್ನೆಗಂ ಹೇರಿಗನಂತೆವೋಲ್ ನಾರದಂ ಬಂದು ಪೇೞಲೊಡಂ ಧನಪಸುತಂ ನಿಜವಯಸ್ಯನಪ್ಪ ವಿಜಯನಂ ಸಾರ್ದುದಂ ತಿಳಿದು ಮುರಳೀಧರಂ ತಾನಸಮ ಬುದ್ಧಿಬಲನಾದೊಡಂ ಭ್ರಾತರನಪ್ಪ ಬಲದೇವನೊಳಂ – ಉದ್ಧವಾದಿ ಮಂತ್ರಿಗಳೊಳಂ – ಮಿಕ್ಕ ತಕ್ಕ ರಾಯಗಜ್ಜದುಜ್ಜುಗಮಂ ಸಜ್ಜುಗೊಳಿಪಗ್ಗದ ಸಜ್ಜನಿಕೆಯೋಲಗಿಗರೊಳಂ ಪಿರಿದುಂ ತರ್ಕಿಸಿ ತಱಿಸಂದೊಡನೆಯಕ್ರೂರನ. ಪ್ಪಕ್ರೂರನಂ ಕರ್ತವ್ಯಮನಱುಪಿ ಪಾರ್ಥನೆಡೆಗೆ ದೂದಟ್ಟುವುದುಂ – ಆತನದ್ವೈತಪಥದಿಂದಾ ದ್ವೈತವನಮಂ ಪೊಕ್ಕು ಪಾಂಡವನಿವಸಥಮಂ ಪುಗುವುದುಂ – ಸಸಹೋದರಂ ಯುಧಿಷ್ಠಿರನಕ್ರೂರನಂ ಕರಮುಪಚರಿಸಿ – ಶ್ರೀ ಕೃಷ್ಣ ಬಲಭದ್ರಾದಿಗಳ್ಗನಾಮಯಮಂ ಬೆಸಗೊಂಡಾ ಬೞಕ್ಕೆಕ್ಕಟಿಯೊಳ್ ನರನಕ್ರೂರಂಗಭಿಮುಖನಾಗಿ –

೨೮. ಲೋಭಿಯು ಹಣವನ್ನು ಸದಾ ರಕ್ಷಿಸುವ ಹಾಗೆ, ಅರ್ಜುನನು ತಾನು ಮಾಡತಕ್ಕ ಕಾರ್ಯವನ್ನೇ ಪ್ರೀತಿಸಿಕೊಂಡು ಸ್ನಾನಮಾಡುವಾಗ, ಊಟ ಮಾಡುವಾಗ, ಮಲಗುವಾಗ, ಶಿವಾರ್ಚನೆ ಮಾಡುವಾಗ ಇರುಳೂ ಹಗಲೂ ಮರೆಯುವಿಕೆ ಇಲ್ಲದೆಯೇ ಆ ಗಯನ ರಕ್ಷಣೆಯಲ್ಲೇ ನಿರತನಾದನು. ಪ್ರತಿಜ್ಞೆ ಮಾಡಿದ ಕಾರ್ಯದ ಹೊರೆಯನ್ನು ಹೊತ್ತಿರುವಾಗ, ಅದನ್ನು ತೀರಿಸದೆ ಇರುವಷ್ಟರ ಟೊಳ್ಳನೇ ಅರ್ಜುನನು? ಅಲ್ಲವೇ ಅಲ್ಲ.

(ಗದ್ಯ) ಹೀಗಿರಲು, ಬೇಹುಕಾರನಂತೆ ನಾರದನು ಬಂದು ಕೃಷ್ಣನಿಗೆ ತಿಳಿಸಿದುದರಿಂದ ಎಲ್ಲ ಗೊತ್ತಾದವು. ಕುಬೇರನ ಅಣುಗನು ತನ್ನ ಗೆಳೆಯನಾದ ಅರ್ಜುನನನ್ನು ಆಶ್ರಯಿಸಿದ ಸಂಗತಿಯನ್ನು ತಿಳಿದು ಕೃಷ್ಣನು ತಾನು ಅಸಮಾನವಾದ ಬುದ್ಧಿಬಲವುಳ್ಳವನಾದರೂ ಸಹೋದರನಾದ ಬಲರಾಮನಲ್ಲಿಯೂ ಉದ್ಧವ ಮುಂತಾದ ಮಂತ್ರಿಗಳಲ್ಲಿಯೂ ಇತರ ಯೋಗ್ಯ ರಾಜಕಾರ್ಯವನ್ನು ಸಿದ್ಧಗೊಳಿಸತಕ್ಕ ಸಜ್ಜನಿಕೆಯುಳ್ಳ ಸಭಿಕರಲ್ಲಿಯೂ ಹೆಚ್ಚಾಗಿ ಚರ್ಚಿಸಿ, ನಿರ್ಣಯಕ್ಕೆ ಬಂದು ಒಡನೆಯೇ ಸಾಧುಸ್ವಭಾವದ ಅಕ್ರೂರನನ್ನು ಕರೆದು, ಅವನಿಗೆ ಕರ್ತವ್ಯವನ್ನು ತಿಳಿಸಿ, ಅರ್ಜುನನ ಬಳಿಗೆ ರಾಜದೂತನನ್ನಾಗಿ ಕಳುಹಿಸಿದನು. ಅಕ್ರೂರನು ನೇರವಾಗಿ ದ್ವೈತಾರಣ್ಯವನ್ನು ಹೊಕ್ಕು ಪಾಂಡವರ ವಾಸಸ್ಥಾನವನ್ನು ಪ್ರವೇಶಿಸಿದನು. ಆಗ ಧರ್ಮರಾಯನು ತನ್ನ ಸಹೋದರರೊಂದಿಗೆ ಅಕ್ರೂರನಿಗೆ ವಿಶೇಷವಾಗಿ ಉಪಚಾರ ಮಾಡಿದನು. ಶ್ರೀಕೃಷ್ಣ ಬಲರಾಮ ಮುಂತಾದವರ ಯೋಗಕ್ಷೇಮವನ್ನು ವಿಚಾರಿಸಿದನು. ಆಮೇಲೆ ಏಕಾಂತವಗಿ ಅರ್ಜುನನು ಅಕ್ರೂರನಿಗೆ ಎದುರಾಗಿ ಹೀಗೆಂದನು.

ಮ.ವಿ. ವನವಾಸಂ ಘಟಿಪನ್ನಮಾಂ ಕಳುಪಿದೆಂ ತಾಯೊಳ್ಗಡಿಯಾಟಾಳಿಕಂ
ದನನಂದಂತಭಿಮನ್ಯುವೇಂ ಸುಖಿಯೆ ವಿದ್ಯಾಪ್ರೇಮಿಯೇ ಗೌರವಾ
ರ್ಹನೆ ಸಚ್ಚೇಷ್ಟಿಯೆ ನೀತಿಯೊಳ್ ಕುಶಲನೇನೆಮ್ಮಂ ದಲೇನೆಂದಪಂ ?
ತನಗೀಗೆಂಬುದೆನಲ್ಕದೇಂ ಪಿರಿದೊ ಪುತ್ರಸ್ನೇಹಮಾರ್ಗಾದೊಡಂ ! ॥೨೯॥

ಗದ್ಯ॥ ಆ ನುಡಿಗಕ್ರೂರನಭಿಮನ್ಯುವ ನೈಜಮಪ್ಪ ಗೌರವಮಂ ಬಣ್ಣಿಸಲೆಳಸಿ ತಾನಿಂತೆಂದಂ –

ಕಂದ॥ ಆಟದೊಳವನಿಟ್ಟಾ ಸೆಂ
ಡೇಟಂ ಕಾಲ್ಕುಸಿದ ಬೀೞ್ವರೋರಗೆಗುವರರ್
ಪಾಟದೊಳೋಜರ್ಗೞಿಪ
ಲ್ಕಾಟಿಪನಂತಾತನಱಿವನಾರ್ಪೞಿಱರಱಿವರ್ ? ॥೩೦॥

ತೊಳಪಂ ಕನ್ನಡಿಯೊಳ್ ಮಾ
ರ್ತೊಳಪಂದದಿನವನ ಶೀಲಸುಕಲಾಂಶಂಗಳ್
ಕೆಳೆಯರ ಬಳಗದೆ ಬಳ್ವಳ
ಬಳೆಯುತ್ತಿರೆ ಬಳೆಯುತಿರ್ಪನೆಳವೆಯೊಳತುಳಂ ॥೩೧॥

೨೯. ನಮಗೆ ವನವಾಸವಾದಾಗ, ಆಡುಕುಳಿಯಾದ ಮಗ – ಅಭಿಮನ್ಯುವನ್ನೂ ಅವನ ತಾಯಿಯ ಜೊತೆಯಲ್ಲಿ ತಾಯ್ಮನೆಗೆ ಕಳುಹಿಸಿರುತ್ತೇನೆ. ಮಗನು ಸುಖವಾಗಿರುವನೆ? ವಿದ್ಯೆಯಲ್ಲಿ ಪ್ರೀತಿಯುಳ್ಳವವಾಗಿರುವನೆ ? ಗೌರವಕ್ಕೆ ತಕ್ಕವನೆ ? ಒಳ್ಳೆಯ ನಡತೆಯವನೆ ? ನೀತಿಕುಶಲನೆ? ನಮ್ಮನ್ನು ಕುರಿತು ಏನೆನ್ನುತ್ತಿದ್ದಾನೆ? ನನಗೀಗ ಇವೆಲ್ಲವನ್ನು ತಿಳಿಸುವವನಾಗು ಎಂದನು. ಯಾರಿಗೇ ಆದರು ಮಗನ ಮೇಲಣ ಪ್ರೀತಿ ಅದೆಷ್ಟು ಹಿರಿದೋ? (ಗದ್ಯ) ಆ ಮಾತಿಗೆ ಅಕ್ರೂರನು ಅಭಿಮನ್ಯುವಿನ ನೈಜವಾದ ಶ್ರೇಷ್ಠತೆಯನ್ನು ವರ್ಣಿಸಲು ಇಚ್ಛೆಪಟ್ಟು ಹೀಗೆಂದನು –

೩೦. ಅವನ ಆಟದ ಸೊಗಸನ್ನು ಏನೆನ್ನಲಿ! ಚೆಂಡಾಟದಲ್ಲಿ ಅವನು ಕಾಲಿನಿಂದ ಹೊಡೆದ ಚೆಂಡಿನ ಏಟಿನಿಂದ ಅವನ ಗೆಳೆಯರು ಕಾಲು ಕುಸಿದು ಬಿದ್ದು ಬಿಡುತ್ತಾರೆ! ಇನ್ನು ಪಾಠದಲ್ಲಿ ಅವನು ಉಪಾಧ್ಯಾಯರಿಗೆ ಹೆಚ್ಚಿನ ತಿಳಿವಳಿಕೆ ನೀಡಲು ಇಚ್ಛಿಸುವಂತಿದ್ದಾನೆ; ಅಷ್ಟು ಅರಿವುಳ್ಳವನು. ಇತರರು ಅವನಂತೆ ತಿಳಿದವರಿಲ್ಲ.

೩೧. ಪ್ರಕಾಶವು ಕನ್ನಡಿಯಲ್ಲಿ ಅಷ್ಟೇ ಪ್ರಕಾಶಿಸುವಂತೆ, ಅವನ ಶೀಲ ಮತ್ತು ಒಳ್ಳೆಯ ಕಲೆಗಳ ಅಂಶಗಳು ಅವನ ಗೆಳೆಯರ ಬಳಗದಲ್ಲಿ ಚೆನ್ನಾಗಿ ಬಳೆಯುತ್ತ ಇರುತ್ತವೆ. ಎಳವೆಯಲ್ಲೇ ಅಭಿಮನ್ಯು ತುಲನೆಯಲ್ಲಿದ್ದವನಾಗಿ ಬೆಳೆಯುತ್ತಿದ್ದಾನೆ.

ಅಭಿಮನ್ಯುವಂತೆ ಸುಬಲಂ
ಸುಭಟಂ ವಿನಯಂ ಕುಶಾಗ್ರಮತಿಯತಿ ತೇಜೋ
ವಿಭವಂ ಜನಹಿತನುಂ ನೀಂ
ಪ್ರಭವಿಸೆನುತೆ ಮಕ್ಕಳಂ ಜನರ್ ಬೋಧಿಸುವರ್ ॥೩೨॥

ಗದ್ಯ॥ ಮತ್ತಮೆಳವರಯದಿಂ ತೊಡಂಗಿ ಕೌರವರ್ ನಿಮಗಿತ್ತ ಬನ್ನಂಗಳುಮಂ ನಿಮ್ಮ ವೀರಕಾರ್ಯಾಂತರಂಗಂಗಳುಮಂ ನಿಚ್ಚಮೋದುವಳಾಗಿ ಸುಭದ್ರೆಯೊಪ್ಪುತ್ತಿರೆ

ಶಾ.ವಿ. ತಾಯಿಂ ಕೇಳ್ದಿತಿಹಾಸಮಂ ಕುರುಕುಲಕ್ಷ್ಮಾಪಾಲನಂ ಖೂಲನಂ
ನಾಯಂತಟ್ಟುವೆನಾಂತನಂ ಪೊಡೆದು ಮಾಟ್ಪೆಂ ಕಾಲನಂ ಲೋಲನಂ
ನ್ಯಾಯಾರ್ಹಾವನಿಯಂ ಸ್ಥಿರಂ ಗುರುಜನಕ್ಕಾಂ ಮಾಡುವೆಂ ನೋಡುವೆಂ
ತಾಯೆನ್ನಟ್ಟೆನುತುಂ ಕುಮಾರನ ತೆಱಂ ಮಾತಾಡುವಂ ಕಾಡುವಂ ॥೩೩॥

ಗದ್ಯ॥ ಎಂದಕ್ರೂರನಭಿಮನ್ಯುವಂ ಸಹಜಮಾಗಭಿವರ್ಣಿಪುದುಂ –

೩೨. ಜನರು ತಂತಮ್ಮ ಮಕ್ಕಳಿಗೆ – ನೀನು ಅಭಿಮನ್ಯುವಿನಂತೆ ಒಳ್ಳೆಯ ಬಲಶಾಲಿಯೂ, ಒಳ್ಳೆಯ ಭಟನೂ, ವಿನಯವುಳ್ಳವನೂ, ಕುಶಾಗ್ರಬುದ್ಧಿಯವನೂ, ಅತಿಯಾದ ತೇಜಸ್ಸಂಪದನೂ, ಜನರಿಗೆ ಹಿತಕಾರಿಯೂ ಆಗು ಎಂದು ಬೋಧಿಸುತ್ತಿದ್ದಾರೆ.

(ಗದ್ಯ) ಅದಲ್ಲದೆ, ಬಾಲ್ಯದಿಂದಲೇ ಆ ಕೌರವರು ನಿಮಗೆ ಕಷ್ಟಗಳನ್ನು ನಿಮ್ಮ ವೀರತ್ವದ ಕಾರ್ಯಕ್ರಮಗಳ ರಹಸ್ಯಗಳನ್ನು ನಿತ್ಯವೂ ಹೇಳಿಕೊಳ್ಳುವವಳಾಗಿ ಸುಭದ್ರೆ ಇರುತ್ತಿರುವಾಗ ಅವನ ಪ್ರತಿಕ್ರಿಯೆಯಿದು.

೩೩. ತನ್ನ ತಾಯಿಯಿಂದ ಇತಿಹಾಸವನ್ನು ಕೇಳಿದಾಗ ಅಭಿಮನ್ಯು ದುಷ್ಟನಾದ ಆ ಕೌರವನನ್ನು ನಾಯಿಯಂತೆ ಓಡಿಸುವೆ. ಎದುರುನಿಂತರೆ, ಅವನನ್ನು ಹೊಡೆದು ಕೊಲ್ಲುವೆನು. ನನ್ನ ಹಿರಿಯರಿಗೆ ನ್ಯಾಯವಾಗಿ ಬರಬೇಕಾದ ರಾಜ್ಯವನ್ನು ವಶಪಡಿಸಿ ಸ್ಥಿರಗೊಳಿಸುವೆನು. ತಾಯೇ ಅದಕ್ಕಾಗಿ ಅಪ್ಪಣೆ ಮಾಡಿ ನನ್ನನ್ನು ಕಳುಹಿಕೊಡು ಎಂದು ಆ ಶಿವನ ಕುಮಾರನಂತೆ ಮಾತಾಡುವನು. ಅಲ್ಲದೆ, ಈ ಕಾರ್ಯಕ್ಕಾಗಿ ಒತ್ತಾಯದಿಂದ ಪೀಡಿಸುವನು.

(ಗದ್ಯ) ಈ ರೀತಿಯೂ ಅಕ್ರೂರನು ಅಭಿಮನ್ಯುವನ್ನು ಸಹಜವಾಗಿ ಅಭಿವರ್ಣಿಸಿದನು. (ಆಗ ಅರ್ಜುನನು)

ಕಂದ॥ ಸುತನಾ ವೀರೋಕ್ತಿಗಳಾ
ಪ್ರತಿವಚನಮೆ ವೀರಪುಳಕವರ್ಧಕಮೆನುತುಂ
ಪತಿಯಂತೆ ಪೊರೆವ ಕೃಷ್ಣನ
ನತಿಮುದದಿಂ ಪೊಗಟ್ಟು ಪೊಗಟ್ದನಾ ಸಿತತುರಗಂ ॥೩೪॥

ನೋಯುತ್ತೆ ತರ್ಗಲಾ ಕುರು
ರಾಯಂ ಹರಿಯೇಳ್ಗೆಗೆಮಗೆ ಕಾರಣಮಕ್ಕುಂ
ತೋಯಧಿಯೊಳ್ ಖಳತತಿ ನಾ
ರಾಯಣರಾ ದೇವಗಿರಿಗೆ ಕಾರಣರಲ್ತೇ? ॥೩೫॥

ಉ.ಮಾ. ಕುಳ್ಳಿರಲಲ್ಲಿ ತರ್ಗಿ ಫಳಮಂ ಕುಡುಗುಂ ತರು ದಿಟ್ಟಿಯಿಟ್ಟೊಡಾ
ಬಳ್ಳಿಯೆ ಬಾಗಿ ಸತ್ತಿಗೆವೊಲಿರ್ಕುಮದೆಲ್ಲಿಯುಮುಂಟು ನೀರ್ವೊನಲ್
ಕೊಳ್ಳದೆ ವೈರಮಂ ಮೆಱೆಗುಮ್ಮೃಗಾವಳಿ ದಕ್ಷಿಣಾನಿಲಂ
ತೆಳ್ಳಿಪನೆಮ್ಮ ಸೇದೆಯನಿವೇಂ ಪ್ರಭುವೋಪಿನೊಳಲ್ಲದಕ್ಕುಮೇ? ॥೩೬॥

ಶಾ.ವಿ. ಆತಂ ಮಾನುಷರೂಪನಾಂತ ವಿಭು ಕೃಷ್ಣಂ ಶೂಲಿಚಿತ್ತಾತ್ಮನಿ
ನ್ನಾತಂ ಭೂವಲಯೋನ್ನತ ಸ್ಥಿತಿರತಂ ಸದ್ಧರ್ಮರಕ್ಷಂ ನಮ
ಜ್ಜಾತಕ್ಕಂ ಕುಱುಪಾಗದಂ ಮನದಿನೆಮ್ಮಂ ನಚ್ಚುತಿರ್ಪಂ ಮಹೀ
ನಾಥಂ ಖ್ಯಾತನೆ ಎಮ್ಮ ಕಾರ್ಯಪಥದೊಳ್ ರತ್ನಪ್ರದೀಪೋಪಮಂ ॥೩೭॥

೩೪. ತನ್ನ ಮಗನ ವೀರೋಕ್ತಿಗಳ ಪಡೆನುಡಿಯೇ ವೀರ ರೋಮಾಂಚನವನ್ನು ಹೆಚ್ಚಿಸುವಂತಹದಾಗಿದೆ ಎನ್ನುತ್ತ ಅರ್ಜುನನು ತನ್ನ ಒಡೆಯನಂತೆ ಕಾಪಾಡತಕ್ಕ ಕೃಷ್ಣನನ್ನು ಅತ್ಯಂತ ಸಂತೋಷದಿಂದ ಹೊಗಳಿ, ಮತ್ತೆ ಹೀಗೆ ಹೊಗಳಿದನು –

೩೫. ಸಮುದ್ರಮಥನದಲ್ಲಿ ದೈತ್ಯರು ಉಪಟಳವಿತ್ತಾಗ ಶ್ರೀಮನ್ನಾರಾಯಣನು ಮಂದರಾದ್ರಿಯನ್ನು ಧರಿಸಿ ಕಾಪಾಡಿದಂತೆ, ಕೌರವರು ಮತ್ಸರದಿಂದ ನಮಗೆ ತೊಂದರೆ ಕೊಟ್ಟಾಗ ಶ್ರೀ ಕೃಷ್ಣನು ನಮ್ಮ ಅಭ್ಯುದಯಕ್ಕೆ ಕಾರಣನಾದನು.

೩೬. ನಾವು ಎಲ್ಲಿಯಾದರೂ ಕುಳಿತಿದ್ದರೆ, ಮರವು ತಾನೆ ಬಾಗಿ ಹಣ್ಣನ್ನು ನೀಡುವುದು. ಆ ಕಡೆ ನೋಡಿದಾಗ ಬಳ್ಳಿ ತಾನೇ ಬಾಗಿ ಕೊಡೆಯುಂತೆ ನೆರಳನ್ನು ಒದಗಿಸುವುದು. ಹೋದ ಕಡೆಯಲ್ಲೆಲ್ಲ ನೀರಿನ ಹರಿವು ಇರುತ್ತದೆ. ಮೃಗಗಳು ಜಾತಿವೈರವನ್ನು ತೊರೆದಿರುತ್ತವೆ. ನಮಗಾದ ಆಯಾಸವನ್ನು ದಕ್ಷಿಣದಿಕ್ಕಿನಿಂದ ಬೀಸುವ ಮಂದಮಾರುತವು ಕಡಮೆಗೊಳಿಸುವುದು. ಇವೆಲ್ಲವೂ ಆ ಶ್ರೀಪ್ರಭುವಾದ ಕೃಷ್ಣನ ಪ್ರೀತಿಯಿಂದಲೇ ಆಗುತ್ತಿವೆ.

೩೭. ಆತನು ಮಾನವರೂಪ ತಳೆದ ಒಡೆಯ ಶ್ರೀಕೃಷ್ಣನು. ಶಿವನ ಮನಸ್ಸೆ ಆತ್ಮವಾಗಿರುವವನು. ಭೂಮಿಯ ಉನ್ನತ ಸ್ಥಿತಿಯಲ್ಲಿ ತತ್ಪರನು. ಸದ್ಧರ್ಮ ರಕ್ಷಿತನು. ಭಕ್ತರಿಗೆ ಕೂಡಾ ಗುರುತಾಗದವನು. ಅಂತಹ ಕೃಷ್ಣನು ಮನಸ್ಸಿನಲ್ಲಿ ನಮ್ಮನ್ನು ಪ್ರೀತಿಸುತ್ತಿದ್ದಾನೆ. ಭೂಮಿಗೆ ಒಡೆಯನೂ ಕೀರ್ತಿಯುತನೂ ಆಗಿರುವವನು. ನಮ್ಮ ಕಾರ್ಯದ ದಾರಿಯಲ್ಲಿ ಬೆಳಕನ್ನು ನೀಡುವ ರತ್ನದೀಪದಂತಿರುವವನು.

ಕಂದ॥ ಬರವೇತರ್ಕಾದುದು ಹರಿ
ನಿರವಿಸಿದನೊ ನೀನೆ ಬಂದೆಯೋ ಪರಿಯೇಂ ಮೇ
ಣೊರೆಯ 'ನಕಾರ್ಯಾದನ್ಯೇ
ನಿರತೋ ಜನ' ಎಂಬರಲ್ತೆ ಬಲ್ಲರ್ ಜಗದೊಳ್ ॥೩೮॥

ಗದ್ಯ॥ ಎಂದು ನುಡಿದಾಗಳ್ –

ಕಂದ॥ ಜಗದಾಣ್ಮನನಭಿವರ್ಣಿಪ
ಮೊಗಮಂ ಸೇರ್ದಂತಚಿಂದೆ ಬೆಳ್ವೆಳಗಿನಿತುಂ
ಒಗೆದಪುದೆನೆ ಸುಲಿಪಲ್ ಜಗ
ಜಗಿಸೆ ನರಂಗೊರೆದನಿಂತುಟಂದಕ್ರೂರಂ ॥೩೯॥

ಪ್ರಿಯಮಂ ಸತ್ಯಮುಮಂ ವಾ
ರ್ತೆಯನೊರೆದಾನೊರೆವೆನೀಗಳತಿಶಯ ಗುಣಮಂ
ಅಯ ನಯಯುತಮಂ ಮನಕ
ಪ್ರಿಯಮಾದೊಡೆಯುಂ ಸುಪಥ್ಯಮೆನಿಕುಮಮೋಘಂ ॥೪೦॥

ಪಗೆಯಲ್ ತಗದ ನಿನತು ನ
ಲ್ವಗೆಯೊಳ್ಗಿಳೆ ಪೊಟ್ಟುಮೊಗೆಗುಮಿನ್ನೀ ಬೆಸದಿಂ
ಜಗಳಂ ಮಲಯ ಮಹೀಜಂ
ಜಗದೊಳ್ ಕಂಪಟಿಯೆ ಬಾರ್ಕೆಯೇನಂತಪ್ಪಯ್ ॥೪೧॥

೩೮. ನಿನ್ನ ಬರವು ಏತಕ್ಕಾಯಿತು? ಕೃಷ್ಣನ ನಿರೂಪದಿಂದ ಬಂದೆಯಾ? ಅಥವಾ ನೀನೇ ಬಂದೆಯಾ? ಸಂಗತಿಯೇನು? ಹೇಳೋ. ಜನವು ಕಾರ್ಯದ ಹೊರತಾಗಿ ಇರುವುದಿಲ್ಲ ಎಂದು ಲೋಕದಲ್ಲಿ ಬಲ್ಲವರು ಹೇಳುವರಲ್ಲವೆ? ಹೀಗೆ ನುಡಿದಾಗ–

೩೯. ಲೋಕದೊಡೆಯನನ್ನು ಅಭಿವರ್ಣಿಸುವ ಮುಖವನ್ನು ಸೇರಿದುದರಿಂದಲೇ ಇಷ್ಟೊಂದು ಬೆಳ್ಳಗಿನ ಬೆಳಕು ಉಂಟಾಗುವುದು ಎಂಬಂತೆ ಅವನ ಶುಭ್ರವಾದ ಹಲ್ಲುಗಳು ಹೊಳೆಯುತ್ತಿರಲು, ಅಕ್ರೂರನು ಅರ್ಜುನನಿಗೆ ಹೀಗೆಂದನು.

೪೦. ಪ್ರೀತಿಕರವೂ ಸತ್ಯವೂ ಆದ ವೃತ್ತಾಂತವನ್ನು ನಿನಗೆ ನಾನು ತಿಳಿಸಿದೆನು. ಇನ್ನೀಗ ಅತಿಶಯವಾದ ಗುಣದಿಂದ ಕೂಡಿದ ಜ್ಞಾನ ಮತ್ತು ನಯಯುಕ್ತವಾದುದನ್ನು ನಿನ್ನ ಮನಸ್ಸಿಗೆ ಅಪ್ರಿಯವಾಗುವುದಾದರೂ ಹೇಳಲಿದ್ದೇನೆ. ಇದು ನಿನಗೆ ವ್ಯರ್ಥವಾಗದುದು ಮತ್ತು ಒಳ್ಳೆಯ ಹಿತಕರವಾದುದು.

೪೧. ಈಗಿನ ನಿನ್ನ ಕಾರ್ಯದಿಂದ ದ್ವೇಷಿಸಲು ತಕ್ಕುದಲ್ಲದ ನಿನ್ನ ಒಳ್ಳೆಯ ಗೆಳೆತನವು ಹೂಳಿ ಹೋಗುವುದು. ಜಗಳವುಂಟಾಗುವುದು! ಲೋಕದಲ್ಲಿ ಶ್ರೀಗಂಧವು ಪರಿಮಳವಿಲ್ಲದಾದರೆ ಪ್ರಯೋಜನವೇನು? ನೀನು ಹಾಗೆ ಆಗುವೆಯಾ?

(ಗದ್ಯ) ಅದು ಹೇಗೆಂದರೆ – ಸ್ನೇಹಿತನ ಶತ್ರುವಿನ ಮೇಲಣ ಸ್ನೇಹವು ಸ್ನೇಹಿತನಲ್ಲಿ ವೈರವನ್ನುಂಟು ಮಾಡುವುದು ಎಂಬುದನ್ನು ಮರೆಯಬೇಡ. ನೀನು ಗಯನನ್ನು ಪ್ರೀತಿಸಿದೆಯಾದರೆ, ಶ್ರೀಕೃಷ್ಣನಿಗೆ ವೈರಿಯಾಗುವುದು ನಿಶ್ಚಯ. ಹಾಗೆ ಆಗಬೇಡ. ಅವನಲ್ಲಿ ಘರ್ಷಣೆ ಮಾಡಬೇಡ. ಗಯನನ್ನು ಕೊಲ್ಲಲು ಪ್ರತಿಜ್ಞೆಮಾಡಿದ ಕೃಷ್ಣನ ಪ್ರತಿಜ್ಞೆ ಎಂದಿಗೂ ವ್ಯರ್ಥವಾಗದು. ಮೊದಲೇ ನೀನು ಇದನ್ನೆಲ್ಲ ವಿಚಾರಿಸಿಕೊಂಡು

ಗದ್ಯ॥ ಅದೆಂತನೆ – ಓಪನ ಪಗೆಯೋಪೋಪನೊಳ್ ಪಗೆಯನೊಡಕಿಕುಮೆಂಬುದಂ ಮಱಿಯದಿರ್ – ನೀಂ ಗಯನನೋವೆ ಗೋಪತಿಲಕಂಗೆ ಪಗೆಯೆ ನಿಕ್ಕುವಂ ಅಂತಾಗದಿರ್ ತಾಗದಿರ್ – ಗಯನಂ ಕೊಲ್ಲಲ್ ಪೂಣ್ದ ಹರಿಯ ಸೂರುಳೆಂದುಂ ಬಂಜೆಯಾಗದು – ಮೊದಲೊಳಿದನೆಲ್ಲಮಾರಯ್ದು ಗಯನಂ ಪತ್ತುವಿಡಿದಪರಾಧಂ ತಾನೆನ್ನ ಸಂದುವಾತಿಂದೆಯುಂ ಬಿಡದೊಡೆಯಸಕಟಿದು ಮೀರಿಮಿಂಟುಗುಮದಱಿನದಾಗದಂತೆ ಗೆಯ್ದಾ ಹರಿಗೆ ಗಯನನಿತ್ತು ಪೊಡೆವಟ್ಟು ಸೊಗಂಬಾೞ್ – ಇಂತಿದನೊರೆಯಲೆಂದಾಂ ದೂದುವಂದೆಂ ಶ್ರೀಕೃಷ್ಣನ ಬೆಸದಿಂದೆಂಬುದುಂ, ನರನಿಂತೆಂದಂ –

ಕಂದ॥ ಪೂಣ್ಬನ್ನೆವರಂ ಪೆಱನೋಲ್
ಕಾಣ್ಬೆಂ ಪೂಣ್ದಾ ಬೞಿಕ್ಕೆ ಹರಣದಿನಧಿಕಂ
ಮಾಣ್ಬೆನೆ ಶರಣಾಗತನಂ
ಜಾಣ್ಬೆಯಮಂ ಗೆಯ್ಯದೆಯ್ದುಪುಗುದೋರಗೆಯಂ ॥೪೨॥

ಮ.ವಿ. ಅರವಕ್ಕಳ್ಗಱಿಮೆಂದು ಬಂದು ಮಱಿಹೊಕ್ಕಾತಂಗೆ ಧೈರ್ಯಂಗುಡಲ್
ನೆರೆದೆಂ ನಲ್ಲೆಗೆಯಾತನಂ ಪಗೆಯಲಲ್ತಿಂ ದೈವಮೊತ್ತೈಸಲಾ
ಹರಿಯೊಳ್ ಕಾದುವೆನಿಂದ್ರಮುಖ್ಯರೊಳಮಾಂ ಮಾರಾಂಪೆನಾ ಪಾರ್ವತೀ
ಶ್ವರನಂ ತಳ್ತಿಱಿವೆಂ ದಲೆನ್ನ ಶಪಥಂ ಬೀಯಲ್ ಸೊಗಂಬಾೞ್ವೆ ನೇ? ॥೪೩॥

ಗಯನನ್ನು ಬಿಟ್ಟುಬಿಡದ ಅಪರಾಧವು ನನ್ನ ಸಂಧಾನದ ಮಾತಿನಿಂದಾದರೂ ಬಿಡದೆ ಇದ್ದರೆ, ಅದು ಕೈಮೀರಿ ಹದಗೆಡಿಸುವುದು. ಆದುದರಿಂದ ಹಾಗೆ ಆಗದಂತೆ ಮಾಡಿ. ಆ ಕೃಷ್ಣನಿಗೆ ಗಯನನ್ನು ಕೊಟ್ಟು ವಂದಿಸಿ, ಸುಖಿಯಾಗು. ಹೀಗೆ ಇದನ್ನು ನಿನಗೆ ತಿಳಿಸಲಿಕ್ಕಾಗಿ ನಾನು ಕೃಷ್ಣನ ಆಜ್ಞೆಯಂತೆ ದೂತನಾಗಿ ಬಂದಿದ್ದೇನೆ ಎಂದು ಅಕ್ರೂರನು ನುಡಿದಾಗ ಅರ್ಜುನನು ಹೀಗೆಂದನು –

೪೨. ನಾನು ಪ್ರತಿಜ್ಞೆ ಮಾಡುವ ತನಕ, ಆಶ್ರಯಾಪೇಕ್ಷಿಯನ್ನು ಬೇರೆಯವನಂತೆ ಕಾಣತಕ್ಕವನು. ಅವನ ಪ್ರಾಣರಕ್ಷಣೆಗಾಗಿ ಪ್ರತಿಜ್ಞೆ ಮಾಡಿದ ಮೇಲೆ ಅವನು ನನ್ನ ಪ್ರಾಣಕ್ಕಿಂತಲೂ ಹೆಚ್ಚಿನವನು! ಶರಣಾಗತನನ್ನು ನಾನು ಬಿಟ್ಟುಬಿಡುವೆನೆ? ನಿನ್ನ ಬುದ್ಧಿವಂತಿಕೆಯನ್ನು ವ್ಯಯಮಾಡದೆ ನಡೆ! ದ್ವಾರಕೆಗೆ ತೆರಳು!

೪೩. ರಾಜಕುಮಾರರಾದವರಿಗೆ ಇದು ಧರ್ಮ (ಕರ್ತವ್ಯ) ಎಂದು, ಮರೆಹೊಕ್ಕಾತನಿಗೆ ಧೈರ್ಯನೀಡಲು ಒದಗಿರುತ್ತೇನೆ. ಒಳ್ಳೆಯ ಗೆಳೆಯನ ಮೇಲೆ ಹಗೆತನಕ್ಕಾಗಿ ಹಾಗೆ ಮಾಡಿದ್ದಲ್ಲ. ಇನ್ನು ದೈವದ ಒತ್ತಾಯವಾದರೆ, ಆ ಕೃಷ್ಣನಲ್ಲಿಯೂ ಕಾದಾಡುವೆನು, ತಂದೆಯಾದ ಇಂದ್ರನೇ ಮೊದಲಾದವರೊಡನೆಯೂ ಎದುರಾಗಿ ಕಾದುವೆನು. ಆ ಪಾರ್ವತೀಪತಿಯಾದ ಶಿವನೊಡನಾದರೂ ತಿವಿದಾಡುವೆನು, ಇದು ನಿಶ್ಚಯ. ನನ್ನ ಪ್ರತಿಜ್ಞೆಗೆ ಭಂಗವುಂಟಾದರೆ, ಸುಖದಿಂದ ಬಾಳುವೆನೇ? (ಗದ್ಯ) ಹೀಗೆ ನುಡಿದ ಅರ್ಜುನನ ಎದುರುಮಾತಿನಿಂದ ತನ್ನ ದೌತ್ಯಕಾರ್ಯವು ಹಸು ಕಚ್ಚಿ ಸೆಳೆದ ಚಿಕ್ಕ ಬಾಳೆಗಿಡದಂತಾಗಲು, ಮತ್ತೂ ಅದನ್ನು ಬೇರೂರಿಸಲು ಮನಸ್ಸು ಮಾಡಿ ಅಕ್ರೂರನು ಹೀಗೆಂದನು –

ಗದ್ಯ॥ ಎಂದರ್ಜುನನ ಮಾರ್ನುಡಿಯಿಂ ತನ್ನ ದೂದುಗಜ್ಜಂ ಪಸು ಕರ್ಚೆ ಸೆಳೆದ
ಕಿರುಬಾಟಿಗಿಡುವಂತಾಗೆ ಮತ್ತಮುಮದಂ ಬೇರೂರಿಸಲ್ ಬಗೆದಿಂತೆಂದಂ –

ಉ.ಮಾ. ಚಕ್ರಿಯ ಶಕ್ತಿಯುಂ ವಿದಿತಶಾರ್ಂಗಧನುರ್ಧರನೇಳ್ಗೆಯೊಂದಿದಾ
ವಿಕ್ರಮಮುಂ ಗದಾನ್ವಿತನ ಮೋದಿಕೆಯುಂ ನಿನಗೇತಕಾತನಾ
ಶಕ್ರನುಮಂ ಬೆದರ್ಕೆಗೊಳಿಪಗ್ಗದ ಬಂಟರ ಕೂರ್ ಸರಲ್ಗಳುಂ
ವಕ್ರಿತಮಾಗದೇರ್ಗೊಳಿಸೆ ಬಗ್ಗದ ಕೂರದ ಚೆನ್ನಮೊಂಗರಾರ್? ॥೪೪॥

ಕಂದ॥ ಬಿಡದೊಡೆ ಗಯನಂ ಕಾಡೊಳ್
ಪೊಡವಿಯನೊಳವೊಕ್ಕೊಡಂ ಬಿಡಂ ಜಗದೊಡೆಯಂ
ಕಡುವಡೆಯೊಡನೆಯೆ ನಡೆತಂ
ದಡಿಗಿಡಿಕುಂ ನಿನ್ನ ಮರವ ಬಿಱುಗಾಳಿಯ ವೋಲ್ ॥೪೫॥

ದೇವದ್ವೇಷಿಗಳಂ ವಸು
ದೇವಸುತಂ ಕೊಂದು ಖೞಳಕಂಸನುಮಂ ತಾ
ನೋವದೆ ಮಾವನನಟಿದಂ
ಭಾವನನೇಂ ನಿನ್ನನುಟಿವನೆಂದೇ ಬಗೆವಯ್ ॥೪೬॥

ಗದ್ಯ॥ ಎಂದಕ್ರೂರನುಸುರ್ದಾಗಳ್ ಬೀರ ಮಾಮಸಕಂ ಮಿಗೆ ಚುರ್ಚುಂಗೊ
ಳ್ಳಿಯಂ ನುಱಿದು ಕೆದರ್ದಂತಾಗೆ ಸೈರಿಸಿದೊಡಂ ಸೈರಿಸಲಾಱದೆ–

೪೪. ಆ ಚಕ್ರಪಾಣಿಯ ಶಕ್ತಿಯೂ ಶಾರ್ಂಗ ಧನುಸ್ಸನ್ನು ಧರಿಸಿದಾತನ ಏಳಿಗೆಗೊಂಡ ಪರಾಕ್ರಮವೂ ಗದೆಯನ್ನಾಂತವನ ಹೊಡೆತವೂ ನಿನಗೆ ಬೇಕಾಗಿಲ್ಲ. ಇಂದ್ರನನ್ನಾದರೂ ಬೆದರಿಸತಕ್ಕ, ಆ ಕೃಷ್ಣನ ಬಂಟರ ಚೂಪಾದ ಬಾಣಗಳು ನೇರವಾಗಿ ಬಂದು ಗಾಯಗೊಳಿಸಿದಾಗ ಬಾಗದಿರುವ, ಪ್ರೀತಿ ಮಾಡದಿರುವ ವೀರರು ಯಾರಿದ್ದಾರೆ!

೪೫. ಗಯನನ್ನು ನೀನು ಬಿಟ್ಟುಗೊಡದಿದ್ದರೆ ಕಾಡಿನೊಳಗೆ, ನೆಲದೊಳಗೆ ಹೊಕ್ಕರೂ ಜಗದೊಡೆಯನಾದ ಕೃಷ್ಣನು ಬಿಡಲಿಕ್ಕಿಲ್ಲ! ಕಠಿನವಾದ ಸೈನ್ಯ ಸಹಿತ ಬಂದು, ಮರವನ್ನು ಬಿರುಗಾಳಿ ಹೇಗೋ ಹಾಗೆ ನಿನ್ನನ್ನು ಕೆಳಗೆ ಬೀಳಿಸುವನು!

೪೬. ವಸುದೇವನ ಮಗನಾದ ಶ್ರೀಕೃಷ್ಣನು ದೇವಶತ್ರುಗಳಾದ ರಾಕ್ಷಸರನ್ನು ಸಂಹರಿಸಿ, ದುಷ್ಟ ಕಂಸನನ್ನು ಕೂಡ – ಮಾವನೆಂದು ಸಲುಗೆ ತೋರಿಸದೆ, ಪ್ರೀತಿಯಿಡದೆ ಕೊಂದಿರುತ್ತಾನೆ. ಇನ್ನೀಗ ಭಾವನಾದ ನಿನ್ನನ್ನು ಬಿಟ್ಟು ಬಿಡುವನೆಂದು ಭಾವಿಸುವೆಯಾ? (ಗದ್ಯ) ಹೀಗೆಂದು ಅಕ್ರೂರನು ಹೇಳಿದಾಗ ಅರ್ಜುನನು ವೀರತ್ವದ ಮಹಾರೋಷವು ಹೆಚ್ಚಾಗಲು, ಉರಿಯುವ ಕೊಳ್ಳಿಯನ್ನು ಸುರಿದು ಕೆದರಿದಂತಾಗಲು, ಸೈರಿಸಿದರೂ ಸೈರಿಸಲಿಕ್ಕಾಗದೆ ಹೀಗೆಂದನು.

ಕಂದ॥ ಮಾಣ್ ಮಾಣ್ ಸಲ್ಲದುದಲ್ಲದು
ದಣ್ಮಿನ ಬಣ್ಣನೆಯ ಮಾತು ಕಬ್ಬಮನೊರೆವಾ
ಜಾಣ್ಮೆಯದಂತಿರ್ಕೆಮ ನಿ
ನ್ನಾಣ್ಮನನಾಗಸದೊಳಿಡುವ ನಿನ್ನನ್ನರದಾರ್? ॥೪೭॥

ಹರಿ ನೀರನಡುವಿನಂಬರ
ಚರ ಕೀಟಕೆ ತೀರದರ್ಜುನ ದ್ರುಮ ಶಾಖಾ
ಕರಮಂ ದಿಂಕಿಡೆ ನೆಱಿಗುಮೆ?
ಹರಿಗಳ್ಕಱೆನಂದುಮೆನ್ನ ಪೂಣ್ದಿದನುೞಿಯೆಂ ॥೪೮॥

ಸೊರ್ಕಿಂ ಸುರರಂ ಪೀಡಿಪ
ರಕ್ಕಸರೞಿಯಲ್ ಜನರ್ಕಳೆಱಗಲ್ಕುರ್ಕೇಂ
ಮಿಕ್ಕೆನ್ನೊಳ್ ಮಲೆದಾಂತೊಡೆ
ಸಕ್ಕರೆ ಬೆಮೆಯಿಂದೆ ಮಣಲನಗಿವಂತಕ್ಕುಂ ॥೪೯॥

ಗದ್ಯ॥ ಎಂದು ಧನಂಜಯನಂಜದೆ ಮಾರ್ನುಡಿದೊಡೆ ಸಂಧಿಯ ಕೀಲ್ಮುಱಿದುದೆಂದಕ್ರೂರಂ ಮರಳ್ದಾ ನಂದನಸೂನುಗಿದಂ ಕೇಳಿಸೆ– "ಅಯ್ದುಂ ಪಗಲ್ಗಳ್ ಪೂಣ್ದು ಮುಡಿದುವು ನಾಳೆಯೆ ಪೊಱಮಡುಗೆ ಮೊನೆಗೆ ಬಲ್ಲಣೆ ಪುರದಿಂ" ದೆಂದು ಸೇನಾಪತಿಯಪ್ಪ ಸಾತ್ಯಕಿಯಂ ಬೆಸಸಲೊಡಂ – ರಾಜಾಜ್ಞೆಯಿಂ ಮೊನೆಗಾಳೆಗಳ್ ಸೂಱಿಱಿತು ಮೊಳಗುವುದುಂ – ಸೇನಾಭಟರಂ ನೆರೆಯಿಪ ಸೂಟಾಯ್ತರ ಡಿಂಗುಳಿಯಾ ಪುರದೊಳೆತ್ತಂ ಸುತ್ತುತ್ತಿರೆಯಿರೆ –

೪೭. ನಿಲ್ಲಿಸು, ನಿಲ್ಲಿಸು! ಪರಾಕ್ರಮದ ನಿನ್ನ ವರ್ಣನೆಯ ಮಾತು ತಕ್ಕುದಲ್ಲ. ಕಾವ್ಯರಚನೆ ಮಾಡುವ ರೀತಿಯ ನಿನ್ನ ಜಾಣ್ಮೆ ಹಾಗಿರಲಿ, ನಿನ್ನ ಒಡೆಯನನ್ನು ಆಕಾಶದಲ್ಲಿಗೆ ಏರಿಸುವ ನಿನ್ನಂಥವರು ಬೇರೆ ಇದ್ದಾರೆಯೆ?

೪೮. ನೀರ ನಡುವಿನಲ್ಲಿ (ದ್ವಾರಕೆಯಲ್ಲಿ) ಇರತಕ್ಕ ಹರಿಯು (ಕಪ್ಪೆಯು) ದಡದಲ್ಲಿರತಕ್ಕ ಅರ್ಜುನವೃಕ್ಷದ ಕರಕ್ಕೆ (ಕೊಂಬೆಗೆ) ನೆಗೆಯಲು ಸಾಧ್ಯವೆ? ನಾನು ಹರಿಗೆ (ಕಪ್ಪೆಗೆ ಸಮಾನನಾದ ಕೃಷ್ಣನಿಗೆ) ಹೆದರೆನು. ಪ್ರತಿಜ್ಞೆ ಮಾಡಿದುದನ್ನು ಈಡೇರಿಸದೆ ಇರಲಾರೆನು!

೪೯. ಸೊಕ್ಕಿನಿಂದ ದೇವತೆಗಳನ್ನು ಪೀಡಿಸತಕ್ಕ ರಾಕ್ಷಸರು ನಾಶವಾಗಲು, ಜನರು ಪಾದಕ್ಕೆ ವಂದಿಸಲು, ಅಷ್ಟೊಂದು ಹಿಗ್ಗುವಿಕೆ ಏಕೆ? ಅದನ್ನು ಮೀರಿ ಈಗ ನನ್ನನ್ನು ಎದುರಿಸಿ ಯುದ್ಧಕ್ಕೆ ನಿಂತರೆ ಸಕ್ಕರೆ ಎಂಬ ಭ್ರಮೆಯಿಂದ ಮಳಲನ್ನು ತಿನ್ನುವಂತೆ ಆಗುವುದು!

(ಗದ್ಯ) ಹೀಗೆ ಅರ್ಜುನನು ನಿರ್ಭಯನಾಗಿ ಮಾರ್ನುಡಿದಾಗ, ಸಂಧಿಯ ಕೀಲು ಮುರಿದು ಹೋಯಿತೆಂದು ಅಕ್ರೂರನು ಹಿಂದೆರಳಿ, ಶ್ರೀಕೃಷ್ಣನಿಗೆ ಸಂಗತಿಯನ್ನು ತಿಳಿಸಿದನು. ಆಗ ಕೃಷ್ಣನು "ಇದೀಗ ಶಪಥ ಮಾಡಿ ಐದು ಹಗಲುಗಳು ಮುಗಿದಿವೆ. ಆದುದರಿಂದ ನಾಳೆಯೇ ನಮ್ಮ ಪಟ್ಟಣದಿಂದ ಯುದ್ಧಕ್ಕಾಗಿ ದೊಡ್ಡ ಸೈನ್ಯ ಹೊರಡಲಿ" ಎಂದು ಸೇನಾಪತಿಯಾದ ಸಾತ್ಯಕಿಯನ್ನು ಆಜ್ಞಾಪಿಸಿದನು. ರಾಜಾಜ್ಞೆಯಿಂದ ಯುದ್ಧ ಕಹಳೆಗಳು ಅನುಕ್ರಮವಾಗಿ ಮೊಳಗಿದವು. ಸೈನ್ಯದ ಯೋಧರನ್ನು ಕೂಡಿಸುವ ಡಂಗುರಕಾರರ ಹಿಂಡು ಆ ಪಟ್ಟಣದಲ್ಲೆಲ್ಲಾ ಸುತ್ತುತ್ತಿದ್ದರು.

ಕಂದ॥ ನಡುಬಾನೋಲಗಮಣೆಯಿಂ
ಪಡುವಾ ಮನೆಗೆಂದು ಪಗಲರಸನಿಳಿಯುತ್ತುಂ
ಬಿಡದೆ ತಣೆಯುತ್ತುಮಿರ್ದಂ
ತೊಡಂಗಿದುದು ಬಿಸಿಲಡಂಗಲೆಲರುಂ ತೀಡಲ್ ॥೫೦॥

ಇನನ ಬರವಜೆತು ಕುಂಕುಮ
ಘನರಸಮಂ ಸೂಸಿ ಪವಳದೋರಣದಿಂ ಮುಂ
ಮನೆಯಂ ಕಯ್ಗೆಯ್ದಳ್ ಪಡು
ವನಿಯೆಯೆನಿಸಿ ಸಂಜೆಗೆಂಪು ರಂಜಿಸಿತಾಗಳ್ ॥೫೧॥

ಸಿರಿಯ ನೆಲೆಮನೆಯ ಸಿರಿಯಂ
ಕರಗತಮೆಸಗಲ್ಕೆ ಬರೆ ಮಧುವ್ರತಚೋರಂ
ಸಿರಿಯಾಳ್ಗಳ್ ತಿಳಿದದನತಿ
ಭರದಿಂ ಪಡಿಯಿಕ್ಕಿದಂತೆ ಮುಗಿದುದು ಕಮಳಂ ॥೫೨॥

ಗಾಳಿಗೆ ಮೆಯ್ಯೊಡ್ಡುತ್ತೆ ಪಗ
ಲೂಳಿಗವೇಸಱಿನೆ ಕಳೆವ ಪೊಟಿಲ ಜನರ್ಕಳ್
ಮೇಳಯಿಸಿ ಸೊರ್ಕುವ ಕುಮಾ
ರಾಳಯಮಂ ಪುಗೆ ಮನೋಜ್ಞಸಂಧ್ಯಾಸಮಯಂ ॥೫೩॥

೫೦. ಹಗಲೊಡೆಯನಾದ ಸೂರ್ಯನು ಆಕಾಶ ಮಧ್ಯದ ಓಲಗದ ಪೀಠದಿಂದ ಇಳಿಯುತ್ತಾ ಮಲಗುವ ಮನೆಗಾಗಿ ಬರುತ್ತಾ ತಣ್ಣಗಾಗುತ್ತಿದ್ದನು. ಗಾಳಿ ಬೀಸುತ್ತಿದ್ದಿತು. ಬಿಸಿಲು ಅಡಗತೊಡಗಿತು.

೫೧. ಪಶ್ಚಿಮಾಂಗನೆಯು ಇನನ (ಗಂಡನ, ಸೂರ್ಯನ) ಬರುವಿಕೆಯನ್ನು ತಿಳಿದು ಕುಂಕುಮದ ಘನವಾದ ರಸವನ್ನು ಚೆಲ್ಲಿ, ಹವಳದ ತೋರಣದಿಂದ ಮನೆಯ ಮುಂಗಡೆಯನ್ನು ಶೃಂಗರಿಸಿದಳು ಎಂಬಂತೆ ಸಂಧ್ಯಾರಾಗವು ಸೊಗಸಾಗಿ ತೋರಿತು.

೫೨. ಲಕ್ಷ್ಮೀದೇವಿಯ ನೆಲೆಯಾದ ಕಮಲದ ಸಂಪತ್ತನ್ನು ವಶಪಡಿಸಲು ತುಂಬಿಯೆಂಬ ಕಳ್ಳನು ಬರುವುದನ್ನು ಲಕ್ಷ್ಮಿಯ ಸೇವಕರು ತಿಳಿದು ಬಲು ಬೇಗನೆ ಬಾಗಿಲು ಮುಚ್ಚಿದ ಹಾಗೆ, ತಾವರೆಗಳು ಮುಚ್ಚಿಕೊಂಡವು.

೫೩. ಹಗಲುಕೆಲಸದ ಬೇಸರವನ್ನು ಕಳೆಯತಕ್ಕ ಪಟ್ಟಣಿಗರು ಗಾಳಿಗೆ ಮೈಯೊಡ್ಡುತ್ತಾ, ಗುಂಪುಗುಂಪಾಗಿ ಸೊಕ್ಕುವಂತಹ (ಆಡುವಂತಹ) ಕುಮಾರರ (ಮಕ್ಕಳ, ಕೆಟ್ಟ ಮನ್ಮಥನ) ಮನೆಯನ್ನು ಪ್ರವೇಶಿಸಿದರು. ಆಗ ಅದು ಮನೋಹರವಾದ ಸಂಜೆಯೆನಿಸಿತು.

ಅಂಬರಚರರ್ಗಳ ಸೊಡರ್ಗಳಿ
ವೆಂಬಂತಂಬರದಜೆಲ್ಗಳುಂ ಮನೆಮನೆಯೊಳ್
ತುಂಬಿದುವು ದೀಪಿಕಾನಿಕು
ರುಂಬಂಗಳ್ ಬಾಸಣಿಸಿತು ಕಟ್ತಲೆಯೆಳೆಯಂ ॥೫೪॥

ಇದು ಮಟೆ ಮಿಂಚು ಗುಡುಗುವಿ
ಲ್ಲದ ಸೋಂಕದ ಕಾರಮುಗಿಲ ಮುಸುಕಿದು ಕಣ್ ಚು
ರ್ಚದ ಕಿರ್ಚಿಲ್ಲದುಸಿರ್ಗ
ಟ್ಟದ ಪೊಗೆಯೊದವೆನಿಸಿ ಮರ್ಬು ಪರ್ಬಿತ್ತಾಗಳ್ ॥೫೫॥

ಸ್ರಗ್ಧರಾ. ಶುದ್ಧಾಂಬುಸ್ನಾನಮಂಗೆಯ್ದೊಸೆದು ತಳೆದು ಭೂತಿತ್ರಿರೇಖಾದಿಯಂ ಸಂ
ಶುದ್ಧೈಸುತ್ತಂತರಂಗಸ್ಥಿತಿಯನಮಳ ಸಂಧ್ಯಾಜಪಂ ಮಾಟ್ಪಿ ರಾಗೋ
ದ್ಬುದ್ಧಸ್ತೋತ್ರಂಗಳಂ ಕೇಳಿಸುವ ಶಿವನನರ್ಚಿಪ್ಪ ಸತ್ಕಾವ್ಯಮಂ ಸ
ದ್ಬುದ್ಧಿ ಶ್ರೀ ಶೋಭೆಯಿಂದೋದುವ ಸುಜನರಿನೊಪ್ಪಿರ್ದುದಾಗಳ್ ನಿಶಾಸ್ಯಂ ॥೫೬॥

ಗದ್ಯ॥ ಅನ್ನೆಗಮಿತ್ತ ಹಸ್ತಿನಾವತಿಯೊಳ್ –

೫೪. ಆಕಾಶದಲ್ಲಿ ಸಂಚರಿಸುವವರ ದೀಪಗಳಿವು ಎಂಬಂತೆ ಬಾನಿನಲ್ಲಿ ನಕ್ಷತ್ರಗಳು ಮನೆಮನೆಗಳಲ್ಲಿ ದೀಪಸಮೂಹಗಳೂ ತುಂಬಾ ಕಾಣಿಸಿದವು. ಕತ್ತಲೆಯು ಭೂಮಿಯನ್ನು ಕವಿಯಿತು.

೫೫. ಇದು (ಕತ್ತಲೆಯು) ಮಳೆಯಾಗಲಿ ಮಿಂಚಾಗಲಿ ಗುಡುಗಾಗಲಿ ಇಲ್ಲದ ಎಲ್ಲಿಗೂ ಸ್ಪರ್ಶಿಸದ ಮಳೆಗಾಲದ ಮುಗಿಲಿನ ಮುಸುಕು ಎಂಬಂತೆಯೂ ಕಣ್ಣಿಗೆ ಉರಿಯುಂಟು ಮಾಡದ ಬೆಂಕಿಯಿಲ್ಲದ ಉಸಿರು ಕಟ್ಟುವಂತೆ ಮಾಡದ ಹೊಗೆಯ ಪ್ರಾಪ್ತಿ ಎನಿಸಿ ಆಗ ಕತ್ತಲೆ ಹಬ್ಬಿತು.

೫೬. ಆ ಸಂಜೆ ಹೇಗಿದ್ದಿತೆಂದರೆ ನಿರ್ಮಲವಾದ ನೀರಿನಲ್ಲಿ ಮಿಂದು ಮುಖದಲ್ಲಿ ವಿಭೂತಿಯ ಮೂರು ರೇಖೆಗಳನ್ನು ಧರಿಸಿ ಮನಸ್ಸನ್ನು ಶುದ್ಧಗೊಳಿಸಿ ಶ್ರೇಷ್ಠ ಸಂಧ್ಯಾವಂದನ ಜಪಗಳನ್ನು ಮಾಡತಕ್ಕ ಅನುರಾಗದಿಂದ (ಭಕ್ತಿಯಿಂದ) ಸ್ತುತಿಗಳನ್ನು ಹೇಳತಕ್ಕ ಶಿವನನ್ನು ಪೂಜಿಸತಕ್ಕ ಒಳ್ಳೆಯ ಬುದ್ಧಿಸಂಪತ್ತಿನ ಶೋಭೆಯಿಂದ ಸತ್ಕಾವ್ಯವನ್ನು ಓದುತ್ತಿರುವ ಸತ್ಪುರುಷರಿಂದ ಆ ಸಂಧ್ಯಾಕಾಲವು ಶೋಭಿಸುತ್ತಿದ್ದಿತು.

(ಗದ್ಯ) ಹೀಗಿರಲು ಇತ್ತ ಹಸ್ತಿನಾವತಿಯಲ್ಲಿ (ಕೌರವನ ರಾತ್ರಿಸಭೆ)

ಮ.ವಿ. ಸುರಗಂಗಾಸುತ ಕುಂಭಜಾತಕೃಪರಿಂ ದುಶ್ಶಾಸನಾದಿ ಸ್ವಸೋ
ದರರಿಂ ಸೌಬಲಸೈಂಧವ ಪ್ರಮುಖ ಬಂಧುವ್ರಾತದಿಂ ಪುತ್ರರು
ತ್ಕರದಿಂ ಮಿತ್ರಜ್ಞ ಮುಖ್ಯ ಮಿತ್ರಚಯದಿಂ ಶ್ರೀಮಂತ ಸಾಮಂತರಿಂ
ಕುರುರಾಜ ಮೆಱೆದಂ ನಿಶೀಥ ಸಭೆಯಂ ರಾರಾಜದಿಂದ್ರಶ್ರಿಯಂ ॥೫೭॥

ಕಂದ॥ ಪಟುವಂ ಪೊಕ್ಕರರಿಗಳಸ
ಕಟಿದಾ ಪಗೆಯಿಂದಖಂಡ ಧರಣೀಶನೆನಾಂ
ಬಟಿಕೇಂ ನ್ಯೂನತೆಯೆಂದದ
ವಟಲಿಲ್ಲದೆ ಸೊರ್ಕಿ ಮೆಱೆವಿನಂ ನಿಜಸಭೆಯೊಳ್ ॥೫೮॥

ಪೊಗರಿಂದೊರ್ಮೊದಲೊಳ್ ಬೆಱ
ಗುಗೆ ಮಹತೀನಾದ ಮಿಳಿತ ಭಗವನ್ನಾಮಾ
ಳಿಗಳನುಪಮ ಗಾನಂ ಕಿವಿ
ವುಗೆ ನಿಜಮಂ ಬಗೆಯೆ ದೇವಮುನಿ ಸಭೆಗಿಳಿದಂ ॥೫೯॥

೫೭. ಭೀಷ್ಮ ದ್ರೋಣ ಕೃಪಾಚಾರ್ಯರಿಂದಲೂ ದುಶ್ಶಾಸನ ಮುಂತಾದ ತನ್ನ ಸಹೋದರರಿಂದಲೂ ಶಕುನಿ ಸೈಂಧವ ಮುಖ್ಯರಾದ ಬಂಧುಗಳ ಸಮೂಹದಿಂದಲೂ ಮಕ್ಕಳ ಸಮೂಹದಿಂದಲೂ ಕರ್ಣ ಮುಂತಾದ ಮಿತ್ರ ವರ್ಗದಿಂದಲೂ ಶ್ರೀಮಂತರು ಸಾಮಂತರಿಂದಲೂ ದೇವೇಂದ್ರನ ಸಂಪತ್ತಿನಂತಹ ಶೋಭೆಯಿಂದ ಕೌರವನು ತನ್ನ ರಾತ್ರಿ ಸಭೆಯನ್ನು ಮೆರೆಯಿಸಿದನು.

೫೮. ನನ್ನ ಶತ್ರುಗಳು ಮಿತಿಮೀರಿದ ಹಗೆತನದ ಪರಿಣಾಮವಾಗಿ ಕಾಡು ಪಾಲಾದರು. ಅಖಂಡ ಭೂಮಂಡಲಕ್ಕೆ ನಾನೀಗ ಒಡೆಯನಾಗಿದ್ದೇನೆ. ನನಗೆ ಇನ್ನೇನಿದೆ ಕೊರತೆ? ಎಂದು ಏನೂ ವ್ಯಥೆಯಿಲ್ಲದ ತನ್ನ ಸಭೆಯಲ್ಲಿ ಗರ್ವದಿಂದ ಮೆರೆಯುತ್ತಿದ್ದನು.

೫೯. ಆಗ ಅವನಿಗೆ ಹೀಗೊಂದು ದೃಶ್ಯ ಕಾಣಿಸಿತು. ಆಕಾಶದಲ್ಲಿ ಸಮೀಪವಾಗಿ ಮೊತ್ತಮೊದಲು ಒಂದು ಪ್ರಕಾಶ ಕಾಣಿಸಲು, ಆಶ್ಚರ್ಯವಾಯಿತು. ಮಹತೀ ಎಂಬ ವೀಣೆಯ ನಾದಕ್ಕೆ ಬೆರೆತುಕೊಂಡು ಭಗವಂತನ ನಾಮಾವಳಿಯ ಅನುಪಮವಾದ ಹಾಡುಗಾರಿಕೆ ಕೇಳಿಸಿತು. ನಿಜ ಸಂಗತಿ ಗೊತ್ತಾಯಿತು. ದೇವಮುನಿಯಾದ ನಾರದನು ಕೆಳಗಿಳಿದು ಕೌರವನ ಸಭೆಯ ಕಡೆಗೆ ಬಂದನು.

ಕಮನೀಯ ದೇಹಮದಱೊಳ್
ಸುಮುಖಂ ಮತ್ತಲ್ಲಿ ಸರಸಗಾನಮದಱೊಳ
ರ್ಥಮಹತ್ವಮಲ್ಲಿ ಕಡುಬಕು
ತಿ ಮನಂಬುಗೆ ನೊಡಿ ಸಭೆಯೆ ಮರವಡುತಿರ್ಕುಂ ॥೬೦॥

ಉ.ಮಾ. ಯೋಗಸಮಾಧಿಯೊಳ್ ನಿರತರಾದರೊ ಚಿಚ್ಛವಿಯಂ ವಿಲೋಕಿಪು
ದ್ಯೋಗದೊಳಿರ್ಪರೋ ಪರಮಭಾವನೆಯಲ್ಲಿಯೆ ಮಗ್ನರೋ ಸುಚಿ
ತ್ರಾಗತ ವಿಸ್ಮಯಾನ್ವಿತ ಸಭಾಂತರಮೋ ಎನೆ ಶಂಕೆ ನಿಲ್ವಿನಂ
ಯೋಗಿ ಮಹಾತ್ಮದರ್ಶನ ಸುಖಲಾಭರಾ ಸಭಿಕರ್ ಮುರಾಧಿಕರ್ ॥೬೧॥

ಎಂಬಲ್ಲಿಗೆ ಸತ್ತ್ವಾಲೋಕನ ಕಾವ್ಯದೊಳ್
ಅಭಯ ಪ್ರದಾನಂ – ನಾರದಾಗಮನಂ
ಚತುರ್ಥಾಶ್ವಾಸಂ

೬೦. ನಾರದನಿಗಿದ್ದ ಮನೋಹರವಾದ ಶರೀರ, ಆ ಶರೀರದಲ್ಲಿ ಚೆಲುವಾದ ಮುಖ, ಆ ಮುಖದಲ್ಲಿ ಸರಸವಾದ ಗಾನ, ಆ ಗಾನದಲ್ಲಿ ಇರತಕ್ಕ ಮಹತ್ವವಾದ ಅರ್ಥ, ಆ ಅರ್ಥದಲ್ಲಿ ಅತ್ಯಂತ ಭಕ್ತಿಭಾವ ಇವೆಲ್ಲವು ಮನಸ್ಸಿಗೆ ಆಗುತ್ತಿರಲು, ಆ ಸಭೆ–ಇದನ್ನೆಲ್ಲ ನೋಡಿ ನಿಶ್ಚಲವಾಗಿ ಕಾಣಿಸುತ್ತಿದ್ದಿತು.

೬೧. ಆ ಸಭಿಕರು ಅತ್ಯಂತ ಸಂತೋಷಪಟ್ಟವರಾಗಿ ತಾವೆಲ್ಲ ಯೋಗ ಸಮಾಧಿಯಲ್ಲಿರುವರೋ! ಜ್ಞಾನದ ಕಾಂತಿಯನ್ನು ನೋಡುತ್ತಿರುವರೋ? ಪರಮಾತ್ಮ ಭಾವನೆಯಲ್ಲಿ ಮುಳುಗಿರುವರೋ ಚಿತ್ರದಲ್ಲಿ ಬಂದ ಹಾಗೂ ಆಶ್ಚರ್ಯಯುಕ್ತವಾದ ಸಭಾಸ್ಥಳವೋ! ಎಂಬ ಸಂದೇಹವುಂಟಾಗುತ್ತಿರಲು ನಾರದ ಯೋಗಿಮಹಾತ್ಮನ ದರ್ಶನ ಸುಖದ ಲಾಭದಲ್ಲಿದ್ದರು.

ಇಲ್ಲಿಗೆ ಚತುರ್ಥಾಶ್ವಾಸ ಮುಗಿಯಿತು.

*****

# ಪಂಚಮಾಶ್ವಾಸಂ

(ನಾರದತಂತ್ರಂ ಸಮರಸನ್ನಾಹಂ)

ಕಂದ ॥ ಶ್ರೀ ಶಿವ ವಿಷ್ಣು ಹಿತೋದಯ
ಕೌಶಲವಂತಂ ಗುಣಾಗುಣಜ್ಞಂ ಸಂತಂ
ಭಾಷಾತನುಜನನುಪಮ
ಭಾಸಂ ಸ್ಮಿತವದನದಿಂದೆ ನಾರದನೆಸೆದಂ ॥೧॥

ಕಂಜಾರಿಶಿರನ ನುತಿಗಾ
ನಂ ಜಾಣರ ಜಯಿಕುಮೆನಿಸೆ ತನ್ಮುನಿವರನಾ
ಕೆಂಜಡೆಯಾದಲೆಯೊಲೆದೊಡೆ
ರಂಜಿಪ ಸುರ ಕುಸುಮಧಾಮಮೇನಿಟ್ಟಳಮೋ ॥೨॥

ಗಳದೊಳ್ ರುದ್ರಾಕ್ಷಿಯ ಪೊಸ
ತೊಳಚಿಯ ಸರಮೊಂದಿ ತಾಂಟಿ ಗಂಟಿಕ್ಕಿ ಜನಾ
ವಳಿಗೆ ಕಿಸುರನಟ್ಟಿರ್ತಂ
ವಿಳಸಿತಮತಿಯೆಂದು ಮುನಿಯನೆಂಬವೊಲೆಸೆಗುಂ ॥೩॥

ಉ.ಮಾ ಮಾಲೆಯ ಬೆಳ್ಪು ಧೌತನಿಜವಸ್ತ್ರದ ಬೆಳ್ಪು ವಿಬೂದಿವೆಳ್ಪುಗಳ್
ಮೇಲಿರೆ ಹೃತ್ತಿನೊಳ್ ತಪದ ಭಕ್ತಿಯ ಮೈಮೆಯ ಚಿನ್ಮರೀಚಿ ಸಂ
ಚಾಲಿತಮಾಗಿ ಬೀಗಿ ಪೊಱಸೂಸುತೆ ತೋರ್ದುದನೇನನೆಂದಪೆಂ
ಹೋಲಿಕೆಗಾಯ್ತು ಕುಪ್ಪಿಯೊಳದೀವಿಗೆ ಬೀರುವ ಭೂರಿರಶ್ಮಿವೋಲ್ ॥೪॥

೧. ತೇಜೋವಂತರಾದ ಶಿವ–ವಿಷ್ಣುಗಳಿಬ್ಬರಿಗೆ ಹಿತವನ್ನುಂಟು ಮಾಡುವ ನಿಪುಣತೆಯುಳ್ಳವನೂ ಒಳ್ಳೆಯ ಮತ್ತು ಕೆಟ್ಟ ಗುಣಗಳನ್ನು ತಿಳಿದವನೂ ಸಾಧುವೂ ವಾಗ್ದೇವಿಯ ಮಗನೂ ಉಪಮಾತೀತ ತೇಜಸ್ವಿಯೂ ಆದ ನಾರದನು ನಗೆಮೊಗದಿಂದ ಶೋಭಿಸಿದನು.

೨. ಅವನು ಹಾಡುತ್ತಿದ್ದ ಶಿವಸ್ತುತಿಯು ಗಾನವು ಜಾಣರನ್ನು ಜಯಿಸುವುದೆನಿಸಿದ್ದಿತು. ಆಗ ಅವನ ಕೆಂಜಡೆಯ ತುದಿ ಅಲುಗುತ್ತಿದ್ದಿತು. ಪಾರಿಜಾತ ಪುಷ್ಪಮಾಲೆ ಮನೋಹರವಾಗಿದ್ದಿತು.

೩. ನಾರದನ ಕೊರಲಿನಲ್ಲಿ ರುದ್ರಾಕ್ಷಿಯ ಮಾಲೆ ಮತ್ತು ತುಳಸಿಯ ಮಾಲೆ ಒಂದಕ್ಕೊಂದೊರಗಿ ಗಂಟು ಕಟ್ಟಿದ್ದಿತು. ಶೋಭಾಯಮಾನವಾದ ಬುದ್ಧಿಯ ಈತನು ಜಗಳಗಂಟಿಗನೆಂಬಂತೆ ಕಾಣಿಸುತ್ತಿದ್ದನು.

೪. ನಾರದನು ಕೊಟ್ಟ ಹೂಮಾಲೆಯ ಬಿಳುಪು, ತೊಳೆದು ಶುಭ್ರವಾದ ತನ್ನ ಬಟ್ಟೆಯ ಬಿಳುಪು, ಹಚ್ಚಿದ ವಿಭೂತಿಯ ಬಿಳುಪುಗಳು ಹೊರಗಡೆ ಕಾಣಿಸುತ್ತಿದ್ದವು. ಹೃದಯದೊಳಗೆ ತಪಸ್ಸಿನ ಭಕ್ತಿಯ ಮಹಿಮೆಯ ಜ್ಞಾನಕಿರಣ ಸಂಚಲಿಸುತ್ತಿದ್ದು ಅಲ್ಲಿ ತುಂಬಿ ಹೊರಸೂಸುತ್ತ ತೋರುತ್ತಿದ್ದಿತು. ಅದನ್ನು ಏನೆನ್ನಲಿ! ಕುಪ್ಪಿಯೊಳಗಣ ವಿಶೇಷಣ ಪ್ರಕಾಶದ ಹೋಲಿಕೆಯಾಗುವಂತೆ ಇದ್ದಿತು.

ಕಂದ ॥ ರಯ್ಯಮೆನಿಸಿತ್ತು ಪಾವುಗೆ
ಯೊಯ್ಯನೆ ಮುನಿ ಮೆಟ್ಟೆ ಚರಣದರುಣತೆಯಿಂ ಪೊ
ಮ್ಮೆಯ್ಯಾಂತೆನೆ ಕಾಗಾಂಪನನಾ
ರಯ್ಯೆ ಮಹಾತ್ಮಕರ ಸೇವೆ ಘನತೆಗೊಳಿಸದೇ? ॥೫॥

ಕಾಯದೆ ನೋಯದೆ ಮುದಮಂ
ಬೀಯದೆ ಬೇಸಱದೆ ಲೋಕಸಂಗ್ರಹಕಾರ್ಯ
ಕ್ಕಾಯತಿಯಂ ಪಡೆದಂ ರಿಸಿ
ರಾಯಂ ಶಿವಭಕ್ತಿಜನ್ಯ ಶಕ್ತಿಯ ವಿಷಯಂ ॥೬॥

ಜಯವೆಂದೆಟ್ದು ಸಭಾಜನ
ಚಯಮೆಲ್ಲಂ ಮೊಟ್ಗಿಲೇಕ ವೇಳೆಯೊಳಾಗಳ್
ಜಯಘೋಷ ಘನ ಸ್ವನದೊಳ್
ನಯನಕ್ಕೆ ಮಿಂಚೆನಿಸಿ ನಾರದಂ ಕರಮೆಸೆದಂ ॥೭॥

ಮ. ವಿ.ಇದು ಕಜ್ಜಂ ತನಗೆಂದು ದಂಡನತಿಯಿಂ ಕುಂಬಿಟ್ಟು ಸದ್ಭಕ್ತಿಯಿಂ
ಮುದದಿಂ ಧನ್ಯತೆಗುರ್ಕಿಯುನ್ನತತರ ಸ್ಥಾನಸ್ಥನಂ ಮಾಡಿ ಸಂ
ಪದದಿಂ ಯುಕ್ತಕರೋಪಚಾರವನೊಡಂಬಟ್ಟಂ ಕುರುಕ್ಷೋಹಿಣೀ
ಭೃದನೀ ಕ್ಷೋಣಿಗೆ ಸಂಯಮಾರ್ಘರೆನಿಪರ್ ಸಂಪೂಜ್ಯರೇನಾಗರೇ ? ॥೮॥

೫. ಆ ಮುನಿಯು ಮೆಟ್ಟಿಕೊಂಡಿದ್ದ ಪಾದುಕೆಯು ಪಾದದ ಕೆಂಪಿನಿಂದ ಹೊನ್ನಾದಂತೆ ರಮಣೀಯವಾಗಿದ್ದಿತು. ಮಹಾತ್ಮರಾದವರ ಸೇವೆಯು ಎಂತಹ ದಡ್ಡನನ್ನಾದರೂ ಘನತೆಗೊಳಿಸುವುದಲ್ಲವೆ?

೬. ಮುನಿಪತಿಯಾದ ನಾರದನು ತಾಪಗೊಳ್ಳದೆ, ನೋಯದೆ, ಸಂತೋಷಹೀನನಾಗದೆ, ಬೇಸರಗೊಳ್ಳದೆ ಲೋಕಸಂಗ್ರಹ ಕಾರ್ಯಕ್ಕೆ ಬೇಕಾಗುವ ಸಾಮರ್ಥ್ಯವನ್ನು ಪಡೆದಿರುತ್ತಾನೆ. ಶಿವಭಕ್ತಿಯಿಂದ ಉಂಟಾಗುವ ಶಕ್ತಿ ಸಾಮಾನ್ಯ ವಿಷಯವಲ್ಲ.

೭. ನಾರದನು ಕೌರವನ ಸಭೆಗೆ ಬಂದಾಗ, ಸಭಿಕರೆಲ್ಲರೂ ಜಯಕಾರ ಮಾಡುತ್ತಾ ಎದ್ದು ಒಂದೇ ವೇಳೆಯಲ್ಲಿ (ಒಟ್ಟಿಗೆ) ಸಾಷ್ಟಾಂಗ ನಮಸ್ಕಾರ ಮಾಡಿದರು. ಆ ಜಯಘೋಷವೆಂಬ ಗುಡುಗಿನ ಶಬ್ದದಲ್ಲಿ ಕಣ್ಣಿಗೆ ಮಿಂಚಿನ ಹಾಗೆ ನಾರದನು ಚೆನ್ನಾಗಿ ಶೋಭಿಸಿದನು.

೮. ಆಗ ಕುರುಭೂಪಾಲಕನು ಇದು ತನ್ನ ಕರ್ತವ್ಯವೆಂದು ಒಳ್ಳೆಯ ಭಕ್ತಿಯಿಂದ ದಂಡನಮಸ್ಕಾರ ಮಾಡಿ ಸಂತೋಷದಿಂದ ತನ್ನ ಧನ್ಯತೆಗಾಗಿ ಹಿಗ್ಗಿ ಮುನಿಯನ್ನು ಉನ್ನತಾಸನದಲ್ಲಿ ಕುಳ್ಳಿರಿಸಿ ತಕ್ಕ ಉಪಚಾರವನ್ನು ಮಾಡಿದನು. ತಪಸ್ಸೇ ಧನವಾಗಿರುವ ಋಷಿಗಳು ಈ ಭೂಮಿಗೆ ಸಂಪೂಜ್ಯರಾಗುವರಲ್ಲವೇ?

ಗದ್ಯ ॥ ಮತ್ತಮೀ ನುಡಿವೆಣ್ಣಣುಗಂ ಬಂದುದು – 'ತನ್ನತ್ತಣಿಂ ಸೋಲ್ತ ಕೊಂತಿಯಣುಗರಂ ಮನ್ನಿಸಿ ಪಚ್ಚುಗುಡು' ಎಂದು ನುಡಿವೊಡಾಗವೇಳ್ಕುಮದಾಗದೆಂದು ದುರ್ಜೋದನನುಂ – ನಿಜದರ್ಶನದಿಂ ಮೇಣ್ ಮಧುರ ವಚನದಾನಾದಿಯಿಂದಾಸ್ಥಾನದೊಳ್ ಸೈಪಿನ ಮೊಳೆಯಂ ಮೊಳೆಯಿಸಲಕ್ಕುಮದೊಳ್ಳಿತೆಂದು ಕಲಶಜ ನದೀನಂದನಾದಿ ಗುರುಜನರುಂ – ದುಷ್ಟಶಮನ ಶಿಷ್ಯಪರಿಪಾಲನಾದಿಯಿಂ ಸೃಷ್ಟಿಯೊಳುತ್ಕೃಷ್ಟ ಧರ್ಮಮಂ ನೆಲೆಗೊಳಿಪ ಭಗವಂತಂಗನುಕೂಲ ನಾಗಿಯದೇನಾನುಂ ಪೊಸಕಿಸುರರ ಪುಟ್ಟಿಸಲಕ್ಕುಮದು ಮೇಲೆಂದು ವಿದುರಾದಿ ಸಜ್ಜನಚಯಮುಂ – ಪ್ರಮುಖಮಪ್ಪ ಕಾರ್ಯಪ್ರಪಂಚಮಿರಲೆವೇಳ್ಕುಮದುವುಂ ಮುಂದೆ ತಿಳಿಯಲ್ಬರ್ಕುಂ ನೋಳ್ಪಮೆಂದುಳಿದರೆಲ್ಲರುಂ ತಂತಮ್ಮ ಬಗೆಯ ಗುಣಿತಮನೆ ಪತ್ತುವಿಡಿದಿರೆ – ತನ್ನ ಕಜ್ಜಂ ಸ್ಮಿತಾಂತಮೆಂದಱಿಪುವಂತಾ ಮುನಿಪುಂಗವಂ ಕಿರುನಗೆವೀರ್ವುದುಂ –

ಕಂದ॥ ಪೊತ್ತಗೆ ತೆರೆದೊಡೆ ಬರೆಪದ
ಮುತ್ತಿನ ಸಾಲಕ್ಕರಂಗಳಂದದೆ ಬಾಯೊಳ್
ಕಿತ್ತಡಿ ನಗೆ ಸುಲಿವಲ್ಗಳ
ಬಿತ್ತರಮೇಂ ಬೆಳಗಿ ದೆಸೆಗೆ ಕಂಗೊಳಿಸಿದುದೋ! ॥೯॥

(ಗದ್ಯ) ಈ ಸಂದರ್ಭದಲ್ಲಿ ಯಾರು ಯಾರಿಗೆ ಯಾವ ಭಾವನೆಯಾಯಿತೆಂದರೆ ವಾಗ್ದೇವಿಪುತ್ರನಾದ ಈತನು ಬಂದುದು –– ತನ್ನಿಂದ ಸೋತ ಕುಂತೀಪುತ್ರರನ್ನು ಮನ್ನಿಸಿ ಅವರಿಗೆ ರಾಜ್ಯದಲ್ಲಿ ಪಾಲನ್ನು ಕೊಡು ಎನ್ನುವುದಕ್ಕಾಗಿರಬಹುದು. ಅದಕ್ಕೆ ನಾನು ಸಮ್ಮತಿಸೆನು ಎಂದು ದುರ್ಯೋಧನನೂ – ತನ್ನ ದರ್ಶನದಿಂದಲೂ ಸವಿಮಾತುಗಳಿಂದಲೂ ಈ ರಾಜಾಸ್ಥಾನದಲ್ಲಿ ಪುಣ್ಯಸಸ್ಯದ ಮೊಳಕೆಯನ್ನು ಮೂಡಿಸಲಿಕ್ಕಾಗಿರಬಹುದು, ಅದು ಒಳ್ಳೆಯದು ಎಂದು ದ್ರೋಣಭೀಷ್ಮಾದಿ ಗುರುಜನರೂ, ದುಷ್ಟರನಾಶ ಶಿಷ್ಟರ ಪಾಲನೆ ಮುಂತಾದವುಗಳಿಂದ ಲೋಕದಲ್ಲಿ ಶ್ರೇಷ್ಠವಾದ ಧರ್ಮವನ್ನು ನೆಲೆಗೊಳಿಸತಕ್ಕ ಭಗವಂತನಿಗೆ ಅನುಕೂಲನಾಗಿ ಅದೇನಾದರೂ ಹೊಸ ಜಗಳವನ್ನು ಹುಟ್ಟಿಸುವುದಕ್ಕಾಗಿ ಈತನ ಬರವು ಆಗಿರಬಹುದು, ಅದು ಮೇಲಾದುದೇ ಸರಿ ಎಂದು ವಿದುರನೇ ಮುಂತಾದ ಸಜ್ಜನರ ಸಮೂಹವೂ, ಮುಖ್ಯಕಾರ್ಯಗಳು ಇರಲೇ ಬೇಕು ಅವು ಮುಂದೆ ಗೊತ್ತಾಗುತ್ತವೆ, ನೋಡೋಣ ಎಂದು ಉಳಿದವರೆಲ್ಲರೂ ತಂತಮ್ಮ ಮನಸ್ಸಿನ ಗುಣಿತಗಳನ್ನು ಹಿಡಿದಿದ್ದರು. ಆಗ ನಾರದಮುನಿಯು ತನ್ನ ಕಾರ್ಯವು ನಗುವೇ ಕೊನೆಯಾಗಿ ಉಳ್ಳುದೆಂದು ಮೊದಲೇ ತಿಳಿಸುವಂತೆ ಕಿರುನಗೆ ಬೀರಿದನು.

೯. ಹಾಗೆ ಕಿರುನಗೆ ಬೀರಿದಾಗ, ಪುಸ್ತಕವನ್ನು ತೆರೆದಾಗ ಅಲ್ಲಿ ಬರೆದಿರುವ ಮುತ್ತಿನ ಸಾಲಿನಂತಹ ಅಕ್ಷರಗಳಂತೆ, ಮುನಿಯ ಬಾಯಿಯಲ್ಲಿ ಸ್ವಚ್ಛವಾದ ಬಿಳಿಯ ಹಲ್ಲುಗಳ ವಿಸ್ತಾರವು ಬೆಳಗಿ ಸುತ್ತಲೂ ಅದೇನು ಶೋಭೆ ಬೀರಿತೋ!

ವದನ ದರಸ್ಮಿತ ಚಂದ್ರಿಕೆ
ಮುದಮಂ ಸಾಹಸಮನುತ್ಸಹಮನುದಿಸುವಿನಂ
ಪದನರಿತು ಕುರುಕುಲಾಗ್ರಣಿ
ವದನೇಂದೀವರಮೊರಲ್ದು ಮಲರ್ದತ್ತಾಗಳ್ ॥೧೦॥

ಶಾ. ವಿ. ನಿಮ್ಮನ್ನರ್ ದಯೆಗೆಯ್ವ ಕಾರಣದಿನಿಂತ್ವೈಶ್ವರ್ಯಮುಂ ಶೌರ್ಯಮುಂ
ನೆಮ್ಮಿರ್ಕುಂ ದಿಟಮೆನ್ನೊಳಾಂ ರಿಪುಗಳಪ್ಪಾ ಪಾಂಡುಜಾತರ್ಕಳಂ
ಸೊಮ್ಮಂ ತಗ್ಗಿಸಿದೆಂ ತ್ರಿಲೋಕಚರರೇ ನೀಂ ಬಲ್ಲಿರೇನೇವರೆಂ
ದೆಮ್ಮತ್ತಲ್ ಗುಜುಗುಮ್ಮನೆಯ್ದದರೆ ಮಾಡಲ್ವೇಳ್ಕುಮೊಳ್ಪಾಣೆಯಂ ॥೧೧॥

ಗದ್ಯ ॥ ಎಂದೊಡಾ ಕುರುರಾಜನ ಕೈದವದಿಂದಾ ಅಯ್ವರಂ ಕಿಡಿಸಲೆಳಸಿದಪರಾಧದ ಬಿತ್ತಿನ ಮೊಳೆಯರಲ್ವಂತೆ ಮೊಗಮಲರೆ ಸುರಮುನಿ ತನ್ನ ಬಂದ ಬಗೆಯಂ ನೆನೆದು ಮತ್ತಮಿಂತೆಂದಂ–

೧೦. ಮುನಿಯ ಮುಗುಳ್ನಗೆಯ ಬೆಳ್ದಿಂಗಳು ಇತರರಿಗೆಲ್ಲ ಸಂತೋಷವನ್ನೂ ಸಾಹಸವನ್ನೂ ಉತ್ಸಾಹವನ್ನೂ ಉಂಟುಮಾಡಲು ಸಂದರ್ಭವನ್ನರಿತ ಕೌರವನ ಮುಖವೆಂಬ ನೈದಿಲೆಯು ಪ್ರೀತಿಗೊಂಡು ಅರಳಿತು!

೧೧. ಕೌರವನು ಇಂತೆಂದನು–ನಿಮ್ಮಂಥವರು ದಯೆಮಾಡಿಸುವ ಕಾರಣದಿಂದಲೇ ನಿಜವಾಗಿಯೂ ನನ್ನಲ್ಲಿ ಹೀಗೊಂದು ಐಶ್ವರ್ಯವೂ ಪರಾಕ್ರಮವೂ ಆಶ್ರಯಿಸಿದಕೊಂಡಿವೆ. ನಾನು ಆ ಪಾಂಡವರ ಗರ್ವವನ್ನು ತಗ್ಗಿಸಿದ್ದೇನೆ. ತ್ರಿಲೋಕಸಂಚಾರಿಗಳಾದ ಮುನಿವರ್ಯರೇ ಆ ಪಾಂಡವರು ಈಗ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂದು ಬಲ್ಲಿರಷ್ಟೆ? ನಮ್ಮಲ್ಲಿಗೆ ನೀವು ಸುಮ್ಮನೆ ಬರುವವರಲ್ಲ. ನನಗೆ ಒಳ್ಳೆಯ ಅಪ್ಪಣೆ ಮಾಡಬೇಕು.(ಗದ್ಯ) ಹೀಗೆನ್ನಲು, ಆ ಕೌರವನು ಮೋಸದಿಂದ (ಕಪಟದ ಜೂಜಿನಿಂದ) ಆ ಪಂಚಪಾಂಡವರನ್ನು ಕೆಡಿಸಲು ಮಾಡಿದ ಅಪರಾಧದ ಬೀಜ ಮೊಳಕೆ ಅರಳುವಂತೆ ಮುಖವು ಅರಳಲು, ದೇವಮುನಿ ನಾರದನು ತಾನು ಬಂದ ಉದ್ದೇಶವನ್ನು ನೆನೆದು ಅನಂತರ ಹೀಗೆಂದನು –

ಉ.ಮಾ. ಕೂಡಿರೆ ನೀಂಗಳೆಲ್ಲರದೊ ಪೆರ್ಗಿಸುರಂ ತಳೆದಂದು ಕಾಡಿ ಪೆ
ರ್ಗಾಡನೆ ಪೊಕ್ಕರಾ ಕಲಹಶೀಲರ ಬಾರಿಯನೇನನೆಂದಪೆಂ
ನೀಡಿರದೀಗಳಲ್ಲಿ ಮುನಿಸಿಂ ಕೊಲವೂಣ್ದಿರೆ ಕೃಷ್ಣನೋಪುದುಂ
ಬೇಡೆ ಗಯಾಖ್ಯನಂ ಪದೆದು ಕೂಡೆ ನರಂ ಪಗೆಯಾಯ್ತುವರ್ಗಳೊಳ್ ‌।೧೨॥

ನಾಡಿದು ಪೊಟ್ಟಕಂತೆ ಹರಿಭಾಷೆಗಮರ್ಜುನನೋವ ಸೂರುಳಂ
ಮಾಡಿದುದರ್ಕಮಾಗು ನೆಗಟ್ಟುಂ ನುಡಿ ಬೀತೊಡೆ ಮೆಯ್ಯನಗ್ಗಿಗೀ
ಡಾಡುಗುಮತ್ತಲಾನಲ್ಗೆನುತುಂ ಹರಿಯೆತ್ತುಗುಮಿತ್ತಲಂದು ಕಾ
ಡಾಡಿಗಳಾ ಸಖೇಚರ ವಿಮಾನದಳಾನ್ವತಿರೊಡ್ಡುತಿರ್ದಪರ್ ॥೧೩॥

ಗದ್ಯ ॥ ಆದುದಱಿಂ –

ಮ. ಪ್ರ. ಬಲಹೀನರ್ ಪಾಂಡುಜಾತರ್ಕಳವರ ಹರಿ ಕಿಳ್ತಿಕ್ಕೆ ನೀಂ ಕೊಲ್ವ ಕಾರ್ಯಂ
ಸುಲಭಂ ತಾನಾದೊಡಂ ಕೀಳ್ಪಗೆಯದೆನಿಸದೇ? ಬುದ್ಧಿಶಕ್ತ್ಯಾದಿ ಸಂಪತ್
ಫಲಪೂರ್ಣಂ ನೀನೆನಿಪ್ಪೈ ತಱಿದಿನಟೆಯೆ ನೀನಾರ್ಪೆಯೆಂದೆಂಬ ಕೋಲಾ
ಹಲನೈ ಪಂಚಾನನಂ ತನ್ನುಣಿಸಿದ ಮಿಗಮಂ ಪತ್ತುವಿಟ್ಟೆಂತು ಪೋಕುಂ ? ॥೧೪॥

ಗದ್ಯ ॥ ಅದಲ್ಲದೆಯುಂ –

೧೨. ನೀವೂ ಪಾಂಡವರೂ ಒಟ್ಟಿಗೆ ಇದ್ದಾಗ, ದೊಡ್ಡ ಜಗಳ ಹೊಂದಿ, ಕಾಡಿ ತಾವೇ ಮಹಾರಣ್ಯವನ್ನು ಹೊಕ್ಕಿದ್ದರು. ಕಲಹಶೀಲರಾದ ಅವರ ಈಗಿನ ಕಾರ್ಯದ ಸರದಿಯನ್ನು ಏನು ಹೇಳಲಿ! ಆ ಕೃಷ್ಣನು ಗಯನೆಂಬ ಖೇಚರನನ್ನು ಅವನ ಕೆಟ್ಟ ಚರಿತಕ್ಕೆ ಕೋಪಿಸಿ, ಹೆಚ್ಚು ತಡಮಾಡದೆ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದನು. ಆಗ ಗಯನು ಅರ್ಜುನನ ಮರೆಹೊಕ್ಕನು. ಅರ್ಜುನನು ಅವನನ್ನು ಪ್ರೀತಿಸಿ, ಕಾಪಾಡಲು ಅವನ ಜೊತೆಯಾದನು. ಇದರಿಂದ ಕೃಷ್ಣಾರ್ಜುನರಿಗೆ ಪರಸ್ಪರ ಹಗೆತನವಾಯಿತು.

೧೩. ಕಾಲದ ಗಡುವಿಗೆ ಇನ್ನು ಹೆಚ್ಚು ದಿನಗಳಿಲ್ಲ. ನಾಡಿದು ಸಂಜೆಯೇ ಕೃಷ್ಣನ ಪ್ರತಿಜ್ಞೆಗೂ ಅರ್ಜುನನು ರಕ್ಷಣೆ ಮಾಡುವ ಪ್ರತಿಜ್ಞೆಗೂ ಸಂಭಾವ್ಯದ ಗಡುವಾಗಿರುತ್ತದೆ. ಪ್ರತಿಜ್ಞೆಗೆ ಭಂಗವಾದರೆ ಅಗ್ನಿ ಪ್ರವೇಶ ಮಾಡಬೇಕಾಗುವುದು. ಅತ್ತಲಾಗಿ ಕೃಷ್ಣನು ಯಾದವಸೈನ್ಯದೊಡನೆ ಯುದ್ಧಕ್ಕೆ ಬರುವನು. ಇತ್ತಲಾಗಿ ವನವಾಸಿಗಳ (ಪಾಂಡವರು) ಖೇಚರರ ವಿಮಾನಸೈನ್ಯಸಮೇತರಾಗಿ ಯುದ್ಧಕ್ಕೆ ಸನ್ನದ್ಧರಾಗುತ್ತಿದ್ದಾರೆ. ಆದುದರಿಂದ –

೧೪. ಪಾಂಡವರು ಬಲಹೀನರೆಂಬುದು ನಿಜ. ಅವರನ್ನು ಕೃಷ್ಣನು ಕಿತ್ತು ಬಿಸಾಡಿದರೆ, ಮತ್ತೆ ನೀನು ಅವರನ್ನು ಕೊಲ್ಲುವ ಕಾರ್ಯ ಸುಲಭವಾಗುವುದೆಂಬುದೂ ಸರಿ. ಆದರೆ ಅದು ನಿನ್ನ ಕೀಳಾದ ಮನೋಭಾವವೆನಿಸುವುದು. ನೀನು ಬುದ್ಧಿಬಲ ಬಾಹುಬಲ ಸಂಪನ್ನನಾಗಿರುತ್ತೀ. ಮುಂದೆ ಸಕ್ರಮವಾಗಿ ಪಾಂಡವರನ್ನು ನಾಶಪಡಿಸಲು ಸಮರ್ಥನೇ ಸರಿ. ಮೃಗರಾಜನಾದ ಸಿಂಹವು ತನ್ನ ಆಹಾರವಾಗಿರುವ ಜಿಂಕೆಯನ್ನು ಬೇರೆಯವರಿಗೆ ಬಿಟ್ಟು ಹೋಗುವುದುಂಟೆ? ಅಷ್ಟು ಮಾತ್ರವಲ್ಲ –

ಮ. ವಿ. ನಿನ್ನಂ ಮೋಸದೆ ಚಿತ್ರಸೇನ ಖಚರಂ ಕೊಂಡೊಯ್ಯಲೇಂ ತಾರನೇ
ನಿನ್ನಂ ವೈರವ ಮಾಣ್ದು ತದ್ವಿಜಯನಂತಾಮಾಟಕ್ಕಿಯಿಂದಯ್ವರಂ
ಕೆನ್ನಂ ಯಾದವ ಯುದ್ಧಕೊಂದು ಗುಣಿ ನೀನಾಗಯ್ಯ ತೇದಿಟ್ಟ ಬಾ
ವನ್ನಂ ನೀರ್ಬಿಡುಗುಂ ಬೆರಲ್ ಕದಡುವಂದೊಂದಾಗದೇನಿರ್ಕುಮೇ? ॥೧೫॥

ಕಂದ ॥ ಬಂಧುಗಳನ್ಯೋನ್ಯಂ ವೈ
ರಂದಳೆದೊಡಮನ್ಯರೆತ್ತೆ ತೊಟ್ಟನೆ ಪೋಣರ
ಲ್ಕೊಂದಪ್ಪುದಾಗದಿರ್ದೊಡೆ
ಕೊಂದಪ್ಪಂ ಶತ್ರುವಾದಮೆತ್ತುತೆ ಬಟಿಯಂ ॥೧೬॥

ಶಾ.ವಿ. ಮಾತೇಂ ಕೃಷ್ಣನ ಪೂಣ್ಕೆದಾಗೆ ವಿಜಯಂ ಸೋಲ್ತಲ್ಲಿ ಚಂದ್ರಾನ್ವಯ
ಖ್ಯಾತಿ ಜ್ಯೋತ್ಸ್ನೆಯೆ ಮಬ್ಬುಗುಂ ದಲೊಸೆ ಮೇಣ್ ಮಾಣ್ ಮುಂದು ನೀಂ ಪಾಂಡುಸಂ
ಜಾತರ್ಗೀಗ ಸಹಾಯನಾಗು ಹರಿಯೊಳ್ ಕಾದಲ್ಕೆ ಸೇನಾನ್ವಿತಂ
ದ್ವೈತಾರಣ್ಯಕೆ ಪೋಗು ಕಾಳೆಗಕದಾರ್ ಲೇಸೆನ್ನರೀ ಮಾಟಕ್ಕೆಯಂ ? ॥೧೭॥

ಗದ್ಯ ॥ ಎಂದಾ ನಾರದನ ಗಾಢಮುಂ ಗೂಢಮುಮಾದ ಮಂತಣಂ ಕುರುರಾಜನ ಮನೋರಥಕ್ಕೆ ತೇಜಿಯಂ ಬಿಗಿದಂತಾಗೆಯುಂ – ತಮ್ಮನೆ ಬಣ್ಣಿಸುತಿರ್ಪ ಕಾನೀನಾದಿ ವೀರನಾಯಕರ ಬೀರಕ್ಕೆ ಪುಚ್ಚವಣಮಂ ನಿಕ್ಕುವಿಸಿದಂತಾಗೆಯುಂ – ಪಾಂಡವರಂ ಬೆರೆವುದೆಂಬ ಗಿರೆಯಿಂ ಕುರುಪಿತಾಮಹ ದ್ರೋಣಾದಿಗಳ ಮನೋನಿಶ್ಚಯಾರ್ಥಕ್ಕೆ ತಕ್ಕ ಸಾಮರ್ಥ್ಯಮನಳವಡಿಸಿ

೧೫. ನಿನ್ನನ್ನು ಚಿತ್ರಸೇನನೆಂಬ ಗಂಧರ್ವನು ಮೋಸದಿಂದ ಹಿಡಿದು ಒಯ್ಯುತ್ತಿದ್ದಾಗ, ಆ ಅರ್ಜುನನು ನಿನ್ನ ಮೇಲಣ ವೈರಭಾವವನ್ನು ತ್ಯಜಿಸಿ ನಿನ್ನನ್ನು ಚಿತ್ರಸೇನನಿಂದ ಬಿಡಿಸಿ ತರಲಿಲ್ಲವೆ? ಅದರಂತೆಯೇ ಈಗ ಯಾದವರೊಡನೆ ಕಾದಾಡಲಿಕ್ಕಾಗಿ ನೀನು ಸೈನ್ಯಸಹಿತ ಆ ಪಾಂಡವರಿಗೆ ನೆರವಾಗು, ನೀನು ಗುಣವಂತನೆನಿಸಯ್ಯಾ? ತೇದು ಇಟ್ಟ ಶ್ರೀಗಂಧವು ನೀರು ಬೇರೆಯಾಗಿ ಕಾಣಿಸುವುದು. ಅದನ್ನೇ ಬೆರಳಿನಿಂದ ಕದಡಿದಾಗ ಗಂಧವು ನೀರೂ ಒಂದಾಗದಿರುವುದೇ?

೧೬. ಬಂಧುಗಳಾದವರು ಪರಸ್ಪರವಾಗಿ ದ್ವೇಷ ತಾಳಿ ಬೇರೆ ಬೇರೆಯಾದರೂ ಅನ್ಯರು (ಶತ್ರುಗಳು) ದಂಡೆತ್ತಿ ಬಂದಾಗ ಕೂಡಲೇ ಅವರೊಡನೆ ಹೋರಾಡುವುದಕ್ಕಾಗಿ ಒಂದಾಗದಿದ್ದರೆ, ಆ ಬಂದ ಶತ್ರು ಈ ಎರಡೂ ಪಂಗಡದವರನ್ನು ಯುದ್ಧಮಾಡಿ ಕೊಲ್ಲುವನು.

೧೭. ಹೆಚ್ಚು ಮಾತೇಕೆ? ಕೃಷ್ಣನು ಪ್ರತಿಜ್ಞೆ ಮಾಡಿದುದು ನೆರವೇರಿದರೆ, ಅರ್ಜುನನಿಗೆ ಸೋಲವಾಗುವುದು. ಆಗ ಚಂದ್ರವಂಶದ ಕೀರ್ತಿಯೆಂಬ ಬೆಳ್ದಿಂಗಳಿಲ್ಲವಾಗುವುದು; ಇದು ನಿಶ್ಚಯ. ಮುಂದೆ ನೀನು ಪಾಂಡವರನ್ನು ಪ್ರೀತಿಸು, ಅಥವಾ ಬಿಡು. ಈಗ ಮಾತ್ರ ಪಾಂಡವರಿಗೆ ಸಹಾಯಕನಾಗು. ಕೃಷ್ಣನೊಡನೆ ಯುದ್ಧಕ್ಕಾಗಿ ಸೈನ್ಯಸಹಿತನಾಗಿ ದ್ವೈತಾರಣ್ಯಕ್ಕೆ ಹೋಗು. ಈ ಕಾರ್ಯವನ್ನು ಲೇಸೆಂದು ಹೇಳದವರು ಯಾರು?

ದಂತಾಗೆಯುಂ – ಸಭಾಜನರೆಲ್ಲರ್ಗಿದು ಸರ್ವಹಿತಮೆಂದು ತೋರಿ ಬರೆ, ಮುನಿಯೀತಂ ಕಲಹಪ್ರಿಯನಲ್ತು ಸ್ನೇಹಪ್ರಿಯನೆಂದು ಪೊಗೞ್ವಂತಾಗೆಯುಮಾರುಮೆರಳ್ನಾಡಿಯದೆ ತಲೆದೂಗೆ – ಕೌರವಂ ಯಾದವರೊಳಾದಮಾದ ವಿರೋಧದಿಂದಿನಿಸಂ ಕಿನಿಸಂ ತಾಳ್ದೆಂದಂ –

ಕಂದ ॥ ಜಾಂಬವತೀ ಪುತ್ರಂ ಮುಂ
ಸಾಂಬಂ ಕೀಳ್ಗೆಯ್ಮೆ ಗೆಯ್ಯೆ ಬಂದಿಸೆ ಬರೆ ಮ
ತ್ತಂ ಬಲರಾಮಾದಿಗಳಂ
ನಾಂ ಬಲಿಗುಡದಿರ್ದ ಕುಂದನಿಂದಾಂ ಕಳೆವಂ ॥೧೮॥

ಗದ್ಯ ॥ ಎನೆ, ತನ್ನ ಕಜ್ಜಂ ಕೆಯ್ಗೂಡಿದುದೆಂಬ ಸಂತಸದಿಂ ಶಿವನಂ ನೆನೆಯುತ್ತುಮಾ ಸಭೆಯ ಪೊಡವಡಿಕೆಗಳಂ ಕೆಯ್ಕೊಂಡಾ ಸಗ್ಗದ ಜೋಗಿಯಾಗಸಮಂ ನೆಗೆದು ಸಾಗಿ ಪೋಗಲೊಡಂ– ಅಂಕದಳವಡಿಕೆವರೆಗಳ ಬಿಱುಸರಮುಮೊಡ್ಡೆಯರಾಣತಿಯು–ಮೊಡನೊಡನೆ ದೆಸೆವೆಸೆಗೆ ಪರಿವುದುಂ – ಸೇನಾಗಣನೆಗೆ ಸೇರ್ದ ಬೀರರ್ ತಂತಮ್ಮ ಮಕ್ಕಳುಮಂ ಮಾಱುಮಂ ನಲ್ಲೆಯರುಮಂ ಮೂಱುಂ ದೆವಸಕ್ಕಾಶ್ವಾಸಿಸುತಿರ್ದರ್ – ಅವರೊಳೋರ್ವಂ ದೂಱಿಸುವ ತನ್ನ ನೀಱಿಯೊಡನಿಂತೆಂದಂ –

(ಗದ್ಯ) ಹೀಗೆ ಹೇಳಿದ ನಾರದನ ದೃಢತರವೂ ಗೋಪ್ಯವು ಆದ ಅಭಿಮತವು ಕೌರವನ ಮನೋರಥಕ್ಕೆ (ಮನಸ್ಸೆಂಬ ರಥಕ್ಕೆ) ಕುದುರೆಯನ್ನು ಬಿಗಿದಂತಾಯಿತು. ತಮ್ಮನ್ನೆ ವರ್ಣಿಸುತ್ತಿದ್ದ ಕರ್ಣ ಮುಂತಾದ ವೀರನಾಯಕರ ಪರಾಕ್ರಮಕ್ಕೆ ಪರೀಕ್ಷೆಯನ್ನು ನಿಶ್ಚಯ ಪಡಿಸಿದಂತಾಯಿತು. ಪಾಂಡವರನ್ನು ಸೇರಿಕೊಳ್ಳುವುದೆಂಬ ಮಾತಿನಿಂದ ಭೀಷ್ಮ ದ್ರೋಣ ಮುಂತಾದವರ ಮನಸ್ಸಿನ ನಿಶ್ಚಯದ ಸಂಗತಿಗೆ ತಕ್ಕ ಸಮರ್ಥನೆಯನ್ನು ಸಿದ್ಧಪಡಿಸಿದಂತಾಯಿತು. ಸಭೆಯಲ್ಲಿದ್ದವರೆಲ್ಲರಿಗೂ ಇದು ಸರ್ವಹಿತಕರವಾಗಿ ತೋರಿತು. ಈ ನಾರದ ಮುನಿ ಕಲಹಪ್ರಿಯನಲ್ಲ, ಸ್ನೇಹಪ್ರಿಯನೆಂದು ಹೊಗಳುವಂತಾಯಿತು. ಯಾರೂ ಎರಡು ಮಾತಿಲ್ಲದೆ ತಲೆದೂಗಿದರು. ಆಗ ಕೌರವನು ಯಾದವರಲ್ಲಿ ತನಗೆ ಆದ ವಿರೋಧದಿಂದ ಒಂದಿಷ್ಟು ಕೋಪ ತಾಳಿ ಹೀಗೆಂದನು.

೧೮. ಕೃಷ್ಣನ ಮಡದಿಯರಲ್ಲಿ ಒಬ್ಬಳಾದ ಜಾಂಬವತಿಯ ಪುತ್ರನಾದ ಸಾಂಬನು ಕೆಟ್ಟ ಕೆಲಸ ಮಾಡಿದಾಗ ಅವನನ್ನು ಬಂಧಿಸಿ ಇಟ್ಟೆವು. ಆಗ ಬಲರಾಮಾದಿಗಳು ಬಂದರು. ಅವರನ್ನು ಸದೆಬಡಿಯ ಬೇಕಾಗಿತ್ತು. ಆದರೆ ಸಂಧಾನಕ್ಕೆ ಒಪ್ಪಿದುದು ತಪ್ಪಾಯಿತು. ಆ ತಪ್ಪಿನ ಕುಂದನ್ನು ನಾವು ಈಗ ಕಳೆಯೋಣ. (ಗದ್ಯ) ಕೌರವನು ಹೀಗೆನ್ನಲು, ನಾರದನು ತನ್ನ ಕಾರ್ಯ ಕೈಗೂಡಿತೆಂಬ ಸಂತೋಷದಿಂದ ಶಿವನನ್ನು ನೆನೆಯುತ್ತ ಆ ಸಭೆಯ ನಮಸ್ಕಾರಗಳನ್ನು ಸ್ವೀಕರಿಸಿ ಆಕಾಶಕ್ಕೆ ನೆಗೆದು ತೆರಳಿದನು. ಆಗಲೇ ಸೈನ್ಯ ಸಿದ್ಧತೆಯ ರಣವಾದ್ಯಗಳ ಗಂಭೀರಧ್ವನಿಯೂ ಸೇನಾಪತಿಗಳ ಆಜ್ಞೆಯೂ

ಉ. ಮಾ.ಇನ್ನೆಗಮಿರ್ದೆವಾಮುದಕ ದುಗ್ಧ ವಿಮಿಶ್ರಣದಂದದಿಂದೆಯಿ
ದೆನ್ನನೆ ರಾಜಹಂಸನಜಿದಾಯ್ದು ಮನೋಹರಿ ಒಯ್ದು ಬಂಡಣ ಕ್ಕೆನ್ನ ವಿಯೋಗಮಂ
ನಿನಗೆ ಮೂದೆವಸಕ್ಕೆಯೆಗೆಯ್ವನಂತು ನೀ
ನನ್ನೆವರಂ ಮನಕ್ಕೆ ಮಱುಕಂದರದಿರ್ ಬರುವೆಂ ಮನಸ್ಸಖೀ ॥೧೯॥

ಗದ್ಯ ॥ ಎಂದೊಡಮಾ ಕಾದಲೆಯಿಂತು ನುಡಿಗುಂ –

ಉ.ಮಾ. ಪಾಲನೆ ಬೇಱೆಮಾಡೆ ಜಲಮೇಕದನಾರ್ಗುಡಿವರ್ ? ದಿನಂಗಳಿಂ
ಮೇಲದು ನಾತವುಟ್ಟಿ ಪುಱುಪುಟ್ಟಲದಂತುಟೆ ಕೆಟ್ಟುಪೋಕುಮಾ
ನಾಲಯದೊಳ್ ಯುಗತ್ರಯ ಸುದೀರ್ಘ ದಿನತ್ರಯಮಿರ್ದು ನೋಡುತಾ
ಮೇಲೆಯದೆಲ್ಲಿಯಿಲ್ಲಿಯೆಯೊ ಅಲ್ಲಿಯೊ ಮೇಣೊಡಗೂಡಲಿರ್ದಪೆಂ ॥೨೦॥

ಒಟ್ಟೊಟ್ಟಿಗೆ ದಿಕ್ಕುದಿಕ್ಕಿಗೆ ಹರಿದವು. ಸೈನ್ಯದವರಾಗಿ ಸೇರಿದ್ದ ವೀರರು ತಮ್ಮ ತಮ್ಮ ಮಕ್ಕಳನ್ನೂ ಪತ್ನಿಯರನ್ನೂ ಮೂರು ದಿನಗಳ ಮಟ್ಟಿಗೆ ಅಗಲಿಕೆಗಾಗಿ ಸಂತವಿಸುತ್ತಿದ್ದರು. ಅವರೊಳಗೆ ಒಬ್ಬನು ದುಃಖಿಸುವ ತನ್ನ ಪತ್ನಿಯೊಡನೆ ಇಂತೆಂದನು.

೧೯. ನನ್ನ ಮನಸ್ಸಿನ ಗೆಳತಿಯೇ, ಇದುವರೆಗೂ ನಾನು ಮತ್ತು ನೀನು ಹಾಲು ನೀರು ಬೆರೆತಂತೆ ಒಂದಾಗಿದ್ದೆವು. ಇಂದು ನನ್ನನ್ನು ರಾಜನೆಂಬ ಹಂಸನು ತಿಳಿದು ಆಯ್ದು ಯುದ್ಧಕ್ಕೆ ತೆರಳುವಂತೆ ಮಾಡಿ ನಿನಗೆ ಮೂರು ದಿಗಳ ಅಗಲಿಕೆಯನ್ನು ಮಾಡುತ್ತಾನೆ. ಅಂತೂ ನೀನು ಅದುವರೆಗೆ ಮನಸ್ಸಿಗೆ ದುಃಖ ತಂದು ಕೊಳ್ಳದಿರು. ನಾನು ನಿಶ್ಚಯವಾಗಿ ಬರುವೆನು.

(ಗದ್ಯ) ಹೀಗೆ ಹೇಳಿದಾಗ ಪ್ರಿಯೆಯು ಹೀಗೆಂದಳು –

೨೦. ನೀರಿನೊಂದಿಗೆ ಸೇರಿದ ಹಾಲನ್ನು ಬೇರೆ ಮಾಡಿದರೆ ಆ ನೀರು ಏಕೆ? ಅದನ್ನು ಯಾರು ಕುಡಿಯುತ್ತಾರೆ? ದಿಗಳಾದ ಮೇಲೆ ಅದು ದುರ್ವಾಸನೆಗೊಂಡು, ಹುಳುಗಳುಂಟಾಗಿ ಕೆಟ್ಟು ಹೋಗುವುದು. ಹಾಗೆಯೇ ನಾನು ಮನೆಯಲ್ಲೆ ಮೂರು ಯುಗಗಳಷ್ಟು ದೀರ್ಘವೆನಿಸುವ ಮೂರು ದಿನ ಮಾತ್ರ ಇದ್ದು ನೋಡುತ್ತಾ ಆ ಮೇಲೆ, ಅದೆಲ್ಲಿ? (ನೀನು ಬಂದರೆ) ಇಲ್ಲಿ, (ಬಾರದಿದ್ದರೆ) ಅಲ್ಲಿ (ಪರಲೋಕದಲ್ಲಿ) ಒಂದುಗೂಡಲಿದ್ದೇನೆ (ಅರ್ಥಾತ್ ಆತ್ಮಹತ್ಯೆ ಮಾಡಿಕೊಳ್ಳುವೆನು).

ಕಂದ ॥ ಮೂದೆವಸದಿನೆಂದೊಡಮುಂ
ಪಾದದೆ ಪೊರಳುತ್ತೆ ತಡೆಯೆ ಸತಿಸುತರೊರ್ವಂ
ಮೂದೆವಸದ ಕುರುರಾಜ ವಿ
ನೋದಸಭಾಲೋಕನಕ್ಕೆ ಪೋದಪೆನೆಂದಂ ॥೨೧॥

ಗದ್ಯ ॥ ಮುತ್ತಮೊರ್ವಂ ಮೊನೆಗಳ್ಕರ್ತಂ ತನ್ನ ಬಾರಿಯಂ ಬಾರಿಸಲಾಱದೆ –

ಕಂದ ॥ ಬಿಸುಸುಯ್ಯುತೆ ಕೆಮ್ಮುತೆ ಪೊಡೆ
ಯಸಿದಾಗಿಸಿ ಕಂದಿ ನರಳ್ದು* ಕಾಳುಡೆಯೊಳ್ ಮೆ
ಯ್ಯುಗ್ಗಿಸಿದಸ್ವಸ್ಥನವೋಲ್ ಕಾ
ಣಿಸಿದಂ ಪೆಂಕುಳಿ ಬರ್ದುಕುವಾಸೆಯನುಟಿಯಂ ॥೨೨॥

ಗದ್ಯ ॥ ಅಂತಾ ಮರುದೆವಸದ ಮೊನೆವಯಣಕ್ಕೆ ತಪ್ಪಿಸಿದನಂತು ಕುರುರಾಜನ ಕೃತಕರ್ಮ ಫಲಮೆಂಬಿನಂ ಕೆಲರೊಳಪೂರ್ಣೋತ್ಸಾಹಮುಂ, ಕೆಲಂಬರೊಳನಿಷ್ಟಸೂಚನೆಯುಂ ಪುಟ್ಟುತ್ತಿರೆ – ಮರುವಗಲ್ ಪಡೆವಯಣಕ್ಕೆ, ಪೊಟ್ತ್ರಾಗಿರ್ದುದಱಿಂ ಪಡೆವಳ್ಗಿರುಳ ನಿದ್ದೆ ಬೀಳ್ವಂತಿರುಳ ತಿರುಳುಂ ಬೀಯೆ ಬೆಳಕಾಗೆ – ನಿದ್ದೆಗೆಟ್ಟ ಸೇದೆಯ ಸುಯ್ಲಿನಂತೆ ಗಾಳಿಯೆಸಗಿಯುಂ, ಕಣ್ಣೂದುವಂತೆ ತಂಗಾಳಿಗೆ ಮರುಂಗಳಲುಗೆಯುಂ – ಕಣ್ಣ ಕಂಪಿನಂತೆ ಮೂಡುಸಂಜೆ ತೊಳಗೆಯುಂ – ಸುಮವಿಕಸನ ಸಂಭ್ರಮದಿಂದುಣ್ಮಿದ ಬೆಮರಂತೆಲೆಗಳೊಳ್ ತಿರುವನಿಗಳ್ ಸೊಗಯಿಸೆಯುಂ – ಕಾಳೆಗವಡೆಗಳಗ್ಗಳಿಕೆಗಳನೀಕ್ಷಿಪ ಬೆರಗಿಂದಿರುಳೊರಗದನಂತೆ ಪಗಲರಸಂ ಬಿಸುಗೆಯ್ಗಳಂ ನೆಲನೊಳೂರಿ ಮೂಡುವೆಟ್ಟಂ ನಿಲ್ಕಿ ನೋಡುತ್ತಿರ್ಪುದುಂ – ಪರಿವರ್ತಿತ ಪ್ರಾತಃಕರ್ಮರಾದ ವೀರರ ಸೇನಾಗಣಂ ನೆರೆಯೆ –

೨೧. ಇನ್ನೊಂದು ಮನೆಯಲ್ಲಿ–ಮೂರು ದಿನ ಮಾತ್ರ ಅಗಲುತ್ತೇನೆ ಎಂದು ಹೇಳಿದಾಗ ಆತನ ಹೆಂಡತಿ ಮತ್ತು ಮಕ್ಕಳು ಹೋಗಬೇಡಾ ಎಂದು ಪಾದಕ್ಕೆ ಬಿದ್ದು ಹೊರಳುತ್ತಿದ್ದಾಗ, ಆ ಸೈನಿಕನು – " ಕೌರವರಾಜನ ಮೂರು ದಿವಸದ ವಿನೋಧ ಸಭೆಯನ್ನು ನೋಡಲಿಕ್ಕಾಗಿ ಹೋಗುತ್ತೇನೆ" ಎಂದನು. (ಗದ್ಯ) ಇನ್ನೊಬ್ಬನು ಯುದ್ಧಕ್ಕೆ ಹೆದರಿದವನು ತನ್ನ ಸರದಿಯನ್ನು ನಿವಾರಿಸಲಾರದೆ, ಹೇಡಿಯಾಗಿ ಹೀಗೆ ಕಪಟದ ನಟನೆ ಮಾಡಿದನು –

೨೨. ಬಿಸಿಯಾಗಿ ಉಸಿರು ಬಿಡುತ್ತಾ ಕೆಮ್ಮುತ್ತಾ ಹೊಟ್ಟೆಯನ್ನೂ ಸಂಕುಚಿತಗೊಳಿಸಿ, ಬಾಡಿ ನರಳುತ್ತ ತಲೆದಿಂಬಿನ ಮೇಲೆ ಬಿದ್ದು, ಅಸ್ವಸ್ಥನಂತೆ ಕಾಣಿಸಿಕೊಂಡನು. ಹೆಣ್ಣಿನಂತಹ ಹೇಡಿಯು ಬದುಕುವ ಆಸೆಯನ್ನು ಬಿಡಲಾರನು ಎಂಬುದಿಲ್ಲಿ ಹೊಳೆವ ಸಂಗತಿ. (ಗದ್ಯ) ಅಂತೂ ಆ ಮರುದಿನದ ಪ್ರಯಾಣಕ್ಕೆ ತಪ್ಪಿಸಿ ಕೊಂಡನು. ಈ ರೀತಿಯಾಗಿ ಕೌರವನು ಮಾಡಿದ ಕರ್ಮದವೆಂಬಂತೆ ಕೆಲವರಲ್ಲಿ ಅಪೂರ್ಣವಾದ ಉತ್ಸಾಹವೂ ಕೆಲವರಲ್ಲಿ ಅನಿಷ್ಟದ ಸೂಚನೆಯೂ ಹುಟ್ಟುತ್ತಿರಲು ಮುಂದಿನ ಹಗಲೇ ಸೈನ್ಯದ ಸಾಗಣೆಗೆ ಸಮಯವಾಗಿದ್ದುದರಿಂದ ಸೈನಿಕರಿಗೆ ರಾತ್ರಿಯ ನಿದ್ದೆ ಕೊನೆಗೊಳ್ಳುವಂತೆ ರಾತ್ರಿಯ ಮುಖ್ಯಭಾಗವೂ ಮುಗಿದು ಬೆಳಕು ಮೂಡಿತು. ಆಗ ನಿದ್ದೆಗೆಟ್ಟ ಆಯಾಸದ ಉಸಿರಿನಂತೆ ಗಾಳಿ ಬೀಸಿತು. ಕಣ್ಣಿನ ತೂಕಡಿಕೆಯಂತೆ ಮರಗಳು ತಂಪಾದ ಗಾಳಿಗೆ ಅಲುಗಿದವು. ಕಣ್ಣಿನ ಕೆಂಪಿನಂತೆ ಪ್ರಾತಃಸಂಧ್ಯೆ ಪ್ರಕಾಶಿಸಿತು.

ಕೌರವ ಪಾಂಡವಾನುರಾಗಾಭಿಮಾನಿಯುಂ ಮಹಾಸತ್ವನುಂ ಜ್ಞಾನಿಯುಮಪ್ಪ ಗಂಗಾಸೂನುವುಂ– ಕೌರವ್ಯ ಕಾಂತೇಯ ರಣಕೌಶಲಾಚಾರ್ಯವಪ್ಪ ದ್ರೋಣಾಚಾರ್ಯನುಂ ಅನನುಭೂತ ತಿರಸ್ಕಾರ ವಚಸ್ತೋಮನುಂ ಬದ್ಧ ಗುರು ಪ್ರೇಮನುಮಪ್ಪಶ್ವತ್ಥಾಮನುಂ – ಸುಯೋಧನ ಮಾನಿತ ಪ್ರಧಾನನುಂ ಪ್ರಿಯಮಿತ್ರನುಮಪ್ಪ ಮಿತ್ರಪುತ್ರನುಂ– ಮತ್ತವಾರಣಾರೋಹಣ ಸಮರ್ಥನುಂ ರಿಪುವಾರಣ ವಿದಾರಣಾಸಾಧಾರಣ ಪ್ರಹರಣ ಶಕ್ತನುಂ ಹಸ್ತಿ ಸೈನ್ಯಾಧಿಪನುಮಾಗಿ ಪೆರ್ಮೆವೆತ್ತ ಭಗದತ್ತನುಂ– ವೈರಿವಿಜಯೋಪಾಯ ತಂತ್ರ ಬುದ್ಧಿಬಲನಪ್ಪ ಸೌಬಲನುಂ–ದುಶ್ಶಾಸನ ವಿಕರ್ಣ ದುರ್ಮರ್ಷಣ ಮುಂತಪ್ಪ ಕುರುವೀರಸಹೋದರರುಂ–ಲಕ್ಷ್ಮಣಾದಿ ಕೌರವತನೂಜನಿಕಾಯಮಂ–ಸಿದ್ಧ ಕರಿರಥಾಯುಧರಾಗಿ ರಣೋತ್ಸಾಹಪೂರ್ಣರ್ ಗೊಂದಣಿಸಿ ನಿಲೆ–ದುರ್ಯೋಧನಂ ನಮಗೀಗಳಾವುದು ಕಜ್ಜಮೆಂದು ಪ್ರಸ್ತಾವಿಸಿದಾಗಳ್ ಪತ್ತೆಯಿರ್ದ ದ್ರೋಣತನೂಜನಿಂತೆಂದಂ–

ಹೂಗಳನ್ನು ಅರಳಿಸುವ ಸಂಭ್ರಮದಿಂದ ಹೊರಬಂದ ಬೆವರಿನಂತೆ ಎಲೆಗಳಲ್ಲಿ ಸಣ್ಣ ಹನಿಗಳು ಸೊಗಸಾಗಿ ಕಾಣಿಸಿದವು. ಯುದ್ಧ ಮಾಡುವ ಸೈನ್ಯಗಳ ಹಿರಿತನಗಳನ್ನು ನೋಡುವ ಬೆರಗಿನಿಂದ ರಾತ್ರಿ ನಿದ್ರೆ ಮಾಡದವನಂತೆ ಸೂರ್ಯನು ತನ್ನ ಬಿಸಿಯಾದ ಕರಗಳನ್ನು (ಕಿರಣಗಳನ್ನು) ನೆಲದಲ್ಲಿ ಊರಿ ಪೂರ್ವಾದ್ರಿಯಿಂದ ನಿಲುಕಿ ನೋಡುವಂತಿದ್ದನು. ಆಗ ಪಾತಃಕಾಲದ ನಿತ್ಯಕರ್ಮಗಳನ್ನು ಮುಗಿಸಿದ ವೀರರ ಸೈನ್ಯದ ಗಣಗಳು ನೆರೆದವು.

ಕೌರವ–ಪಾಂಡವ ಎಂಬ ಉಭಯರಲ್ಲಿ ಪ್ರೀತಿಯವನೂ ಮಹಾ ಸತ್ವಶಾಲಿಯೂ ಜ್ಞಾನಿಯೂ ಆದ ಗಂಗಾಪುತ್ರ ಭೀಷ್ಮನೂ ಕೌರವ ಪಾಂಡವರಿಗೆ ಯುದ್ಧ ಕೌಶಲಕ್ಕೆ ಆಚಾರ್ಯನಾದ ದ್ರೋಣಾಚಾರ್ಯನೂ ತಿರಸ್ಕಾರದ ಮಾತುಗಳನ್ನು ಕೇಳಿದ ಅನುಭವವಿಲ್ಲದವನೂ ಗುರುಪ್ರೇಮಬದ್ಧನೂ ಆಗಿರುವ ಅಶ್ವತ್ಥಾಮನೂ ಕೌರವನ ಮನ್ನಣೆಗೆ ಒಳಗಾದ ಪ್ರಧಾನನೂ ಪ್ರಿಯಮಿತ್ರನೂ ಆದ ಸೂರ್ಯಪುತ್ರ ಕರ್ಣನೂ ಮದ್ದಾನೆಯ ಮೇಲೆ ಕುಳ್ಳಿರುವ ಸಾಮರ್ಥ್ಯವುಳ್ಳವನೂ ಅಸಾಮಾನ್ಯವಾದ ಏಟಿನಿಂದ ಶತ್ರುಗಳ ಆನೆಗಳನ್ನು ಸೀಳತಕ್ಕ ಶಕ್ತಿಶಾಲಿಯೂ ಆನೆಯ ಸೇನೆಗೆ ಒಡೆಯನೂ ಆಗಿ ಹಿರಿಮೆ ತಾಳಿದ ಭಗದತ್ತನೂ ಶತ್ರುವನ್ನು ಜಯಿಸುವ ಕಾರ್ಯತಂತ್ರದ ಬುದ್ಧಿಶಕ್ತಿಯ ಶಕುನಿಯೂ ದುಃಶಾಸನ–ವಿಕರ್ಣ–ದುರ್ಮರ್ಷಣ ಮುಂತಾದ ಕುರುವಂಶದ ವೀರಸೋದರರೂ ಲಕ್ಷಣ ಮುಂತಾದ ಕೌರವಪುತ್ರ ಸಮೂಹವೂ ಅಣಿಯಾದ

ಕಂದ ॥ ಯದುಬಲಮಾಗಮಿಪಿನಮೆ
ಮ್ಮಿದುಬಲಮುಂ ಸಾರ್ಗೆ ಯುದ್ಧ ಭೂಮಿಗೆ ಭರದಿಂ
ಪುದುಗೊಂಬಂ ಪಾಂಡವರಂ
ಕದನಕ್ಕಡುನೀರ್ಗೆಯಗ್ಗಿ ನೆರವಾಗುವವೊಲ್ ॥೨೩॥

ಇನ್ನಿದಱೊಳ್ ಮಂತಣಮೇ
ನನ್ಯಮೆ ಸರ್ವಾನುಮತಮಿದೆನೆ ತನ್ಮತಮಂ
ಮನ್ನಿಸದ ಕರ್ಣನೆಂದಂ
ಜನ್ನವಿರನ ಮತದ ನುಡಿಗೆ ಸಹಮತಮೆ ಗಡಾ ! ॥೨೪॥

ಮ. ಪ್ರ. ಮೊನೆಗಂತಾಗಾಗದಾವಿನ್ನೆಬರಮಂಗಳೊಳ್ ಕೂಡದೇಂ ಕೂಡಿ ಬಾಳ್ವಾ
ಮನಮೇ? ಪೋ ಕೂಡದಾನಲ್ ಬೆದರ್ವ*ನಿವನ ನಾಣ್ಗೆಟ್ಟ ಮಾತಿರ್ಕೆ ಕುಂತೀ
ತನಯರ್ ಬಾಳ್ದಿರ್ಕೆ ತದ್‌ದ್ವಾರಕೆಗೆ ತೆರಳುತಿರ್ದಧ್ವದೊಳ್ ತಾಗುಗೆಮ್ಮೀ
ಮೊನೆಯೊಡ್ಡಿಂತೆಂದು ದುಜ್ಜೋದನನ ನುಡಿಯಲಾ ದ್ರೋಣಿಗಾ ಮಾತಸಹ್ಯಂ ॥೨೫॥

ಗದ್ಯ ॥ ಅಂತಸಹ್ಯಮಾಗಿ ತಾನಿಂತೆಂದಂ –

ಗಜರಥ ಆಯುಧವುಳ್ಳವರಾಗಿ ಯುದ್ಧದಲ್ಲಿ ಉತ್ಸಾಹ ತುಂಬಿದವರು ಗುಂಪಾಗಿ ಬಂದು ನಿಂತರು. ಆಗ ದುರ್ಯೋಧನನು ನಾವೀಗ ಮಾಡತಕ್ಕ ಕಾರ್ಯವೇನು ಎಂದು ಪ್ರಸ್ತಾವಿಸಿದನು. ಆಗ ಹತ್ತಿರದಲ್ಲಿದ್ದ ಅಶ್ವತ್ಥಾಮನು ಹೀಗೆಂದನು.

೨೩ . ಪಾಂಡವರೊಂದಿಗೆ ಕಾದಾಡುವುದಕ್ಕಾಗಿ ಯಾದವ ಸೈನ್ಯ ಬರುವಷ್ಟರಲ್ಲಿ ನಮ್ಮ ಈ ಸೈನ್ಯವೂ ಭರದಿಂದ ಯುದ್ಧಭೂಮಿಗೆ ಹೋಗಲಿ. ಅಡುಗೆಯ ನೀರಿಗೆ ಅಗ್ನಿ ಸಹಾಯಕವಾಗುವಂತೆ, ನಾವೂ ಯುದ್ಧಕ್ಕಾಗಿ ಪಾಂಡವರ ಜೊತೆ ಸೇರೋಣ.

೨೪. ಇದರಲ್ಲಿ ಇನ್ನು ಭಿನ್ನಾಭಿಪ್ರಾಯವುಂಟೆ? ಇದೇ ಸರ್ವಾನುಮತ ಎಂದಾಗ ಆ ಅಭಿಪ್ರಾಯವನ್ನು ಮಾನ್ಯ ಮಾಡದ ಕರ್ಣನು ಹೀಗೆಂದನು – "ಈ ಜನ್ನಿವಾರದವನ ಅಭಿಪ್ರಾಯದ ಮಾತಿಗೆ ಸಹಮತ ಹೇಗಾದೀತು?

೨೫. ಯುದ್ಧಕ್ಕೆ ಆ ರೀತಿ ಆಗಲೇಬಾರದು. ಇದುವರೆಗೂ ಶತ್ರುಗಳಾದ ಪಾಂಡವರ ಜೊತೆಗೂಡದೆ ಇದ್ದು, ಈಗ ಕೂಡಿ ಬಾಳುವ ಮನಸ್ಸೇ? ಹೋಗಲಿ, ಅದು ಕೂಡದು (ಸಾಧ್ಯವಿಲ್ಲ). ಇವನು ಯುದ್ಧಮಾಡಲು ಹೆದರುತ್ತಿದ್ದಾನೆ. ಇವರ ನಾಚಿಕೆಗೇಡಿನ ಮಾತು ಹಾಗಿರಲಿ ಕುಂತೀಸುತರು ಅವರಷ್ಟಕ್ಕೆ ಬದುಕಿರಲಿ. ನಾವು ಸೈನ್ಯಸಹಿತ ಆ ದ್ವಾರಕೆಯ ಕಡೆಗೆ ತೆರಳುತ್ತಾ ದಾರಿಯಲ್ಲೇ ಯಾದವಸೈನ್ಯವನ್ನು ಪ್ರತಿಭಟಿಸಬೇಕು – ಹೀಗೆ ಕರ್ಣನು ಕೌರವನಿಗೆ ಹೇಳಿದಾಗ ಅಶ್ವತ್ಥಾಮನಿಗೆ ಆ ಮಾತು ಅಸಹನೀಯವಾಯಿತು. ಅವನು ಹೀಗೆಂದನು.

ಉ. ಮಾ ಆಂ ತಱಿಸಂದುದಂ ಸಕಲ ಸಭ್ಯರ ಭಾವನೆಯಂ ನಿವೇದಿಸ
ಲ್ಕಿಂತು ಮತೀಯ ವಿದ್ವಿಷತೆಯಿಂ ಧರಣೀಸುರನಿಂದೆಗೆಯ್ವ ಮೀ
ನಾಂತಕ ತಾರುಗರ್ ವಿಮಳವಕ್ತ್ರದೊಳಂ ಕೊಳೆಗಾಂಬ ಮಾಟಕ್ಕೆಯಾ
ಯ್ತೆಂತದಕಸ್ತ ಸೂಕ್ಷ್ಮಮತಿಯೇ ನಿನಗೆನ್ನೊಡನಿಂತು ಗರ್ವಮೋ ! ॥೨೬॥

ಗದ್ಯ ॥ ಆ ಮಾತಂ ಕೇಳ್ದಾ ಕರ್ಣನರ್ಣವದಂತೆ ಪ್ರಾರ್ಮಸಗಿಯಿಂತೆಂದಂ –

ಕಂದ ॥ ಗುಱಿಗೆಯ್ದ ಕದನಕಿದು ತಾಂ
ನೆಱೆ ಪೀಳಿಗೆಯಕ್ಕೆ ಚಳಕಮುಂ ಪೆರ್ಚುಗೆ ಬೇ
ಸಱಿಕೊಡಂ ಪಿಂಗುಗೆ ತೋಳ್ಗಳ
ತುಱಿಯುಂ ಪೋಕೆಂದು ನಿಂದು ಬಿಲ್ಲಣಿಯಾಂತಂ ॥೨೭॥

ಎನ್ನ ತಱಿಸಲಮೊ ಬಲಮೋ
ಜನ್ನವಿರನ ಪೇಟ್ದ ತಱಿಸಲಮೊ ಬಲಮೋ ಮೇ
ಣೆನ್ನಿವಱಿಕೊಳ್ ಮಾನ್ಯಮೆನಿ
ಪ್ಪನ್ನವನಾಂ ದ್ರೋಣಿಗಾಂತು ತೋರ್ದಪೆನೀಗಳ್ ॥೨೮॥

ಗದ್ಯ ॥ ಎಂದು ಬಿಗುರ್ತು ನಿಲೆ. ಸತ್ತ್ರಾಣವಪ್ಪಾ ದ್ರೋಣಪುತ್ರನುಂ ತನ್ನುಪಾರ್ಜಿತ ಸತ್ತ್ವಾಲೋಕನ ಮೀಗಳೆ ಅಕ್ಕೆ ಎಂದು ಹಂದದೆ ಕೆಯ್ಯೊಡ್ಡೆ – ಇಂತಸಕಱಿಯೆ ಕಾಳಗದೋಂಟದ ಗೆಲ್ಲಡಕೆಯಂ ಪಱಿವ ಪಡೆಕೊಕ್ಕೆ ಮುಱಿಯದೆಂತು ಮಾಣ್ಗುಮೆಂದು ಸುಯೋಧನನವರ ಸಮರಮಂ ಮಾಣಿಸಿ – ತಾಂ ಕರ್ಣಪಕ್ಷಪಾದಿಯುಂ ತದಾಲೋಚಿನಿಮೆ ಪರಮಫಲದಂ ಮಾನ್ಯನುಮಾಗಿರ್ದುದಱಿಂ

೨೬. ಎಲೈ ಮೀಂಗುಲಿಗನೇ (ಬೆಸ್ತನೇ), ಸಕಲಸಭ್ಯರ ಮನೋಭಾವನೆಯಾಗಿದ್ದು ನಾನು ನಿಶ್ಚಯಿಸಿದುದನ್ನು ನಿವೇದಿಸಿದಾಗ, ನೀನು ಹೀಗೆ ಜಾತಿಮತ ದ್ವೇಷದಿಂದ ಬ್ರಾಹ್ಮಣನಿಂದೆ ಮಾಡುವೆಯಲ್ಲವೆ? ಕಾಲನ ಕೊಳಕಾದ ಉಗುರು ನಿರ್ಮಲವಾದ ಮುಖದಲ್ಲಿ ಕೊಳೆಯನ್ನು ಕಾಣುವಂತೆ ಏಕಾಯಿತೋ? ಸೂಕ್ಷ್ಮಬುದ್ಧಿಯಿಲ್ಲದವನೇ, ನಿನಗೆ ನನ್ನ ಮೇಲೆ ಇಷ್ಟೊಂದು ಗರ್ವವೇ? (ಗದ್ಯ) ಅಶ್ವತ್ಥಾಮನ ಈ ಮಾತನ್ನು ಕೇಳಿದ ಕರ್ಣನು ಸಮುದ್ರದಂತೆ ಉದ್ರೇಕಗೊಂಡು ಕೋಪವುಳ್ಳವನಾಗಿ ಹೀಗೆಂದನು–

೨೭. ಮುಂದೆ ಆಗಲಿಕ್ಕಿರುವ ಯುದ್ಧಕ್ಕೆ ಇದೇ ವಿಶೇಷದ ಪೀಠಿಕೆಯಾಗಲಿ, ಚಾತುರ್ಯವೂ ಹೆಚ್ಚಲಿ, ಬೇಸರವು ಒಡನೆಯೇ ಹಿಂಗಿಹೋಗಲಿ. ತೋಳುಗಳ ತೀಟೆ ಹೋಗಲಿ! ಎಂದು ನಿಂತುಕೊಂಡು ಬಿಲ್ಲುಬಾಣಗಳನ್ನು ಹಿಡಿದನು.

೨೮. ನನ್ನ ನಿರ್ಣಯವೋ ಶಕ್ತಿಯೋ, ಈ ಜನಿವಾರದವನು ವ್ಯಕ್ತಪಡಿಸಿದ ನಿರ್ಣಯವೋ ಶಕ್ತಿಯೋ, ಇವೆರಡರಲ್ಲಿ ಯಾವುದು ಮಾನ್ಯವೆಂಬುದನ್ನು ನಾನು ಈ ಅಶ್ವತ್ಥಾಮನಿಗೆ ಎದುರಾಗಿ ಕಾದಾಡಿ ಈಗಲೇ ತೋರಿಸುವೆನು. (ಗದ್ಯ) ಹೀಗೆ ಹೇಳಿ ಕರ್ಣನು ಭಯಂಕರವಾಗಿ ನಿಂತು ಕಾಣಿಸಲು, ಶಕ್ತಿಶಾಲಿಯಾದ ಅಶ್ವತ್ಥಾಮನು ಕೂಡ ತಾನು ಗಳಿಸಿದ ಸತ್ತ್ವದ ಆಲೋಕನವು ಈಗಲೇ ಆಗಲಿ ಎಂದು ಅಲುಗಾಡದೆ ಕೈ ನೀಡಿದನು. ಹೀಗೆ ಕೈಮೀರಿ ವರ್ತಿಸಿದರೆ ಯುದ್ಧವೆಂಬ ಅಡಕೆತೋಟದ ಜಯವೆಂಬ ಅಡಕೆಗೊನೆಯನ್ನು ಹರಿದು ಹಾಕುವ ಸೈನ್ಯವೆಂಬ ದೋಟಿ ಮುರಿಯದೆ ಹೇಗೆ

ದೋರಣೆಗೆ ಬೀರವಡೆ ಪೋಗಿ ತಾಗುಗೆ ಎಂದನುಮತಿಸಲೊಡಂ – ಕರ್ಣನಿಂದುಪೇಕ್ಷೆ ಯುಮನಾಣ್ಮನತ್ತಣಿಂ ನಿರ್ಲಕ್ಷತೆಯುಮಂ ಪರಿಭಾವಿಸಿದಾ ದ್ರೋಣಿ ನೀಡುಂ ನೋಡಿ

ಕಂದ ॥ ತಿಳಿದವರ್ಗ‍ಳ್ ತಿಳಿನುಡಿವರ್
ಕುಳದವರ್ಗ‍ಳ್ ರಾಜಮಾನ್ಯರಿಂದಾಗರ್ ಪೋ
ತಿಳಿಯದರಟೆನುಡಿ ನುಡಿವರ್
ಕುಳಹೀನರ್ ಮಾನ್ಯರಲ್ತೆ ಕಾಲಮಹಿಮೆಯಿಂ ॥೨೯॥

ಹೀನರನೆತ್ತುವ ನೆವದಿನ
ಹೀನರನಿಳಿಕೆಯ್ಯಲಕ್ಕುಮೇ ಕಾಲ್ಗೆಸರಂ
ಹೀನಗೊಳಿಸಲ್ಕೆ ತೆಗೆದದ
ನಾನನಕೇಂ ಸವರಿದಪರೆ ಬಲ್ಲವರಿಳೆಯೊಳ್? ॥೩೦॥

ಇದ್ದೀತು? ಎಂದು ಕೌರವನು ಅವರ ಅನ್ಯೋನ್ಯ ಯುದ್ಧವನ್ನು ತಡೆದನು. ತಾನು ಕರ್ಣನ ಪಕ್ಷ ಹಿಡಿದು ವಾದಿಸುವವನೂ, ಕರ್ಣನ ಆಲೋಚನೆಯೇ ಪರಮ ಫಲದಾಯಕವೆಂದು ಮನ್ನಿಸುವವನೂ ಆಗಿದ್ದುದರಿಂದ, ನಮ್ಮ ವೀರ ಸೈನ್ಯವು ದ್ವಾರಕೆಯ ಕಡೆಗೆ ಹೋಗಿ ಯುದ್ಧ ಮಾಡಲಿ – ಎಂದು ಅನುಮತಿಯಿತ್ತನು. ಆಗ ಅಶ್ವತ್ಥಾಮನು ಕರ್ಣನಿಂದ ತಿರಸ್ಕಾರವನ್ನೂ ಒಡೆಯನಾದ ಕೌರವನಿಂದ ನಿರ್ಲಕ್ಷತೆಯನ್ನೂ ಪರಿಭಾವಿಸಿ ದೀರ್ಘವಾಗಿ ನೋಡಿ ಹೀಗೆಂದುಕೊಂಡನು–

೨೯. ಇಂದು (ಈ ಕಾಲದಲ್ಲಿ) ತಿಳಿದವರು, ತಿಳಿವಳಿಕೆಯ ಮಾತನ್ನಾಡುವವರು, ಒಳ್ಳೆಯ ಕುಲದವರು ರಾಜನ ಮನ್ನಣೆಗೆ ಪಾತ್ರರಾಗರು. ಹೋಗಲಿ! ತಿಳಿಯದವರು ಕೆಟ್ಟ ಮಾತುಗಳನ್ನಾಡುವವರು ಕುಲಹೀನರು ಕಾಲ ಮಹಿಮೆಯೇ ಕಾರಣವಾಗಿ ಮಾನ್ಯರಾಗುವರಲ್ಲವೆ?

೩೦. ಕೀಳಾದವರನ್ನು ಉದ್ಧಾರ ಮಾಡುವ ನೆವದಿಂದ ಕೀಳಲ್ಲದವರನ್ನು ಕೆಳಗಿಳಿಸಬಹುದೆ? ಲೋಕದಲ್ಲಿ ಬಲ್ಲವರು ಕಾಲಿನ ಕೆಸರನ್ನು ಕಳೆಯಲೆಂದು ಅದನ್ನು ತೆಗೆದು ಮುಖಕ್ಕೆ ಸವರುತ್ತಾರೆಯೇ? (ಗದ್ಯ) ಹೀಗೆ ತನ್ನಲ್ಲೇ ನೊಂದು ತಾನು ಒಳ್ಳೆಯ ಶಕುನ ಬಲ್ಲವನಾದುದರಿಂದ ಈ ಸೇನೆಗೆ ಹೇಗಿದ್ದರೂ ಕ್ಷೇಮವಾಗದೆಂದು ಭಾವಿಸಿ, ತಾನು ಕೂಡ ತಿರಸ್ಕಾರಗೊಂಡವನಾದ ಕಾರಣನಿಂದ ಸೈನ್ಯದೊಡನೆ ಬರಲು

ಗದ್ಯ ॥ ಎಂದು ತನ್ನೊಳೆ ನೊಂದು ತಾನುತ್ತಮ ಶಕುನವಿದನುಮಪ್ಪುದಱಿಂದಣೆಗೆಂತಾನುಂ ಕ್ಷೇಮಮಾಗದೆಂಬುದಂ ಬಗೆದು – ತಾನುಮುಪೇಕ್ಷಿತನಾದ ಕತದಿಂ ಸೇನೆಯೊಡನೆ ಬರಲಣ್ಮದೆ – ಕರ್ಣನ ಮಾತಂ ಪಿಡಿದು ನಡೆದೊಡೆ ತನ್ನವಜ್ಞೆ ತತ್ಸೇನೆಗಮಕ್ಕೆ ಎಂದು ನಿರ್ಣಯ ಮಾಗೆ ಪೂಣ್ದು ನುಡಿದು –

ಉ. ಮಾ. ॥

ಬಾರದೊಡೀತನೇಂ ಕಿರಿದೆನಿಪ್ಪುದೆ ಸೇನೆ ಪರಾಕ್ರಮಂ ತಿರ
ಸ್ಕಾರಮನಾಂಪುದೇ ? ಎನುತಿರಲ್ಕಿನಜಾದಿಗಳಲ್ಲಿ ಪಿಂತಿನಿಂ
ಕೂರದುದೇನೆನಲ್ ಪಿರಿಯರುಂ ನಿಲದೆಯ್ದಿದನಂದು ಗೇಹಮಂ
ಬಾರಿಪರಾರುಪೇಕ್ಷಿಕ ಮಹಾಮಹಿಮಾನ್ವಿತನಂ ಧರಿತ್ರಿಯೊಳ್ ? ॥೩೧॥

ಉತ್ಸಾಹಗೊಳ್ಳದೆ ಈ ಕರ್ಣನ ಮಾತಿನಂತೆ ವರ್ತಿಸಿದರೆ, ತನಗಾದ ತಿರಸ್ಕಾರ ಸೈನ್ಯಕ್ಕೂ ಆಗಲಿ – ಎಂದು ನಿಶ್ಚಿತವಾಗಿ ಶಪಥ ಮಾಡಿದನು.

೩೧. ಆಗ ಕರ್ಣ ಮುಂತಾದವರು ಹಿಂದೆ ಇದ್ದುಕೊಂಡು– "ಈ ಅಶ್ವತ್ಥಾಮನು ಬಾರದಿದ್ದರೇನಾಯಿತು? ನಮ್ಮ ಸೈನ್ಯ ಚಿಕ್ಕದಾಗುವುದೆ?" ಪರಾಕ್ರಮವು ತಿರಸ್ಕಾರಗೊಳ್ಳುವುದೆ?– ಎನ್ನುತ್ತಿದ್ದರು. ಪ್ರೀತಿಗೆ ಭಂಗವಾದ ಸಂಗತಿಯೇನು? ಎಂದು ಹಿರಿಯರು ಪ್ರಶ್ನಿಸುತ್ತಿರಲು ಅಶ್ವತ್ಥಾಮನು ನಿಲ್ಲದೆ ತನ್ನ ಮನೆಗೆ ತೆರಳಿದನು. ಲೋಕದಲ್ಲಿ ತಿರಸ್ಕಾರಗೊಂಡ ಮಹಾತ್ಮನನ್ನು ತಡೆಯತಕ್ಕವರು ಯಾರಿದ್ದಾರೆ? (ಗದ್ಯ) ಆ ವೇಳೆಯಲ್ಲಿ ಹಿಂದುಗಡೆ ಇದ್ದ ಭೀಷ್ಮ ಕೃಪ ಮುಂತಾದವರು ಮುಂದೆ ಬಂದು ಸಂಗತಿಯನ್ನು ತಿಳಿದುಕೊಂಡರು. ನಾರದರು ತಿಳಿಸಿದಂತೆ ಕಾರ್ಯವನ್ನು ಸಾಧಿಸದಿದ್ದರೆ, ಮುನಿಯ ಕೋಪವೆಂಬ ಹಗ್ಗವೂ ಅಶ್ವತ್ಥಾಮನ ತಿರಸ್ಕಾರದ ಸಿಟ್ಟೂ ಗುರುಜನರು ವಿಮುಖರಾಗುವ ದೋಷವೂ ಮೂರು ಸೇರಿ ಕ್ಷೇಮವಾಗದಂತೆ ಮಾಡದಿರದು – ಎಂದು ಕೌರವನನ್ನು ಒತ್ತಾಯದಿಂದ ಒಪ್ಪಿಸಿದರು. ಯಾದವರೊಡನೆ ಆಗತಕ್ಕ ಯುದ್ಧದಲ್ಲಿ ನಾವು ಪಾಂಡವರಿಗೆ ನೆರವಾಗುವುದೇ ಸರಿಯಾದುದು ತಕ್ಕುದಾದುದು ಎಂದು ನಿರ್ಣಯಿಸಿದರು.

ಗದ್ಯ ॥ ಆಗಳ್ ಪೆಱಗಿರ್ದ ಭೀಷ್ಮಕೃಪಾದಿಗಳ್ ಮುಂಬಜೆದು ಪರಿಯನಜೆದು – ನಾರದೇರಿತದಂತೆ ಕಾರ್ಯಮಂ ಸಾಧಿಸದೊಡೆ ತತ್ತೋಪಪಾಶಮುಂ – ಗುರುಸುತ ತಿರಸ್ಕಾರ ರೋಷಮುಂ – ಗುರುಜನ ವೈಮುಖ್ಯದೋಷಮುಂ – ಮುಪ್ಪುಜೆಗೊಂಡು ಕ್ಷೇಮನಾಶಮಂ ಮಾಡದಿರದೆಂದು ಸುಯೋಧನನೊತ್ತಂಬದಿಂದೊಡಂಬಡಿಸುತ್ತೆ ಪಾಂಡವರ್ಗೆ ಯಾದವರೊಡನಪ್ಪ ಕದನಕ್ಕೆ ತಾಮೆ ನೆರವಪ್ಪುದೆ ನೇರ್ಪುಂ ವಿಹಿತಮುಮೆಂದು ನಿರ್ಣಯಿಸಿದಾಗಳ್ –

ಕಂದ ॥ ಮುನ್ನೆಂದ ಮಂತಣಂ ದಲ್
ಬಿನ್ನಗೆಯಾದತ್ತೆನುತ್ತೆ ಕರ್ಣನುಮಾಗಳ್
ಕೆನ್ನಂ ಬಗೆಯೊಳ್ ಬೇಸಱೆ
ತನ್ನಯೆ ಪೊಂಕಮುಮದೊಡನೆ ತರ್ಗಿತ್ತಾಗಳ್ ॥೩೨॥

ಗದ್ಯ ॥ ಅಂತೀ ಕೌರವನ ಕೊಂಕಂ ಸಮಱೆ ತಿರ್ದಿ ದಾಯಾದ್ಯರೊಡನೆಂತು ಕೂಡಿಸಲಕ್ಕುಮೆಂ ಬಾಳೊಚನಾಂತರದಿಂ ಭೀಷ್ಮ ದ್ರೋಣ ಕೃಪರ್ಗ್ಗಂ – ಪಿರಿಯರ್ ತನ್ನಿಚ್ಚೆಗೆ ತಡೆಯಿಕ್ಕುವರೆಂದಾ ಚಲದಂತನಪ್ಪ ದುಜ್ಜೋದನಂಗಾ – ತಮ್ಮ ಬಗೆದ ಬಗೆ ಬೀತುದೆಂದು ಕರ್ಣಶಕುನಿಗಳ್ಗಂ – ಇಂತಪ್ಪರೆ ಬೇಸಱೆ ತಮ್ಮ ಪೆಂಪೆತ್ತಣ್ತೆಂದು ಸೈಂಧವಮುಂತಪ್ಪವರ್ಗಂ ಸ್ವಯಮುತ್ಸಾಹಮುಂ ಕಿಡೆ – ಅದೆ ಪಡೆವಯಣಕ್ಕಕ್ಷೇಮ ಸಂದೇಶಮೆನಿಸೆ ಕೌರವಸೇನೆ ಪೋಗುತಿರ್ಪುದುಂ – ಅದೇ ಪೊೞ್ತಡೆಯೊಳಿತ್ತಲ್ ದ್ವಾರಾವತೀಪತ್ತನದೊಳ್ ವೀರ ಭಟರ್ತಂತಮ್ಮ ವೀರವತಿಯ ರಿಕ್ಕಿದಕ್ಷತೆಯನೆತ್ತಿದಾರತಿಯನೊತ್ತಿದ ತಿಲಕದ ಪರಸಿದ ಪರಕೆಯ ಸಿಂಗರಿಸಿದ ಬೀರದುಡುಗೆಯ ನಾಂತು ಪೊಂತದಿಂದೆಯುಂ ಬೀರಮೆಸಕ್ಕದಿಂದೆಯುಮುರ್ಕಿನಿಂದೆಯುಂ ಪೆರ್ಚಿ ಪೆಂಪುವಡೆದು

೩೨. ಆಗ ಕರ್ಣನು ತಾನು ಹಿಂದೆ ತಿಳಿಸಿದ ಅಭಿಪ್ರಾಯವು ವ್ಯರ್ಥವಾಯಿತು ಎನ್ನುತ್ತ ಮನಸ್ಸಿನಲ್ಲಿ ಬೇಸರಗೊಂಡನು. ಆಗ ಅವನ ಉತ್ಸಾಹವೂ ತಗ್ಗಿಹೋಯಿತು. (ಗದ್ಯ) ಅಂತು ಈ ಕೌರವನ ವಕ್ರಬುದ್ಧಿಯನ್ನು ಸರಿಗೊಳಿಸಿ ಪಾಂಡವರೊಡನೆ ಹೇಗೆ ಒಂದಾಗಿಸಬಹುದು ಎಂಬ ಯೋಚನೆಯಿಂದ ಭೀಷ್ಮ–ದ್ರೋಣ–ಕೃಪಾಚಾರ್ಯರಿಗೂ ತನ್ನ ಇಚ್ಛೆಗೆ ಹಿರಿಯರು ತಡೆಯನ್ನುಂಟು ಮಾಡುವರೆಂದು ಆ ಚಲದಂಕನಾದ ದುರ್ಯೋಧನನಿಗೂ ತಮ್ಮ ಯೋಚನೆ ಈಡೇರಲಿಲ್ಲವೆಂದು ಕರ್ಣ ಶಕುನಿಯರಿಗೂ ಇಂಥವರೇ ಬೇಸರಿಸಿದರೆ ನಮ್ಮ ಹಿರಿಮೆ ಇನ್ನೆಲ್ಲಿ ಎಂದು ಸೈಂಧವ ಮುಂತಾದವರಿಗೂ ತಾನಾಗಿ ಉತ್ಸಾಹಭಂಗವಾಗಲು ಅದೇ ಸೈನ್ಯದ ಮುನ್ನಡೆಗೆ ಕ್ಷೇಮಕರವಲ್ಲದ ಸೂಚನೆಯೆನಿಸಲು ಅಂತೂ ಕೌರವಸೇನೆ ಮುನ್ನಡೆಯುತ್ತಿದ್ದಿತು.

ಅದೇ ದಿನದ ಮುಂಜಾನೆ ಇತ್ತ ದ್ವಾರಾವತಿಯಲ್ಲಿ ವೀರ ಯೋಧರು ತಂತಮ್ಮ ವೀರಸತಿಯರು ಇಕ್ಕಿದ ಅಕ್ಷತೆಯನ್ನೂ ಎತ್ತಿದ ಆರತಿಯನ್ನೂ ಹಣೆಗೆ ಹಚ್ಚಿದ ತಿಲಕವನ್ನೂ ಹರಕೆಯನ್ನೂ ಶೃಂಗಾರಗೊಳಿಸಿದ ವೀರೋಚಿತದ ಉಡುಗೆಯನ್ನೂ ಉಳ್ಳವರಾಗಿ ಉತ್ಸಾಹ – ಶೌರ್ಯ ಗರ್ವಗಳ ಹೆಚ್ಚಳದಿಂದ ಸೈನಿಕರು ಹಿರಿಮೆಗೊಂಡರು.

ಉ. ಮಾ. ॥

ಕೊರ್ಬಿದ ಬಾಡ ಅಟ್ಟೆಗಳ ಕೈದಿನ ಕಯ್ಗಳದೊಂದಗುರ್ವಿನಿಂ
ದುರ್ಬಿದ ತೋರಪುರ್ಬುಗಳ ಮೀಸೆಯ ಕೆಂಡದ ಕಂಗಳಿಂದೆ ಸಂ
ದರ್ಭದ ಟೌಳಿಯಂ ಸವಗ ಚಲ್ಲಣ ದಟ್ಟಿಯನಾಂತ ಬೀರ ಜೊ
ದರ್ಬರುತಿರ್ದರಿಚ್ಚೆಯಸಾಣೆಯೆನುತ್ತುಜಿ ಗುಂಡುಗುಂಡಿನಿಂ ॥೩೩॥

ಮ. ವಿ. ॥

ಗುದಿಯಂ ಕೀಸು ಕೆಲಂಬರುಂ ಪಿಡಿದು ಕುತ್ತುಂಗೋಲ ಕೂರೈಸುತಾ
ಯದ ಬಾಳಂ ಮಸೆದಡ್ಡಣಂದಳೆದು ಪೆರ್ಗಿಚ್ಚಂಬುಮಂ ತಾಳ್ದಿ ಜು
ದ್ಧದೆ ಬಾಗಿರ್ದ ಸರಲ್ಗಳಂ ಸಮಜಿ ಕಲ್ಗುಂಡಂ ತಗುಳ್ಚುತ್ತೆ ಮುಳ್
ಗುದಿಯನ್ನಾಂತಳವಟ್ಟರಾ ಸುಭಟರಂತೋರೊರ್ವರಾ ವೇಳೆಯೊಳ್ ॥೩೪॥

ಚಂ. ಮಾ. ॥

ಮಸಕದ ಸುಯ್ಲನಾಂತ ಪಗೆಯಂ ಬಿಸುಸುಯ್ಯಿಪ ಬಯ್ದು ನೋಡಿ ಬಾ
ಗಿಸುವೆರ್ದೆ'ಗೊಂಡು ಕೊಲ್ವ ಕುಡುವುರ್ಬುಗಳೇಱಿಸಿ ಪುತ್ತನೇಱಿಪಾ
ನಸೆಯುಳಿದೌಂಡುಗರ್ಚಿ ತೃಣಮಂ ಸಲೆ ಕರ್ಚಿಪ ಕಂಗೆರಳ್ಚಿ ನಿಂ
ದೊಸೆಯದರಂ ಮರಳ್ಚಿಪ ಭಟರೆ ನೆರೆದರ್ ಪುರದಲ್ಲಸಂಖ್ಯೆಯಿಂ ॥೩೫॥

೩೩. ವೀರ ಯೋಧರು ಕೊಬ್ಬಿದ ಮಾಂಸಖಂಡಗಳುಳ್ಳ ರಟ್ಟೆಗಳಿಂದಲೂ ಆಯುಧಪಾಣಿಗಳಾಗಿ ಭಯಂಕರವಾಗಿ ಉಬ್ಬಿದ ದಪ್ಪವಾದ ಹುಬ್ಬುಗಳಿಂದ ಮತ್ತು ಮೀಸೆಗಳಿಂದಲೂ ಕೆಂಗಣ್ಣುಗಳಿಂದಲೂ ಶಿರಸ್ತ್ರಾಣ – ಕವಚ – ಚಲ್ಲಣ–ದಟ್ಟಿಗಳಿಂದಲೂ ಕೂಡಿದವರಾಗಿ ತಮ್ಮ ಇಚ್ಛೆಯೇ ರಾಜಾಜ್ಞೆಯೆನ್ನುತ್ತ ಹಿಂಡು ಹಿಂಡಾಗಿ ಬರುತ್ತಿದ್ದರು.

೩೪. ಆ ಸುಭಟರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಸಿದ್ಧಗೊಂಡಿದ್ದರು. ಕೆಲವರು ಗುದಿಗೆಯನ್ನು ನಯಗೊಳಿಸಿಯೂ ಬರ್ಚಿಯನ್ನು ಹಿಡಿದವರಾಗಿಯೂ ಆಯವುಳ್ಳ ಖಡ್ಗವನ್ನು ಹರಿತ ಮಾಡಿಯೂ ದೊಡ್ಡದಾದ ಅಗ್ನಿಬಾಣವನ್ನು ಹಿಡಿದುಕೊಂಡೂ ಹಿಂದೆ ಯುದ್ಧದಲ್ಲಿ ಬಾಗಿಹೋದ ಬರ್ಚಿಗಳನ್ನು ನೇರ್ಪುಗೊಳಿಸಿಯೂ ಕಲ್ಲುಗುಂಡುಗಳನ್ನು ಹಿಡಿದೂ ಮುಳ್ಳು ಗುದಿಗೆಯುಳ್ಳವರಾಗಿಯೂ ಸಿದ್ಧರಾದರು.

೩೫. ಕ್ರೋಧದ ಉಸಿರಾಟದಿಂದಲೇ ಎದುರಾದ ಶತ್ರುವನ್ನು ಬಿಸುಸುಯ್ಯುವಂತೆ ಮಾಡಬಲ್ಲ, ಬೈದು ನೋಡಿದ ಮಾತ್ರದಲ್ಲೇ ತಲೆಬಾಗಿಸತಕ್ಕ, ಎದೆಗೆ ಹೊಡೆದು ಕೊಲ್ಲುವ, ಬಾಗಿದ ಹುಬ್ಬುಗಳನ್ನೇರಿಸಿ ಶತ್ರುಗಳನ್ನು ಹುತ್ತವೇರುವಂತೆ ಮಾಡುವ, ಸಲುಗೆಯೇನೂ ಇಲ್ಲದೆ ಔಡನ್ನು ಕಚ್ಚಿದುದರಿಂದಲೇ ಶತ್ರುವೂ ಹುಲ್ಲನ್ನು ಕಚ್ಚುವಂತೆ ಮಾಡತಕ್ಕ, ಕಣ್ಣನ್ನು ಕೆರಳಿಸಿನಿಂತು ಶತ್ರುಗಳನ್ನು ಹಿಮ್ಮೆಟ್ಟಿಸತಕ್ಕ ಭಟರು ಆ ದ್ವಾರಕಾಪುರದಲ್ಲಿ ಅಸಂಖ್ಯಾತರಾಗಿ ನೆರೆದರು.

ಉಡುಗೆಯೊಳೊಂದೆ ದೇಹ ಪರಿಮಾಣದೆ ಸಾಟಿ ಮಹಾಪ್ರತಾಪದೊಳ್
ಪಡಿಯೆನಿಸಿರ್ದುಮೊಂದೆ ಪದದೊಳ್ ಗುಜೆಯಿಟ್ಟೆಸುಗುಂ ನಿರೀಕ್ಷ್ಯಮಂ
ತಡೆಯದೆ ನೋಡುಗುಂ ಪಿರಿದುಮಾಲಿಕುಮಟ್ಟುಗುಮೆತ್ತಿ ಪಜ್ಜೆಯಂ
ಮಡಗುಗುಮಾಣ್ಮ ಸನ್ನೆಗಳಿನೆಂಬುರು ವೀರರೆ ವೀರರೊಂದಿದರ್ ॥೩೬॥

ಉ. ಮಾ. ॥

ಗೋಸಣೆ ಮೀಱೆ ಗಾಲಿಯುರುಳಲ್ ರಥಿಕಾಜ್ಞೆಯೊಳಾಗಳಲ್ಲಿಗೋ
ಲೈಸಿದುವಾಕ್ಷಣಂ ಕುದುರೆಗಳ್ ಸೆಳೆದೆಯ್ತರೆ ತೇರ್ಗಳೋಳಿಯೊ
ಟ್ಟೈಸಿರೆ ನೋವುಮರ್ದೆಸೆವ ನೀರ ಕೊಡಂ ಬಿಱು ಸಂಕು ಕೈದುಗಳ್
ಭಾಸುರಮಾಗೆ ಮೌಕ್ತಿಕದ ರನ್ನದ ಬೆಳ್ಳಿಯ ಪೊನ್ನ ಸಿಂಗರಂ ॥೩೭॥

ಇಂಬಿನ ಪಲ್ಲಣಂ ನಿಜೆಸಿ ಕೆನ್ನಮಲಂಕ್ರಿಯೆಗೆಯ್ದು ಕೀಳ ನೇ
ಣಂ ಬಿಗಿದೋಡುವಾ ಗರುಡ – ವಾಯು – ವಿಮಾನ – ಮನೋಸುವೇಗಮಂ
ತಾಂ ಬಜೆದೆಂಬ ವೇಗದ ಮನೋಜ್ಞದ ಸಾಜದೆ ಕಾಲ್ಕೊರಲ್ಗಳು
ದ್ದಂಬಿಡಿದೊಂದಿ ಲಕ್ಕಣವನೊಪ್ಪಿದುವಾಹವವಾಜಿರಾಜಿಗಳ್ ॥೩೮॥

ಕಂದ ॥ ಪಡುವಣ ಕಾರ್ಮುಗಿಲೊಡ್ಡಂ
ಪಡಿವರಿಸುವ ತೋರ ಮೆಯ್ಗಳುಣ್ಮುವ ಮದದಾ
ಜಡಮುಂ ರಾಜಿಸುವಾನೆಯ
ಗಡಣಂ ನೆರೆದಿರ್ದುದಲ್ಲಿ ಸಿಡಿಲಿನ ದನಿಯಿಂ ॥೩೯॥

೩೬. ಅಲ್ಲಿ ನೆರೆದ ವೀರಭಟರು ಒಂದೇ ಬಗೆಯ ಉಡುಗೆ, ಒಂದೇ ಪರಿಮಿತಿಯ ದೇಹದ ಪರಿಮಾಣ, ಪರಾಕ್ರಮದಲ್ಲಿ ಸಮಾನತೆಯುಳ್ಳವರು, ಒಂದೇ ಹದಕ್ಕನುಗುಣವಾಗಿ ಲಕ್ಷ್ಯದ ಕಡೆಗೆ ಗುರಿಯಿಟ್ಟು ಪ್ರಯೋಗಮಾಡತಕ್ಕವರು. ನೋಟದಲ್ಲಿ ಶ್ರವಣದಲ್ಲಿ ನಿಶ್ಚಿತವರ್ತನೆಯುಳ್ಳವರು. ತಮ್ಮ ಮುಂದಾಳಿನ ಸನ್ನೆಯಂತೆ ಗತಿ ತಪ್ಪದೆ ಕಾಲಹಜ್ಜೆಗಳನ್ನು ಇಡತಕ್ಕವರು ಆಗಿದ್ದರು.

೩೭. ರಥದ ಗಾಲಿಗಳ ಶಬ್ದದೊಂದಿಗೆ ರಥಿಕರ ಆಜ್ಞೆಯಂತೆ ಕುದುರೆಗಳು ಎಳೆಯುತ್ತಿರಲು ರಥಗಳು ಒಟ್ಟಾದವು. ಅವುಗಳಲ್ಲಿ ನೀರಿನ ಕೊಡ, ಬಿರುದನಿಯ ಶಂಖ, ಆಯುಧಗಳೂ ಇದ್ದವು. ಮುತ್ತಿನ ರತ್ನದ ಬೆಳ್ಳಿಯ ಚಿನ್ನದ ಅಲಂಕಾರಗಳೂ ಇದ್ದವು.

೩೮. ಯುದ್ಧದ ರಥಗಳ ಕುದುರೆಗಳಿಗೆ ಸರಿ ಹೊಂದತಕ್ಕ ಹಲ್ಲಣವನ್ನು ಬಿಗಿದು, ಅಲಂಕಾರಗೊಳಿಸಿ ಕಡಿವಾಣದ ಹಗ್ಗವನ್ನೂ ಬಿಗಿಯಲಾಗಿದ್ದರೆ ಓಡುವುದರಲ್ಲಿ ಗರುಡ, ವಾಯು, ವಿಮಾನ ಮನೋವೇಗಗಳನ್ನು ಮೀರಿಸುವಂತಿದ್ದವು. ಸಹಜವಾಗಿ ಕಾಲುಗಳೂ ಕತ್ತೂ ಉದ್ದವಾಗಿ ಲಕ್ಷಣಯುಕ್ತವಾಗಿ ಆ ಕುದುರೆಗಳಿದ್ದವು.

೩೯. ಪಡುದೆಸೆಯ ಕಾರ್ಮೋಡಗಳ ಸಂದಣಿಯನ್ನು ಪ್ರತಿಬಿಂಬಿಸತಕ್ಕ ದಪ್ಪದ ಶರೀರಗಳು, ಹೊರಸೂಸುವ ಮದಜಲ–ಇವೆಲ್ಲ ಶೋಭಿಸುವ ಗಜಸೇನೆಯು ಸಿಡಿಲಿನಂತೆ ಗೀಳಿಡುತ್ತಾ ನೆರೆದವು.

ಗದ್ಯ ॥ ಅಂತಗುರ್ವುವೆತ್ತಾ ಗೋಹುರದ ಸಿರಿಯ ದರದೊಳಳವಟ್ಟು ಪೇರಣೆಯಿರುತಿರ್ಪಿನಂ –

ಉ. ಮಾ. ॥

ಆವನ ತೇರುಮಂ ಪಟಿವ ಸೋಬೆಯ ತೇರಿರೆ ಮೇಘವರ್ಣಸು
ಗ್ರೀವ.ಬಳಾಹ – ಶೈಬ್ಯ ವೆಸರಾಂತೆಸವೀರೆರಡುಂ ಹಯಂಗಳಂ
ಭಾವಿಸಿ ಕಟ್ಟೆ ತತ್ಪರಮ ಸಾರಥಿ ದಾರುಕನೇಱೆ ಸಾಯುಧಂ
ಶ್ರೀವರನಾಗಳಲ್ಲಿ ಬರಲೇಂ ಜಯನಿಸ್ವನಮಾಯ್ತೊ ನಾಕದೊಳ್ ! ॥೪೦॥

ಶಾ. ವಿ. ॥

ಗಂಭೀರಂ ಮೊನೆಗಗ್ರಗಣ್ಯನುರುಸಾಮರ್ಥ್ಯಂ ಕಠೋರಾಹವಾ
ರಂಭಂ ಗಂಡರ ಗಂಡರುರ್ಕುಗಿಡಿಪಂ ಸೂರ್ಯೇಂದು ತೇಜೋಯುತಂ
ಜಂಭಾರಿಸ್ತುತನಿಂ ವಿರೋಧಿ – ವಿಜಯಾಶ್ಲೇಷಾತಿ ಸಂತೋಷದಿಂ
ಜೃಂಭಿಕ್ಕೆಂದೆನೆ ವಂದಿವೃಂದಮೆಸೆದಿರ್ದಂ ದೇವಕೀನಂದನಂ ॥೪೧॥

ಎಂಬಲ್ಲಿಗೆ ಸತ್ವಾಲೋಕನ ಕಾವ್ಯದೊಳ್
ನಾರದತಂತ್ರಂ ಸಮರಸನ್ನಾಹಂ
ಪಂಚಮಾಶ್ವಾಸಂ

(ಗದ್ಯ) ಆ ರೀತಿಯಾಗಿ ಭಯಂಕರವಾದ ಆ ನಗರದ ಗೋಪುರದ ಶ್ರೀದ್ವಾರದಲ್ಲಿ ಮಹಾಸೈನ್ಯ ಸಿದ್ಧವಾಗಿದ್ದಿತು. ಅಲ್ಲಿಗೆ ಕೃಷ್ಣನು ಬರುತ್ತಾನೆ.

೪೦. ಯಾವನಿಗೂ ಇಷ್ಟೊಂದು ಹಿರಿಮೆಯ ಶೋಭೆಯ ರಥವಿಲ್ಲವೆನಿಸುವ ರಥವು ಸಿದ್ಧವಾಗಿರಲು, ಅದಕ್ಕೆ ಮೇಘವರ್ಣ, ಸುಗ್ರೀವ, ಬಳಾಹ, ಶೈಬ್ಯ ಎಂಬ ಹೆಸರುಗಳುಳ್ಳ ನಾಲ್ಕು ಕುದುರೆಗಳನ್ನು ಕಟ್ಟಲಾಗಿದ್ದಿತು. ಶ್ರೇಷ್ಠ ಸಾರಥಿಯಾದ ದಾರುಕನು ರಥದಲ್ಲಿದ್ದನು. ಅಲ್ಲಿಗೆ ಶ್ರೀಕೃಷ್ಣನು ಆಯುಧಸಮೇತನಾಗಿ ಬಂದಾಗ ಅಲ್ಲಿ ಮಾತ್ರವಲ್ಲ, ಸ್ವರ್ಗಲೋಕದಲ್ಲಿಯೂ ಜಯಕಾರಗಳಾದವು!

೪೧. ಶ್ರೀಕೃಷ್ಣನು ಸಾಮಾನ್ಯನಲ್ಲ–ಗಾಂಭೀರ್ಯವುಳ್ಳವನು. ಯುದ್ಧ ಮಾಡುವುದರಲ್ಲಿ ಅಗ್ರಗಣ್ಯನು. ವಿಶೇಷ ಸಾಮರ್ಥ್ಯವುಳ್ಳಾತನು, ಕಠಿಣವಾದ ಯುದ್ಧಕಾರ್ಯವುಳ್ಳವನು, ಗಂಡುಗಲಿಗಳಿಗೆ ಗಂಡರೆನಿಸತಕ್ಕವರ, ಗರ್ವಭಂಗ ಮಾಡಬಲ್ಲವನು. ಸೂರ್ಯಚಂದ್ರರ ತೇಜಸ್ಸಿನಿಂದ ಕೂಡಿದವನು, ಇಂದ್ರನಿಂದ ಸ್ತುತಿಸಲ್ಪಡುವವನು. ಅಂತಹ ಇವನು ಶತ್ರು ವಿಜಯಶ್ರೀಯ ಆಲಿಂಗನದ ಸಂತೋಷದಿಂದ ವಿಜೃಂಭಿಸಲಿ! ಎಂದು ಸ್ತುತಿಪಾಠಕರು ಗಟ್ಟಿಯಾಗಿ ಹೇಳುತ್ತಿರಲು ದೇವಕೀಪುತ್ರನಾದ ಕೃಷ್ಣನು ಶೋಭಾಯಮಾನವಾಗಿ ಕಾಣಿಸಿದನು.

ಇಲ್ಲಿಗೆ ನಾರದ ತಂತ್ರ ಮತ್ತು ಸಮರ ಸನ್ನಾಹ ಎಂಬ ಐದನೆಯ ಆಶ್ವಾಸ ಮುಗಿಯಿತು.

## ಷಷ್ಠಾಶ್ವಾಸಂ
## (ಸಮರವರ್ಣನಂ)

ಕಂದ॥ ಶ್ರೀರಮಣನ ಬಹುಸೇನಾ
ಸಾರಮದಱಿಕೊಳೆಳ್ವ ಧೀರ ವೀರರಸಕ್ಕಾ
ಗರದ ಮೇರೆಯೆ ಮೀಱಿದು
ದಾರದನಱಿಯಿಪೊಡೆ ಬಲ್ಲರೆಂಬಿನಮಾಗಳ್ ॥೧॥

ಶಾ.ವಿ.॥ ರಾಮಕಾಳಗಕೆಯ್ದುವನ್ನುಮೊಡನಾ ಸೌಮಿತ್ರಿಯಾಂತಿರ್ದ ಸ
ಪ್ರೇಮೋತ್ಸಾಹ ವಿಭಾವಮೀ ಯುಗದೆ ಮಾರ್ಪಟ್ಟಿತ್ತೆನಲ್ ಕ್ರೋಧನಿ
ಸ್ಸೀಮಂ ರಾಮನಶೇಷ–ದುಷ್ಟ–ವಿಷಮಂ ಸಸ್ಯಂದನಂ ಬೇಗದಿಂ
ದಾಮುನ್ನೆಂಬಿನಮೆಯ್ದಿ ಮುಂದೆ ಹಲಿ ನಿಂದು ಯಾದವ ಪ್ರಾವೃತಂ ॥೨॥

ಗದ್ಯ॥ ಮತ್ತಂ ಚಾರುದೇಷ್ಣ–ಸುದೇಷ್ಣ– ಪ್ರದ್ಯುಮ್ನ ಮುಂತಪ್ಪ ರುಕ್ಮಿಣೀ ತನೂಜರುಂ – ಭಾನು–ಸ್ವರ್ಭಾನು– ಮುಂತಾದ ಸತ್ಯಭಾಮಾಸೂನುಗಳುಂ – ಸಾಂಬ ಸುಮಿತ್ರ– ಪುರುಜಿತ ಪೆಸಱಿಱೆಕೆಯು ಜಾಂಬವತೀಪುತ್ರರುಂ – ಅಶ್ವಸೇನ ವೀರ–ಚಂದ್ರ ಪ್ರಮುಖ ಸತ್ಯಾದೇವೀನಂದನರುಂ – ಕವಿ–ವೃಷ–ವೀರ ಮುಖ್ಯರಪ್ಪ ಕಾಳೀಂದೀಜಾತರುಂ – ವೃಕ–ಹರ್ಷ– ವರ್ಧನಾದಿ ಮಿತ್ರವಿಂದಾ ಕುಮಾರರುಂ – ಗಾತ್ರವಂತ– ಸಿಂಹ– ಬಲಾದಿ ಲಕ್ಷಣಾದೇವೀ ತನೂಜರುಂ – ಜಯ–ವಾಮ–ಸುಭದ್ರ ಸಂಗ್ರಾಮಜಿತ್ತೆಂಬ ಮೊದಲಪ್ಪ

೧. ಶ್ರೀಕೃಷ್ಣನ ಬಹುಸೈನ್ಯದ ಸತ್ವ ತೋರಿ ಬರುತ್ತಿದ್ದಿತು. ಆ ಸೈನ್ಯದಿಂದ ವ್ಯಕ್ತವಾಗುವ ಧೀರತೆಯ ವೀರರಸಕ್ಕೆ ಆಗರದ ಮೇರೆಯೇ ಮೀರಿದುದಾಗಿ ಕಾಣುತ್ತಿದ್ದಿತು. ಅದನು ತಿಳಿಸಬಲ್ಲವರೇ ಇಲ್ಲ ಎಂಬಂತಿದ್ದಿತು.

೨. ಹಿಂದೆ ಶ್ರೀರಾಮನು ಯುದ್ಧಕ್ಕೆ ತೆರಳುವ ಸಂದರ್ಭದಲ್ಲಿ ಅವನೊಂದಿಗೆ ಆ ಲಕ್ಷ್ಮಣನು ತಾಳಿದ್ದ ಪ್ರೇಮಯುಕ್ತವಾದ ರಸಭಾವವು ಈ ಯುಗದಲ್ಲಿ ಮಾರ್ಪಾಟಾಯಿತೆಂದು ಹೇಳುವಂತೆ, ಬಲರಾಮನು ಮೇರೆಮೀರಿದ ಕ್ರೋಧವುಳ್ಳವನಾಗಿ ಸಕಲದುಷ್ಟರಿಗೂ ವಿಷಮಪ್ರಾಯನಾಗಿ ರಥದೊಂದಿಗೆ ವೇಗದಿಂದ ನಾನು ಮುಂದೆ ಎಂಬಂತೆ ಹಲಾಯುಧವುಳ್ಳವನೂ ಯಾದವರಿಂದ ಆವೃತನೂ ಆಗಿ ಬಂದು ಮುಂದೆ ನಿಂತನು.

(ಗದ್ಯ) ಅದಲ್ಲದೆ – ಚಾರುಧೇಷ್ಣ, ಸುಧೇಷ್ಣ, ಪ್ರದ್ಯುಮ್ನ– ಮುಂತಾದ ರುಕ್ಮಿಣಿಯ ಮಕ್ಕಳೂ ಭಾನು, ಸ್ವರ್ಭಾನು–ಮುಂತಾದ ಸತ್ಯಭಾಮಾಪುತ್ರರೂ ಸಾಂಬ, ಸುಮಿತ್ರ, ಪುರುಜಿತ ಎಂಬ ಹೆಸರಿನಿಂದ ಪ್ರಸಿದ್ಧರಾದ ಜಾಂಬವತೀ ಪುತ್ರರೂ ಅಶ್ವಸೇನ ವೀರ, ಚಂದ್ರ ಮುಖ್ಯರಾದ ಸತ್ಯಾದೇವಿಯ ಮಕ್ಕಳೂ ಕವಿ, ವೃಷ, ವೀರ ಮುಖ್ಯರಾದ ಕಾಳಿಂದೀಪುತ್ರರೂ ವೃಕ, ಹರ್ಷ, ವರ್ಧನ ಮುಂತಾದ ಮಿತ್ರವಿಂದೆಯ ಮಕ್ಕಳೂ ಗಾತ್ರವಂತ, ಸಿಂಹ, ಬಲ, ಮೊದಲಾದ ಲಕ್ಷಣಾ ದೇವಿಯ ತನುಜರೂ ಜಯ, ವಾಮ, ಸುಭದ್ರ, ಸಂಗ್ರಾಮಜಿತ್ ಮುಂತಾದ ಭದ್ರಾದೇವಿಯ ಸಂಜಾತರೂ ಹೀಗೆ

**ಭದ್ರಾದೇವೀ ಸಮುತ್ಪನ್ನರುಂ – ಮುಂತಾಗಿಯಷ್ಟಮಹಿಷಿಯರ್ಗೆ ಪುಟ್ಟಿರ್ದ ಮಕ್ಕಳುಂ – ಭ್ರೂಭಂಗ – ವಿಕಟ–ನಿಟಿಲತಟರುಂ – ಕೋಪಾರುಣಕಿರಣ–ಪ್ರಸಾರಣ– ರಣಭೀಕರ – ಕಾರಣ–ಕೇಕರರುಂ – ಭುಜಕಂಪನ. ಪ್ರದರ್ಶ್ಯಮಾನ – ಸಂಗ್ರಾಮಲಂಪಟರುಂ – ಅರಿಶಿರಃಖಂಡನ – ದಂಡನ – ಪರಿಣತಾಂತಃಕರಣರುಂ – ರಿಪುದ್ವಿಪಚಮೂಸಮರ ವಿಫಲ ಕಾರ್ಯಾತಿನಿಪುಣರುಂ – ಪ್ರತಿರಥಮನೋರಥ – ವಿತಥ–ವ್ಯಥಾ– ಪ್ರದಾತ – ವಿಖ್ಯಾತ– ಯುದ್ಧ ವಿದ್ಯಾಧೀಶರುಂ ಪ್ರತಿಹತಿ ವಿಲಂಘನ – ಹತ್ಯಲಂಘನ – ಸಂಗರ – ಪ್ರದರ್ಶಕ – ವಿಶ್ರಾಂತತುಂಗರುಂ – ಸುಕ್ರಮ – ಪರವಿಕ್ರಮ – ಸ್ತಂಭನ, ಪರಿಕ್ರಮ – ಗಂಭೀರರುಂ – ಅಂತಿಂತುಮಿಟ್ಟಣಿಸಿ ಕಟ್ಟಾಯದಿಂದಾ ಪಟ್ಟಣವಾಗಿಲೊಳೊಡ್ಡೊಡ್ಡಿ ನಿಲ್ವುದುಂ – ಪಡೆವಳರ್ದೆಗಾಜಿಕೆಯತು ಬೀರನುಡಿಯಂ ವಿಭುವಪ್ಪ ವಾಸುದೇವಂಗೆ ಕೇಳಿಪೆನೆಂದವರಂ ನೀಮೇಂ ಬಲ್ಲಿದರೆಂಬುದಂ ಪೇಟಿಮೆಂದಣಿವಳನೆನೆ–ಮೊನೆಗೆಳೆಯನೆಂಬನಂಬಿನ ಮೊನೆಯಂ ಮುನ್ನೀಡಿ ಮುಂದೆ ನಿಂದಿಂತೆಂದಂ –**

ಶ್ರೀಕೃಷ್ಣನ ಅಷ್ಟಮಹಿಷಿಯರಲ್ಲಿ ಜನಿಸಿದ ಮಕ್ಕಳೂ ಅಲ್ಲಿದ್ದರು. ಅವರೆಲ್ಲರೂ ಮತ್ತು ಇತರ ಸೈನಿಕರು ಹುಬ್ಬುಗಂಟಿಕ್ಕಿದ ಹಣೆಯುಳ್ಳವರಾಗಿ ಕೋಪ ಕೆಂಪಿನ ಬೆಳಕನ್ನು ಪ್ರಸರಿಸತಕ್ಕವರಾಗಿ ಯುದ್ಧದಲ್ಲಿ ವೈರಿಗಳಿಗೆ ಭಯಕ್ಕೆ ಕಾರಣವಾಗುವ ಕಡೆಗಣ್ಣಿನವರಾಗಿದ್ದರು. ಹೆಗಲನ್ನು ಅಲುಗಿಸುವ ಮೂಲಕ, ಪ್ರದರ್ಶನವಾಗುವ ಯುದ್ಧಾತುರತೆಯವರಾಗಿದ್ದರು. ಐವರಿಗೆ ಶಿಕ್ಷೆಯ ರೂಪದಲ್ಲಿ ಶಿರಚ್ಛೇದನ ಮಾಡುವ ಮನಸ್ಸಿನವರಾಗಿದ್ದರು. ಶತ್ರುಗಳ ಗಜಸೇನೆಯ ಯುದ್ಧವನ್ನು ವಿಫಲಗೊಳಿಸುವುದರಲ್ಲಿ ನಿಪುಣರಾಗಿದ್ದರು. ಪ್ರತಿರಥರ ಮನಸ್ಸಿಗೆ ವ್ಯರ್ಥದ ದುಃಖವನ್ನು ಕೊಡುವುದರಲ್ಲಿ ಹೆಸರಾಂತ ರೀತಿಯ ಯುದ್ಧವಿದ್ಯೆಯನ್ನು ಅರಿತವರಾಗಿದ್ದರು. ಶತ್ರುವಿನ ಏಟನ್ನು ತಪ್ಪಿಸುವಂತಹ ತಮ್ಮ ಏಟನ್ನು ತಪ್ಪಿಸಲು ಶತ್ರುವಿಗೆ ಸಾಧ್ಯವಾಗದಂತಹ ರೀತಿಯ ಯುದ್ಧ ಪ್ರದರ್ಶನವನ್ನರಿತ ಮಹಾಶೂರರಾಗಿದ್ದರು. ತಮ್ಮ ಕ್ರಮಬದ್ಧತೆಯಲ್ಲಿ ವೈರಿಯ ಪರಾಕ್ರಮವನ್ನು ಸ್ತಂಭನಗೊಳಿಸತಕ್ಕ ಬಗೆಯ ಶೌರ್ಯದಲ್ಲಿ ಗಂಭೀರರಾಗಿದ್ದರು. ಅಂತು ಇಂತು ಗುಂಪಾಗಿ ಶಿಸ್ತಿನಿಂದ (ಅನುಶಾಸನದಿಂದ) ಪಟ್ಟಣದ ಬಾಗಿಲಲ್ಲಿ ಯಾದವ ಸೈನ್ಯ ಸಿದ್ಧವಾಗಿ ನಿಂತಿತು. ಆ ಸಂದರ್ಭದಲ್ಲಿ ಸೇನಾಪತಿಯು ಯೋಧರ ಎದೆಗಾರಿಕೆಯ (ಶೌರ್ಯದ) ವೀರೋಕ್ತಿಗಳನ್ನು ಒಡೆಯನಾದ ಶ್ರೀಕೃಷ್ಣನಿಗೆ ತಿಳಿಯಪಡಿಸುವೆನೆಂದು ಯೋಧರೊಡನೆ ನೀವೇನು ಮಾಡಬಲ್ಲಿರಿ ಎಂಬುದನ್ನು ಈಗ ಹೇಳಿ ಎಂದನು. ಆಗ 'ಮೊನೆಗೆಳೆಯ' ಎಂಬಾತನು ತನ್ನ ಬಾಣದ ತುದಿಯನ್ನು ಮುಂದುಗಡೆಗೆ ಚಾಚಿ ಮುಂದೆ ನಿಂತು ಹೀಗೆಂದನು.

ಕಂದ॥ ದ್ವಿರದಂ ಕೊಳನಂ ಪೊಕ್ಕಾ
ಶರಜವನಾ ಕೈರವಾನ್ವಿತವನೀಳ್ವಂ ತಾಂ
ಧುರದೊಳ್ ಪಾಂಡವರಂ ತ
ತ್ಕುರು ಸೇನಾಸಹಿತಮುಱಿದೆ ಮುಱಿಯದೆ ಮಾಣೆಂ ॥೩॥

ಗದ್ಯ॥ ಇಂತೆಂದ ಮಱುನುಡಿಯೆ ತನ್ನದಾಗಿ ಪಗೆಗೇಡಿಯೆಂಬಂ ಹುರಿಮೀಸೆಯಂ ತಿರುಪು
ಮಾಡಿ ನೀಡಿ ತಾನಿಂತೆಂದಂ –

ಚಂ.ಮಾ. ಪಗೆಗಳ ನೆತ್ತರಿಂದೆ ದೆಸೆಯಾನೆಯ ದಾಡೆಯ ಕೆಂಪು ಮಾಡುವೆಂ
ಪಗೆಗಳ ರುಂಡಮಂ ದೆಸೆಗಳಾಣ್ಮರ ಪತ್ಪತಿತಂಗಳಾಗಿಪೆಂ
ಪಗೆಗಳ ಕೈದುವಿಂ ದೆಸೆಗೆ ಬೇಲಿಯನಾನುಱಿದಿಂ ನೆಗಟ್ಟುವೆಂ
ಪಗೆಗಳ ಕೊರ್ಬಿದಟ್ಟೆಯಡಗಿಂ ಪಸಿವಂ ತಣಿಪೆಂ ಮರುಳ್ಗಳಾ ॥೪॥

ಗದ್ಯ॥ ಆಗಳ್ ಮಾರಣೆಯಂ ಕ್ಷೋಣಿಗೆ ಕಡಪುವುದೆನಿವಿರಿದೆಂಬರಿಭಯಂಕರನೆಂಬಾತಂ
ನಿರ್ಭೀತನಿಂತೆಂದಂ –

ಕಂದ॥ ಯಮಸುತನಂ ನೀರ್ದಾಂಟಿಸಿ
ಸಮೀರಜನ ಕುತ್ತಿ ಕೆಡಪಿ ಮೊನೆಯೊಳ್
ಯಮಳರ ಕಾಪಿಟ್ಟಾಂ ಸಂ
ಭ್ರಮಿಯಿಸಿ ನರನಂ ಮರಳ್ಚಿ ತರ್ಪೆಂ ಗಯನಂ ॥೫॥

೩. ಆನೆಯು ಸರೋವರವನ್ನು ಹೊಕ್ಕು ಅಲ್ಲಿರತಕ್ಕ ತಾವರೆಯನ್ನು ನೈದಿಲೆಯೊಂದಿಗೆ ಕೀಳುವ ಹಾಗೆ, ನಾನು ಯುದ್ಧದಲ್ಲಿ ಪಾಂಡವರನ್ನು ಆ ಕೌರವಸೈನ್ಯಸಹಿತ ತ್ವರೆಯಾಗಿ ಮುರಿಯದೆ ಇರಲಾರೆನು. (ಗದ್ಯ) ಹೀಗೆ ಹೇಳಿದುದಕ್ಕೆ ಮುಂದಿನ ಮಾತು ತನ್ನದೇ ಆಗಲು, 'ಪಗೆಗೇಡಿ' ಎಂಬವನು ಹುರಿಮೀಸೆಯನ್ನು ತಿರುಚಿ ವಂದಿಸಿ ಹೀಗೆಂದನು–

೪. ನಾನು ಶತ್ರುಗಳ ರಕ್ತದಿಂದ ದಿಗ್ಗಜಗಳ ದಾಡೆಗಳನ್ನು ಕೆಂಪಾಗಿ ಮಾಡುವೆನು. ವೈರಿಗಳ ರುಂಡಗಳನ್ನು ದಿಕ್ಪಾಲಕರ ಪಾದಗಳಿಗೆ ಬೀಳಿಸುವೆನು. ಹಗೆಗಳ ಆಯುಧಗಳಿಂದ ದಿಕ್ಕುಗಳಿಗೆ ಬೇಲಿಯನ್ನೆಸಗುವೆನು. ಅವರ ಕೊಬ್ಬಿದ ಶರೀರ ಮಾಂಸದಿಂದ ಪ್ರೇತಪಿಶಾಚಿಗಳ ಹಸಿವನ್ನು ತಣಿಸುವೆನು. (ಗದ್ಯ) ಆಗ ಶತ್ರುಸೈನ್ಯವನ್ನು ಹೊಡೆದು ನೆಲಕ್ಕೆ ಕೆಡಹುವುದು ಏನು ತಾನೇ ಹಿರಿದು? ಎನ್ನತಕ್ಕ 'ಅರಿಭಯಂಕರ' ಎಂಬವನು ಭಯ ಇಲ್ಲದವನಾಗಿ ಇಂತೆಂದನು –

೫. ನಾನು ಯುದ್ಧದಲ್ಲಿ ಆ ಧರ್ಮಜನನ್ನು ನೀರಿನ ಆಚೆಗೆ (ನದಿಯಾಚೆಗೆ, ಸಮುದ್ರದ ಆಚೆಗೆ) ದಾಟಿಸಿ, ವಾಯುಪುತ್ರನಾದ ಭೀಮನನ್ನೆ ಬರ್ಚಿಯಿಂದ ತಿವಿದು ಕೆಡಹಿ, ನಕುಲ ಸಹದೇವರನ್ನು ಕೊಂದು ಗದ್ದೆಗೆ ಕಾಪನ್ನು ನಿಲ್ಲಿಸುವಂತೆ ಪ್ರದರ್ಶನಕ್ಕಿಟ್ಟು ಅರ್ಜುನನಿಗೆ ಭ್ರಮೆಯನ್ನುಂಟು ಮಾಡಿ (ಅವನನ್ನು ಗರಗರನೆ ತಿರುಗಿಸಿ) ಆ ಗಯನನ್ನು ಹಿಂದಕ್ಕೆ ತರುವೆನು. (ಗದ್ಯ) ಹಾಗೆಂದಾಗ ಅವರೆಲ್ಲರನ್ನೂ ತಡೆದ "ಅಣಿಗೆ ಅಗ್ಗಳ" ಎಂಬ ಹೆಸರಿನ ಕುದುರೆಸವಾರರಲ್ಲಿ ಅಗ್ಗಳೆಯನು ಹೀಗೆಂದನು –

ಗದ್ಯ॥ ಅದರ್ಕವರೆಲ್ಲರಂ ಮಾಣಿಸಿದಣೆಗಗ್ಗಳನೆಂಬ ರಾವುತರಗ್ಗಳೆಯಂ –

ಕಂದ॥ ನುಡಿಯಲವೇಡಂ ಕಣ್ಣಂ
ಮಿಡಿದೊಡದೇ ಆಣೆಯೆನಗೆ ಹರಿಹಲಧರರಿಂ।
ಕಡುಗಲಿತನದಿಂ ನರನಂ
ನಡುಗಿಸಿ ಖೇಚರನನೆಳೆದು ತಂದಪೆನೆಂದಂ ॥೬॥

ಗದ್ಯ॥ ಆಗಳ್ ಸಮರೈಕವೀರನೆಂಬುರುವೀರನೆಂದಂ –

ಕಂದ॥ ಈಯಾನೆ ಕುದುರೆ ತೇರ್ಗಳೊ
ಳಾಯತಿಯೇಂ ಮೆಯ್ಗೆ ತಾಂಟುಗುಂ ರಣದೆಡೆಯೊಳ್
ಬೀಯದೆ ಬೀರದೆಯಾಂತುಮ
ಜೇಯಂ ತಾನೆನೆನಿಪೆನಿಂದು ತರ್ಪೆಂ ಗಯನಂ ॥೭॥

ಗದ್ಯ॥ ಅನ್ನೆಗಮಂಕಕೋಲಾಹಲನೆಂಬಂಕದ ವೀರನಂತಿಕಮಂ ಸಾರಿ –

ಕಂದ॥ ಅಸುರನಿನೀ ವಿಸ್ತರತರ
ರಸೆಯಂ ತಂದವನ ಬಂಟನೆಂ ನರನಿಂದಾ
ನಿಸದೆಯೆ ತರ್ಪೆಂ ಗಯನಂ
ಪುಸಿಯಾಗದು ದೇವ ಎಂದನೊರ್ವನಗುರ್ವಿಂ ॥೮॥

೬. ಹಾಗೆ ಮಾಡು, ಹೀಗೆ ಮಾಡು ಎಂದು ನನಗೆ ಹೇಳುವುದೇ ಬೇಡ. ಕಣ್ಣು ಸನ್ನೆ ಮಾಡಿದರೆ ಸಾಕು. ಅದೇ ನನಗೆ ಕೃಷ್ಣನ ಮತ್ತು ಬಲರಾಮನ ಅಪ್ಪಣೆಯೆನಿಸುವುದು. ನಾನು ನನ್ನ ಕಾರ್ಯದಿಂದ ಅರ್ಜುನನನ್ನು ಭಯದಿಂದ ನಡುಗುವಂತೆ ಮಾಡಿ ಆ ಖೇಚರನಾದ ಗಯನನ್ನು ಎಳೆದು ತರುವೆನು ಎಂದನು. (ಗದ್ಯ) ಅಷ್ಟು ಹೊತ್ತಿಗೆ, 'ಸಮರೈಕವೀರ' ಎಂಬ ವಿಶೇಷದ ವೀರನು ಹೀಗೆ ನುಡಿದನು.

೭. ಈ ಆನೆ– ಕುದುರೆ–ರಥಗಳಲ್ಲಿ ಪ್ರಯೋಜನವೇನು? ಯುದ್ಧಮಾಡುವಲ್ಲಿ ಮೈಗೆ ತಗಲುವವು. ಏನೂ ವ್ಯರ್ಥವೆನಿಸದೆ ನಾನು ಪರಾಕ್ರಮದಿಂದ ಕಾದಾಡಿ ಅಜೇಯನೆನಿಸುವೆನು, ಮಾತ್ರವಲ್ಲದೆ ಈ ದಿನ ಗಯನನ್ನು ತಂದು ಬಿಡುವೆನು. (ಗದ್ಯ) ಅಷ್ಟರಲ್ಲಿ 'ಅಂಕಕೋಲಾಹಲ' ಎಂಬ ಬಿರುದಿನ ವೀರನು ಹತ್ತಿರಕ್ಕೆ ಬಂದು ಹೀಗೆಂದನು –

೮. ಈ ಭೂಮಿಯನ್ನು ತಮಾಸುರನು ಈ ವಿಸ್ತಾರದ ಭೂಮಿಯನ್ನು ಪಾತಾಳಕ್ಕೆ ಒಯ್ದಾಗ, ಮತ್ಸ್ಯಾವತಾರಿಯಾಗಿ ಭೂಮಿಯನ್ನು ಮೇಲಕ್ಕೆ ತಂದ ಶ್ರೀಕೃಷ್ಣನ ಬಂಟನೇ ನಾನಾಗಿರುತ್ತೇನೆ. ಬಾಣಪ್ರಯೋಗವೇನನ್ನೂ ಮಾಡದೆಯೇ ಆ ಅರ್ಜುನನಿಂದ ಗಯನನ್ನು ತರುವೆನು. ದೇವಾ, ಇದು ಸುಳ್ಳಾಗದು ಎಂದನು. (ಗದ್ಯ) ಇವೇ ಮುಂತಾದ ಶೌರ್ಯಯುಕ್ತವಾದ ವೀರ ವಾಕ್ಯಗಳು ಎಲ್ಲ ಕಡೆಯೂ ಶ್ರೀಕೃಷ್ಣನನ್ನು ಉಲ್ಲಾಸಗೊಳಿಸಿದವು. ಉಕ್ಕಿದ ಸಮುದ್ರದ ಘೋಷವನ್ನು ಕೀಳಾಗಿ ಮಾಡತಕ್ಕ ಭೇರಿಗಳ ಶಬ್ದದಿಂದ ಕೂಡಿ ಬಲು ಬೇಗನೆ ಆ ಸೈನ್ಯವು ಯುದ್ಧರಂಗಕ್ಕೆ ಬರುತ್ತಿದ್ದಿತು.

ಗದ್ಯ॥ ಈ ಮುಂತಪ್ಪ ಶೌರ್ಯವದ್ವೀರವಾಕ್ಯಂಗಳೆತ್ತಲುಂ ಪುರುಷೋತ್ತಮನಂ
ಪಿರಿದುಮುಲ್ಲಾಸಿತಂಗೊಳಿಪುದುಂ – ಪೆರ್ಚಿದ ವಾರಿನಿಧಾನ – ನಿನಾದಮಂ ಕೀಳ್ಪೈವ
ಭೇರೀನಿನದದಿಂ ತೀವ್ರಗಾಮಿಯಾಗಿ ಸಂಗ್ರಾಮರಂಗಕ್ಕಾ ಪಡೆ ಬರ್ಪುದುಂ –

ಕಂದ॥ ಜಲಮೇವುದುವೆಲ್ಲಿದು ಹೃ
ದ್ಬಲಮೆ ಬಲಂ ವಲಮೆನುತ್ತುವನಿವಾರ್ಯರಚಂ
ಚಲರನತರಖಂಡಿತರ
ಸ್ಖಲರಿರ್ದರ್ ಕೂಡಿ ಪಾಂಡುಜಾತರಯೂಥರ್ ॥೯॥

ಗದ್ಯ॥ ಆಗಳ್ ಭೀಷ್ಮ ದ್ರೋಣ ಕೃಪಾದ್ಯರಂ ಮುಂತಿಟ್ಟನ್ಯೋನ್ಯಾನುಕೂಲ ಚಿಹ್ನೆಯಂ ಕಾಣಿಸಿ,
ಪಱಿಯ ಸರಮುಮಂ ನಿಲಿಸಿ ಮೊನೆಗೆ ನೆರವಪ್ಪಂತುಟಾ ಕುರುಧ್ವಜಿನಿ ಪತ್ತೆವರೆ –

ಕಂದ॥ ಪೊಸತೆಯ್ದಿ ನೆರೆಯೆ ಬಲದೊಡ
ನೆಸಗಿದುದಂ ಮಱೆತು ಹಿತಸಹೋದರನನೆನೆ ಭಾ
ವಿಸುತನುಜರನೊಂದಿಯೆ ಮ
ನ್ನಿಸಿದಂ ಗಾಂಧಾರಿಯಣುಗನಂ ಜವನಣುಗಂ ॥೧೦॥

ಗದ್ಯ॥ ತದನಂತರಮೇನೆಂದೊಡೆ –

ಮ.ವಿ.॥ ಅಳವಟ್ಟೊಪ್ಪುವ ಯುದ್ಧನಾಟ್ಯ ಪಟುಯೋಧಾನೀಕಮಂ ಪೀಠಿಕಾ
ವಿಳಸನ್ನಾದದಿನಲ್ಲಿ ರಂಗಕಿಳಿಸಲ್ಕೆಂಬಂತೆ ಕೌರವ್ಯಸಂ
ಕುಳದೊಳ್ ಯಾದವ ಸೈನ್ಯಸಂಕುಳದೊಳಂ ಭೇರಿಸ್ವನಂ ಶಂಖಕಾ
ಹಳೆಯುದ್ಯಧ್ವನಿ ಢಕ್ಕೆಯಾರವಮದೆತ್ತಂ ಪರ್ವಿತಾ ಪ್ರಾಂತದೊಳ್ ॥೧೧॥

೯. ಆಗ ಇತ್ತ ಪಾಂಡವರು ನಮಗೆ ಸೈನ್ಯವೇನು ಪ್ರಯೋಜನ? ಸೈನ್ಯವೆಲ್ಲಿದೆ? ಹೃದಯದ ಬಲವೇ ಬಲ (ಸೈನ್ಯ) ಎಂಬುದು ನಿಶ್ಚಯ ಎನ್ನುತ್ತ ಇತರರಿಂದ ನಿವಾರಿಸಲಿಕ್ಕಾಗದವರೂ ಚಾಂಚಲ್ಯವಿಲ್ಲದವರೂ ಬಾಗದವರೂ ಖಂಡಿಸಲ್ಪಡದವರೂ, ಸ್ಖಲನೆ (ನೆಲೆತಪ್ಪುವಿಕೆ) ಇಲ್ಲದವರೂ ಸೈನ್ಯವಿಲ್ಲದವರೂ ಆಗಿ ಒಂದುಗೂಡಿ ಇದ್ದರು. (ಗದ್ಯ) ಆಗ ಕೌರವಸೈನ್ಯವು ಭೀಷ್ಮ, ದ್ರೋಣ, ಕೃಪಾದಿಗಳನ್ನು ಮುಂದೆ ಮಾಡಿಕೊಂಡು ಅನ್ಯೋನ್ಯ ಅನುಕೂಲದ ಚಿಹ್ನೆಯನ್ನು ಕಾಣಿಸಿ, ರಣಭೇರೀಶಬ್ದವನ್ನು ನಿಲ್ಲಿಸಿ ಯುದ್ಧಕ್ಕೆ ನೆರವಾಗುವ ಲಕ್ಷಣದಿಂದ ಅಲ್ಲಿಗೆ ಬಂದಿತು. ಆ ಸೈನ್ಯ ಸಮೀಪಿಸಿದಾಗ –

೧೦. ಕೌರವನ ಸೈನ್ಯ ತಮಗೆ ಸಹಾಯಕ್ಕಾಗಿ ಬಂದುದೆಂದು ಧರ್ಮರಾಯನಿಗೆ ತಿಳಿಯಿತು. ಇದೀಗ ಹೊಸದಾಗಿ ಸೈನ್ಯಸಮೇತವಾಗಿ ಬಂದು ಸೇರಿದಾಗ, ಕೌರವನು ಹಿಂದೆ ಮಾಡಿದ ಕೇಡುಗಳನ್ನೆಲ್ಲಾ ಮರೆತು ಹಿತದ ಸಹೋದರನೆಂಬಂತೆ ಭಾವಿಸಿ, ತನ್ನ ತಮ್ಮಂದಿರೊಡನೆ ಕೂಡಿಕೊಂಡು ಧರ್ಮರಾಯನು ಕೌರವನನ್ನು ಮನ್ನಿಸಿದನು. ಆಮೇಲೆ ಏನಾಯಿತೆಂದರೆ –

೧೧. ಪೂರ್ವಸಿದ್ಧತೆಯಿಂದ ಶೋಭಿಸುವ ಯುದ್ಧವೆಂಬ ನಾಟ್ಯದಲ್ಲಿ ಸಮರ್ಥರಾದ ಭಟರ ಸಮೂಹವನ್ನು ಪೀಠಿಕೆಯ ನಾದದಿಂದ ರಂಗಸ್ಥಲಕ್ಕೆ ಇಳಿಸುವುದಕ್ಕಾಗಿ ಎಂಬಂತೆ ಕೌರವಸೈನ್ಯದಲ್ಲಿಯೂ ಯಾದವರ ಸೈನ್ಯದಲ್ಲಿಯೂ ರಣಭೇರಿಯ ಮತ್ತು ಶಂಖಕಹಳೆಗಳ ಮೇಲುಮಟ್ಟದ ಧ್ವನಿಯೂ ಢಕ್ಕೆಯ ಶಬ್ದವೂ ಆ ಪ್ರದೇಶದಲ್ಲೆಲ್ಲಾ ಪ್ರಸರಿಸಿದವು.

ಇದು ಸಮ್ಯಕ್ ನೃಪಧರ್ಮಯುದ್ಧ– ಶಪಥೋಕ್ತಿ, ಧ್ವಾನ , ಸಂದೋಹಮಿಂ
ತಿದದೀರ –ಧ್ವನಿಪಾತನೋರುನಿನದಂ ದ್ವಿಣ್ಮಾನಸಾಂಭೋಜಷಂ
ಡದೆ ವೀಚೀಕ್ರಿಯಮಾಣ ದಂಡಹತಿಯುಧ್ಯದ್ಧ್ವಾನಂ ಪ್ರತಿಧ್ವಾನ ಸಂ
ಪದಗರ್ವೀಕೃತ ದಿಕ್ಕು ತಾನಿದು ರಣಾರಂಭ– ಪ್ರಣಾದೋಕ್ಕರಂ ॥೧೨॥

ಕಂದ॥ ಆರಿರ್ದಪರಾರ್ ನೋಡುವ
ರಾರಿಸುವರ್ ಕಣೆಯ ಖಂಡಿಸುವರಾರ್ ಗುಜೆಯ
ಟ್ಟಾರಿಡುವರದಂ ಬಗೆಯಲ್
ಬಾರದವೋಲ್ ಕಱಿದುವಲ್ಲಿ ಕೂರ್ಗಣೆ–ಮಳೆಗಳ್ ॥೧೩॥

ಗದ್ಯ॥ ಅಂತು ಸಮರಾರಂಭ ಸೂಚನೆಯಾಗಿ ಯಾದವ ಕೌರವಬಲಂಗಳ್ ಪಡುವಣ ಮೂಡಣ
ಕಡಲ್ಗಳೊಂದನೊಂದು ಪಳಂಚಿದಂತೆ ಪಳಂಚಲೆಯೆ –

ಶಾ.ವಿ.॥ ದಿಗ್ದಂತಿವ್ರಜಮಾರ್ದು ಪಾಯ್ಗುಮೆಸೆವೆಣ್ದಿಕ್ಪಾಲಕರ್ ಕೇಳ್ದು ದಿ
ಙ್ಮುಗ್ಧತ್ವಂಬಡುಗುಂ ನೆಲಕ್ಕೆ ಗಿರಿ ಮಣ್ಣಂ ಪತ್ತಿಕುಂ ಪತ್ತುಗುಂ
ರುಗ್ದೈನ್ಯಂ ರವಿಚಂದ್ರಮರ್ಗೆನಿಸೆ ತಾನಿಂತಾಗೆ ಲೋಕಕ್ಕೆ ಸಂ
ದಿಗ್ಧಂ ಸೌಖ್ಯಮೆನಲ್ ಸರಂಗಱಿದರಾ ಜೋದರ್ಕಳೀರೊಡ್ಡಿನೊಳ್ ॥೧೪॥

೧೨. ಇದು ಸರಿಯಾಗಿ ರಾಜಧರ್ಮಯುದ್ಧದ ಪ್ರತಿಜ್ಞಾಪಾಲನೆಯ ಮಾತಿನ ಧ್ವನಿಸಮೂಹವೆಂಬಂತೆಯೂ ಈ ರೀತಿಯಾಗಿ ಇದು ಧೀರರಲ್ಲದವರ ಧ್ವನಿಯನ್ನೇ ಬೀಳಿಸತಕ್ಕ ಶಬ್ದವೆಂಬಂತೆಯೂ ಶತ್ರುಗಳ ಮನಸ್ಸೆಂಬ ಸರೋವರದಲ್ಲಿ ಅಲೆಗಳನ್ನುಂಟು ಮಾಡತಕ್ಕ ದೋಣ್ಣೆಯೇಟಿನ ದೊಡ್ಡ ಶಬ್ದವೆಂಬಂತೆಯೂ ಪ್ರತಿಧ್ವಾನವೆಂಬ ಸಂಪತ್ತಿನಿಂದ ಗರ್ವಗೊಂಡ ದಿಕ್ಕುಗಳಿಂದ ಕೂಡಿದುದೆಂಬಂತೆಯೂ ಯುದ್ಧಾರಂಭದ ವಿಶೇಷದ ನಾದ ಕೇಳಿಸಿತು.

೧೩. ಯಾರು ಇದ್ದಾರೆ? ಯಾರು ನೋಡುವರು? ಯಾರು ಬಾಣ ಬಿಡುತ್ತಿದ್ದಾರೆ? ಯಾರು ಖಂಡಿಸುತ್ತಿದ್ದಾರೆ? ಗುರಿಯಿಟ್ಟು ಯಾರು ಹೊಡೆಯುತ್ತಾರೆ? ಅದನ್ನು ಭಾವಿಸಲಿಕ್ಕೇ ಸಾಧ್ಯವಿಲ್ಲವೆಂಬಂತೆ ಅಲ್ಲಿ ಹರಿತವಾದ ಬಾಣಗಳ ಮಳೆಗಳು ಸುರಿದವು! (ಗದ್ಯ) ಆ ರೀತಿಯಾಗಿ ಯುದ್ಧದ ಪ್ರಾರಂಭಸೂಚನೆಯಾದಾಗ ಯಾದವರ ಮತ್ತು ಕೌರವರ ಸೈನ್ಯಗಳು ಪಶ್ಚಿಮದ ಮತ್ತು ಪೂರ್ವದ ಸಮುದ್ರಗಳು ಒಂದನ್ನೊಂದು ರಭಸದಿಂದ ತಾಗಿದಂತೆ ತಾಗಿದವು.

೧೪. ಎರಡೂ ಕಡೆಯ ಸೈನ್ಯಗಳ ಭಟರು ಸುರಿಸಿದ ಬಾಣಗಳ ಮಳೆ ಹೇಗಿದ್ದಿತೆಂದರೆ – ದಿಗ್ಗಜಗಳು ಹೆದರಿ ಗೀಳಿಟ್ಟು ಓಡಿಹೋದಾವು. ಅಷ್ಟದಿಕ್ಪಾಲಕರು ಈ ಗದ್ದಲವನ್ನು ಕೇಳಿ ದಿಙ್ಮೂಢರಾಗುವರು. ಬೆಟ್ಟಗಳು ಜರಿದು ನೆಲಕ್ಕೆ ಮಣ್ಣನ್ನು ಹತ್ತಿಸುವವು. ಸೂರ್ಯಚಂದ್ರರಿಗೆ ತಮ್ಮ ಕಾಂತಿಯಲ್ಲಿ ದೀನತೆಯುಂಟಾಗುವುದು! ಹೀಗಾದರೆ ಲೋಕಕ್ಕೆ ಸೌಖ್ಯವೆಂಬುದೇ ಸಂದಿಗ್ಧವಾಗುವುದು ಎಂಬಂತೆ ಬಾಣಗಳನ್ನು ಸುರಿಸಿದರು.

ಒಂದಸ್ತ್ರಂ ಪೆಱತೊಂದನಿರ್ಕಡಿಗೆಯಲ್ಕೊರ್ಬಾಳ್ ಪಳಂಚುತ್ತೆ ಮ
ತ್ತೊಂದಂ ತಾಗೆಯದೊಂದು ಡಾಣೆ ಗುದಿಯಂ ಮತ್ತೊಂದುಮಂ ಕಾಪಿನಂ
ಸಂದತ್ತೊರ್ಮೆ ಕಟಿಲ್ ಖಣಿಲ್ ದಡದಡಿಲ್ ಸದ್ದೆಳ್ದು ಕಿಚ್ಚಭ್ರದೊಳ್
ನಿಂದಾ ಯುದ್ಧನಿರೀಕ್ಷೆಗೆಯ್ವರೊಡಲಂ ಸುಟ್ಟತ್ತದೇಂ ಭೀಕರಂ ॥೧೫॥

ಮ.ವಿ.॥ ಶರದಿಂ ತುಂಡಿಸುವರ್ ಕೆಲರ್ ಗದೆಯಿನಡ್ಡೈಪರ್ ಕೆಲರ್ ಮುಂದೆ ಬಿ
ತ್ತರಿಸುತ್ತತ್ತಪರಂದಗುಳ್ವರರೆಬರ್ ಪಕ್ಕಕ್ಕೆ ಪಕ್ಕಾಗಿ ತಾ
ಮಿರುತುಂ ಬಾರಿಪರಂತು ಬರ್ಪ ರಿಪುಬಾಣವ್ರಾತಮಂ ಕಲ್ತ ಜೋ
ದರದೀರೊಡ್ಡಿನೊಳಿರ್ದಗುರ್ವುವಡೆದತ್ತಾ ರಂಗದೊಳ್ ಸಂಗರಂ ॥೧೬॥

ಉ.ಮಾ. ಕೈದುವದೊಂದೆ ಸಾಲ್ವ ಚದುರೊಂದೆ ಭಯಂಕರ ಸುಪ್ರಹಾರದಿಂ
ದೈದಿದ ವೈರಿಯಂ ನೆಲಕುರುಳ್ಚಿಪ ಶಕ್ತಿಯದೊಂದೆ ಸೂಟಿನಿಂ
ಸಾಧಿಸಿ ಗೆಲ್ಲಮಂ ಗಟಿಯಿಪಂಕದ ಬೀರರ ಬಿಂಕಮೆತ್ತ ಪೋ
ಪೋದುದೆನಲ್ಕಮಿರ್ಬಲಡವರ್ ಸಲೆ ಕಾದಿದರಂದು ಸಾಸದಿಂ ॥೧೭॥

೧೫. ಒಂದು ಬಾಣವು ಎದುರಾದ ಬೇರೊಂದು ಬಾಣವನ್ನು ತುಂಡರಿಸಿದಾಗ, ಒಂದು ಖಡ್ಗವು ರಭಸದಿಂದ ಇನ್ನೊಂದನ್ನು ತಾಗಿದಾಗ. ಒಂದು ದೊಣ್ಣೆ ಇನ್ನೊಂದು ಗುದಿಗೆಯನ್ನು ತಗಲಿದಾಗ ಖಣಿಲ್ ಕಟಿಲ್ ದಡದಡಿಲ್ ಶಬ್ದವೆದ್ದು ಬೆಂಕಿಯುಂಟಾಗಿ ಆ ಬೆಂಕಿ ಆಕಾಶದಲ್ಲಿ ನಿಂತು ಯುದ್ಧವನ್ನು ನೋಡುತ್ತಿರುವವರ ದೇಹವನ್ನೇ ಅಲ್ಲಲ್ಲಿ ಸುಟ್ಟಿತು. ಅದೇನು ಭಯಂಕರವೋ!

೧೬. ಎದುರಾಳಿಗಳಿಂದ ಪ್ರಯೋಗಗೊಂಡು ಬರುವ ಬಾಣಗಳನ್ನು ಕೆಲವರು ವೀರರು ತಮ್ಮ ಬಾಣದಿಂದ ತುಂಡರಿಸುತ್ತಿದ್ದರು. ಕೆಲವರು ಕೈಯ ಗದೆಯಿಂದ ತಡೆಯುತ್ತಿದ್ದರು. ಕಾಳಗದ ಹಲಗೆಯನ್ನು (ಅಡ್ಡಣವನ್ನು) ಚಾಚಿ ತಡೆಯುತ್ತಿದ್ದರು. ಕೆಲವರು ಪಕ್ಕಕ್ಕೆ ಸರಿದು ನಿವಾರಿಸಿ ಕೊಳ್ಳುತ್ತಿದ್ದರು. ಯುದ್ಧ ವಿದ್ಯೆಯನ್ನು ಅಷ್ಟರಮಟ್ಟಿಗೆ ಕಲ್ತಿದ್ದ ವೀರಭಟರು ಎರಡೂಕಡೆಯ ಸೈನ್ಯಗಳಲ್ಲಿ ಇದ್ದುದರಿಂದ ಆ ಯುದ್ಧರಂಗದ ಸಂಗ್ರಾಮವು ಭಯಂಕರವಾಗಿದ್ದಿತು.

೧೭. ಒಂದು ಆಯುಧವಿದ್ದರೆ ಸಾಕೆಂದೆನಿಸುವ ಯುದ್ಧ ಚಾತುರ್ಯ ಭಯಂಕರವಾದ ಒಂದೇ ಏಟಿನಿಂದ ಎದುರಾದ ಶತ್ರುವನ್ನು ನೆಲಕ್ಕೆ ಉರುಳಿಸುವ ಶಕ್ತಿ, ಒಂದೇ ಬಾರಿಯ ಸಾಧನೆಯಿಂದ ಜಯವನ್ನು ಗಳಿಸುವ ಬಿರುದಿನ ವೀರರ ಜಂಬ ಎಲ್ಲಿಗೆ ಹೋಯಿತೋ! ಎಂಬಂತೆ ಎರಡೂ ಸೈನ್ಯದವರು ವಿಶೇಷಸಾಹಸದಿಂದ ಅಂದು ಕಾದಾಡಿದರು.

ಮ.ವಿ. ಅಸಮಾಸ್ತ್ರಂ ವಿಷಮಾಸ್ತ್ರಮಕ್ಷಯತರಾಸ್ತ್ರಂ ಭೀಕರಾಸ್ತ್ರಂ ವಿಘೋ।
ಚ್ಚ್ವಸಿತಾಸ್ತ್ರಂ ಭ್ರಮಣಾಸ್ತ್ರಮುದ್ಧುರ ಜಯಾಸ್ತ್ರಂ ವೈರಿಸಂದೋಹನಾ
ರಸಮರ್ಥಾಸ್ತ್ರಮನಂತರಾಸ್ತ್ರಮರಿದುರ್ಭೇದ್ಯಾಸ್ತ್ರಮಿಂತೆಂದು ಭಾ
ವಿಸಲುಂ ಬಾರದುವಸ್ತ್ರಮೇನಿಸುಗೆವೆತ್ತತ್ರೋ ಸಶಾಸ್ತ್ರಾನುಗಂ ॥೧೮॥

ಸ್ರವ್ವ. ಒರ್ಬಂ ಮಾರಾಂತ ಮೊತ್ತೊರ್ವನನಿಸುವ ತಗುಳ್ದಿಕ್ಕುವಾ ಖಡ್ಗದಿಂ ಪೋ
ಟ್ದಿರ್ಭಾಗಂ ಗೈವ ನೇರ್ವಾ ಪೊಡೆವೊಡೆವುಱಿ ನುರ್ಗಾಗಿ ಮಾಡುತ್ತೊಂದು ಬಲ್ಪೊಂ
ದುರ್ಬುಂ ಕ್ರೋಧೋತ್ಕರಂ ದುರ್ಧರತೆಯಸಹನೀಯತ್ವಮಾ ದ್ವೇಷಮಾ ಸಂ
ದರ್ಭಂ ಘೋರಂ ಗಭೀರಂ ಪಿರಿದಸಮಮಮೇಯಾಸಹಂ ಸುಪ್ರಸಿದ್ಧಂ ॥೧೯॥

ಕಂದ॥ ಶಿರವಱಿಯೆ ಸುರಿವ ನೆತ್ತರ
ಸರಿಯಿಂ ತೊಯ್ದಾ ಶರೀರವದ್ಭುತರಸದಿಂ
ಭರಿತಮೆನಿಸಲೆತ್ತಿದ ಕೈ
ಕರವಾಳಿಂದಟ್ಟೆಯಟ್ಟು ತಿರ್ಬಂ ಪಗೆಯಂ ॥೨೦॥

೧೮. ಆ ಯುದ್ಧದಲ್ಲಿ ಅಸಮಾಸ್ತ್ರ (ಸಮಾನತೆಯಿಲ್ಲದ ಅಸ್ತ್ರ), ವಿಷಮಾಸ್ತ್ರ, ಅಕ್ಷಯಾಸ್ತ್ರ , ಭಯಂಕರಾಸ್ತ್ರ, ವಿಷದ ಗಾಳಿಯನ್ನು ಬಿಡುವ ಅಸ್ತ್ರ, ಭ್ರಮಣ (ತಲೆತಿರುಕ) ಉಂಟುಮಾಡುವ ಅಸ್ತ್ರ, ಸಮರ್ಥವಾದ ಜಯಾಸ್ತ್ರ, ಶತ್ರುಸಮೂಹವನ್ನು ನಾಶಮಾಡಲು ಶಕ್ತವಾದ ಅಸ್ತ್ರ, ಎಡೆಬಿಡದೆ ಪ್ರಯೋಗಗೊಳ್ಳುವ ಅಸ್ತ್ರ, ಶತ್ರುವಿಗೆ ಭೇದಿಸಲಿಕ್ಕಾಗದ ಅಸ್ತ್ರ ಹೀಗೆಂದು ಭಾವಿಸಲು ಸಾಧ್ಯವೇ ಇಲ್ಲವೆಂಬಂತಿರುವ ಅಸ್ತ್ರಗಳು (ಮಂತ್ರ ಬಾಣಗಳೂ) ಶಾಸ್ತ್ರೀಯವಾಗಿಯೇ ಅದೇನು ಪ್ರಯೋಗಗೊಂಡವೋ!

೧೯. ಒಬ್ಬನು ತನಗೆ ಎದುರಾದ ಮತ್ತೊಬ್ಬನ ಮೇಲೆ ಬಾಣಪ್ರಯೋಗ ಮಾಡುವ, ಬೆನ್ನಟ್ಟಿ ಹೊಡೆಯುವ, ಖಡ್ಗದಿಂದ ಹೊಡೆದು ಸೀಳುವ, ಕತ್ತರಿಸುವ, ಹೊಡೆಯುವ, ಒಡೆಯುವ, ನುಗ್ಗಾಗಿ (ಪುಡಿಯಾಗಿ) ಮಾಡುವ ಅದೊಂದು ಸಾಮರ್ಥ್ಯ, ಉತ್ಸಾಹ ಕೋಪಾತಿರೇಕ, ಕಠಿನತೆ, ಅಸಹನೀಯವರ್ತನೆ, ವೈರ– ಇವೆಲ್ಲವೂ ಆ ಸಂದರ್ಭದಲ್ಲಿ ಘೋರವೂ, ಗ್ಂಭೀರವೂ, ಹಿರಿದಾದುದೂ, ಅಸಾಮಾನ್ಯವೂ, ಅಳೆಯಲು ಸಾಧ್ಯವಿಲ್ಲದುದೂ, ಸಹಿಸಲು ಅಶಕ್ಯವೂ, ಬಹಳ ಪ್ರಸಿದ್ಧವೂ ಆಗಿದ್ದವು.

೨೦. ಯುದ್ಧದಲ್ಲಿ ತಲೆ ತುಂಡಾದಾಗ ಸುರಿಯತಕ್ಕ ರಕ್ತದ ಮಳೆಯಲ್ಲಿ ಒದ್ದೆಯಾದ ದೇಹವು ಅದ್ಭುತ ರಸದಿಂದ ತುಂಬಿದಂತೆ ಕಾಣಿಸುತ್ತಿರಲು ಕೈಯಲ್ಲಿ ಎತ್ತಿದ ಖಡ್ಗದೊಂದಿಗೆ ಶತ್ರುವನ್ನು ಬೆನ್ನಟ್ಟುವುದು ಕಾಣಿಸುತ್ತಿತ್ತು.

ಕಣೆಕಡಿಯೆ ಭಟನ ಕೈಯೆಲ
ರುಣೆಯಂತಟ್ಟಿತ್ತು ತಲೆಯುಮುರುಳ್ದೊಡೆ ಕಚ್ಚ
ಲ್ಕಣೆಯಿತು ಕಾಲ್ ಕಾಲಿಟ್ಟ
ತ್ತಣೆವಳರಂಗಾಂಗದಲ್ಲಿ ಶೌರ್ಯಂ ಕಿರಿದೊ ॥೨೧॥

ಒರ್ಕಾಲ್ ಪಜಿದೊಡೆಯುಂ ಕ
ಟ್ಟು ಕರ್ಾಳೊರ್ವನನೆಯಾದೊಡಂ ಕೊಲದಿರೆನೆಂ
ದೊಕ್ಕಯ್ಯೊಳೂರಿ ಬಿಲ್ಲನ
ದೊರ್ಕಯ್ಯಸಿಯಿಂದೆ ಪಗೆಯನೇರ್ಗೆಯ್ದನವಂ ॥೨೨॥

ಅಶನಿ ಪ್ರಹಾರ ಭೀಕರ
ವಿಷಮ ಗದಾಹತಿಗೆ ಪೋಳ್ದ ತಲೆಗೊರ್ಕೈ ಪ
ತ್ತಿಸಿ ಯಮದಂಡ ಭಯಾವಹ
ವಿಷಮಾಹತಿಯಿಂದೆ ಹಗೆಯ ಹರಿಸಿದನೊರ್ವಂ ॥೨೩॥

ಚ.ಮಾ.॥

ಒಱಿವರುಣಾಂಬು ಪುಣ್ಮುವ ಮಿದುಳ್ ಕಡಿವೋ ದೊಡಲರ್ದುವಾ ಕರುಳ್
ಮುಱಿವಕಟಿಸ್ಥಳಂ ಪಱಿವ ಕಯ್ಯರುಣೋದಕದಲ್ಲಿ ತೆಂಕುವಾ
ಬಿಱುಮೊನೆಗಾಱರಟ್ಟೆಯಿರೆ ತಾಱುವ ಕಂಗೆಳೆ ಕಾಂಬಿನಂ ಮರುಳ್
ಮೆಱೆದಡಗಂ ತಿನುತ್ತೆ ಕುಣಿಯುತ್ತಿರೆ ಬೀರದಿನಲ್ಲಿ ಕಾದಿದರ್ ॥೨೪॥

೨೧. ತನ್ನ ಬಾಣ ತುಂಡಾಗಿ ಬಾಣವೇ ಇಲ್ಲವಾದರೇನಾಯಿತು? ಸೈನಿಕಯೋಧನ ಕೈಯೇ ಸರ್ಪದಂತೆ ಶತ್ರುವನ್ನು ಅಟ್ಟಿತು. ತಲೆಯುರುಳಿದಾಗ ಅದು ಶತ್ರುವನ್ನು ಕಚ್ಚಲು ಮೇಲೆದ್ದಿತು! ಕಾಲು ತುಂಡಾದಾಗ ಅದು ಕಾಲನ್ನು ಮುಂದಟ್ಟಿತು! ಯುದ್ಧದ ಯೋಧರ ಅಂಗಾಂಗಗಳಲ್ಲಿ ಪರಾಕ್ರಮವು ಚಿಕ್ಕದೇ?

೨೨. ಒಬ್ಬ ಭಟನು ತನ್ನ ಒಂದು ಕಾಲು ಹರಿದುಹೋದರೂ ಗರ್ವಿಯಾದ ಶತ್ರುವೊಬ್ಬನನ್ನಾದರೂ ಕೊಲ್ಲದೆ ಇರೆನೆಂದು ಒಂದು ಕೈಯಲ್ಲಿ ಆಧಾರಕ್ಕಾಗಿ ಬಿಲ್ಲನ್ನು ಊರಿಕೊಂಡು ಮತ್ತೊಂದು ಕೈಯ ಖಡ್ಗದಿಂದ ವೈರಿಯನ್ನು ಗಾಯಗೊಳಿಸಿದನು!

೨೩. ವಜ್ರಾಯುಧದ ಏಟಿನಷ್ಟು ಭಯಂಕರವಾದ ಗದೆಯ ಹೊಡೆತಕ್ಕೆ ಒಡೆದ ತಲೆಗೆ ಒಂದು ಕೈಯನ್ನು ಹತ್ತಿಸಿ (ಇಟ್ಟು) ಯಮನ ದೊಣ್ಣೆಯಷ್ಟು ಭಯಂಕರವೂ ವಿಷಮವೂ ಆದ ಹೊಡೆತದಿಂದ ಒಬ್ಬನು ತನ್ನ ವೈರಿಯನ್ನು ಕೊಂದನು.

೨೪. ಸುರಿಯುತ್ತಿರುವ ರಕ್ತ, ಮೇಲೆ ಬರುವ ಮಿದುಳು, ಕಡಿದ ದೇಹ, ರಕ್ತದಲ್ಲಿ ನೆನೆಯುವ ಕರುಳು, ಮುರಿಯುವ ಸೊಂಟ, ತುಂಡಾಗುವ ಕೈ, ರಕ್ತದಲ್ಲಿ ತೇಲುವ ಯುದ್ಧವೀರರ ದೇಹ, ಒಣಗುವ ಕಣ್ಣುಗಳು ಕಾಣುತ್ತಿರಲು ಪಿಶಾಚಿಗಳು ಮೆರೆದುಕೊಂಡು ಮಾಂಸವನ್ನು ತಿನ್ನುತ್ತ ಕುಣಿದಾಡುತ್ತಿರಲು ಭಟರು ವೀರತ್ವದಿಂದ ಕಾದಾಡಿದರು. ಹೀಗಿರಲು ಒಂದು ಕಡೆಯಲ್ಲಿ –

ಗದ್ಯ॥ ಅನ್ನೆಗಮದೊಂದೆಡೆಯೊಳ್ –

ಕಂದ॥ ಅರಿಯುತೆ ಶರಾಳಿ ತರದಿಂ
ದರಿಸರಸಿಜಮಂ ಮದೋತ್ಥ ದುಶ್ಶಾಸ ಗಜಂ
ಬರೆ ತಗರ್ದಾಂತಂ ರೌದ್ರೋ
ತ್ಕರರಂಹಂ ಸಿಂಹನಾಗಳಾಹವಸಿಂಹಂ ॥೨೫॥

ನಿನ್ನ ಬಲದ ಬೀರದ ದ
ರ್ಪೋನ್ನತಿ – ವರ್ಣನೆಯ ವಾಕ್ಯಕಿದು ವಿಶ್ರಮಣ
ಕ್ಕೆನ್ನಿಟ್ಟ ಚಿಹ್ನೆಯೆನುತುಂ
ಮುನ್ನೆಸೆದಂ ತೀಕ್ಷ್ಣ ಶರವನೊಂದಂ ಸಿಂಹಂ ॥೨೬॥

ಪೆಂಪಿನ ಪೆಸರಿಂದೇಂ ನುಡಿ
ಗುಂಪಿನ ಬೀರದಿನದೇಂ ಫಲಂ ಪುಯ್ಯಲೊಳಿಂ
ದಾಂಪೊಡೆ ನೋಡೆಂದದನರಿ
ದುಂ ಪಡಿಯಲಗುಗಳನೆಚ್ಚನಾ ದುಶ್ಶಾಸಂ ॥೨೭॥

ನೆನೆದೆಚ್ಚೊಡೆತ್ತ ನಿನ್ನಯ
ನೆನಪೀ ಲೋಕದೊಳೆನುತ್ತುಮಾರ್ದಾ ದುಶ್ಶಾ
ಸನನಲಗುಗಳಂ ಕಡಿದಾ
ತನ ಬಿಲ್ಲಂ ತಜೆಯೆ ಕಯ್ಯೆ ಮುಱಿವಂತಾಗಲ್ ॥೨೮॥

೨೫. ದುಃಶಾಸನವೆಂಬ ಮದ್ದಾನೆಯು ಬಾಣಸಮೂಹವೆಂಬ ಕೈಯಿಂದ ವೈರಿಗಳೆಂಬ ತಾವರೆಯನ್ನು ತುಂಡರಿಸುತ್ತಾ ಬರಲು, ರೌದ್ರತೆಯ ಹೆಚ್ಚಳದ ಆ ವೇಗವುಳ್ಳ ಮತ್ತು ಯುದ್ಧದಲ್ಲಿ ಸಿಂಹದಂತಿರತಕ್ಕ ಸಿಂಹನು ದುಶ್ಶಾಸನನನ್ನು ತಡೆದು ಯುದ್ಧಕ್ಕೆ ನಿಂತನು.

೨೬. ನಿನ್ನ ಶಕ್ತಿಯ ಪರಾಕ್ರಮದ ದರ್ಪದ ಹೆಚ್ಚಳದ ವರ್ಣನೆಯ ವಾಕ್ಯಕ್ಕೆ ಇದೀಗ ನಾನು ಇಟ್ಟಿರುವ ಪೂರ್ಣವಿರಾಮಚಿಹ್ನೆ ಎನ್ನುತ್ತ ಸಿಂಹನು ಒಂದು ಹರಿತವಾದ ಬಾಣವನ್ನು ಪ್ರಯೋಗಿಸಿದನು.

೨೭. ಆಗ ದುಃಶಾಸನನು ನಿನ್ನ ಹಿರಿಮೆಯ ಹೆಸರಿನಿಂದ ಏನು ಪ್ರಯೋಜನ? ಮಾತುಗಳ ವೀರತ್ವದಿಂದ ಏನು ಫಲ? ಯುದ್ಧದಲ್ಲಿ ಇದಿರಾಗಿ ಕಾದಾಡುವದಾದರೆ ನೋಡು ಎಂದು ನುಡಿದು ಆ ಬಾಣವನ್ನು ಕಡಿದು ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸಿದನು.

೨೮. ನಾನು ಯೋಚಿಸಿ, ನಿನಗೆ ಬಾಣ ಬಿಟ್ಟರೆ, ನಿನ್ನ ನೆನಪೇ ಈ ಲೋಕದಲ್ಲಿ ಇಲ್ಲವಾಗುವುದು (ನೀನು ಸಾಯುವೆ) ಎನ್ನುತ್ತ ಗರ್ಜಿಸಿ, ಆ ದುಃಶಾಸನನ ಬಾಣಗಳನ್ನು ಕಡಿದು, ಅವನ ಬಿಲ್ಲನ್ನೇ ಮುರಿದನು. ಆಗ ಕೈ ಮುರಿಯುವಂತಾಯಿತು.

ಅಸಿಗೊಂಡಾ ಸಿಂಹಂ ಮೆಯ್
ಬಿಸುಪೇಱೆರೆ ಮುಳಿಸನಾಂತು ದುಶ್ಶಾಸನನಂ
ರಸೆಗುರುಳಿಸೆ ಮುಂಬಱಿದವ
ನ ಸಹೋದರವರ್ಗಮಾವರಿಸೆ ಗಣೆಸಿದನೇ ॥೨೯॥

ಬಾಣಾಹತಿಯಿಂ ಕೆಲಬರ್
ಪ್ರಾಣಾಂಗಳೆದವರ್ಗಳಾದರುೞಿದರ್ ಭರದಿಂ
ಕ್ಷೀಣಬಲರೋಡಿದರ್ ಮೞೆ
ಗೋಣೆಯೊಳೋಡುವ ಪಯಂಗಳೆನೆ ಕುರುತನುಜರ್ ॥೩೦॥

ಗದ್ಯ॥ ಆಗಳೊಂದೆಡೆಯೊಳ್ ಭುಜಬಲದಿಂ ಪಲಂಬರಂ ಬಲಂಗೆಡಿಸಿದ ಕುರುಕುಲದ ಪೞಂಬನಪ್ಪ ಭೀಷ್ಮಂಗೆ ಬಲಭದ್ರಂ ಮಾರ್ಕೊಳೆ ತಾನೆಂದಂ –

ಮ. ವಿ. ॥ಪಟ್ಟಕ್ಕಾಗದ ವಂಶದೊಳ್ ಜನಿಸಿದಯ್ ಮೇಣ್ ದೀವಿಯಾಳ್ದಬ್ಧಿಸಂ
ಸ್ಪಷ್ಟಕ್ಷ್ಮಾಪತಿಯಾದೆಯಯ್ಯನುಜನಾಜ್ಞಾಪಾಲನಾಶೀಲಮಂ
ಕೊಟ್ಟುಂ ಶ್ರೇಷ್ಠನೆನಿಪ್ಪ ಕಕ್ಕುನುಡಿಯಂ ತೞ್ಕೈಸಿದಯ್ ನಿನ್ನವೋ
ಲುಟ್ಟರ್ ಬೆಳ್ಪಸಮೆಂಬ ಸೀರೆಯನದಾರ್ ನೀಂ ಸಂಗರಕ್ಕರ್ಹನೇ ॥೩೧॥

ಕಂದ॥ ಬಲಭದ್ರ ಕೃಷ್ಣನೊಡನೇ
ಕೆಲೋ ರಣಕೆಯ್ತಂದೆ ಪೋಗು ಪೋಗಲ್ಲದೊಡಾ
ಬಲದೇವಂಗಲ್ಲದೆ ದೇ
ಗುಲದೇವಂಗೇಕೆ ಪೊಱಗೆ ಮೆಱೆವಾ ಬೆಸನಂ ॥೩೨॥

೨೯. ಆನಂತರ ಸಿಂಹನು ಒಂದು ಖಡ್ಗವನ್ನು ಹಿಡಿದು, ಮೈ ಬಿಸಿಯೇರಿ, ಕೋಪತಾಳಿ ದುಃಶಾಸನನನ್ನು ನೆಲಕ್ಕೆ ಬೀಳಿಸಿದನು. ಆಗ ದುಃಶಾಸನನ ಸಹೋದರ ವರ್ಗದವರು ಮುತ್ತಿದರು. ಸಿಂಹನು ಅವರನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.

೩೦. ಅವನ ಬಾಣಗಳ ಹೊಡೆತದಿಂದ ಕೌರವರಲ್ಲಿ ಕೆಲವರು ಪ್ರಾಣ ಕಳೆದುಕೊಂಡರು. ಉಳಿದವರು ಬಲಹೀನತೆಯಿಂದ ಓಡಿಹೋದರು. ಹಾಗೆ ಓಡುವುದು ಮಳೆ ಬಿದ್ದಾಗ ಓಣಿಯಲ್ಲಿ ಓಡಿಹೋಗುವ ಹಸುಗಳಂತೆ ಕಾಣಿಸಿತು. (ಗದ್ಯ) ಆಗ ಇನ್ನೊಂದು ಕಡೆಯಲ್ಲಿ ತನ್ನ ಶೌರ್ಯದಿಂದ ಹಲವರನ್ನು ಶಕ್ತಿ ಕುಂದುವಂತೆ ಮಾಡಿದ ಕುರುಕುಲವೃದ್ಧನಾದ ಭೀಷ್ಮನಿಗೆ ಬಲರಾಮನು ಎದುರಾಗಲು ಭೀಷ್ಮನು ಹೀಗೆಂದನು.

೩೧. ಎಲೈ ಬಲರಾಮನೆ, ನೀನು ಪಟ್ಟಾಭಿಷಿಕ್ತನಾಗಲು ಯೋಗ್ಯವಲ್ಲದ ಯಾದವವಂಶದಲ್ಲಿ ಹುಟ್ಟಿರುತ್ತೀ. ದ್ವಾರಕೆಯೆಂಬ ದ್ವೀಪವನ್ನಾಳಿ ಸಮುದ್ರದಿಂ ಆವೃತವಾದ ಭೂಮಿಗೆ ಒಡೆಯನಾದೆ. ತಮ್ಮನ ಆಜ್ಞಾಪಾಲನೆ ಮಾಡತಕ್ಕ ಶೀಲವನ್ನು ತಾಳಿ ಶ್ರೇಷ್ಠನೆಂದೆನಿಸಿಕೊಂಡೆ. ನಿನ್ನಂತೆ ಧವಳಕೀರ್ತಿ ಎಂಬ ಸೀರೆಯನ್ನು ಉಟ್ಟುಕೊಂಡವರು ಬೇರೆ ಯಾರಿದ್ದಾರೆ? ನೀನು ಯುದ್ಧಮಾಡಲು ಅರ್ಹನೇ?

೩೨. ಬಲಭದ್ರನೇ, ಕೃಷ್ಣನ ಜತೆ ಸೇರಿಕೊಂಡು ನೀನೇಕೆ ಯುದ್ಧಕ್ಕೆ ಬಂದೆ? ಹೋಗು, ಹೋಗು. ಅದಲ್ಲವಾದರೆ, ದೇವಾಲಯದಲ್ಲಿ ಬಲಿಬರತಕ್ಕ ದೇವನಿಗಲ್ಲದೆ, ದೇಗುಲದೊಳಗಡೆ ಸ್ಥಾಪನೆಯಾದ ದೇವನಿಗೆ ಹೊರಗೆ ಬಂದು ಮೆರೆವ ವ್ಯಸನವೇಕೆ?

ದೇಹಬಲದಿಂದೆ ವೈರಿಯ
ನಾಹವದೊಳ್ ಗೆಲ್ವ ಮಾತದಂತಿರ್ಕೆ ಮಹಾ
ವಾಹಿನಿಯ ಬಲದಿನಕ್ಕುಮೆ
ಓಹೋ ಬಲಭದ್ರನೆಂಬ ಪೆಸರಯಥಾರ್ಥಂ ॥೩೩॥

ಇದು ಕೈದೆನುತ್ತೆ ಹಲಮುಸ
ಲಧರಂ ತಾನಾಗಿ ಬೆಳ್ಪ ನೀನಾಂಪಯ್ ನೋ
ಡಿದು ಘನಕದನಂ ತಾನು
ೞ್ವುದು ನೆಲ್ಲುಟ್ಟುವುದುಮಿಲ್ಲಿ ತೋರ್ಪ ಬೆಸನಮೇ ॥೩೪॥

ಗದ್ಯ॥ ಎಂದಾ ಭೀಷ್ಮನಭೀಷ್ಟಮೆಯಪ್ಪ ಮೂದಲೆವಾತು ಕೂದಲಲುಗೆ ಕೋಪಮಂ ಪೆರ್ಚಿಸಿ ಮಾಧವಾಗ್ರಜನಾಸ್ಫೋಟಿಸಿ, ಕೇಳೆಂದು ಭೀಷ್ಮಂಗಿಂತೆಂದಂ –

ಕಂದ॥ ಮಕ್ಕಳ್ಗುಲಿವೊಡೆಯಿಂ ಬಂ.
ದಿಕ್ಕಿದೆ ನೀಂ ಸತಿವಿಯೋಗಮಂ ತಂದೆಗೆ ಮೇಣ್
ತಕ್ಕಿನ ಪಟ್ಟಕ್ಕಾಗದ
ನಕ್ಕುಂ ನಿನ್ನಂತೆ ಬಟ್ದಿನಾವನುಮೊಳನೇ ॥೩೫॥

೩೩. ಶರೀರದ ಶಕ್ತಿಯಿಂದ ಯುದ್ಧದಲ್ಲಿ ಶತ್ರುವನ್ನು ಗೆಲ್ಲುವ ಮಾತು ಹಾಗಿರಲಿ, ಮಹಾಸೈನ್ಯದ ಬಲದಿಂದಲೂ ನಿನಗೆ ಸಾಧ್ಯವಾಗದು! ಓಹೋ, ನಿನಗೆ ಬಲಭದ್ರ ಎಂಬ ಹೆಸರು ಯಥಾರ್ಥವಾದುದಲ್ಲ!

೩೪. ಇದೇ ನನ್ನ ಆಯುಧ ಎಂದು ಹೇಳಿಕೊಂಡು, ನೇಗಿಲು ಒನಕೆಗಳನ್ನು ತಾನಾಗಿ ಧರಿಸಿಕೊಂಡೆ! ಎಲೈ ಬೆಪ್ಪನೆ, ನೀನು ಇದಿರಾಗ ಬಲ್ಲೆಯಾ? ಇದು ಘನವಾದ ಯುದ್ಧ! ಉಳುವುದು, ಬತ್ತ ಕುಟ್ಟುವುದು ಎಂಬಿವನ್ನು ತೋರ್ಪಡಿಸುವ ಕೆಲಸವೇ? (ಗದ್ಯ) ಹೀಗೆ ನುಡಿದ ಭೀಷ್ಮನ ಭಯಂಕರದ ಮೂದಲೆಯ ಮಾತು ರೋಮಾಂಚಕವಾಗುವ ಕೋಪವನ್ನು ಹೆಚ್ಚಿಸಲು ಬಲರಾಮನು ಸಿಡಿದು, ಇದೋ ಕೇಳು – ಎಂದು ಹೀಗೆಂದನು –

೩೫. ನೀನು ಮಕ್ಕಳನ್ನೇ ಕೊಲ್ಲತಕ್ಕವಳ ಹೊಟ್ಟೆಯಿಂದ ಹುಟ್ಟಿ ಬಂದು. ತಂದೆಗೆ ಪತ್ನೀವಿಯೋಗವನ್ನುಂಟು ಮಾಡಿದೆ. ಅದಲ್ಲದೆ, ಯೋಗ್ಯವಾದ ಸಿಂಹಾಸನವನ್ನೇರಲು ಆಗದವನು. ನಿನ್ನ ಹಾಗೆ ಬದುಕಿದವ ಯಾವನಾದರೂ ಇರುವನೇ? ಇಲ್ಲವೇ ಇಲ್ಲ.

ಒರ್ಕೆ ಮದುವೆನಿಂಬಾ ರಾ
ಯರ್ಕಳೆನುತ್ತಿಟ್ಟ ಪಣವ ನೀಂಗೆಲ್ದಾ ಪೆ
ಣ್ಮಕ್ಕಳನಟಮಟಮಂ ಗೆ
ಯ್ದುರ್ಕಿಂ ಗುರುಗೆಚ್ಚ ದುಷ್ಟರಾರ ನಿನ್ನನ್ನರ್ ॥೩೬॥

ಚಂ.ಮಾ।

ಕಿಱಿಯರ ತಿರ್ದುವಾತನೆನಿಸಿರ್ದನಿಮಿತ್ತ ವಿರೋಧವೃತ್ತಿಯಂ
ಮೆಱಿಸುತೆ ನಾಡೆ ಪಾಂಡವರ ಬಾಧಿಪ ಕೌರವ ಭೂಮಿಪಂಗೆ ಪಾಂ
ಗಱಿದುಱಿ ಬುದ್ಧಿಯಂ ತಿಳುಪಿ ತಿರ್ದದೆ ಮುದ್ದಿನೊಳಾತನಾಣೆಯಿಂ
ಮೆಱಿವನೆ ದುರ್ಗುಣಕ್ಕಿರವನೀವರದಾರ್ ಸಲೆ ನಿನ್ನ ಮಾಟಕ್ಕಿಯಿಂ ॥೩೭॥

ಗದ್ಯ॥ ಆಗಳ್ ಭೀಷ್ಮನದಂ ತಡೆಯಲಾಱದಾಶನಂ ತಡೆದೆಂದಂ –

ಕಂದ॥ ಅಂತಲ್ತು ಪುಟ್ಟಿ ತಂದೆಗೆ
ಸಂತಸಮುಂ ತಿರೆಗೆ ಶಾಂತಿಯಪ್ಪಂತುಟು ಭೀ
ಷ್ಮಂ ತಾನೆನಿಸಿದೆನಿಂದಾಂ
ಸಂತಯಿಸಿದೆನಲ್ತೆ ನೋಡುನೀನುಭಯತರಂ ॥೩೮॥

ಇರ್ಕಡೆಯುಂ ಪೋಣರುತ್ತಿರ
ಲುರ್ಕಿಂ ಕೈಬೆಟ್ಟಿ ನಗುವ ಲೀಲೆಗಿದೆಡರಾ
ಗಿರ್ಕುಂ ನೀಂ ವೈರದೆ ಬರೆ
ಸೊರ್ಕಂ ತಗ್ಗಿಸದೆ ಕೆಮ್ಮನೇಂ ಬಿಟ್ಟಪೆನೇ ॥೩೯॥

೩೬. ಮದುವೆಯಾಗತಕ್ಕ ರಾಯರು ಬರಲಿ – ಎಂದು ಇಟ್ಟಂತಹ ಪಣವನ್ನು ನೀನು ಗೆದ್ದಿರುವೆ. ಆದರೆ ಆ ರಾಜಕುಮಾರಿಯರಿಗೆ ಮೋಸಮಾಡಿದೆ. ಆ ಮೇಲೆ ಗರ್ವದಿಂದ ಗುರುವಿನೊಂದಿಗೆ ಯುದ್ಧಮಾಡಿದೆ! ನಿನ್ನಂಥವರು ಬೇರೆ ಯಾರಿದ್ದಾರೆ?

೩೭. ಕುಲದಲ್ಲಿ ಹಿರಿಯನಾಗಿದ್ದು ಕಿರಿಯರನ್ನು ತಿದ್ದುವಾತನೆನಿಸಿದ್ದರೂ ಆ ಪಾಂಡವರಲ್ಲಿ ನಿಷ್ಕಾರಣ ದ್ವೇಷವರ್ತನೆಯನ್ನು ಮೆರೆಯಿಸಿಕೊಂಡು ಅವರಿಗೆ ಪೀಡೆ ಕೊಡತಕ್ಕ ಕೌರವನಿಗೆ ಕ್ರಮವನ್ನರಿತು ಚೆನ್ನಾಗಿ ಬುದ್ಧಿ ಹೇಳಿ ತಿದ್ದುವುದನ್ನು ಬಿಟ್ಟು, ಅವನ ಆಜ್ಞಾಧಾರಕನಾಗಿ ಮೆರೆವಾತನು ನೀನಲ್ಲವೆ? ನಿನ್ನ ಹಾಗೆ ದುರ್ಗುಣಕ್ಕೆ ವಿಶೇಷವಾದ ಆಶ್ರಯವನ್ನು ನೀಡತಕ್ಕವರು ಬೇರೆ ಯಾರಿದ್ದಾರೆ? (ಗದ್ಯ) ಭೀಷ್ಮನು ಆಗ ಆ ಮಾತನ್ನು ಸಹಿಸಲಾರದೆ ಆತನನ್ನು ತಡೆದು ಹೀಗೆಂದನು.

೩೮. ನೀನೆಂದುದು ಸರಿಯಲ್ಲ. ನಾನು ಹುಟ್ಟಿ ತಂದೆಗೆ ಸಂತೋಷವೂ ಲೋಕಕ್ಕೆ ಶಾಂತಿಯೂ ಆಗುವಂತೆ ಭೀಷ್ಮ ಎಂದೆನಿಸಿದ್ದೇನೆ. ಇಂದೀಗ ಅದಕ್ಕೆ ಅನುಗುಣವಾಗಿ ಕೌರವ ಪಾಂಡವರನ್ನು ಸಮಜಾಯಿಸಿರುವೆನಲ್ಲವೆ? ನೋಡು.

೩೯. ನೀನು ಹಾಗಲ್ಲ – ಎರಡು ಕಡೆಯವರೂ ಪರಸ್ಪರ ಕಾದಾಡುತ್ತಿರುವಾಗ ಕೈಚಪ್ಪಾಳೆ ಹೊಡೆದು ನಗುವ ವಿನೋದಕ್ಕೆ ಇದೀಗ ಎಡರಾಗಿದೆಯಲ್ಲವೆ? ನೀನೀಗ ದ್ವೇಷದಿಂದ ಬಂದರೆ ಗರ್ವಭಂಗ ಮಾಡದೆ ಹಾಗೆಯೇ ಬಿಡುವೆವೇ ನಾವು?

ಮ.ಪ್ರ. ॥

ಬಱುಮಾತೇಂ ತೊಟ್ಟು ನೋಡೊಂದುರುತರಶರಮಂ ದೇಹದೊಳ್ ಸತ್ವಮೊಪ್ಪು
ತ್ತಿರೆ ನಿನ್ನಂಗಾಂಗದೊಳ್ ವೀರರಸವುಗುತರಲ್ ಚಿತ್ತಮಸ್ಪಂದನಂಗೊಂ
ಡಿರೆ ಹಸ್ತೋದ್ಯೋಗಚಾತುರ್ಯಮದು ಮೆಱೆವಿನಂ ಚಾಪಮಚ್ಛೇದ್ಯಮೆಂಬಂ
ತಿರೆ ಮೇಣಂತಲ್ಲದೀಗಳ್ ಮೊಗದಿರುಪು ಭರಂಗೆಯ್ಯೆನಲ್ ಭೀಷ್ಮನಾಗಳ್ ॥೪೦॥

ಕಂದ ॥ ಸುಯ್ಯೆಂದುದು ಬಯ್ಯೆಂದುದು
ಕುಯ್ಯೆಂದುದು ಬಾಣಜಲಧಿಯೊಳ್ ಮುಳುಗಿಸುತುಂ ॥
ಪೊಯ್ಯೆಂದುದು ಕೊಲ್ಲೆಂದುದ
ಜಯ್ಯಮೆನಲ್ಕಾದ ಕಾದ ಬಲನಾ ಕ್ರೋಧಂ ॥೪೧॥

ಗದ್ಯ\ ಅಂತಾಗಿರ್ವರುಂ ತಾಗಿ ಕೂರ್ಗಣೆಗಳನಿಸೆ– ...

..ಕಂದ॥ ಶರಶರಸಂಘಟ್ಟಣೆಯಿಂ
ದುರಿಯೆಟ್ಟುದು ನಾಡೆ ಪರ್ವಿತೆತ್ತಲ್ ಸುತ್ತಲ್
ಹರಿಯಣ್ಣನುಮಾ ಭೀಷ್ಮನು
ಮುರಿಗೆಱೆಯೊಳ್ ಮೀವರಮತೆ ಪೋಣರುತ್ತಿರ್ದರ್ ॥೪೨॥

೪೦. ವ್ಯರ್ಥವಾದ ಮಾತೇಕೆ? ಶರೀರದಲ್ಲಿ ಸತ್ವವಿದ್ದರೆ, ನಿನ್ನಲ್ಲಿ ವೀರರಸ ವುಕ್ಕುತ್ತಿದ್ದರೆ, ಮನಸ್ಸು ಚಂಚಲವಲ್ಲದಿದ್ದರೆ, ಕೈಯ ಕಾರ್ಯಚಾತುರ್ಯ ಮೆರೆಯುವ ಹಾಗೆ, ಬಿಲ್ಲು ಮುರಿಯದಂತಹದಾಗಿದ್ದರೆ ಈಗ ಒಂದು ಬಾಣವನ್ನು ಪ್ರಯೋಗಿಸಿ ನೋಡು, ಹಾಗಿಲ್ಲವಾದರೆ ಮುಖ ತಿರುಗಿಸಿ ನಡೆ, ಬೇಗ ಮಾಡು ಎಂದು ಭೀಷ್ಮನು ಬಲರಾಮನಿಗೆ ಹೇಳಿದನು.

೪೧. ಆಗ ಅಜೇಯವೆನಿಸುವಂತೆ ಬಿಸಿಯೇರಿದ ಬಲರಾಮನ ಕೋಪವು ಸುಯ್, ಬಯ್, ಕುಯ್, ಬಾಣದ ಸಮುದ್ರದಲ್ಲಿ ಮುಳುಗಿಸಿ ಪೊಯ್ (ಹೊಡೆ), ಕೊಲ್ಲು – ಎಂದಿತು! (ಗದ್ಯ) ಹಾಗೆ ಇಬ್ಬರು ಪರಸ್ಪರ ತಾಗಿ ಹರಿತವಾದ ಬಾಣಗಳನ್ನು ಪ್ರಯೋಗಿಸಿದರು.

೪೨. ಅವರಿಬ್ಬರು ಪರಸ್ಪರವಾಗಿ ಪ್ರಯೋಗಿಸಿದ ಬಾಣಗಳ ಹೊಡೆತದಿಂದ ಬೆಂಕಿ ಎದ್ದಿತು. ಆ ಬೆಂಕಿ ವಿಶೇಷವಾಗಿ ಎತ್ತೆತ್ತಲೂ ಹಬ್ಬಿತು. ಆಗ ಬಲರಾಮನು ಭೀಷ್ಮನೂ ಬೆಂಕಿಯ ಕೆರೆಯಲ್ಲಿ ಮೀಯುವವರಂತೆ ಹೋರಾಡುತ್ತಿದ್ದರು.

(ಗದ್ಯ) ಆಗ ಸಂಪೂರ್ಣ ವೇಗದಿಂದ ವಿಕರ್ಣನು ಬಂದಾಗ ಯಾದವವೀರನಾದ ಕವಿ ಎಂಬಾತನು ಬಂದು ಎದುರಾದನು. ವಿಕರ್ಣನು ಅವನನ್ನು ಬಾಣಗಳಿಂದ ಕವಿಯುತ್ತಾ ಹೀಗೆಂದನು–

ಗದ್ಯ॥ ಆಗಳೆ ಪೂರ್ಣಭರದಿಂದೆ ವಿಕರ್ಣಂ ಬರೆ – ಯಾದವವೀರನಪ್ಪ ಕವಿಯೆಯ್ತಂದು ನಿಂದು ಬಾಣದಿಂದಾತನಂ ಕವಿಯಲೊಡರಿಸುತ್ತಿಂತೆಂದಂ –

ಮ.ವಿ.॥ ಮನದಿಂ ಮಚ್ಚರಮಂ ಬಿಸುಟ್ಟು ಸಮತಾಂತರ್ಭಾವದೊಳ್ ಪತ್ತನಿ
ಟ್ಟು ನವೀನಂ ಗುರುಮಾರ್ಗಸಮ್ಮಿತದೆ ಸಚ್ಛಾಸ್ತ್ರಾನುಗಂ ಪೂಜ್ಯಮೆಂ
ದೆನಿಪಾ ಸತ್ಕೃತಿಯಂ ನೆಗಟ್ಟಿದೆ 'ಇತೋಭ್ರಷ್ಟಸ್ತತೋಭ್ರಷ್ಟ' ಎಂ
ದೆನಿಸಲ್ ಯುದ್ಧಕೆ ಬಂದು ಸೋಲ್ವಡೆದಪಯ್ ನೀನೇಂ ಕವಿ ಪ್ರಾಜ್ಞನೋ ॥೪೩॥

ಕಂದ॥ ಎನಗಿದು ಮೆಚ್ಚಿನ ನಚ್ಚಿನ
ದೆನುತುಂ ಸ್ವಚ್ಛಂದಮಾಗಿ ಕಾದಲ್ ಬರದಿರ್
ಮುನಿದೆನ್ನ ಮುಂದೆ ನಿಲದಿರ್
ನಿನಗೆನ್ನಾ ಪಿರಿಯ ವೀರರಾಣತಿಯಿರ್ಕುಂ ॥೪೪॥

ಗದ್ಯ ॥ ಎಂದು ವಿಕರ್ಣನೆಂಬುದುಂ–

ಕಂದ॥ ವಾಚಾಳರ ಸಭೆಯೊಳಮಿದ
ರೋಚಕಮಿಂತೆನ್ನೊಳಾಡದಿರ್ ಮೊನೆಯಿದು ದಲ್ ॥
ಪ್ರಾಚುರ್ಯದ ಬಲದಿಂದಾ
ಲೋಚಿಸಿ ತುಡು ಕಣೆಯನೆಂದು ಕಣೆಯವನೆಚ್ಚಂ ॥೪೫॥

೪೩. ಎಲೈ ಕವಿಯೇ, ನೀನೆಂತಹ ಕವಿ? ಮನದಲ್ಲಿರುವ ಮತ್ಸರವನ್ನು ಕಳೆದು ಸಮಾನತೆಯ ಮನೋಭಾವವನ್ನಿಟ್ಟುಕೊಂಡು, ನವೀನವೂ ಗುರುಮಾರ್ಗಸಮ್ಮಿತವೂ ಒಳ್ಳೆಯ (ವ್ಯಾಕರಣ, ಛಂದೋಲಂಕಾರ ರಸಾದಿ)ಶಾಸ್ತ್ರಗಳನ್ನು ಅನುಸರಿಸಿರುವುದೂ ಆದುದರಿಂದಲೇ ಪೂಜ್ಯವು ಎನಿಸತಕ್ಕ ಸತ್ಕಾವ್ಯವನ್ನು ರಚಿಸದೆ. ಇಲ್ಲಿಯೂ ದಾರಿತಪ್ಪಿದ, ಅಲ್ಲಿಯೂ ದಾರಿತಪ್ಪಿದ, ರೀತಿಯನ್ನು ಪ್ರಕಟಿಸುವಂತೆ ಈಗ ಯುದ್ಧಕ್ಕೆ ಬಂದು ಪರಾಭವಗೊಳ್ಳಲಿದ್ದೀಯಲ್ಲವೇ? ನೀನು ಅದೆಂತಹ ಪ್ರಾಜ್ಞ ಕವಿಯೋ!

೪೪. ನನಗೆ ಇದು ಮೆಚ್ಚಿನದು ಪ್ರೀತಿಯದು ಎಂದುಕೊಂಡು ಸ್ವೇಚ್ಛಾಪ್ರವೃತ್ತಿಯಿಂದ ಕುಕವಿಯ ಹಾಗೆ ಯುದ್ಧಮಾಡಲು ಬರಬೇಡ. ನನ್ನ ಎದುರಿನಲ್ಲಿ ಕೋಪದಿಂದ ನಿಲ್ಲದಿರು! ನಿನಗೆ ನನ್ನ ಹಿರಿಯ ವೀರರ ಆಜ್ಞೆಯಿದೆ!

೪೫. ಹೀಗೆ ವಿಕರ್ಣ ನುಡಿದಾಗ ಕವಿಯು – ಇದು ವಾಗ್ವಾದಮಾಡತಕ್ಕವರ ಸಭೆಯಲ್ಲಿಯೂ ಅರುಚಿಕರವೇ ಸರಿ. ಹೀಗೆ ನನ್ನೊಡನೆ ಆಡದಿರು. ಇದು ಯುದ್ಧ ಎಂಬುದು ನಿಶ್ಚಯ. ಚೆನ್ನಾಗಿರುವ ಸಾಮರ್ಥ್ಯದಿಂದ ಆಲೋಚನೆಯನ್ನು ಮಾಡಿ ಬಾಣವನ್ನು ಪ್ರಯೋಗಿಸು ಎಂದು ಹೇಳಿ ಬಾಣವನ್ನು ಬಿಟ್ಟನು.

ಎಚ್ಚೊಡೆ ಖಂಡಿಸೆ ಕೋಪಂ
ಪೆರ್ಚೆ ಮಹಾಶಕ್ತಿಬಾಣದಿಂದಂ ಕವಿ ತಾ
ನೆಚ್ಚೊಡೆ ವಿಕರ್ಣಕರ್ಣಂ
ಚುರ್ಚಲ್ ತಾನಾರ್ದು ಕೆಡೆದನವನಾ ಕ್ಷಣದೊಳ್ ॥೪೬॥

ಗದ್ಯ॥ ಅಂತು ಕುರುಬಲಮೊಯ್ಯನೊಯ್ಯನೆ ಕುಱುಬಲಮಾಗುತ್ತಿರೆಯಿರೆ –

ಸ್ರವ್ಯ॥ ಸುತ್ತಲ್ಕಾಕಾಶಮಾರ್ಗಂ ಕಿಜಿದೆಱಗಿ ನಿಲಲ್ ಭೂತಳ ಸಾಲದತ್ತಿ
ತ್ತೆತ್ತಲ್ ಮಾರೊಡ್ಡು ಗೊಡ್ಡೆಂಬಿನಮೊಡನೊಡನೊಂದರ್ಕೆ ಮತ್ತೊಂದು ಮೇಳಂ
ಪತ್ತಲ್ ತಾಂ ಗುರ್ರು ಗುರ್ರುಂ ಗುರುಗುರುಗುರುವೆಂಬಾ ಗುರುಧ್ವಾನದಿಂದಂ
ವಿತ್ತಧೀಶಾಜ್ಞೆಯಿಂ ಬಂದುದಪರಿಮಿಕ ಮೇಘಾಧ್ವಯಾನ ಪ್ರಕಾನಂ ॥೪೭॥

ಮ.ವಿ.॥ ಗಿರಿಗಳ್ ಚಕ್ಕನೆ ಜರ್ಗಿವೋಪವೊ ಮಹಾಂಭೋರಾಶಿಯಾರ್ದತ್ತೊ ದಿ
ಕ್ಕರಿಗಳ್ ಗೀಟಿಡುತಿರ್ಪವೋ ವಿಕಟದೈತ್ಯಾನೀಕಮೆಟ್ಟಿಟ್ಟುತುಂ
ಬರುತಿರ್ದಪ್ಪವೊ ನೀರದಾವಳಿಗಳುದ್ಯಧ್ವಾನಮಂ ಗೆಯ್ದವೋ
ಸ್ವರಮಿಂತೇಕೆಯೆನಲ್ಕಗುರ್ವನೊಳಗೊಂಡತ್ತಾ ವಿಮಾನಸ್ವನಂ ॥೪೮॥

ವಿ.ಮಾ. ಕಟ್ಟಿದ ಕಂಬಮಂ ಸೆಳೆದುವಾನೆಗಳೋಡಿದವಾರ್ದು ತೇಜಿಗಳ್
ತೊಟ್ಟನೆ ಪಾಯ್ದುವಾ ಸಮರವೀರರ ಕರ್ಣದ ಕೋಟರಂಗಳಂ
ಕುಟ್ಟೆ ನಿನಾದಶೂಲಮೊಡನಸ್ತ್ರಚಯಂ ಸಲೆ ಜಾರಿ ಭೂಮಿಯಂ
ತಟ್ಟಿದುದಾಕ್ಷಣಂ ನೆಲದೊಳಾರಿದನೀಕ್ಷಿಸಿದರ್ಕಳೀ ಮೊದಲ್ ? ॥೪೯॥

೪೬. ಹಾಗೆ ಕವಿ ಬಿಟ್ಟ ಬಾಣವನ್ನು ವಿಕರ್ಣನು ಖಂಡಿಸಿದಾಗ, ಕವಿಗೆ ಕೋಪ ಹೆಚ್ಚಾಯಿತು. ಅವನು ಮಹಾಶಕ್ತಿಯ ಒಂದು ಬಾಣವನ್ನು ಪ್ರಯೋಗಿಸಲು ಅದು ವಿಕರ್ಣನ ಕಿವಿಗೆ ಚುಚ್ಚಿತು. ಕೂಡಲೇ ವಿಕರ್ಣನು ಬೊಬ್ಬಿಟ್ಟು ನೆಲಕ್ಕೆ ಒರಗಿದನು. (ಗದ್ಯ) ಅಂತು ಕುರುಸೈನ್ಯವು ಕೆಡೆದು ಕಿರುಬಲವಾಗುತ್ತಾ ಇದ್ದಿತು.

೪೭. ಆಗ ಕುಬೇರನ ಆಣತಿಯಂತೆ ವಿಮಾನ ಸೈನ್ಯಗಳು ಬರತೊಡಗಿದವು. ಆ ವಿಮಾನಗಳಿಗೆ ಆಕಾಶಮಾರ್ಗವೇ ಚಿಕ್ಕದೆನಿಸಿತು. ಬಂದಿಳಿಯಲು ನೆಲವು ಸಾಲದೆಂಬಂತಾಯಿತು. ಆತ್ತಿತ್ತ ಕಾದಾಟದಲ್ಲಿ ವಿರೋಧಿ ಸೈನ್ಯವು ನಿಷ್ಪ್ರಯೋಜನವೆನಿಸಿತು. ಒಂದು ಇನ್ನೊಂದಕ್ಕೆ ಮೇಳವಾಗಿ ಗುರುಗುರುಗುರು ಎಂದು ದೊಡ್ಡದಾದ ಸ್ವರದಿಂದ ಕೂಡಿ, ಅಪರಿಮಿತವಾದ ವಿಮಾನಸಮೂಹವು ಅಲ್ಲಿಗೆ ಬಂದಿತು.

೪೮. ಆ ವಿಮಾನಗಳು ಎಷ್ಟೊಂದು ಭಯಂಕರವಾಗಿದ್ದಿತೆಂದರೆ. ಇದೇನು ಪರ್ವತಗಳೇ ಜಗ್ಗಿ ಹೋಗುತ್ತವೆಯೋ! ಮಹಾಸಾಗರವು ಭೋರ್ಗರೆಯಿತೋ! ದಿಗ್ಗಜಗಳು ಗೀಳಿಡುತ್ತಿವೆಯೋ! ಭಯಂಕರ ರಾಕ್ಷಸರ ಸಮೂಹವು ಓಡಿಸಿಕೊಂಡು ಬರುತ್ತಿದೆಯೋ! ಮೋಡಗಳು ಗುಡುಗುವ ಧ್ವನಿಯೋ! ಹೀಗೇಕೆ ಮಹಾ ಶಬ್ದ–ಎಂಬಂತೆ ಆ ವಿಮಾನಗಳ ಧ್ವನಿಯಿದ್ದಿತು.

೪೯. ಆನೆಗಳು ತಮ್ಮನ್ನು ಬಿಗಿದ ಕಂಬಗಳನ್ನು ಕಿತ್ತವು. ಕುದುರೆಗಳು ಕೆನೆದುಕೊಂಡು ತಟ್ಟನೆ ಓಡಿದವು. ಆ ವಿಮಾನಶಬ್ದವೆಂಬ ಶೂಲವು ಯುದ್ಧವೀರರ ಕಿವಿಗಳೊಳಗೆ ಕುಟ್ಟಲು, ಅವರ ಕೈಯಲ್ಲಿದ್ದ ಮಂತ್ರಾಸ್ತ್ರಸಮೂಹವು ನೆಲೆತಪ್ಪಿ ನೆಲಕ್ಕೆ ಬಿದ್ದಿತು! ಇದಕ್ಕೆ ಮೊದಲು ಹೀಗೆ ವಿಮಾನಗಳು ಸದ್ದು ಮಾಡಿಕೊಂಡು ಬರುವುದನ್ನು ನೋಡಿದವರು ಯಾರಿದ್ದಾರೆ!

ಮ.ಸ್ರ. ಅಸುವಿಲ್ಲಂ ಪಕ್ಷಿಯಲ್ಲಂ ಗಱಿವೊಡೆವುದುಮಿಲ್ಲಂ ಮಹಾಭಾರಮಪ್ಪಾ
ಯಸದಿಂ ಮಾಡಿರ್ದುದೆಂತೀ ಗಗನದೆ ಚರಿಕುಂ ತಾನೆನಿಪ್ಪೊಂದು ಪೆರ್ಚ
ಕ್ಕಸಮು ತೀವಲ್ಕೆ ಜಂತ್ರಂ ಪಿರಿದೆಲರೆಸಗಲ್ ತೇಲಲಾ ವೇಗದಿಂದಂ
ಮಸಗುತ್ತೆತ್ತಂ ಬರುತ್ತಿರ್ದುದನಱಿದದನೇನೆಂದು ಪೇೞಲ್ಕೆ ಬರ್ಕುಂ ॥೫೦॥

ಶಾ.ವಿ. ಇದು ಧರ್ಮಕ್ಕೆ ವಿರುದ್ಧಮುಂ ಭುಜಬಲೈಶ್ವರ್ಯಕ್ಕೆ ದಲ್ ಬಾಹಿರಂ
ಕದನಕ್ಕಾಗದು ನೀತಿಗಂ ವಿಮುಖಮೆಂದಾ ಧರ್ಮಪುತ್ರಂಗೆ ನೋ
ವೊದಗಲ್ ಯಾದವರಲ್ಲಿ ಮುಂದೆಱಿಯದಿರ್ದಾಗಳ್ ಭಯಭ್ರಾಂತಿ ಬಂ
ದಿದಿರಾದತ್ತವರ್ಗೆಲ್ಲಮಳ್ಕಱಿರೆ ತಾನಿಂತಾದೊಡಾರಾದೊಡಂ ॥೫೧॥

ಕಂದ॥ ಬಾಣಾಹತಿಯಿಂದಿದು ಕಡೆ
ಗಾಣದು ಕೂರಸಿಯ ಹತಿಗೆ ಗದೆವೊಡೆತಕ್ಕಂ
ಕಾಣಗೊಡದು ಗುಂಡೇಟಂ
ಮಾಣಿಪುದೆಂತಪ್ಪುದೆಂದು ಭಾವಿಸುವಾಗಳ್ ॥೫೨॥

೫೦. ಈ ವಿಮಾನಕ್ಕೆ ಪ್ರಾಣವಿಲ್ಲ, ಇದು ಪಕ್ಷಿಯಲ್ಲ, ಗರಿಗಳನ್ನು ಬೀಸುವುದೂ ಕಾಣಿಸುವುದಿಲ್ಲ. ಬಹಳ ಭಾರವಾದ ಕಬ್ಬಿಣದಿಂದಲೇ ರಚಿತವಾದುದು ಹೇಗೆ ತಾನೇ ಆಕಾಶದಲ್ಲಿ ಸಂಚರಿಸುತ್ತದೆ! ಎಂಬಂತಹ ಒಂದು ಅತ್ಯಾಶ್ಚರ್ಯವುಂಟಾಗಲು, ವಿಮಾನದ ಯಂತ್ರವೇ ತೀವ್ರವಾಗಿ ಗಾಳಿಯನ್ನುಂಟು ಮಾಡಲು, ಆ ಗಾಳಿಯಲ್ಲಿ ತೇಲಿಕೊಂಡು ಅಷ್ಟೊಂದು ವೇಗದಿಂದ ವಿಮಾನಗಳು ಬರುತ್ತಿದ್ದುದನ್ನು ತಿಳಿದು ಅದನ್ನೇನೆಂದು ಹೇಳಲು ತಾನೇ ಸಾಧ್ಯ?

೫೧. ವಿಮಾನಯುದ್ಧವೆಂಬುದು ಧರ್ಮಕ್ಕೆ ವಿರುದ್ಧವಾದುದು, ಪರಾಕ್ರಮದ ಸಂಪತ್ತಿಗೆ ಹೊರಗಾದುದು, ಯುದ್ಧಕ್ಕೆ ಇದು ತಕ್ಕುದಲ್ಲ, ನೀತಿಬಾಹಿರವೆಂದು ಧರ್ಮರಾಯನ ಮನಸ್ಸಿಗೆ ನೋವಾಯಿತು. ಯಾದವರು ಅಲ್ಲಿ ಮುಂದೇನು ಮಾಡುವುದೆಂದು ತಿಳಿಯದಿದ್ದು ಭಯ ಭ್ರಾಂತಿಗಳು ಅವರೆಲ್ಲರಿಗೂ ಉಂಟಾದವು. ಹೀಗಾದರೆ ಯಾರೇ ಆದರೂ ಭಯಪಡದೆ ಇರುವರೆ?

೫೨. ಬಾಣದ ಹೊಡೆತದಿಂದ ವಿಮಾನ ನಾಶಗೊಳ್ಳದು. ಹರಿತವಾದ ಖಡ್ಗದ ಏಟಿಗೆ ಗದೆಯ ಹೊಡೆತಕ್ಕೆ ಎಡೆಯಾಗದು. ಗುಂಡಿನ ಏಟಿನಿಂದ ಪರಿಹರಿಸುವುದು ಹೇಗೆ ಸಾಧ್ಯವೆಂದು ಭಾವಿಸುತ್ತಿದ್ದರು.

ಮ.ಸ್ರ. ಉರಿಗುಂಡಂ ಕಲ್ಲುಗುಂಡಂ ಬಿಱುಗಣೆಗಳ ಗುಂಡಂ ಕಱಿಂ ಪಾಯ್ಸುತೆತ್ತಂ
ಛುರಿಕಾಜಾಲಂಗಳ ನೆಟ್ಟನೆ ನಭದೆಡೆಯಿಂ ಬೀಟಿಸುತ್ತಿರ್ಪಿನಂ ಪಾ
ಯ್ವುರು ಶೂಲಾನೀಕದಿಂ ಯಾದವಶಿರವರೆಯಾಗುತ್ತಿರಲ್ ಪೋಯ್ತು ಪೋಯ್ತೆಂ
ದೊರೆವಾಶಾನಾಶವಾದಂ ಪಱಿದು ರವಿಸಿತಾ ಯಾದವಾಂಭೋನಿನಾದಂ ॥೫೩॥

ಕಂದ॥ ನಿಸೆವಗೆಯನ ತೋರಿತು ಕದಿ
ರೆಸಕಮಿದೆನೆ ಬೀಱುತಿರ್ದ ಕುಂತಾನೀಕಂ
ಪುಸಿಯಾಗದೆ ನೆತ್ತಿಯ ಗುಱಿ
ಪೊಸ ತೆಱದಿಂ ವೈರಿವಧೆಯನೆಸಗಿತ್ತಕಟಾ ॥೫೪॥

ಮುನ್ನಿಲ್ಲದೊಂದು ಜುದ್ಧದ
ಸನ್ನಣದಿಂ ಪಡೆಗಳೆಯ್ದೆ ಪಡಲಡುವಂತಿ
ರ್ಪನ್ನೆಗಮಾರಿದನುರುಳಿಪ
ಬಿನ್ನಣಿಗರ್ ಎಂಬ ನುಡಿಯೆ ನುಡಿ ಯದುಬಲದೊಳ್ ॥೫೫॥

೫೩. ಆ ವಿಮಾನಗಳು ಆಕಾಶದಿಂದ ಯಾದವಸೈನ್ಯದ ಮೇಲೆ ಬೆಂಕಿಯ ಗುಂಡುಗಳನ್ನೂ ಕಲ್ಲಿನ ಗುಂಡುಗಳನ್ನೂ ಬಿರುಸಾದ ಬಾಣಗಳ ಸಮೂಹವನ್ನು ಬೀಳಿಸುತ್ತಾ ಬರ್ಚಿಗಳ ಸಮೂಹವನ್ನು ಆಕಾಶದ ಕಡೆಯಿಂದ ಬೀಳುಸುತ್ತಿದ್ದವು. ಹಾರಿ ಬೀಳುವ ಶೂಲಗಳ ಸಮೂಹಕ್ಕೆ ಗುರಿಯಾಗಿ ಯಾದವವೀರರ ತಲೆಗಳು ಇಬ್ಭಾಗವಾಗುತ್ತಿದ್ದವು. ಹೋಯ್ತು, ಹೋಯ್ತು, ಎಂಬ ನಿರಾಶಾವಾದವೇ ಯಾದವ ಸೈನ್ಯ ಸಮುದ್ರದ ನಿನಾದವಾಯಿತು!

೫೪. ಮೇಲಿನಿಂದ ಬೀಳುತ್ತಿದ್ದ ಬರ್ಚಿಗಳ ಸಮೂಹವು ಸೂರ್ಯನ ಕಿರಣಗಳ ರಚನೆಯಂತೆ ಒಂದೂ ಭಟರ ನೆತ್ತಿಯ ಗುರಿ ಹುಸಿಯಾಗದೆ ಬೀಳುತ್ತಿದ್ದು, ಹೊಸದಾದ ವಿಧಾನದಿಂದ ಶತ್ರು ಸಂಹಾರವೆಸಗುತ್ತಿದ್ದಿತು. ಅಯ್ಯೋ ಎಂಬಂತಾಯಿತು.

ಗದ್ಯ॥ ಆಗಳಿದಯಃಫಳಕದಿಂ ಸಮೆದುದಜೆಂದಯಸ್ಕತಾಂತೋಪಲಂ ಗಳಿನೆಚ್ಚುರುಳಿಸಲಕ್ಕುಮೆಂದು ಬಿನ್ನಣಿಗರ್ ಪರಿಕಲ್ಪಿಸುತ್ತಮಿರೆ ಸೇನಾನಾಯಕನುಂ ಧೈರ್ಯದಾಯಕನುಮಪ್ಪ ಸಾತ್ಯಕಿ ಮುಂದೆ ಬಂದಿಂತೆಂದಂ –

ಶಾ.ವಿ. ಮಾತೇಂ ಭೀತಿಯದೇಕೆ ಚಂಚಲತೆಯೇಕಾಶಂಕೆಯಿಲ್ಲೇಕೆ ಧೈ
ರ್ಯಾತೀತರ್ಗಿದು ಶೌರ್ಯದೊಂದು ನಿಕಷಂ ಬನ್ನಿಂ ಮಹಾಗ್ನ್ಯಾಸ್ತ್ರಸು
ವಾತೋಗ್ರಾಹತಿಯಿಂ ವಿಮಾನತತಿಯುಂ ಮಣ್ಗೂಡುಗುಂ ಖೇಚರ
ವ್ರಾತಂ ಮಿತ್ತುವನಪ್ಪುಗುಂ ಪೊಣರಿಮೆಂದಾರಲ್ಕದೇನೆಂದಪೆಂ ॥೫೬॥

ಗದ್ಯ॥ ಅಂತು ಧೈರ್ಯಶೌರ್ಯಂಗಳಿಂ ದಿವ್ಯಮಂತ್ರಬಾಣಪ್ರಯೋಗಂಗಳಿಂ ಪೋರಾರ್ವುದುಂ ವಿಮಾನಂಗಳೆಲ್ಲಂ ಸುರಪನ ವಜ್ರಹತಿಯಿಂದದೆಱಂಕ್ಕೆಗಡಿದುರುಳ್ದ ಬೆಟ್ಟುಗಳಂತಿರೆ ತಿರೆಗುರುಳ್ವ ಕಷ್ಟಮಂ ನಷ್ಟಮಂ ಸಹಿಸಲಾಱದಾ ಖೇಚರರ್ ಭೂಚರರುಂ ವಂದನಾಚಾರರುಂ ನಿಬದ್ಧಸಂಚಾರರುಮಾಗಿ ನಿಂದಾಗಳ್

೫೫. ಹಿಂದೆಂದೂ ಇಲ್ಲದಿದ್ದ ಒಂದು ಬಗೆಯ ಯುದ್ಧದ ಸಜ್ಜಿನಿಂದ ಸೈನ್ಯವೆಲ್ಲ ನಾಶವಾಗುತ್ತಿರಲು, ಇದನ್ನು (ಈ ವಿಮಾನಸೈನ್ಯವನ್ನು) ಕೆಳಗೆ ಉರುಳಿಸತಕ್ಕ ವಿಜ್ಞಾನಿಗಳು ಯಾರಿದ್ದಾರೆ? ಎಂಬುದೇ ಯಾದವಸೇನೆಯೊಳಗಣ ಮಾತಾಯಿತು. (ಗದ್ಯ) ಆಗ ಅಲ್ಲಿದ್ದ ವಿಜ್ಞಾನಿಗಳು ಈ ವಿಮಾನಗಳು ಕಬ್ಬಿಣದ ತಗಡುಗಳಿಂದ ಮಾಡಲ್ಪಟ್ಟುವಾದುದರಿಂದ ಅಯಸ್ಕಾಂತದ ಗುಂಡುಗಳಿಂದ ಹೊಡೆದು ಉರುಳಿಸಬಹುದೆಂದು ಪರಿತಪಿಸುತ್ತಿದ್ದರು. ಆಗ ಸೇನಾನಾಯಕನೂ ಧೈರ್ಯದಾಯಕನೂ ಆದ ಸಾತ್ಯಕಿ ಮುಂದೆ ಬಂದನು. ಅವನು ಹೀಗೆಂದನು–

೫೬. ಇನ್ನು ಮಾತೇಕೆ? ಭಯವೇಕೆ? ಚಂಚಲತೆಯೇಕೆ? ಸಂದೇಹವೇಕೆ? ಧೈರ್ಯದಲ್ಲಿ ಮೀರಿರುವವರಿಗೆ ಇದು ಶೌರ್ಯದ ಒರೆಗಲ್ಲು. ಬನ್ನಿ ಮಹಾಆಗ್ನೇಯಾಸ್ತ್ರ ಸಮೂಹದ ಕಠಿನವಾದ ಹೊಡೆತದಿಂದ ವಿಮಾನಸಮೂಹವು ಕೆಡೆದು ಮಣ್ಣು ಪಾಲಾಗುವುದು. ಖೇಚರರೆಲ್ಲರೂ ಸಾಯುವರು. ಯುದ್ಧಮಾಡಿರಿ ಎಂದು ಬೊಬ್ಬಿಟ್ಟನು. ಆಗ ಆದುದನ್ನು ಏನೆನ್ನಲಿ! (ಗದ್ಯ) ಅದರಂತೆ ಧೈರ್ಯಶೌರ್ಯಗಳಿಂದ ದಿವ್ಯವಾದ ಮಂತ್ರಾಸ್ತ್ರಗಳ ಪ್ರಯೋಗಗಳಿಂದ ಹೋರಾಟ ನಡೆಯಿತು. ಆಗ ವಿಮಾನಗಳೆಲ್ಲವೂ ಇಂದ್ರನ ವಜ್ರಾಯುಧದ ಹೊಡೆತದಿಂದ ರೆಕ್ಕೆ ಮುರಿದು ಉರುಳಿದ ಪರ್ವತಗಳಂತೆ ಭೂಮಿಗೆ ಉರುಳಿದವು. ಈ ಕಷ್ಟವನ್ನೂ – ನಷ್ಟವನ್ನೂ ಸಹಿಸಲಾಗದೆ ಆ ಖೇಚರರು ಭೂಚರರಾದರು, ವಂದನೆಯ ಆಚಾರ ಕೈಗೊಂಡರು. ತಮ್ಮ ಸಂಚಾರವನ್ನೇ ನಿಲ್ಲಿಸಿದರು.

ಶಾ.ವಿ. ಬಾಂದೇರ್ ಭೂತಲಲಗ್ನಮಪ್ಪಿನಮಶೇಷಂ ಯುದ್ಧ ಸೈನ್ಯಾಳಿಯುಂ
ಬಂದಾ ಬೀಡೊಳೆ ಮಗ್ನರಾಗಿಯಿರೆ ಕೃಷ್ಣಂ ಖೇಚರಚ್ಛೇದಸಂ
ಬಂಧಂ ಮಗ್ನನಿರಲ್ ನರಂ ನುಡಿದುದಂ ಮಾಡಲ್ಕೆ ಸಂಮಗ್ನನ
ಸ್ಪಂದಂ ತಾನಿರೆ ಸಿಂಧುಮಗ್ನನಿನನಾದಂ ಚಾರುಸಂಧ್ಯಾರುಣಂ ॥೫೭॥

ಎಂಬಲ್ಲಿಗೆ ಸತ್ವಾಲೋಕನ ಕಾವ್ಯದೊಳ್
ಸಮರ ವರ್ಣನಂ
ಷಷ್ಠಾಶ್ವಾಸಂ

೫೭. ಹೀಗೆ ವಿಮಾನಗಳು ನೆಲಕ್ಕೆ ಬೀಳಲು ಎಲ್ಲಾ ಯುದ್ಧಸೈನ್ಯ ಸಮೂಹವೂ ಬೀಡುಗಳನ್ನು ಸೇರಿದವು. ಶ್ರೀಕೃಷ್ಣನು ಖೇಚರನಾದ ಗಯನನ್ನು ಛೇದಿಸುವ ವಿಚಾರದಲ್ಲೇ ಮಗ್ನನಾಗಿದ್ದನು. ಅರ್ಜುನನು ತನ್ನ ಪ್ರತಿಜ್ಞಾಪಾಲನೆಯಲ್ಲೇ ಕದಲದೆ ಸಂಮಗ್ನನಾಗಿದ್ದನು. ಆಗ ಮನೋಹರವಾದ ಸಂಧ್ಯಾಕಾಲದ ಕೆಂಬಣ್ಣದಿಂದ ಕೂಡಿದ ಸೂರ್ಯನು ಸಮುದ್ರದಲ್ಲಿ ಮಗ್ನ(ಮುಳುಗಿದವ)ನಾದನು.

**ಇಲ್ಲಿಗೆ ಷಷ್ಠಾಶ್ವಾಸ ಮುಗಿಯಿತು.**

*****

## ಸಪ್ತಮಾಶ್ವಾಸಂ

(ಶ್ರೀಕೃಷ್ಣ ಪ್ರತಿಜ್ಞಾಪಾಲನಂ )

ಕಂದ॥ ಶ್ರೀಜಯವನಿತಾವಲ್ಲಭ
ನಾ ಜಿಷ್ಣುವೊ ವಿಷ್ಣುವೋ ಉಭಯವೋ ಮೊದಲಾ
ರಾಜಿಯೊಳಿದನಜಿಯಲ್ಕೆ
ಲ್ಲಾ ಜನರಾಶಾಮನಸ್ಕರಾಗಿರ್ದಾಗಳ್ ॥೧॥

ಗದ್ಯ॥ ಅಂತಿರುಳ ವಿಶ್ರಮದಿಂ ಪಗಲ ಮೊನೆಯ ಪರಿಶ್ರಮಮುಂ – ಉಚಿತೌ
ಷಧೋಪಚಾರದಿಂ ನೊಂದ ನೋವುಂ– ದಳಪತಿಗಳುತ್ಸಾಹದಿಂ ಪಿಂದಿನ ದಿನದ
ಪರಾಭವದ ಮನಸ್ಸಂಕೋಚಮುಂ ಮಸುಳುತ್ತಿರೆಯಿರೆ–

ಕಂದ॥ ಒರ್ವನುದಾತ್ತಗುಣಂ ಮ
ತ್ತೊರ್ವಂ ಸತ್ವಾತಿಶಯನೆ ಬಾಂಧವರಿರ್ವರ್
ಉರ್ವಿಯೊಳೀ ರಣಮಂ ನಾ
ನೊರ್ವಂ ಬಿಡನೆಂದು ರಾಗದಿಂ ರವಿಯೆಸೆದಂ ॥೨॥

ಗದ್ಯ॥ ಆ ಸೂರ್ಯೋದಯದ ಕಾಲಮೆ ಸಮರವೀರರ ಶೌರ್ಯೋದಯದ ಕಾಲಮಾಗೆ
ಪಾಂಡವಕೌರವರೊಂದಾಗಿ ಯಾದವರೊಳ್ ಕಾದುತ್ತಿರಲಿತ್ತಲ್ ಸುದರ್ಶನ ಪಾಣಿ
ಶ್ರೀಕೃಷ್ಣಂ ವೈರ್ಯಂಗಮಂ ಭೇದಿಪ ಶಾರ್ಂಗಚಾಪವನೆತ್ತಿ ಖೇಚರನನರಸಲ್ ಬಗೆದು–

೧. ಈ ಯುದ್ಧದಲ್ಲಿ ಮೊತ್ತಮೊದಲು ಕಾಂತಿಯುಕ್ತಳಾದ ಜಯಾಂಗನೆಯ ಗಂಡನಾಗಿರುವವನು ಕೃಷ್ಣನೋ, ಅರ್ಜುನನೋ, ಉಭಯರೋ – ಎಂಬುದನ್ನು ತಿಳಿಯುವುದಕ್ಕಾಗಿ ಎಲ್ಲ ಜನರೂ ಉತ್ಸುಕರಾಗಿದ್ದರು. (ಗದ್ಯ) ಅಂತು ಸೈನಿಕರಿಗೆ ರಾತ್ರಿಯ ವಿಶ್ರಾಂತಿಯಿಂದ ಹಗಲಿನ ಯುದ್ಧದ ಆಯಾಸನಿವಾರಣೆಯಾಗುತ್ತಿರಲು, ಉಚಿತ ಔಷಧೋಪಚಾರದಿಂದ ಅವರ ನೋವು ನಿವಾರಣೆಯಾಗುತ್ತಿರಲು, ಸೇನಾಪತಿಗಳ ಉತ್ಸಾಹದಿಂದ ಹಿಂದಿನ ದಿನದ ಅಪಜಯದ ಮನಸ್ಸಿನ ಕುಗ್ಗು ಇಲ್ಲವಾಗುತ್ತಿದ್ದಿತು.

೨. ಕೃಷ್ಣ – ಅರ್ಜುನ ಎಂಬಿಬ್ಬರಲ್ಲಿ ಒಬ್ಬನು ಧೀರೋದಾತ್ತನಾದರೆ ಮತ್ತೊಬ್ಬನು ಸತ್ವಾತಿಶಯನೇ (ಧೀರೋದಾತ್ತನೇ) ಆಗಿರುವನು. ಇಬ್ಬರೂ ಪರಸ್ಪರ ಬಂಧುಗಳು ಭೂತಳದಲ್ಲಿ ನಡೆಯುವ ಈ ಯುದ್ಧವನ್ನು ನಾನೊಬ್ಬನು ನೋಡದೆ ಬಿಡೆನು – ಎಂಬ ರೀತಿಯಲ್ಲಿ ಸೂರ್ಯನು ರಾಗದಿಂದ (ಅನುರಾಗದಿಂದ ಕೆಂಬಣ್ಣದಿಂದ) ಶೋಭಿಸಿದನು, (ಸೂರ್ಯೋದಯವಾಯಿತು). (ಗದ್ಯ) ಆ ಸೂರ್ಯೋದಯದ ಸಮಯವೇ ಯುದ್ಧವೀರರ ಶೌರ್ಯೋದಯದ ಸಮಯವಾಯಿತು. ಪಾಂಡವರೂ ಕೌರವರೂ ಒಂದಾಗಿ ಯಾದವರೊಡನೆ ಯುದ್ಧಮಾಡುತ್ತಿರುವಾಗ ಈ ಕಡೆಯಲ್ಲಿ ಸುದರ್ಶನಚಕ್ರವನ್ನು ಹಿಡಿದುಕೊಂಡ ಶ್ರೀಕೃಷ್ಣನು ಶತ್ರುವಿನ ಶರೀರಾಂಗವನ್ನು ಭೇದಿಸಲಿಕ್ಕಾಗಿ ಶಾರ್ಂಗ ಧನುಸ್ಸನ್ನು ಎತ್ತಿಕೊಂಡು ಗಯನನ್ನು ಹುಡುಕಲು ಯೋಚಿಸಿ ಹೀಗೆಂದುಕೊಂಡನು–

೩. ಇನ್ನು ನಾನು ಸುಮ್ಮನಿರೆನು. ಆಡಿದ ಮಾತನ್ನು ನಡೆಸುವೆನು. ಆಡಿದ ಮಾತಿಗೂ ಗಯನ ಪ್ರಾಣಕ್ಕೂ ಇದೀಗ ಕೊನೆಯ ದಿನವಾಗಿದೆ. ಇನ್ನು ಅಡ್ಡಿಯೇನು! ಸೂರ್ಯನ ಎದುರಿನಲ್ಲಿ ಕತ್ತಲೆ ಉಳಿದಿರಲು ಸಾಧ್ಯವೇ?

ಕಂದ॥ ಇಂ ಕೆಮ್ಮನಿರೆಂ ನುಡಿಯಂ
ನಾಂ ಕಾವೆಂ ನುಡಿದ ನುಡಿಗೆ ಗಯನಸುವಿಂಗಂ
ತಾಂ ಕಡೆಯ ದೆವಸಮಿನ್ನೆಡ
ದೇಂ ಕತ್ತಲೆ ದಿನಪನಿದಿರೊಳೇನಿರ್ದಪುದೇ ॥೩॥

ಗದ್ಯ॥ ಎಂದು ತನ್ನೊಳೆಂದು ಕೊಂಡಾಗಳ್ ಮುಳಿಸಿನುರಿಯುರಿಯೆ –

ಮ.ಪು.॥ ಬಲದಿಂದುರ್ಕಿಂದೆ ಲೋಕಂ ಬೆದರ್ವಿನಮುರು ವೇಗಾಟದಶ್ವಾನುರೋಹಾ
ವಿಲನೇ ತ್ವತ್ಕಾರ್ಯಸಿದ್ಧಿಪ್ರದನೆನಿಸುವೆನಂತಂದು ಪೂಣ್ದಂತೆಗೆಯ್ವೆಂ
ನೆಲಸಲ್ ನೀನೆಲ್ಲಿಯುಂ ನಾಂ ಬಿಡೆಬಿಡೆನೆಲೆ ಬಾ ಬಾರಿದಲ್ತೀಗ ನಿನ್ನಂ
ನಲವಿಂ ಕಾವಾತನೇ ಬರ್ಕತಿಭರದಿನದಲ್ತಾನೆ ಬಂದಪ್ಪೆನೀಗಳ್ ॥೪॥

ಕಂದ॥ ಆರಲ್ಲಿರೆಯುಂ ಕೊಲ್ವಾ
ಸೂರುಳನಿಟ್ಟಂತಟೆಂದೆ ನೀನಡಗಿದೊಡೇಂ
ಭೋರನೆ ಸೂಜಿಯನಾನಿಂ
ದೋರಂತಿರೆ ಲೋಹಕಾಂತಮೆಟಿವಂತೆಟಿವೆಂ ॥೫॥

ಮೂಡಿದ ಪೊಟ್ತಿದು ಪಡುಮುಳು
ಗಾಡುವ ಮುನ್ನಮೆ ಕೊಲಲ್ಕೆ ತಾಂ ಪೂಣ್ದಿದಟೆಂ
ದೋಡದೆ ಕಾಡದೆ ಯಾರಂ
ಕೂಡದೆಯೆನ್ನೆಡೆಗೆ ಬರ್ಪುದೊಪ್ಪುಗುಮಲ್ತೇ ॥೬॥

(ಗದ್ಯ) ಹೀಗೆ ತನ್ನಲ್ಲೇ ಹೇಳಿಕೊಂಡಾಗ, ಕೋಪಾಗ್ನಿಯು ಉರಿಯುತ್ತಿರಲು–

೪. ಬಲದಿಂದಲೂ ಗರ್ವದಿಂದಲೂ ಲೋಕವೇ ಬೆದರುವಂತಿರಲು ಅತಿವೇಗದಿಂದ ಚರಿಸುವ ಕುದುರೆಯ ಸವಾರನೆಂಬ ಗರ್ವಿಯೇ, ನಿನ್ನ ಕಾರ್ಯಕ್ಕೆ ನಾನು ಸಿದ್ಧಿಯನ್ನು ಕೊಡುವವನೆನಿಸುವೆನು. ಆ ದಿನ ಪ್ರತಿಜ್ಞೆ ಮಾಡಿದುದನ್ನು ಈಡೇರಿಸುವೆನು. ನೀನು ಎಲ್ಲಿ ಹೋಗಿ ನೆಲಸಿದ್ದರೂ ಬಿಡೆನು. ಎಲೋ, ಇಲ್ಲಿಗೆ ಬಾ, ಬಾ! ಬರುವಿದಿಲ್ಲವಾದರೆ, ನಿನ್ನನ್ನು ಅಕ್ಕರೆಯಿಂದ ಕಾಪಾಡುವಾತನೇ ಬೇಗ ಬರಲಿ! ಅದಲ್ಲವಾದರೆ ಈಗ ನಾನೇ ಬರುತ್ತೇನೆ.

೫. ನಿನ್ನನ್ನು ಕೊಲ್ಲಲು ನಾನು ಪ್ರತಿಜ್ಞೆ ಮಾಡಿರುವುದರಿಂದ, ನೀನು ಯಾರಲ್ಲಿ ಇದ್ದರೂ ಅಡಗಿದ್ದರೂ ಅಯಸ್ಕಾಂತವು ಕಬ್ಬಿಣದ ಸೂಜಿಯನ್ನು ಸೆಳೆಯುವ ಹಾಗೆ ನಿನ್ನನ್ನು ಭೋರನೆ (ಬಲು ಬೇಗನೆ) ಎಳೆಯುವೆನು.

೬. ಈ ದಿನ ಮೂಡಿದ ಸೂರ್ಯನು ಪಶ್ಚಿಮದಲ್ಲಿ ಅಸ್ತಮಿಸುವುದರೊಳಗಾಗಿ ನಿನ್ನನ್ನು ಕೊಲ್ಲಲು ನಾನು ಪ್ರತಿಜ್ಞೆ ಮಾಡಿರುವುದರಿಂದ, ಎಲ್ಲಿಗೂ ಓಡದೆ, ತೊಂದರೆ ಪಡಿಸದೆ ಬೇರೆ ಯಾರನ್ನೂ ಸೇರದೆ ನಾನಿರುವಲ್ಲಿಗೆ ಬರುವುದೇ ನಿನಗೆ ಒಪ್ಪುವಂತಹದು (ತಕ್ಕುದಾದುದು) ಅಲ್ಲವೆ?

ಆದೊಡೆ ನಿನಗಿದು ಸಾಜಂ
ಕಾದಲ್ ತಾಂ ಬರ್ಕೆ ನಿನ್ನ ಕಾವಾತಂ ಮಾ
ತಾದರಿಸದೊಡೀಗಳ್ ಬಿಸು
ವೂದಿಗಳಪ್ಪಿರ್ ಮಮೋರು ಸತ್ತ್ವಾನಲನಿಂ ॥೭॥

ರಣಮೆನಲುತ್ಸಾಹಂ ಕುಣಿ
ಕುಣಿವಾ ತೋಳ್ಗಳನೆ ಪಡೆದ ವೀರಾಗ್ರಣಿಯಾ
ಗಣನೆಗೆ ಬಂದ ನರಂ ಪೆ
ಣ್ಣೆಣಿಕೆಗೆ ಬಂದಿಂತು ಕಾಣದುದೆ ಬೆಱಗಲ್ತೇ ॥೮॥

ಮ.ಸ್ರ ಖಗರಾಜಂ ಕೊಳ್ಳೆಗೆಯ್ವನ್ನೆಗಮುಟೆಗುಮೆ ತಾನೋಡಿದಾ ಪಕ್ಷಿಕಾಡೊಳ್
ಮೃಗರಾಜಂ ತುತ್ತಲಿರ್ಪನ್ನೆಗಮುಟೆಗುಮೆ ಪಾಯ್ದಾ ಮಿಗಂ ಸಿಲ್ಕದೇನೈ
ಖಗನೇ ಮೂಲೋಕವಾಳ್ವೀ ಹರಿಗೆ ಬೆದಱಿ ಪೊಕ್ಕಲ್ಲಿ ನೀನಿರ್ದೊಡಂ ನಿ
ನ್ನ ಗಳಚ್ಛೇದಪ್ರತಿಜ್ಞಾವನಮೆಸಗದೆಯಿಂ ಕೆಮ್ಮನಿರ್ದಪ್ಪುದುಂಟೇ ॥೯॥

ಚಂ.ಮಾ.॥

ವಿಜಯನಜೇಯನೆನ್ನ ನೆರವಿಂದದನೇನಱಿವೈ ಧನಂಜಯಂ
ಗೆ ಜಯಮೆ ನಿನ್ನನೋವುತಲಿರಲ್ ನುಡಿದಂತೆಯೆ ನಿನ್ನ ಕೊಂದಪೆಂ
ವಿಜಯನನೆಟ್ಟೊಡಾ ಕ್ಷಣದೆ ಹೋಮದ್ಧ ಕಾಯೊಡನೆಣ್ಣೆಪೊತ್ತುವಂ
ತಜಗಿಜಿಯಾಗಿ ತಾಗಿದೊಡನಾ ಪದದೊಳ್ ನಿನಗೆಕ್ಕು ಪೋಗುಗುಂ ॥೧೦॥

೭. ಆದರೆ ನಿನಗಿದು (ತಪ್ಪಿಸಿಕೊಳ್ಳುವುದು) ಸಹಜ. ನಿನ್ನನ್ನು ರಕ್ಷಣೆ ಮಾಡುವಾತನು ನನ್ನೊಡನೆ ಕಾದಾಡಲು ಬರಲಿ! ನನ್ನ ಈ ಮಾತನ್ನು ಆದರಿಸುವುದಿಲ್ಲವಾದರೆ, ನನ್ನ ಸತ್ತ್ವವೆಂಬ ಅಗ್ನಿಯಿಂದ ನೀವಿಬ್ಬರೂ ಸುಟ್ಟು ಬೂದಿಯಾಗುವಿರಿ!

೮. ಯುದ್ಧವೆಂದೊಡನೆಯೇ ನರ್ತಿಸುವ ಉತ್ಸಾಹದ ತೋಳುಗಳನ್ನು ಪಡೆದಿರುವ ವೀರಾಗ್ರಣಿಯ ಲೆಕ್ಕಕ್ಕೆ ಬಂದಿರತಕ್ಕ ಅರ್ಜುನನು ಈಗ ಹೆದರಿ ಹೆಣ್ಣಿನ ಲೆಕ್ಕಕ್ಕೆ ಬಂದು ಕಾಣದಾಗಿರುವುದು ಆಶ್ಚರ್ಯವಲ್ಲವೇ?

೯. ಪಕ್ಷಿರಾಜನಾದ ಗರುಡನು ಕೊಳ್ಳೆಹೊಡೆಯುವ ಸಂದರ್ಭದಲ್ಲಿ ಆ ಕೊಳ್ಳೆ ಹಕ್ಕಿಯೂ ಕಾಡಲ್ಲಿ ಉಳಿದಿದ್ದೀತೆ? ಮೃಗರಾಜನಾದ ಸಿಂಹವು ತಿನ್ನಲಿರುವ ಮೃಗವು (ಜಿಂಕೆಯು) ಓಡಿ ಬದುಕಬಲ್ಲುದೇ, ಅದು ಸಿಂಹಕ್ಕೆ ಸಿಗದಿರುವುದೆ? ಎಲೈ ಆಕಾಶಸಂಚಾರಿಯೇ, ಮೂರುಲೋಕವನ್ನು ಆಳತಕ್ಕ ಈ ಕೃಷ್ಣನಿಗೆ (ನನಗೆ)ಹೆದರಿ ನೀನೆಲ್ಲಿ ಹೊಕ್ಕಿದ್ದರೂ ನಿನ್ನ ಕೊರಲನ್ನು ಕತ್ತರಿಸುವ ನನ್ನ ಪ್ರತಿಜ್ಞಾಪಾಲನೆ ಮಾಡದ ನಾನು ಸುಮ್ಮನಿರುವುದುಂಟೇ?

೧೦. ನನ್ನ ಸಹಾಯದಿಂದಲೇ ಅರ್ಜುನನು ವಿಜಯ (ಜಯಶಾಲಿ) ಮತ್ತು ಅಜೇಯ (ಇತರರಿಂದ ಜಯಿಸಲು ಸಾಧ್ಯವಿಲ್ಲದವನು) ಆಗಿರುತ್ತಾನೆಂದು ನಿನಗೆ ಗೊತ್ತಿದೆಯೇ? ಆ ಧನಂಜಯನಿಗೆ ನಿನ್ನನ್ನು ಪ್ರೀತಿಸಿ ಇಟ್ಟುಕೊಂಡುದರಿಂದ ಜಯ ದೊರಕಲು ಸಾಧ್ಯವೇ? ನಾನು ನುಡಿದಂತೆ ನಿನ್ನನ್ನು ಸಂಹರಿಸುವೆನು. ನಾನು

ಗದ್ಯ॥ ಎಂದುತ್ಕೋಪದಿಂ ನುಡಿದಾರ್ದು –

ಮ.ವಿ.॥ ಪೊಱಮಟ್ಟತ್ತು ಬೆರಲ್ಗಳಿಂ ದಿಗಧಿಪರ್ ಕರ್ಣಂಗಳಂ ಮುಚ್ಚಿ ಮೆ
ಯ್ಯಱಿವನ್ನಂ ಶತವಾರಿದಧ್ವನಿಯದೊಂದಾಗಿರ್ಪಿನಂ ಪತ್ತುಸಾ
ಸಿರ ಪಾಲಂಬುನಿಧಾನ ಘೋಷಮೆನಲೂದಲ್ ಶಾರ್ಙ್ಗಚಕ್ರಾಯುಧಂ
ಸುರಲೋಕಂ ಮೊಱದಿಂದೆ ಬೇಗಿದವೊಲಾಗಲ್ ಪಾಂಚಜನ್ಯಸ್ವನಂ ॥೧೧॥

ಅದು ಪಿಂಡಿತ್ತೊ ಕೊಡಂಕೆಯಂ ಸಬಳದಿಂ ಕುತ್ತಿತ್ತೊ ಕಾಲೆತ್ತಿ ಮೆ
ಯ್ಯೊಗ್ದೆದತ್ತೋ ನಿಡುದಾಣೆಯಿಂ ಪೊಡೆದುದೋ ಶಾಂತಾತ್ಮಹೃತ್ತಂ ಕಲಂ
ಕಿದುದೋ ಪೇೞೆನಲೂದೆ ಬೂದಿಮುಸುಕಂ ಕಿೞ್ತಲ್ಲಿ ಮೇಲೇಟ್ಟಿ ಕಿ
ರ್ಚದೆನಲ್ ಕೋಪಮದೇೞೆ ಪಾರ್ಥನೊಡನೆೞ್ದಂ ಕೇಳ್ದು ತದ್ರಾವಮಂ ॥೧೨॥

ಶಾ.ವಿ.॥ ಇನ್ನೇನೊಟ್ಟ ಜೆಗಿರ್ಚನಟ್ಟುವನೆ ತಿಂಗಳ್ವಂಚಮಂ ಕರ್ಪುನೀ
ರಿನ್ನೇಂ ಮೀಯಿಪನೇ ದಲಿಂದುವರೆಗಂ ಗಂಡೆಂದು ಮಾರಾನದೇಂ
ಕೆನ್ನಂ ಪೆಣ್ಣೆದೆನಿಪ್ಪನೇನಜೆತಗುರ್ವಂ ಬೀರ್ವ ಪೆರ್ಜುದ್ದದಾ
ರ್ಪನ್ನೇಂ ತೋಱದೆ ಮಾಣ್ಬನೇನಿಜೆಯದೇಂ ಪಾರ್ಥಂ ಬೆಮರ್ತಿರ್ಪನೇ ॥೧೩॥

ಅರ್ಜುನನಿಗೆ ಬಾಣದಿಂದ ಹೊಡೆದೆನಾದರೆ ಹೋಮಕ್ಕೆ ಹಾಕಿದ ತೆಂಗಿನಕಾಯಿ ಅದರೊಂದಿಗೆ ಅದರೊಡನಿರುವ ಎಣ್ಣೆಯೂ ಸುಟ್ಟು ಹೋಗುವಂತೆ, ಅರ್ಜುನನು ನನ್ನೊಡನೆ ಕಾದಾಡಿದರೆ ನೀನು ಚೂರು ಚೂರಾಗಿ ನಿನ್ನ ಮೇಲುಸಿರು ಹೋಗಿಬಿಡುವುದು! ಎಂದು ಕೋಪದಿಂದ ನುಡಿದು ಬೊಬ್ಬಿರಿದನು.

೧೧. ಹಾಗೆ ಬೊಬ್ಬಿರಿದು ಶ್ರೀಕೃಷ್ಣನು ತನ್ನ ಪಾಂಚಜನ್ಯ ಶಂಖವನ್ನು ಊದಿದನು. ಅದರ ಧ್ವನಿ ಹೇಗಿತ್ತೆಂದರೆ – ದಿಕ್ಪಾಲಕರು ತಮ್ಮ ಕಿವಿಗಳನ್ನು ಬೆರಲುಗಳಿಂದ ಮುಚ್ಚಿ ಮೈಮರೆತರು. ನೂರು ಗುಡುಗುಗಳ ಧ್ವನಿ ಒಂದಾಗಿದ್ದಂತೆ ತೋರಿತು. ಹತ್ತು ಸಾವಿರ ಪಾಲಿನಷ್ಟರ ಸಮುದ್ರಾಘೋಷವೆನಿಸಿತು! ದೇವಲೋಕವು ಮೊರದಿಂದ ಧಾನ್ಯವನ್ನು ಬೇರಿದ ಹಾಗೆ ಕಂಪಿಸಿತು!

೧೨. ಊದಿದ ಶಂಖದ ಆ ಮಹಾಶಬ್ದವು ಕಿವಿಯನ್ನು ಹಿಂಡಿತೋ! ಬರ್ಚಿಯಿಂದ ಕಿವಿಗೆ ಚುಚ್ಚಿತೋ! ಕಾಲೆತ್ತಿ ಶರೀರಕ್ಕೆ ಒದೆಯಿತೋ! ಉದ್ದವಾದ ಡಾಣೆಯಿಂದ ಹೊಡೆಯಿತೋ! ಶಾಂತವಾಗಿದ್ದ ತನ್ನ ಹೃದಯವನ್ನು ಕಲಕಿತೋ ಹೇಳು– ಎಂಬಂತಾಯಿತು. ಮುಸುಕಿದ ಬೂದಿಯನ್ನು ಹಾರಿಸಿದಾಗ ಒಳಗಿನ ಬೆಂಕಿಯಂತೆ ಕೋಪವೇಳಲು, ಆ ಶಬ್ದವನ್ನು ಕೇಳಿದ ಅರ್ಜುನನು ಕೂಡಲೇ ಎದ್ದನು.

೧೩. ಇನ್ನೇನು! ಅರ್ಜುನನು ತನ್ನ ಶೌರ್ಯವೆಂಬ ಅಗ್ನಿಯನ್ನು ನೀರಿನಲ್ಲಿ ಮುಳುಗಿಸುವನೆ! ಬೆಳ್ಳಗಿನ ಬೆಳಕಿನ ಚಂದ್ರವಂಶವನ್ನು ಕಪ್ಪು ನೀರಿನಿಂದ ಮೀಯಿಸುವನೆ! ನಿಶ್ಚಯವಾಗಿ ಇದುವರೆಗೂ ಗಂಡುಗಲಿಯೆಂದೆನಿಸಿದ್ದು ಈಗ ಯುದ್ಧಕ್ಕೆ ನಿಲ್ಲದೆ

ಕಂದ॥ ಗಯನೆಲ್ಲಿದನಱಿಯಂ ಸೇ
ನೆಯನಱಿಯಂ ಸೋದರರ್ಕಳೆಲ್ಲಿದರಱಿಯಂ
ಭಯಮಱಿಯಂ ನಿಜ ರಿಪುವಂ
ಸ್ವಯಮಱಿವಂ ಕ್ರೋಧಮಿತ್ತುದನಿತುದ್ವೇಗಂ ॥೧೪॥

ಗದ್ಯ॥ ಅಂತು ಭೋಂಕನೆೞ್ದು ಶರಶರಾಸನಂಗಳಂ ಕಯ್ಕೊಂಡು ಮುಂಕೊಂಡಿದಿರಾದಾಗಳ್ –

ಮ.ವಿ.॥ ನರನೀತಂ ಪೃಥೆಯಾತ್ಮಜಂ ನಿಜಸಹೋದರ್ಯಾತ್ಮನಾಥಂ ವಲಂ
ಹರಿಯೀತಂ ವಸುದೇವಜಂ ನಿಜಸತೀಭ್ರಾತಂ ದಲೆಂಬಾ ಪರ
ಸ್ಪರಭಾವಂ ಮಱಿಯಾಯ್ತೆನಲ್ ಕಡುಕನಲ್ದೋರೊರ್ವರಂ ತಮ್ಮುತಿ
ರ್ವರುಮಾಯ್ದೀಕ್ಷಿಸುತೆಚ್ಚರಸ್ತ್ರಚಯಮಂ ದಿಗ್ದಂತಿಗಳ್ ಪಾರ್ವಿನಂ ॥೧೫॥

ಇದೊಂದು ಹೆಣ್ಣು ಎಂದು ಹೇಳಿಸಿಕೊಳ್ಳುವನೆ! ಮೊದಲೇ ತಿಳಿದಿದ್ದ ಭಯಂಕರವಾದ ದೊಡ್ಡ ಯುದ್ಧದ ಸಾಮರ್ಥ್ಯವನ್ನು ತೋರಿಸದೆ ಬಿಡುವನೆ? ಅರ್ಜುನನು ಇತರರಂತೆ ಹೆದರಿ ಬೆವರುತ್ತ ಇರುವನೇ?

೧೪. ಅರ್ಜುನನಲ್ಲಿ ಸಿಟ್ಟು ಮೂಡಿ ಅದೆಷ್ಟು ಉದ್ವೇಗವನ್ನು ಉಂಟು ಮಾಡಿತೆಂದರೆ ಅವನಿಗೆ ಗಯನು ಎಲ್ಲಿರುವನೆಂದೇ ತಿಳಿಯದಾಯಿತು! ಸೈನ್ಯವಿರುವುದೂ ತಿಳಿಯದಾಯಿತು! ತನ್ನ ಸಹೋದರರು ಎಲ್ಲಿದ್ದಾರೆಂಬುದೂ ತಿಳಿಯದಾಯಿತು. ಭಯವೂ ತಿಳಿಯದು. ತನ್ನ ಶತ್ರುವನ್ನು (ಕೃಷ್ಣನನ್ನು) ಮಾತ್ರ ತಿಳಿಯುವನು ಎಂಬಂತಾಯಿತು.

(ಗದ್ಯ) ಹಾಗೆ ಕೂಡಲೇ ಎದ್ದು ಬಾಣ ಬಿಲ್ಲುಗಳನ್ನು ಕೈಯಲ್ಲಿ ಹಿಡಿದುಕೊಂಡು ಮುಂದೆ ಬಂದು ಕೃಷ್ಣನಿಗೆ ಇದಿರಾದನು.

೧೫. ಕೃಷ್ಣನಿಗೆ ಅರ್ಜುನನು – ಇವನೇ ಕುಂತೀಪುತ್ರನು, ತನ್ನ ಸೋದರಿಯ (ಸುಭದ್ರೆಯ) ಗಂಡನು ನಿಶ್ಚಯ ಎಂಬುದೂ ಅರ್ಜುನನಿಗೆ ಕೃಷ್ಣನು – ಇವನೇ ವಸುದೇವನ ಮಗನಾಗಿರುವ ಮತ್ತು ತನ್ನ ಪತ್ನಿಯ ಸಹೋದರನಾಗಿರುವಾತನು ಎಂಬ ಈ ವಿಧದ ಪರಸ್ಪರ ಭಾವನೆಯೇ ಇಲ್ಲವಾಯಿತು ಎಂಬಂತೆ, ಬಹಳವಾಗಿ ಕೋಪಗೊಂಡು ತಾವಿಬ್ಬರೂ ಒಬ್ಬರು ಇನ್ನೊಬ್ಬರನ್ನು ಆಯ್ದು ನೋಡುತ್ತ ಬಾಣಪ್ರಯೋಗ ಮಾಡಿದರು. ಆಗ ದಿಗ್ಗಜಗಳು ಬೆದರಿ ಓಡುವಂತಾಯಿತು!

ಇದು ತಾಂ ಭಾರ್ಗವ ಭೀಷ್ಮಯುದ್ಧವೊ ಮೊದಲ್ ಪಾರ್ಥಂಗೆ ಮಾದೇವನ
ಲ್ಲೊದಗಿರ್ದಾಹವಮೋ ಎನಲ್ಕತಿಶಯಂ ಸಂದೇಹಮಂ ಪುಟ್ಟಿಸಿ
ತ್ತಿದು ತಾನಲ್ತದಱಿಂದೆಯಿಮ್ಮಡಿಯೆನಲ್ ಕೋಳಾಹಳಂ ತೋರ್ದುದಾ
ಕದನಾಗ್ರೇಸರ ಕೃಷ್ಣ ಪಾರ್ಥರಾರುಯುದ್ಧಂ ಶಕ್ತಿಬದ್ಧಂ ವಲಂ ॥೧೬॥

ಕಂದ॥ ತಾಱಿತ್ತಾಗಸಮೆನೆ ದೆಸೆ
ಕೂಱಿತ್ತೆನೆ ಗಾಳಿ ಪೆತ್ತುದೆನೆ ಭೂವಲಯಂ
ಕಾಱಿತ್ತೆನಲಸ್ತ್ರಚಯಂ
ಪೇಱಿತ್ತೆತ್ತೆತ್ತಲುಂ ರಣಾಂಗಣದೆಡೆಯೊಳ್ ॥೧೭॥

ಹರಿಯೇಂ ಗೆಲ್ವನೊ ನರನೇಂ
ಬರಿಸುವನೋ ವಿಜಯಲಕ್ಷ್ಮಿಯಂ ನೋಟ್ಪಮೆನು
ತ್ತಿರೆ ನಭದೊಳ್ ಖೇಚರಿಯರ್
ಸರಲ ಮುಸುಂಕವರ್ಗೆ ಮಱೆಯನೆಸಗಿತ್ತಾಗಳ್ ॥೧೮॥

ಒಂದರ್ಕೊಂದೆಱಡರ್ಕೆಱ
ಡೆಂದೆನೆ ಸರಲೆಚ್ಚು ಪಿರಿದು ಕಾದುತ್ತಿರಲ
ಸ್ಪಂದಸ್ಥಿತಿಯಿಂ ಜಯವಧು
ನಿಂದಿರೆ ವಾಗ್ಯುದ್ಧಮವಱೊಳಾದತ್ತಾಗಳ್ ॥೧೯॥

೧೬. ಇದು ಸಾಮಾನ್ಯವಾದ ಯುದ್ಧವಲ್ಲ. ಇದು ಹಿಂದೆ ಪರಶುರಾಮನಿಗೂ ಭೀಷ್ಮನಿಗೂ ಆದ ಯುದ್ಧವೋ? ಅರ್ಜುನನಿಗೆ ಮಹಾದೇವನೊಡನೆ (ಇಂದ್ರಕೀಲಕದಲ್ಲಿ) ಆದ ಯುದ್ಧವೋ! ಎಂಬ ಸಂಶಯಾತಿಶಯವನ್ನುಂಟು ಮಾಡಿತು. ಅಲ್ಲ, ಅವುಗಳಿಗಿಂತ ಇಮ್ಮಡಿಯ ಕೋಲಾಹಲವು ಕಾಣಿಸಿತು. ಯುದ್ಧದಲ್ಲಿ ಅಗ್ರಗಣ್ಯರಾದ ಕೃಷ್ಣಾರ್ಜುನರ ಯುದ್ಧವು ಅಷ್ಟೊಂದು ಶಕ್ತಿಬದ್ಧವಾಗಿದ್ದಿತು.

೧೭. ಆಕಾಶವೇ ಚೆಲ್ಲಾಪಿಲ್ಲಿಯಾಯಿತೆಂಬಂತೆಯೂ ದಿಕ್ಕುಗಳೇ ಎಸೆಯಲ್ಪಟ್ಟಂತೆಯೂ ಗಾಳಿಯೇ ಪ್ರಸವಿಸಿತೆಂಬಂತೆಯೂ ಭೂಮಿಯು ಕಾರಿತೆಂಬಂತೆಯೂ ಆ ಯುದ್ಧರಂಗದಲ್ಲಿ ಅಸ್ತ್ರಗಳು ರಾಶಿರಾಶಿಯಾಗಿ ಬಿದ್ದವು.

೧೮. ಆಕಾಶದಲ್ಲಿರುವ ಖೇಚರಿಯರು – ಈ ಕಾದಾಟದಲ್ಲಿ ಕೃಷ್ಣನು ಗೆಲ್ಲುವನೋ ಅಥವಾ ಅರ್ಜುನನು ಜಯಾಂಗನೆಯನ್ನು ವರಿಸುವನೋ ನೋಡೋಣ ಎನ್ನುತ್ತಿದ್ದರು. ಆದರೆ ಪರಸ್ಪರ ಪ್ರಯೋಗದ ಬಾಣಗಳ ಮುಸುಕು ಅವರಿಗೆ ಮರೆಯನ್ನುಂಟು ಮಾಡಿತು. ಅವರಿಗೆ ಕಾಣಲು ಸಾಧ್ಯವಾಗದಂತಾಯಿತು.

೧೯. ಪರಸ್ಪರವಾಗಿ ಒಬ್ಬನ ಒಂದು ಬಾಣಕ್ಕೆ ಇನ್ನೊಬ್ಬನದು ಒಂದು, ಎರಡಕ್ಕೆ ಎರಡು ಎಂಬಂತೆ ಪ್ರಯೋಗಿಸಿ ವಿಶೇಷವಾಗಿ ಅವರಿಬ್ಬರೂ ಕಾದಾಡುತ್ತಿದ್ದರು. ಆಗ ಜಯಾಂಗನೆಯು ಕದಲದೆ ನಿಂತಿರಲು, ಅವರೊಳಗೆ ವಾಗ್ಯುದ್ಧವಾಯಿತು.

ಐವರುಮಿರೆ ನಿನ್ನಂ ಪಿರಿ
ದೋವಿದೆನತಿಹಿತವನೆಸಗಿ ಕಾಯ್ದೆಂ ಬಿಸುಟಾ
ಭಾವವನೀಗಳ್ ಕಿನಿಸಿಂ
ಭಾವನೊಳೆನ್ನಲ್ಲಿ ಪೋಣರವಂದೈ ಮರುಳೇ ॥೨೦॥

ಎನ್ನತ್ತೆಮಗನೆ ನಿನಗಾ
ನೆನ್ನಣೆಗಿಯನಣ್ಣನೆನ್ನವಜ್ಞೆಯನೆಸಗಿ
ರ್ಪನ್ನಮದನಲಕ್ಷಿಸಿಯಿ
ತ್ತೆನ್ನೊಳ್ ನೀನಾನಲಕ್ಕುಮೆ! ತಿಳಿಯದ ವೋಲ್ ॥೨೧॥

ಜೂದಿನ ಸಭೆಯೊಳ್ ಮಾನವ
ನ ದುರುಪದಿಗುಳಿಸಿದಾತನರತಿಥಿಗಳಂ
ಆದರಿಪೆಡೆಯೊಳ್ ಬನದೊಳ್
ಮೋದದಿನರೆತ್ತಿ ನಿಮ್ಮ ದಮ್ಮಂಗಾಯ್ದರ್ ॥೨೨॥

ಅದಜೆಂ ಬಿಡು ಗಯನಂ ಪೂ
ಣ್ದುದನೀಗಳೆ ನಡೆಯಿಪೆಂ ದಲಿಂದುವರಂ ನೇ
ಹದ ಭಾವಂ ಕುಂದದೆ ಕುಂ
ದೊದಗುವವೊಲ್ ನಿನ್ನದಲ್ತೆ ಮಾಡುವ ಕಜ್ಜಂ ॥೨೩॥

ಗದ್ಯ॥ ಎಂಬನಿತಱೊಳರ್ಜುನಂ ತಡೆದು –

೨೦. ಶ್ರೀಕೃಷ್ಣನು ಹೀಗೆಂದನು – ನನ್ನ ಬಂಧುಗಳಾಗಿ ನೀವು ಐವರಿದ್ದರೂ ನಾನು ನಿನ್ನನ್ನೇ ಹೆಚ್ಚು ಪ್ರೀತಿಸಿದೆನು. ಅತಿಯಾಗಿ ಹಿತವನ್ನು ಮಾಡಿ ಕಾಪಾಡಿದ್ದೇನೆ. ಅಂತಹ ಭಾವನೆಯನ್ನು ನೀನು ಬಿಟ್ಟುಬಿಟ್ಟು ಎಲೈ ಹುಚ್ಚನೇ, ಭಾವನಾದ ನನ್ನಲ್ಲಿ ಕೋಪದಿಂದ ಕಾದಾಡಲು ಬಂದೆಯಲ್ಲವೇ?

೨೧. ನನ್ನ ಅತ್ತೆಯ (ಕುಂತಿಯ) ಮಗನೇ, ನನ್ನ ಅಣ್ಣನು ಒಪ್ಪದೆ ತಿರಸ್ಕಾರ ಮಾಡಿದ್ದರೂ ನನ್ನ ತಂಗಿ ಸುಭದ್ರೆಯನ್ನು ನಿನಗೆ ಹೆಂಡತಿಯಾಗಿ ಮಾಡಿರುತ್ತೇನೆ. ಅಂತಹ ನನ್ನಲ್ಲಿ ನೀನು ಏನು ತಿಳಿಯದವನಂತೆ ಯುದ್ಧ ಮಾಡಬಹುದೇ?

೨೨. ನೀವು ಕೌರವನೊಂದಿಗೆ ಜೂಜಾಡಿದ ಸಂದರ್ಭದಲ್ಲಿ ದ್ರೌಪದಿಗೆ ಅಕ್ಷಯದ ಸೀರೆಯನ್ನು ಒದಗಿಸಿ ಆಕೆಯ ಮಾನವನ್ನು ಉಳಿಸಿದವರು ಯಾರು? ಕಾಡಿನಲ್ಲಿ ಅತಿಥಿಗಳನ್ನು ಆದರಿಸುವ ಸಂದರ್ಭದಲ್ಲಿ ಅಕ್ಷಯಪಾತ್ರೆಯನ್ನು ತುಂಬಿಸಿ ನಿಮ್ಮ ಧರ್ಮ ರಕ್ಷಣೆ ಮಾಡಿದವರು ಯಾರು? ನಾನಲ್ಲವೆ?

೨೩. ಆದುದರಿಂದ ನಾನು ಪ್ರತಿಜ್ಞೆ ಮಾಡಿದುದನ್ನು ಈಡೇರಿಸುವೆನು. ಆ ಗಯನನ್ನು ಬಿಟ್ಟು ಕೊಡು. ಇದುವರೆಗೂ ನಮ್ಮೊಳಗಿನ ಸ್ನೇಹಭಾವಕ್ಕೆ ಕುಂದಾಗಿಲ್ಲ. ಈಗ ಕುಂದಾಗದಂತೆ ಮಾಡುವುದು ನಿನ್ನ ಕರ್ತವ್ಯವಲ್ಲವೆ? ಹೀಗೆನ್ನುವಷ್ಟರಲ್ಲಿ ಅರ್ಜುನನು ತಡೆದು ಹೀಗೆಂದನು.

ಕಂದ॥ ನಾಲಗೆಯುಂಟೆನೆ ಜಱುಚುವ
ಕಾಲಮಿದೇಂ ಕ್ಷಾತ್ರಧರ್ಮಮಂ ರಕ್ಷಿಪೊಡಾ
ನಾಲಗೆ ನುಡಿದುದನೆಸಪುದು
ಕಾಲಂ ಪಿಡಿದವನನೋವುದುಂ ಪಿರಿದಲ್ತೇ ॥೨೪॥

ಬಂಧುತ್ವಮದನ್ಯೋನ್ಯಂ
ಬಂದಾ ಗಯನಂ ಸಮಂತು ಪೊರೆವುದೆ ಧರ್ಮಂ
ಸಂದೆಯಮೇನೆನಗಿದಿರೊಳ್
ನಿಂದೊಡೆ ತಾನಾವೆಯಾದೊಡಂ ಕಾದದಿರೆಂ ॥೨೫॥

ಗದ್ಯ॥ ಆಗಳ್ ತಟ್ಟಿದೊಡೆ ತನ್ನ ಪ್ರತಿಜ್ಞಾಪಾಲನದಿನಮವಸಾನಂಗೊಳುತಿರ್ಪುದೆಂದುಂ– ದಕ್ಷತೆಯ ಕಾಳೆಗಮಲ್ಲದೆ ಗೆಲವು ಬಗೆವಜೆಯದೆಂದುಂ– ನಿರ್ಣಯಕ್ಕೆ ಬಂದು – ತನ್ನ ಪ್ರತಿಜ್ಞಾಕ್ಷರಮೆಂಬ ರನ್ನಗಂಟಿಯಂ ವಿಜಯಲಕ್ಷ್ಮೀ ಶಿರೋಧರಕ್ಕೆ ತುಡಿಸಿ ಪಡೆದಾಲಿಂಗಿಸಲ್ ಬಗೆದಾ ಶ್ರೀಕೃಷ್ಣಂಗೆ ಗಳ್ಕನೆ ಮುನಿಸು ಮೂಡುವುದುಂ– ಪ್ರಳಯ ತ್ರಿಪುರಾಂತಕನಂತೆ ಮಾಮಸಕಂ ಮಸಗಿ ರಿಪು ನಿಪಾತಿನಿಯೆಂಬ ಮಹಾಸ್ತ್ರಮಂ ಶಾರ್ಙ್ಗಮೌರ್ವಿಗೆ ಸಂಧಿಸಿದಾಗಳ್ –

೨೪. ಮಾತಾಡಲು ನಾಲಗೆಯಿದೆ ಎಂಬ ಕಾರಣದಿಂದ ಏನೇನೋ ಹರಟುವ ಕಾಲವೇ ಇದು? ಕ್ಷಾತ್ರಧರ್ಮ ರಕ್ಷಣೆಗಾಗಿ, ನಾಲಗೆಯಲ್ಲಿ ಹೇಳಿದುದನ್ನು ಕಾರ್ಯಗತಗೊಳಿಸುವ ಕಾಲವಿದು. ಮರೆಹೊಕ್ಕವನನ್ನು ರಕ್ಷಿಸುವುದು ದೊಡ್ಡದಲ್ಲವೆ?

೨೫. ಬಂಧುತ್ವವೆಂಬುದು ಒಂದೇ ಕಡೆಯದಲ್ಲ, ಅದು ಪರಸ್ಪರವಾದುದು. ನನ್ನ ಬಳಿಗೆ ಬಂದು ರಕ್ಷಣೆಯನ್ನು ಕೇಳಿದ ಗಯನನ್ನು ಕಾಪಾಡುವುದೇ ನನ್ನ ಧರ್ಮ, ಇದರಲ್ಲಿ ಸಂದೇಹವಿಲ್ಲ. ನನ್ನನ್ನು ಪ್ರತಿಭಟಿಸುವುದಾದರೆ, ಅಂಥವರು ಯಾರೇ ಆಗಿದ್ದರೂ ಕಾದಾಡದೆ ನಾನಿರೆನು.

(ಗದ್ಯ.) ಆಗ ಕೃಷ್ಣನು ತನ್ನಲ್ಲೇ ಹೀಗೆ ಯೋಚಿಸಿದನು– ಇನ್ನು ತಡಮಾಡಿದರೆ ತನ್ನ ಪ್ರತಿಜ್ಞೆಯನ್ನು ಈಡೇರಿಸುವ ದಿನ ಕೊನೆಗೊಳ್ಳುವುದು. ದಕ್ಷತೆಯ ಯುದ್ಧವಲ್ಲದೆ ಜಯವಾಗದು ಎಂದು ನಿಶ್ಚಯಿಸಿದನು. ತನ್ನ ಪ್ರತಿಜ್ಞೆಯ ಮಾತೆಂಬ ರತ್ನದ ಕಂಠಿಯನ್ನು ತನ್ನ ಜಯಲಕ್ಷ್ಮಿಯ ಕೊರಳಿಗೆ ತೊಡಿಸಿ, ಪ್ರೀತಿಸಿ ಅಪ್ಪಿಕೊಳ್ಳಲು ಮನಸ್ಸು ಮಾಡಿದನು. ಆಗ ಶ್ರೀಕೃಷ್ಣನಿಗೆ ಫಕ್ಕನೆ ಸಿಟ್ಟು ಮೂಡಿತು. ಪ್ರಳಯಕಾಲದ ಪರಶಿವನಂತೆ ಮಹಾಕೋಪತಾಳಿದನು. ಶತ್ರುವನ್ನು ಬೀಳಿಸತಕ್ಕ ರಿಪುನಿಪಾತಿನಿ ಎಂಬ ಮಹಾಸ್ತ್ರವನ್ನು ತನ್ನ ಶಾರ್ಙ್ಗಧನುಸ್ಸಿಗೆ ಜೋಡಿಸಿದನು.

ಕಂದ॥ ತಿರೆಯಲ್ಲಾಡಿತು ಕುಲಗಿರಿ
ಯುರುಳ್ದು ದಲ್ ಬಿಟ್ಟುದೆಂಟು ದೆಸೆಬಾಯ್ಬಿಡುಗುಂ
ಸುರರಾರ್ದರ್ ಮೆಯ್ ಬೆಮರ್ದುದು
ಮರುತಂಗಳ್ಕರ್ತುದೆನಲಗುರ್ವೇಂ ಪಿರಿದೋ ॥೨೬॥

ಎಡನಾಲನಿಟ್ಟು ಮುಂದೆ
ಕೈಡಗಯ್ಯಂ ಮುಂದೆ ಸಾರ್ಚಿ ಗುಣಮಂ ಸೆಳೆದಾ
ಕಡೆಗಡಸಿ ಪಿಡಿದು ಕಣೆಯಂ
ನಿಡುನೋಟವನಿಟ್ಟು ಗುಱಿಯನಿಟ್ಟಂ ಕೃಷ್ಣಂ ॥೨೭॥

ಉ.ಮಾ.ಇದು ಪುಸಿಯಾಗದಿಂತಿದರಿಯಂ ಸಲೆ ಪೊಯ್ಯದೆ ಮಾಣದೆಂತುಮಿಂ
ದಿದು ರಿಪುಬಾಣಮಂ ಗಣಿಸದೆಂದು ಮನಸ್ತನುಶಕ್ತಿಯುಕ್ತಿಯಂ
ಪುದುಗೊಳಿಸುತ್ತುಮುಗ್ರತೆಯದೇಱಿರೆ ಕಾಯ್ಪುಱಿ ಮೀಱಿ ತನ್ನ ದ
ರ್ಪದ ವಿಷಮಾಸ್ತ್ರಮಂ ವಿಜಯನಾ ತನುಗೆಚ್ಚೊಡೆ ಪೇೞ್ವುದೇನನಾಂ ॥೨೮॥

ಕಂದ॥ ಎಚ್ಚಲಗದು ಕಾಱುತೆ ಕಡು
ಗಿಚ್ಚಂ ನರನೆಚ್ಚ ಕಣೆಗೆ ತಾಗುತ್ತೆತ್ತಂ
ಕಿಚ್ಚಳುರೆ ಸುಟ್ಟು ನರನಂ
ಚುಚ್ಚಲ್ ಭೋರೆಂದು ಕುಸಿದು ಮುಚ್ಚೆಗೆ ಸಂದಂ ॥೨೯॥

೨೬. ಆಗ ಭೂಮಿ ಅಲ್ಲಾಡಿತು. ಕುಲಗಿರಿಗಳು ಉರುಳಿ ಬೀಳುವಂತಾಯಿತು. ಎಂಟು ದಿಕ್ಕುಗಳೂ ಬಾಯ್ಬಿಟ್ಟವು. ದೇವತೆಗಳು ಬೊಬ್ಬಿಟ್ಟರು, ಅವರಿಗೆ ಮೈಬೆವರಿತು. ವಾಯುದೇವನಿಗೇ ಭಯವುಂಟಾಯಿತು. ಹೀಗೆನ್ನುವಾಗ ಅದೆಷ್ಟು ಭಯಂಕರವೋ!

೨೭. ಕೃಷ್ಣನು ತನ್ನ ಎಡಗಾಲನ್ನು ಮುಂದಕ್ಕೆ ಇಟ್ಟು, ಎಡಗೈಯನು ಮುಂದೆ ಚಾಚಿ ಬಿಲ್ಲನ್ನು ಹಿಡಿದು, ಬಲಗೈಯಲ್ಲಿ ಹೆದೆಯನ್ನು (ಬಿಲ್ಲಿನ ಹಗ್ಗವನ್ನು) ಸೆಳೆದು, ಅದಕ್ಕೆ ಬಾಣವನ್ನು ಜೋಡಿಸಿ ನಿಡುನೋಟದಿಂದ ಗುರಿಯನ್ನಿಟ್ಟನು!

೨೮. ಈ ಬಾಣ ಪ್ರಯೋಗ ಹುಸಿಯಾಗದು (ಫಲಕಾರಿಯಾಗುವುದು), ಇದು ವೈರಿಯನ್ನು ಹೊಡೆಯದಿರದು, ಹೇಗೂ ಇದು ವೈರಿಯ ಪ್ರತಿ ಬಾಣವನ್ನು ಲೆಕ್ಕಿಸದು – ಎಂದು ಮನಶ್ಶಕ್ತಿ, ದೇಹ ಶಕ್ತಿ ಮತ್ತು ಯುಕ್ತಿ ಎಂಬಿವನ್ನು ಹೊಂದಿಸಿ, ಉಗ್ರತೆ ಹೆಚ್ಚಾಗಿರಲು, ಕೋಪದ ಬಿಸಿ ಬಹುವಾಗಿ ಮೀರಿರಲು, ತನ್ನ ದರ್ಪದ ವಿಷಮಾಸ್ತ್ರವನ್ನು ಅರ್ಜುನನ ಮೇಲೆ ಪ್ರಯೋಗಿಸಿದನು. ಆಗ ನಾನೇನೆನ್ನಲಿ!

೨೯. ಪ್ರಯೋಗಗೊಂಡ ಆ ಬಾಣವು ಬೆಂಕಿಯನ್ನು ಕಾರುತ್ತ ಅರ್ಜುನನು ಪ್ರಯೋಗಿಸಿದ ಬಾಣಕ್ಕೆ ತಗಲಿ ಎಲ್ಲೆಡೆಯೂ ಬೆಂಕಿ ಎದ್ದಿತು, ಸುಟ್ಟಿತು. ಅದು ಅರ್ಜುನನಿಗೆ ತಗಲಿತು. ಆಗ ಅರ್ಜುನನು ಭೋರನೆ ಬಿದ್ದು ಮೂರ್ಛೆಗೊಂಡನು.

ಕುವರಂ ಬೀೞ್ದುದ ಕಂಡು ಸುರೇಂದ್ರಂ
ಪವಿಗೊಳೆ ಭೀಮಂ ಗದಾಯುಧಂಗೊಳೆ ನಕುಲಂ
ಜವದಿಂದಾನಲ್ ಬರಲಾ
ಬುವಿಯಿಂ ನರನೇೞ್ವ ಮೊದಲು ಕತೆಯೇನೆಂಬೆಂ ॥೩೦॥

ಪಾಱುತುಮಾಗಳೆ ಕೃಷ್ಣಂ
ಪಾಱುಂಬಳೆಯಿಟ್ಟೊಡಾಕ್ಷಣಂ ಕಿಱುಮಱಿಯುಂ
ಪಾರಿವಮುರುಳ್ದೊಡನುರುಳ್ವವೊ
ಲಾರಯಿಕೆಗಳಿರದೆಯುರುಳ್ದುದಾ ಗಯನ ಶಿರಂ ॥೩೧॥

ಮ.ಸ್ರ ॥ ಇದು ತಾಂ ಮುಂ ಸೂರುಳಿಟ್ಟಾ ನುಡಿಯ ಕಡೆವಗಲ್ ನೋಡದೊ ಸೂರ್ಯನಿನ್ನೇ
ನಿದಱಿಂದಾದಪ್ಪುದಂ ನೋಡದೆ ಪಡುವೆನೆ ಎಂದೊಯ್ಯನೆಯ್ದುತ್ತಲಿರ್ಪಂ
ಇದೆ ಕಜ್ಜಂ ದಿಟಮೊಳ್ಪಸಂಗುಡುಗುಮತ್ಯೌನ್ನತ್ಯಮಂ ತರ್ಕುಮೆಂ
ದುದು ಸಂದತ್ತೆಂದು ನಿಂದಂ ಮುದದುದಯದಿನಾ ನಂದಕಂದಂ ಮುಕುಂದಂ ॥೩೨॥

ಎಂಬಲ್ಲಿಗೆ ಸತ್ತ್ವಾಲೋಕನ ಕಾವ್ಯದೊಳ್
ಪ್ರತಿಜ್ಞಾಪಾಲನಂ
ಸಪ್ತಮಾಶ್ವಾಸಂ

೩೦. ಮಗನು ಬಿದ್ದುದನ್ನು ನೋಡಿದ ಇಂದ್ರನು ವಜ್ರಾಯುಧವನ್ನು ಹಿಡಿದನು. ಭೀಮನು ಗದೆಯನ್ನು ಹಿಡಿದು ಕೊಂಡನು. ನಕುಲನು ಬೇಗನೆ ಯುದ್ಧ ಮಾಡಲು ಮುಂದೆ ಬಂದನು. ಅರ್ಜುನನು ಕೆಳಗೆ ಬಿದ್ದವನು ಏಳುವುದಕ್ಕೆ ಮೊದಲೇ ಆದ ಕಥೆಯನ್ನು ಏನು ಹೇಳಲಿ?

೩೧. ಆಗ ಶ್ರೀಕೃಷ್ಣನು ಚಕ್ರಾಯುಧವನ್ನು ಪ್ರಯೋಗಿಸಿದನು. ಆಗ ಹೊಡೆದ ಬಾಣಕ್ಕೆ ಪಾರಿವಾಳವು ಕೆಡೆದು ಬೀಳುವಾಗ ಅದರ ಮರಿಯೂ ಬೀಳುವಂತೆ ಗಯನ ರಕ್ಷಣೆಯಿಲ್ಲದೆ ಅವನ ತಲೆಯೂ ಕೆಳಗೆ ಉರುಳಿ ಬಿದ್ದಿತು.

೩೨. ಇದು ತನ್ನ ಪ್ರತಿಜ್ಞೆಯ ಮಾತಿನ ಕೊನೆಯ ದಿನದ ಹಗಲು, ಸೂರ್ಯನು ಇನ್ನೂ ಅಸ್ತಮಿಸಿಲ್ಲ. ಇದರಿಂದ ಆಗುವುದನ್ನು ನೋಡದೆ ಅಸ್ತಮಿಸುವೆನೆ? ಎಂದು ಮೆಲ್ಲನೆ ಪಡುಗಡಲಿಗೆ ತೆರಳುತ್ತಿದ್ದಾನೆ. ಇದೀಗ ನನ್ನ ಕಾರ್ಯವಾಯಿತು. ಸತ್ಕೀರ್ತಿ ಬರುವುದು. ಹಿರಿಮೆಯನ್ನು ತರುವುದು. ಹೇಳಿದುದು ಈಡೇರಿತು ಎಂದು ಶ್ರೀಕೃಷ್ಣನು ಸಂತೋಷ ತಾಳಿದನು.

ಇಲ್ಲಿಗೆ ಸಪ್ತಮಾಶ್ವಾಸ ಮುಗಿಯಿತು.

*****

# ಅಷ್ಟಮಾಶ್ವಾಸಂ

(ಪಾರ್ಥಪ್ರತಿಜ್ಞಾಪಾಲನಂ – ಶಿವಪ್ರಸನ್ನ ತ್ವಂ – ವಿಶ್ವಮೈತ್ರೀ ಉಪದೇಶಂ)

ಕಂದ॥ ಶ್ರೀರಮಣಂ ರಿಪುವಿಜಯರ
ಮಾರಮಣಂ ಸತ್ಯ ವಾಕ್ಯನಪಗತ ಕೋಪಾ
ಕಾರ಼ಂ ಪರಿವರ್ತಿತ ಕರು
ಣಾರಸನಾಗುತ್ತಿರಲ್ಕೆ ಯದುಕುಲದರಸಂ ॥೧॥

ಗದ್ಯ॥ ಮತ್ತಮಾಗಳಲ್ಲಿರ್ದ ತನ್ನ ಸೋದರರ್ಮುಂತಾಗಿ ಮಾಳ್ಪುಚಿತೋಪಚಾರಚಿಕಿತ್ಸೆಗಳಿಂದ ದೊಯ್ಯನೊಯ್ಯನಾ ಸವ್ಯಸಾಚಿ ಮಱುಚಣದೊಳೆಳ್ಚಱುತ್ತಿರೆಯಿರೆ ತನ್ನ ವಿಕಟಪಟುತೆಯನಾ ಪಟುವ ಮನಕ್ಕೆ ನಾಂಟಿಸಿದಪೆನಾತನುದ್ರಿಕ್ತನಾಗಿ ಮತ್ತಂ ಕಾದುವೊಡೆ ಕಾದುಗಲ್ಲದೊಡೆ ಬಾಗುದೆಂದು ಬಗೆದಾಗಳಾ ಮುರಾಂತಕನಿಂತೆಂದಂ –

ಕಂದ॥ ಕಲಿವಚನದ ಮೆಯ್ಗಲಿಯೇ
ಕಲಿಗಾಳೆಗದಲ್ಲಿ ಸೋಲ್ತು ಬಿಟ್ದಿಯ್ ನಿನ್ನಾ
ಬಲಮದಟುಚಲಂಗಳ್ ಪ
ಣ್ಣೆಲೆವೋಲಿಳೆಗುರುಳ್ದುವಿನ್ನುಮೇನಾಟಿಸುವಯ್ ॥೨॥

೧. ಯಾದವರ ಅರಸನಾದ ಶ್ರೀಕೃಷ್ಣನು ಶತ್ರುವಿಜಯವೆಂಬ ರಮಾದೇವಿಯ ರಮಣನಾಗಿ ಸತ್ಯದ ವಾಕ್ಯವುಳ್ಳವನಾಗಿ (ಪ್ರತಿಜ್ಞೆಯನ್ನು) ಪಾಲಿಸಿ ಕೋಪವನ್ನು ಹೋಗಾಡಿಸಿದವನಾಗಿ ಕರುಣರಸಕ್ಕೆ ಪರಿವರ್ತನೆಗೊಂಡವನಾಗುತ್ತಿದ್ದನು.

(ಗದ್ಯ) ಆ ಮೇಲೆ ಅಲ್ಲಿದ್ದ ತನ್ನ ಸಹೋದರರು ಮುಂತಾದವರು ಮಾಡತಕ್ಕ ಉಪಚಾರ ಚಿಕಿತ್ಸೆಗಳಿಂದ ಮೆಲ್ಲಮೆಲ್ಲನೆ ಆ ಅರ್ಜುನನು ಮರುಕ್ಷಣದಲ್ಲಿ ಎಚ್ಚರಗೊಳ್ಳುತ್ತಿದ್ದನು. ಆಗ ಕೃಷ್ಣನು ತನ್ನ ಭಯಂಕರವಾದ ಯುದ್ಧದ ಪ್ರವೀಣತೆಯನ್ನು ಆ ರಣಪ್ರವೀಣನ ಮನಸ್ಸಿಗೆ ನಾಟಿಸುವಂತೆ ಮಾಡುತ್ತೇನೆ. ಅವನು ಉದ್ರೇಕತಾಳಿ ಆಮೇಲೆಯೂ ಹೋರಾಡುವುದಾದರೆ ಹೋರಾಡಲಿ, ಅದಲ್ಲವಾದರೆ ನನಗೆ ಬಾಗಿ ವರ್ತಿಸಲಿ ಎಂದು ಭಾವಿಸಿಕೊಂಡು, ಅವನ ಮನಸ್ಸು ನೋಯುವಂತೆ ಹೀಗೆಂದನು.

೨. ಪರಾಕ್ರಮದ ಮಾತಿನ ಶೂರನೇ, ನೀನೀಗ ಶೌರ್ಯದ ಯುದ್ಧದಲ್ಲಿ ಸೋತು ಬಿದ್ದೆಯಲ್ಲವೆ? ನಿನ್ನ ಶಕ್ತಿ, ಶೌರ್ಯ, ಚಲಗಳೆಲ್ಲವೂ ಮರದ ಹಣ್ಣೆಲೆಗಳಂತೆ ನೆಲಕ್ಕೆ ಬಿದ್ದಿವೆ. ಇನ್ನು ನೀನು ಏನು ಅಪೇಕ್ಷಿಸುವೆ?

ಅಱಿವೆಡೆ ಮದ್ದಿಲ್ಲಂ ಕಡು
ಮುಳಿವೆಡೆ ಮುದ್ದಿಲ್ಲಮಲ್ಲದಿರ್ದೊಡೆ ಗಯನಂ
ಉಱಿವುದುಮೆನ್ನೊಳ್ ವೈರವ
ನುಱಿವುದು ನನ್ನೇೞ್ಗೆಗೊಳ್ಳಿತೇನಾಗಿರದೇ ॥೩॥

ಧನಮಿಲ್ಲದ ತನಗೊಂದರ
ಮನೆಯಿಲ್ಲದ ರಾಜ್ಯಮಿಲ್ಲದೊಪ್ಪುವ ಸೇನಾ
ಜನಮಿಲ್ಲದ ನರನೆನ್ನೊಳ್
ಮೊನೆಯಂ ತಾನೆಸಗಲಕ್ಕುಮೇ ಅತಿಬಲನೊಳ್ ॥೪॥

ಎಲ್ಲಿದೆ ಶರಂ ಶರಾಸನ
ಮೆಲ್ಲಿದೆ ಬಲಮುರ್ಕು ನಿನ್ನ ಸೂರುಳ ಬಲ್ಪುಂ
ಎಲ್ಲಿದೆ ಗರುವಿಕೆ ಬೀರತೆ
ಯೆಲ್ಲಿದೆ ಮೊನೆ ಗಯನನಾನುರುಳ್ಚಿದ ಬೞಿಕಂ ॥೫॥

ಇನ್ನೇತಕೊಱಗಿ ನಿದ್ದೆಯ
ಕನ್ನೆಯ ತೞ್ಕೈಸಿ ಮೆಱೆವೆ ಗಯನಂ ಕೊಂದ
ತ್ಯುನ್ನತ ಮುದದಿಂದಾನಿರೆ
ಯೆನ್ನೊಡನಾನಂದಿಸುವುದೆ ನಿನಗತ್ಯುಚಿತಂ ॥೬॥

೩. ಸಾಯುವವನಿಗೆ ಮದ್ದಿಲ್ಲ, ಸಿಟ್ಟಿನೆಡೆಯಲ್ಲಿ ಮುದ್ದಿಲ್ಲ ಎಂಬ ಮಾತಿದೆ. ಅದಲ್ಲವಾದರೆ, ಆ ಗಯನನ್ನು ಬಿಟ್ಟು ಬಿಡುವುದು ಮತ್ತು ನನ್ನಲ್ಲಿ ವೈರವನ್ನೂ ಬಿಟ್ಟುಬಿಡುವುದು ನಿನ್ನ ಉನ್ನತಿಗೆ ಒಳ್ಳೆಯದಾಗಿತ್ತಲ್ಲವೆ?

೪. ಐಶ್ವರ್ಯವೆಂಬುದು ಇಲ್ಲದಿರುವ, ತನಗೆ ಅರಮನೆಯೂ ಇಲ್ಲದ, ರಾಜ್ಯವಿಲ್ಲದ, ತಕ್ಕುದಾದ ಸೈನಿಕರೂ ಇಲ್ಲದಂತಹ ಈ ನರನು ಅತಿಬಲನಾದ ನನ್ನೊಡನೆ ಯುದ್ಧಮಾಡಬಹುದೆ?

೫. ನಾನು ಪ್ರತಿಜ್ಞೆ ಮಾಡಿದಂತೆ ಗಯನನ್ನು ಉರುಳಿಸಿದ ಮೇಲೆ, ಎಲ್ಲಿದೆ ನಿನ್ನ ಬಾಣ? ಬಿಲ್ಲು ಎಲ್ಲಿದೆ? ಶಕ್ತಿ, ಗರ್ವ, ಪ್ರತಿಜ್ಞೆಯ ಸಾಮರ್ಥ್ಯ, ಗುರುತ್ವ, ವೀರತ್ವಗಳು ಎಲ್ಲಿವೆ?

೬. ನೀನು ಇನ್ನೂ ಏಕೆ ನೆಲಕ್ಕೆ ಒರಗಿ ನಿದ್ರಾಂಗನೆಯನ್ನು ಅಪ್ಪಿಕೊಂಡು ಮೆರೆಯುತ್ತಿರುವೆ? ನಾನು ಗಯವನ್ನು ವಧಿಸಿ, ಬಹಳ ಹೆಚ್ಚಿನ ಆನಂದದಿಂದ ಇರುವಾಗ, ನನ್ನ ಜತೆ ಸೇರಿ ಆನಂದಗೊಳ್ಳುವುದೇ ನಿನಗೆ ಬಲು ತಕ್ಕುದಾಗಿದೆ. ಅಲ್ಲವೆ?

ನಿನ್ನನುಚಿತ ವೈರಮುಮಂ
ನಿನ್ನವಿವೇಕತೆಯ ಪೋರ್ದ ತಪ್ಪಂ ಮಱೆವೆಂ
ಇನ್ನೆಂದುಂ ನಾವೊಂದೆಂ
ಬನ್ನಂ ನಾಮಿರ್ಪಮೆನ್ನದೀ ಹಿತವಚನಂ ॥೭॥

ಲೋಕಕ್ಕೆ ಶಾಂತಿಯಂ ಪರ
ಲೇಕತೆಯಂ ತಳೆಯವೇಳ್ಕುಮಿನ್ನೆವರಂ ಗೆ
ಯ್ದಾ ಕಾಳಗಮಿದು ಸಾಲ್ಗುಂ
ಲೋಕಂ ಕೈವೆಟ್ಟಿ ನಗದೆ ಕಾದಿದೊಡಮಾಂ ॥೮॥

ಗದ್ಯ॥ ಅಂತು ನುಡಿದಾ ಹರಿಯ ನುಡಿ ನರಂಗರೆಯೆಚ್ಚರೆಂಬ ಸರೋಜವಿಕಸನಕ್ಕೆ ನೇಸಱ ಕದಿರ್ ತಾಗಿದಂತೆಯುಂ – ವಿಜಯನಂತಿಮ ವಿಜಯೌರ್ವಾನಲಕ್ಕೆ ನೆಯ್ವೊಯ್ದಂತೆಯುಂ – ಪಾರ್ಥನ ಶೌರ್ಯೋದ್ರೇಕದಂಗಾರದ ಭೂತಿಗೆ ವಾತಾಹತಿಯಾದಂತೆಯುಂ – ಧನಂಜಯನ ಮುಳಿಸುಗಿಚ್ಚಿಂಗೆ ಪತ್ತಿಯ ಬಣಂಬೆಯಂ ಪತ್ತಿಸಿದಂತೆಯುಮಾಗಿ ತಾಗುವುದುಮಾತಂ ಚಡಪುಡನೆಟ್ಟು

ಕಂದ॥ ರಕ್ತಸರಿತ್ತಿನೊಳೀಗಳ್
ಶಕ್ತಿಯೊಳೀಸುತ್ತೆ ಕಾದವಂದಂ ಹರಿಯೊಳ್
ಪಾರ್ಥನೆನಲ್ಕಂದಾದಂ
ರಕ್ತಾರ್ದ್ರಶರೀರಿ ಕೋಪರಕ್ತಾಪಾಂಗಂ ॥೯॥

೭. ನಿನ್ನ ಅನುಚಿತವಾದ ದ್ವೇಷವನ್ನೂ ನಿನ್ನ ಅವಿವೇಕ ವರ್ತನೆಯನ್ನು ನನ್ನೊಡನೆ ಹೋರಾಡಿದ ತಪ್ಪನ್ನೂ ಕ್ಷಮಿಸುವೆನು. ಇನ್ನೆಂದಿಗೂ ನಾವಿಬ್ಬರೂ ಬೇರೆ ಬೇರೆಯಲ್ಲ. ಒಂದೇ ಎಂಬುದಾಗಿ ನಾವು ಇರೋಣ. ಇದು ನನ್ನ ಹಿತೋಕ್ತಿಯಾಗಿದೆ.

೮. ಲೋಕಕ್ಕೆ ಶಾಂತಿಯನ್ನು ತರುವುದಕ್ಕಾಗಿ ನಾವು ಒಂದಾಗಬೇಕು. ಇದುವರೆಗೆ ಮಾಡಿದ ಕಾದಾಟವಿದು ಸಾಕು. ನಾವು ನಾವೇ ಹೀಗೆ ಕಾದಾಡಿದರೆ ಲೋಕವೇ ಕೈತಟ್ಟಿ (ಚಪ್ಪಾಳೆ ಗುಟ್ಟಿ) ನಗಲಿಕ್ಕಿಲ್ಲವೆ? (ಗದ್ಯ) ಹಾಗೆ ಹೇಳಿದ ಶ್ರೀಕೃಷ್ಣನ ಮಾತು ಅರ್ಜುನನಿಗೆ ಅರ್ಧ ಎಚ್ಚರವೆಂಬ ತಾವರೆ ಅರಳುವುದಕ್ಕೆ ಸೂರ್ಯನ ಕಿರಣ ತಾಗಿದಂತಾಯಿತು. ವಿಜಯನ ಕೊನೆಯ ಗೆಲವೆಂಬ ಮಹಾ ಅಗ್ನಿಗೆ ತುಪ್ಪವನ್ನು ಹೊಯ್ದ ಹಾಗಾಯಿತು. ಪಾರ್ಥನ ಶೌರ್ಯದ ಹೆಚ್ಚಳವೆಂಬ ಕೆಂಡದ ಬೂದಿಗೆ ಗಾಳಿ ಹೊಡೆದಂತಾಯಿತು. ಧನಂಜಯನ ಸಿಟ್ಟಿನ ಬೆಂಕಿಗೆ ಹತ್ತಿಯ ರಾಶಿಯನ್ನು ಹತ್ತಿಸಿದಂತಾಯಿತು. ಹಾಗೆ ಆಗಿ ಪ್ರತಿಭಟಿಸಿದಾಗ ಅವನು ತಟ್ಟನೆ ಕೊಡವಿ ಎದ್ದು ನಿಂತನು.

೯. ಅರ್ಜುನನು ಈಗ ನೆತ್ತರಿನ ಹೊಳೆಯಲ್ಲಿ ತನ್ನ ಶಕ್ತಿಯಿಂದ ಈಜಾಡುತ್ತ ಕೃಷ್ಣನೊಡನೆ ಹೋರಾಡಲು ಬಂದನೆಂಬಂತೆ, ಅವನು ನೆತ್ತರಿನಿಂದ ಒದ್ದೆಯಾದ ಶರೀರವುಳ್ಳವನೂ ಕೋಪದಿಂದ ಕೆಂಪಾದ ಕಡೆಗಣ್ಣಿನವನೂ ಆಗಿ ತೋರಿದನು.

ಶಾ.ವಿ.॥ ಎದ್ದಾವೇಗಮುಮಂ ಪ್ರಕೋಪದುರಿಯಂ ನೈಷ್ಠೂರ್ಯಮಂ ಕ್ರೌರ್ಯಮಂ ?
ಬದ್ಧದ್ವೇಷದ ದಿಙ್ಮೂಢತೆಯ ರೌದ್ರಾಕಾರಮಂ ಬೀರಮಂ
ವಿದ್ಯುದ್ಧೀರ ಸಮಾವಲೋಕನದ ಗಂಭೀರತ್ವಮಂ ಸತ್ವಮಂ
ದುದ್ದೀಪ್ತಂಗೊಳೆ ಭೀಕರಾಕೃತಿಯನಿನ್ನೇವೇಳ್ದಪಂ ಪೇಳ್ದಪಂ! ॥೧೦॥

ಮ.ವಿ.॥ ಕುಳಶೈಳಂಗಳನೆತ್ತಿ ಕೀಳ್ವನೊ ಮಹಾವಾರಾಶಿಯಂ ಕೋಪದು
ಜ್ವಳನಿಂ ಬತ್ತಿಪನೋ ಮಹೀತಳವ ಪಾಂಸುಪ್ರಾಯಮಂ ಮಾಳ್ಪನೋ
ಜಳಜಾಪ್ತಾದಿಗಳಂ ಪೊರಳ್ಚುವನೊ ದೇವಾನೀಕಮಂ ಸುಟ್ಟು ಕಿ
ರ್ಚಳುರಲ್ ಮಾಳ್ಪನೊ ಕೃಷ್ಣನಂ ಪಿಡಿದು ಮುಕ್ಕಲ್ ಪಾರ್ಥನೇನಿರ್ದನೋ ॥೧೧॥

ನಿಡುಸುಯ್ ಕರ್ಚಿದವುಂಡುಮೆತ್ತಿ ಕಡುಗಂಟಾಗಿರ್ದ ನೀಳ್ಪುರ್ಬು ಮುಂ
ದಡಿಯಿಟ್ಟೆತ್ತಿದ ಕಯ್ಯ ಕೂರಲಗು ಕಾಱುತ್ತಿರ್ಪ ಕಿರ್ಚಿಂಗಳಂ
ಪಡಿಯೆಂದೆಂಬಿನಮಿಟ್ಟ ದಿಟ್ಟಿಗಳಿನೆಯ್ದೇಳ್ಪಿಂಗಳಂ ಪೆರ್ಚಲಾ
ಬಿಡುಗಣ್ಣರ್ ಗುಡಿಗಟ್ಟೆ ಗೆಂಟಱಿಕೊಲ್ ನಿಂದಂ ಕಾಳೆಗಕ್ಕರ್ಜುನಂ ॥೧೨॥

೧೦. ಅವನ ಸಾಮರ್ಥ್ಯವು ಆ ವೇಳೆಯಲ್ಲಿ ಅವನು ಎದ್ದುಕೊಂಡ ಆತುರವನ್ನೂ ಕೋಪಾಗ್ನಿಯನ್ನೂ ನಿಷ್ಠುರತೆಯನ್ನೂ ಕ್ರೂರತೆಯನ್ನೂ ಬದ್ಧವೈರದಿಂದ ಆದ ದಿಕ್ಕು ತೋಚದ ಸ್ಥಿತಿಯನ್ನೂ ರೌದ್ರಸ್ವರೂಪವನ್ನೂ ವೀರತ್ವವನ್ನೂ ವಿದ್ಯುತ್ತಿನಂತಹ, ಧೀರ ನೋಟದ ಗಂಭೀರತೆಯನ್ನೂ ಇನ್ನಷ್ಟು ಉಜ್ವಗೊಳಿಸಿತು. ಆಗ ಅವನ ಭಯಂಕರವಾದ ರೂಪವನ್ನು ಹೇಳತಕ್ಕವನು ಯಾರೇ ಆದರೂ ಇನ್ನೇನೆಂದು ಬಣ್ಣಿಸುವನೋ!

೧೧. ಈ ಪಾರ್ಥನು ಇನ್ನೇನು, ಅಚಲವೆಂದು ಪ್ರಖ್ಯಾತವಾದ ಕುಲ ಪರ್ವತಗಳನ್ನೇ ಒಂದೊಂದಾಗಿ ಕಿತ್ತುಬಿಡುವನೋ! ತನ್ನ ಕೋಪಾಗ್ನಿಯಿಂದ ಮಹಾಸಾಗರವನ್ನೇ ಬತ್ತಿಸುವನೋ! ಭೂಮಂಡಲವನ್ನು ಧೂಳಾಗಿ ಮಾಡುವನೋ! ಸೂರ್ಯಾದಿ ಗ್ರಹಗಳನ್ನು ನೆಲೆತಪ್ಪಿಸುವನೋ! ದೇವತೆಗಳ ಸಮೂಹವನ್ನು ಸುಟ್ಟು ಬೆಂಕಿ ದಗದಗಿಸುವಂತೆ ಮಾಡುವನೋ! ಕೃಷ್ಣನನ್ನೇ ಹಿಡಿದು ನುಂಗಲಿಕ್ಕಿರುವನೋ! ಎಂಬಂತೆ ಆಗ ತೋರಿತು.

೧೨. ದೀರ್ಘವಾದ ನಿಶ್ವಾಸ, ಕಚ್ಚಿದ ಔಡು, ಮೇಲಕ್ಕೆತ್ತಿ ಗಂಟುಕಟ್ಟಿದ ನೀಳವಾದ ಹುಬ್ಬು, ಮುಂದಕ್ಕೆ ಹೆಜ್ಜೆಯಿಟ್ಟು ಮೇಲಕ್ಕೆತ್ತಿದ ಕೈಯ ಖಡ್ಗ (ಬಾಣ), ಕಾರುವ ಬೆಂಕಿ ಕೆಂಡವೆಂಬಂತಿರುವ ದೃಷ್ಟಿಯ ನೋಟದಿಂದ ಏಳುವ ಕೆಂಡ – ಇವು ಬಲು ಹೆಚ್ಚಾಗಿ ಕಾಣಿಸಿದವು. ಆಗ ಬಿಡುಗಣ್ಣರಾದ ದೇವತೆಗಳು ದೂರದಲ್ಲಿ ಗುಂಪಾಗಿ ನಿಲ್ಲಲು ಅರ್ಜುನನು ಕೃಷ್ಣನೊಡನೆ ಕಾದಾಡಲು ಸಜ್ಜಾದನು.

ಕಂದ॥ ಮಱಿವೊಕ್ಕವನಂ ಕೊಂದನ
ಬಱೆಯೆಲ್ವಂ ಮುಱಿದು ತಱಿದು ಕೆಡುವುವುದೀಗಳ್
ಪೊರೆಯಲ್ಕಾರದ ನಿಜತನು
ವುರಿಹಿಕ್ಕುವುದುಱಿದುದಿನಿತನೇನುಱಿದಪೆನೇ ॥೧೩॥

ಮ.ವಿ.॥ ಘನ ತೇಜೋಯುತನಾದೊಡೇನೆನಗೆ ನಂಟಾಗಿರ್ದೊಡಿನ್ನೇಂ ಸುದ
ರ್ಶನಚಕ್ರಂಬಿಡಿದಿರ್ದೊಡೇಂ ಯದುಕುಲ ಪ್ರಾಕಾರನಾಗಿರ್ದೊಡೇಂ
ವನಜಾಕ್ಷಂ ನಿಜಮಾದೊಡೇಂ ಗಯನನಾಂ ಬಿಟ್ಟಿನ್ನೆಗಂ ಪೊಯ್ದು ಕೊಂ
ದನೆ ನಿನ್ನೀ ಕಡುಗೈದವಕ್ಕೆ ವಿಧಿಪೆಂ ದೋರ್ದಂಡದಿಂ ದಂಡಮಂ ॥೧೪॥

ಕಂದ॥ ನಿನಗುಂಟೆ ಸಮರಧರ್ಮಂ
ನಿನಗೆಲ್ಲಿದೆ ಬೀರದದಟು ಕೈತವಸಂಪ
ನ್ನನೆ ಗಂಡೆರ್ದೆಯೆಲ್ಲಿದೆ ನಿನ
ಗನುವರವೇತರ್ಕೆಯೇಕೆ ಪುಟ್ಟಿದೆಯೆಲವೊ ॥೧೫॥

ಗದ್ಯ॥ ಎಂದಾರ್ದು ದೆಸೆಯೆತ್ತಣ್ಗೂಗಸಮೇತ್ತಣ್ಗೆಂಬಿನಮಸ್ತ್ರಸಂತತಿಯಂ ಕವಿಯಿಸು ತ್ತೀತಂಗಿದು ಸಾಲದೀತನನೀಗಳೆ ಬೀೞ್ಗೆಯಲ್ವೇೞ್ಕುಮೆಂದು ನರಸಿಂಹಂಗೆ ಮುನಿದ ಶರಭಾವತಾರಿಯಂತೆ ನರಂ ಕಱಂ ಮುನಿದಂದಿನಿಂದ್ರಕೀಲದೊಳ್ ತನಗಾ ಮೇರುಧನ್ವನಿತ್ತ ಮಹಾಸ್ತ್ರಮಂ ತೆಗೆದು ಸಿಂಜಿನಿಗೇಱಿಸುವುದುಂ–

೧೩. ಅರ್ಜುನನು ಹೀಗೆಂದುಕೊಂಡನು–ನನಗೀಗ ಉಳಿದಿರುವ ಕಾರ್ಯಗಳು ಎರಡು–ನನ್ನನ್ನು ಮರೆಹೊಕ್ಕ ಗಯನನ್ನು ಕೊಂದವನ ಪಕ್ಕೆಲುಬನ್ನು ಮುರಿದು, ತುಂಡರಿಸಿ ಕೆಡಹುವುದು, ರಕ್ಷಿಸಲಿಕ್ಕಾಗದ ನನ್ನ ದೇಹವನ್ನು ಅಗ್ನಿಗೆ ಆಹುತಿಗೊಳಿಸುವುದು– ಇವನ್ನು ನಾನು ಮಾಡದೆ ಉಳಿಯುವೆನೇ?

೧೪. ನಾನು ಕೆಳಗೆ ಬಿದ್ದಿದ್ದಾಗ ಗಯನನ್ನು ಹೊಡೆದು ಕೊಂದವನೇ, ನೀನು ಅತ್ಯಧಿಕ ತೇಜಸ್ವಿಯಾಗಿದ್ದರೇನಾಯಿತು? ನನಗೆ ನಂಟನಾದರೆ ಇನ್ನೇನು? ಸುದರ್ಶನ ಚಕ್ರಪಾಣಿಯಾದರೇನು? ಯಾದವಸೈನ್ಯದಿಂದ ಆವರಿಸಲ್ಪಟ್ಟವನಾದರೇನು? ಶ್ರೀ ಮಹಾವಿಷ್ಣುವೇ ನಿಜವಾಗಿ ಆದರೂ ಏನು? ನಾನು ಕೆಳಗೆ ಬಿದ್ದಿದ್ದಾಗ ಗಯನನ್ನು ವಧಿಸಿದ ಮೋಸಕ್ಕೆ ನನ್ನ ಬಾಹುದಂಡದಿಂದ ದಂಡನೆಯನ್ನು ವಿಧಿಸದೆ ನಾನಿರೆನು.

೧೫. ಯುದ್ಧದ ನೀತಿ ನಿನಗೆಲ್ಲಿದೆ? ವೀರತ್ವದ ಸಾಮರ್ಥ್ಯ ನಿನಗೆ ಎಲ್ಲಿದೆ? ಮೋಸಗಾರಿಕೆಯೇ ಸಂಪತ್ತಾಗಿ ಇರುವವನೆ, ಗಂಡುಗಲಿತನದ ಎದೆಗಾರಿಕೆ ನಿನಗೆ ಎಲ್ಲಿದೆ? ಅಂತಹ ನಿನಗೆ ಯುದ್ಧಮಾಡುವ ಕೆಲಸವೇಕೆ? ಎಲವೋ ನೀನೇಕೆ ಜನಿಸಿದೆ? (ಗದ್ಯ) ಹೀಗೆ ಬೊಬ್ಬಿರಿದು ದಿಕ್ಕುಗಳೆಲ್ಲಿ, ಆಕಾಶವೆಲ್ಲಿ ಎಂಬಂತೆ ಬಾಣಸಮೂಹವನ್ನು ಪ್ರಯೋಗಿಸಿ ಮುಸುಕಿಸುತ್ತಾ ಈತನಿಗೆ ಇದು ಸಾಲದು, ಈತನನ್ನು ಈಗಲೇ ಬೀಳಿಸಬೇಕು ಎಂದು, ನರಸಿಂಹನ ಮೇಲೆ ಸಿಟ್ಟಾದ ಶರಭಾವತಾರಿಯ ಹಾಗೆ ಅರ್ಜುನನು ಬಹಳವಾಗಿ ಕೋಪಿಸಿದನು. ಹಿಂದಣ ಇಂದ್ರಕೀಲದ ಸಂದರ್ಭದಲ್ಲಿ ತನಗೆ ಪರಮೇಶ್ವರನು ಕೊಟ್ಟಿದ್ದ ಮಹಾಸ್ತ್ರವನ್ನು ತೆಗೆದು ಹೆದೆಗೇರಿಸಿದನು.

ಕಂದ॥ ದೆಸೆ ಚೀರ್ದುದಲ್ಲಿ ಖಗಮೃಗ
ವಿಸರಂ ಬೆರೆದತ್ತು ಗಾಳಿ ತೊಲಗಿತು ಕಟ್ಟುಬ್ಬಸ ಮಾದುದು ಲೋಕಕ್ಕಾ
ಪೊಸ ಅಲಗಂ ತುಡುವಿನಂ ಪೃಥಾಸಂಜಾತಂ ॥೧೬॥

ಮ.ವಿ.॥ ಶಿವನಿತ್ತಸ್ತ್ರದ ಮೇಲ್ಮೆಯೋ ಹರಿಗೆ ಶೈವಾದ್ವೇಷಮೋ ನೋಡೆ ಗಾಂ
ಡಿವಿಗಿರ್ಪುನ್ನತ ಶಕ್ತಿಯೋ ಮಹಿಮೆಯನ್ನೇನೆಂದಪೆಂ ದಿವ್ಯಬಾ
ಣವದಂ ಭರದಿಂದೆಯೊಚ್ಚೊಡುರಿಯಂ ಕಾಱುತ್ತೆ ಶ್ರೀಕೃಷ್ಣನಂ
ತವೆ ತಾಗಿತ್ತಿಳೆಗಾ ಕ್ಷಣಂ ಕೆಡಪಿತಿನ್ನೇನೆಂಬೆನಾ ಕ್ರಾಂತಿಯಂ ॥೧೭॥

ಗದ್ಯ॥ ಅಂತಾ ದೇವಕೀನಂದನಂ ಪಾರ್ಥನ ಸತ್ತ್ವಾಲೋಕನಮಂಗೆಯ್ದು – ಮತ್ತಮರ್ಜುನನಪೂರ್ಣ ಪ್ರತಿಜ್ಞಾಕ್ಷರನಾಗಿರ್ದುದಱಿಂ ತಾನೆ ತನ್ನನಗ್ನಿದೇವಂಗೆ ಸಮರ್ಪಿಸಲ್ ಬಗೆದು ಬಂಡಣದೊಳ್ ಪೋಣರ್ಚಿ ಬಿಟ್ಟ ಭಟರ ಕಯ್ದುಗಳನೊಂದೆಡೆಯೊಟ್ಟಿ ತನ್ನಯೆ ಕೂರಲಗನೊಂದನೊಂದರ್ಕೇ ತಗುಳ್ಚಿ ಕಿರ್ಚಂ ಪಡೆದು ಪೊತ್ತಿಸಿ ಕೆಂಡದ ಕೊಂಡಮನೇರ್ಪಡಿಸುತ್ತಿರೆ – ಯಮನಂದನ–ಭೀಮ – ನಕುಲ – ಸಹದೇವರುಮಿತರ ಗಂಧರ್ವನಿವಹ ಮುಂದಱಿಯದೆ ಮಿಡುಕುತ್ತಿರೆ – ಒಂದೆಡೆಯೊಳಾ ಹರಿಗೆ ಯಾದವ ಭಿಷಗ್ವರರ್ ಚಿಕಿತ್ಸಾಶುಶ್ರೂಷೆಯಂ ಬಗೆಯಱಿದು ಮಾಡುತ್ತಿರೆ – ದೇವತೆಗಳ ತಿಂತಿಣಿಯುಂ ಲೋಕಭವಿತವ್ಯಮಂ ಚಿಂತಿಸುತ್ತಭವಂಗೆ ಮೊಱೆಯಿಡುತ್ತಿರೆ – ಎತ್ತೆತ್ತಲುಂ ಹಾಹಾಕಾರಮೊರ್ಮೊದಲೆ ಪೆರ್ಚುತ್ತಿರೆ – ಭೂಮಾತೆ ಕಾಣಿಸಿಕೊಳುತೆಯ್ತಂದು ವಾಸವಾತ್ಮಜನಿಂ ಕೆಡೆದ ವಾಸುದೇವನಂ ನೀಡುಂನೋಡಿ ಪಳಯಿಸುತಿರ್ದಳದೆಂತೆನೆ–

೧೬. ಪಾರ್ಥನು ಆ ಹೊಸತಾದ ಬಾಣವನ್ನೇ ಬಿಲ್ಲಿಗೆ ಜೋಡಿಸಿದಾಗ ದಿಕ್ಕುಗಳು ಚೀರಿದವು. ಪಕ್ಷಿಗಳೂ ಮೃಗಗಳೂ ಬೆದರಿಂತಾದವು. ಗಾಳಿ ಸ್ತಬ್ಧವಾಯಿತು. ಲೋಕಕ್ಕೆ ಉಸಿರುಗಟ್ಟುವಂತಾಯಿತು!

೧೭. ಆ ಪರಮೇಶ್ವರನು ಅರ್ಜುನನಿಗೆ ಕೊಟ್ಟಿದ್ದ ಅಸ್ತ್ರದ ಮಹತ್ತ್ವವೋ! ಕೃಷ್ಣನಿಗೆ ಶಿವನ ಮೇಲಣ ಪ್ರೀತಿಯೋ! ನೋಡಿದರೆ ಅರ್ಜುನನಿಗೆ ಇರತಕ್ಕ ಮೇಲ್ಮಟ್ಟದ ಶಕ್ತಿಯೋ! – ಆ ಮಹಿಮೆಯನ್ನು ಏನೆನ್ನಲಿ! ಅರ್ಜುನನು ಆ ದಿವ್ಯಾಸ್ತ್ರವನ್ನು ವೇಗದಿಂದ ಪ್ರಯೋಗಿಸಿದಾಗ ಅದು ಬೆಂಕಿಯ ಕಿಡಿಗಳನ್ನು ಕಾರುತ್ತ ಶ್ರೀಕೃಷ್ಣನಿಗೆ ಚೆನ್ನಾಗಿ ತಗಲಿತು. ಅವನನ್ನು ನೆಲಕ್ಕೆ ಕೂಡಲೇ ಬೀಳಿಸಿತು. ಆ ಕ್ರಾಂತಿ (ಬದಲಾವಣೆಯ ಸ್ಥಿತಿ)ಯನ್ನು ಏನೆನ್ನಲಿ! (ಗದ್ಯ) ಅಂತೂ ಆ ಶ್ರೀಕೃಷ್ಣನು ಅರ್ಜುನನ ಸತ್ತ್ವಾಲೋಕನವನ್ನು (ಶಕ್ತಿ ಪರೀಕ್ಷೆಯನ್ನು) ಮಾಡಿ, ಅನಂತರ–ಅರ್ಜುನನು ತನ್ನ ಪ್ರತಿಜ್ಞೆಯನ್ನು ಈಡೇರಿಸಲಾರದವನಾದುದರಿಂದ, ತಾನೇ ತನ್ನನ್ನು ಅಗ್ನಿದೇವನಿಗೆ ಸಮರ್ಪಿಸಲು ಯೋಚಿಸಿದನು. ಯುದ್ಧದಲ್ಲಿ ಕಾದಾಡಿ ಬಿದ್ದ ಯೋಧರ ಆಯುಧಗಳನ್ನು ಒಂದೆಡೆ ರಾಶಿ ಹಾಕಿ ತನ್ನದೇ ಆದ ಹರಿತವಾದ ಬಾಣಗಳನ್ನು ಒಂದನ್ನೊಂದಕ್ಕೆ ತಿಕ್ಕಿ ಬೆಂಕಿಯನ್ನು ಉಂಟು ಮಾಡಿ ಹೊತ್ತಿಸಿ, ಕೆಂಡದ ಕುಂಡವನ್ನೇರ್ಪಡಿಸುತ್ತಿದ್ದನು. ಆಗ ಧರ್ಮರಾಯ, ಭೀಮ, ನಕುಲ ಸಹದೇವರೂ ಇತರ ಗಂಧರ್ವಸಮೂಹವೂ ಮುಂದೇನು ಮಾಡುವುದೆಂದರಿಯದೆ ಮಿಡುಕುತ್ತಿದ್ದರು. ಒಂದೆಡೆಯಲ್ಲಿ ಯಾದವರ ಕಡೆಯ ವೈದ್ಯರು ಕೃಷ್ಣನಿಗೆ ಚಿಕಿತ್ಸೆ ಶುಶ್ರೂಷೆಗಳನ್ನು ಸರಿಯಾಗಿ ತಿಳಿದು ಮಾಡುತ್ತಿದ್ದರು.

ಕಂದ॥ ದುರುಳರ ನಾಶಕ್ಕೆ ಸುಜನರ
ಪರಿಪಾಲನೆಗಱಿನ ಪೆರ್ಚುಗೆಗೆ ಹರಿ ನೀಂ ಪು
ಟ್ಟಿರೆ ಪಣ್ಗೆಡುತಿರೆ ಮರನೇ
ಮುಱಿದಂತಿರೆ ನರನ ಕರದ ಶರದಿಂ ಬಿಟ್ಟಿಯ್ ॥೧೮॥

ಚಂ.ಮಾ.॥ಸಿಸುತನದಿಂ ಮೊದಲ್ಗೊಳು ತೆನೀಂ ರವಿಯಂತೆತಪೋವಿನಾಶವ
ನ್ನೆಸಗಿದೆ ಭಾರರಪ್ಪರೊಳರಿನ್ನದಱೆಂದರೆಗಜ್ಜಮಾದುದಾ
ಗಸದೆ ಮುಗಿಲ್ ಮುಸುಂಕೆ ರವಿಬಿಂಬವನಾಗಲೆ ಕತ್ತಲೆತ್ತಲುಂ
ಮುಸುಕದೆ? ದುಷ್ಟರುಂ ಮಸಗರೇ ನಿನಗೆಟ್ಟಿಱುವಂತುಟಾಗದೇ ॥೧೯॥

ಉ.ಮಾ.॥ನಟ್ಟಿರುಳೆಮ್ಮನೊಯ್ದು ವನಮಧ್ಯದೆ ಬಿಟ್ಟೆಯೊ ವಾರ್ಧಿಮಧ್ಯದೊಳ್
ತೊಟ್ಟನೆ ಲೋಕಜೀವನದ ನೌಕೆಯನಟ್ಟಿದೆಯೋ ಬಳಾರಿ ಕ
ಣ್ಗಟ್ಟಿಯೆ ತಿರ್ರನೆಯ್ದೆ ತಿಱುಪುತ್ತೆ ಬಿಸುಟ್ಟೆಯದೇಕೆ ಸರ್ವರುಂ
ಕಟ್ಟಲಿಲಿಂದೆ ಮುಂದಱೆಯದಿರ್ಪಿನಮೇಂ ನುಡಿದೇನ ಮಾಟ್ಪೆನೋ ॥೨೦॥

ದೇವತೆಗಳ ಸಂದಣಿ ಲೋಕದ ಭವಿಷ್ಯ ಸಂಗತಿಯನ್ನು ಚಿಂತಿಸುತ್ತ ಶಿವನಿಗೆ ಮೊರೆಯಿಡುತ್ತಿದ್ದರು. ಎಲ್ಲೆಡೆಯೂ ಒಂದೇ ಸವನೆ ಹಾಹಾಕಾರ ಹೆಚ್ಚಾಗುತ್ತಿದ್ದಿತು. ಆಗ ಅಲ್ಲಿ ಭೂಮಾತೆ ಕಾಣಿಸಿಕೊಂಡು ಬಂದು–ಅರ್ಜುನನ ಹೊಡೆತದಿಂದ ಬಿದ್ದಿದ್ದ ಶ್ರೀಕೃಷ್ಣನನ್ನು ಉದ್ದಕ್ಕೂ (ಹೆಚ್ಚು ಹೊತ್ತು) ನೋಡಿ ಪ್ರಳಾಪಿಸುತ್ತಿದ್ದಳು. ಅದು ಹೇಗೆಂದರೆ –

೧೮. ಎಲೈ ಶ್ರೀಹರಿಯೇ, ನೀನು ದುಷ್ಟರ ನಾಶಕ್ಕಾಗಿಯೂ ಶಿಷ್ಟರ ಪಾಲನೆಗಾಗಿಯೂ ಧರ್ಮದ ಉದ್ಧಾರಕ್ಕಾಗಿಯೂ ಜನಿಸಿರುತ್ತೀ. ಹೀಗಿರುವಾಗ ಹಣ್ಣನ್ನು ಕೊಡುವ ಮರವೇ ಮುರಿದ ಹಾಗೆ, ಅರ್ಜುನನ ಕೈಯ ಬಾಣದ ಹೊಡೆತದಿಂದ ಬಿದ್ದೆಯಾ!

೧೯. ನೀನು ಶೈಶವದಿಂದಲೇ ಸೂರ್ಯನಂತೆ ತಮವನ್ನು (ಕತ್ತಲೆಯನ್ನು, ತಮೋಗುಣದ ರಾಕ್ಷಸರನ್ನು) ನಾಶ ಮಾಡಿರುತ್ತೀ. ನನಗೆ ಭಾರರಾಗತಕ್ಕವರು ಇನ್ನೂ ಇದ್ದಾರೆ. ಆದುದರಿಂದ ನಿನ್ನದು ಈಗ ಆದುದು ಅರೆಗೆಲಸ. ಸೂರ್ಯಬಿಂಬವನ್ನು ಆಕಾಶದಲ್ಲಿ ಮುಗಿಲು ಮುಸುಕಿದರೆ, ಎಲ್ಲೆಡೆಯೂ ಪ್ರಕಾಶಹೀನತೆ ಉಂಟಾಗದಿರುವುದೆ? ಹಾಗೆಯೇ ದುಷ್ಟರು ವಿಜೃಂಭಿಸದೆ ಇರುವರೇ? ನಿನಗೀಗ ಎಚ್ಚರವಾಗುವಂತೆ ಆಗದೇ?

೨೦. ಎಲೈ ದೈತ್ಯಾರಿಯೇ, ನಮ್ಮನ್ನು ನೀನು ಮಧ್ಯರಾತ್ರಿಯಲ್ಲಿ ಒಯ್ದು ಕಾಡಿನ ನಡುವೆ ಬಿಟ್ಟೆಯಾ? ಲೋಕದ ಜೀವನವೆಂಬ ನೌಕೆಯನ್ನು ನಡೆಸುತ್ತಾ ಸಮುದ್ರದ ಮಧ್ಯದಲ್ಲಿ ಮುಳುಗಿಸಿದೆಯಾ? ನಮ್ಮ ಕಣ್ಣಿಗೆ ಬಟ್ಟೆ ಕಟ್ಟಿ ತಿರ್ರನೆ ತಿರುಗಿಸಿ ಏಕೆ ಬಿಟ್ಟಿರುವೆ? ಈಗ ಎಲ್ಲರೂ ಅತ್ಯಂತ ದುಃಖದಿಂದ ಮುಂದೇನು ಮಾಡುವುದೆಂದರಿಯದಿದ್ದಾರೆ ! ನಾನೀಗ ಏನು ಹೇಳಿ ಏನು ಮಾಡುವೆನೋ!

ಕಂದ॥ ಪಲವಾಡಿ ಬೀೞ್ವ ಮಕ್ಕಳ
ವೊಲೆ ಸತ್ತ್ವಾಲೋಕನಕ್ಕೆ ಕಯ್ಯಿಕ್ಕುತ್ತುಂ
ನೆಲದೊಳ್ ಬಿಟ್ಟಿನ್ನುಂ ನೀ
ನೊಲವಿಂದೇಕೇೞೆ ಕೇಳೆ ಮಾತನದೇಕೋ ॥೨೧॥

ನಂದಂ ಕರೆವಂ ಗೋಪಿಕೆ
ಕಂದಾ ಬಾ ಪಾಲಿದೆಂಬಳದೊ ಪೆತ್ತಾ ತಾ
ಯ್ತಂದೆಗಳುಱೆ ಕೋೞ್ಗುದಿವರ್
ಬಂಧನದಿಂ ಬಿಡಿಸೆನುತ್ತೆ ಕೇಳೆಯೊ ಮೊಱೆಯಂ ॥೨೨॥

ಆನಱಿಯದ ಮಾನವರನು
ಮಾನಿಸದ ಚತುರ್ಮುಖಂ ನಿಯೋಜಿಸದೊಂದಿಂ
ತೀ ನಿಯತಿಯಾದುದೆನಲಾ
ನೇನೆಂಬೆಂ ಶಿವನನುೞಿಯೆ ಗತಿಮತಿಯೊಳವೇ ॥೨೩॥

ಗದ್ಯ॥ ಎಂದಾಗಳಾ ಗೋಮಿನೀದೇವಿ ಸದಾಶಿವನುಂ ಮೃತ್ಯುಂಜಯನುಮಾದ ಪರಮೇಶ್ವರನಂ ಪ್ರಾರ್ಥಿಸಲೊಡರ್ಚಲೊಡನಲ್ಲಿರ್ದ ಮಾನವರುಂ ಗಂಧರ್ವರುಂ ಕಿನ್ನರದೇವತಾಗಣಂಗಳು ಮಭವಂಗೆ ಬದ್ಧಾಂಜಲಿಮುಕುಳೈಕಮನಸ್ಕರಾಗಿ ಸರ್ವಸಂಕಟಮಂ ಪರಿಹರಿಪುದೆಂದಾ ವಿಷಧರನಂ ಬಿಡದೆ ಬೇಡುತ್ತಿರ್ದಾಗಳ್ –.

೨೧. ಹಲವು ಆಟಗಳನ್ನಾಡಿ ಬೀಳುವ ಮಕ್ಕಳಂತೆ ಸತ್ತ್ವಾಲೋಕನಕ್ಕೆ (ಅರ್ಜುನನ ಸತ್ತ್ವ ಪರೀಕ್ಷೆಗೆ) ಕೈಯಿಕ್ಕುತ್ತ ನೆಲದಲ್ಲಿ ಬಿದ್ದು, ನಮ್ಮ ಮೇಲಣ ಪ್ರೀತಿಯಿಂದ ಇನ್ನಾದರೂ ಏಕೆ ಏಳುವುದಿಲ್ಲ? ಮಾತನ್ನೇಕೆ ಕೇಳುವುದಿಲ್ಲ?

೨೨. ಸಾಕುತಂದೆಯಾದ ನಂದಗೋಪನು ನಿನ್ನನ್ನು ಕರೆಯುತ್ತಿದ್ದಾನೆ. ಗೋಪಿಯ ಮಗನೇ? ಬಾ. ಇಗೋ ನಿನಗಿಲ್ಲಿ ಹಾಲು ಇದೆ–ಎನ್ನುತ್ತಿದಾಳೆ. ನಿನ್ನನ್ನು ಹೆತ್ತ ತಾಯ್ತಂದೆಗಳು ಬಹಳವಾಗಿ ಸಂತಾಪದಲ್ಲಿದ್ದಾರೆ–" ನಮ್ಮನ್ನು ಬಂಧನದಿಂದ ಬಿಡಿಸು" ಎನ್ನುತ್ತಿದ್ದಾರೆ. ಅವರ ಮೊರೆ ನಿನಗೆ ಕೇಳಿಸುವುದಿಲ್ಲವೆ?

೨೩. ನಾನು ತಿಳಿಯದಂತಹ, ಮನುಷ್ಯರು ಊಹಿಸದಂತಹ, ಸೃಷ್ಟಿಕರ್ತನಾದ ಬ್ರಹ್ಮನು ನಿಯಮಿಸದಂತಹ ಅದೊಂದು ಅದೃಷ್ಟ ಸಂಗತಿಯಾಯಿತು–ಎನ್ನುವುದಾದರೆ ನಾನೇನೆನ್ನಲಿ? ಶಿವನನ್ನು ಉಳಿದು ಗತಿಯೂ ಇಲ್ಲ, ಮತಿಯೂ ಇಲ್ಲ ಎಂಬಂತಾಯಿತಲ್ಲ! (ಗದ್ಯ) ಹೀಗೆಂದು ಆ ಭೂಮಾತೆಯು ಸದಾಶಿವನೂ (ಯಾವಾಗಲೂ ಮಂಗಳಕರನೂ), ಮೃತ್ಯುವನ್ನು ಜಯಿಸಿದವನೂ ಆದ ಪರಮೇಶ್ವರನನ್ನು ಪ್ರಾರ್ಥಿಸತೊಡಗಿದಳು. ಆಗ ಅಲ್ಲಿದ್ದ ಮನುಷ್ಯರೂ ಗಂಧರ್ವರೂ ಕಿನ್ನರರ ಮತ್ತು ದೇವತೆಗಳ ಗಣಗಳೂ ಶಿವನಿಗೆ ಕೈಮುಗಿದು ಏಕಮನಸ್ಸಿನವರಾಗಿ ಸಕಲ ಸಂಕಷ್ಟಗಳನ್ನೂ ಪರಿಹರಿಸುವಂತೆ ವಿಷಧರನನ್ನು ಬೇಡುತ್ತಿದ್ದರು. ಆಗ ಏನಾದುದೆಂದರೆ –

ಕಂದ॥ ಮತ್ತೇಂ ಸೆಱಿವಱಿಯುತೆ ಮೆ
ಯ್ವೆತ್ತಂಶುವೊ ಸೋರಿ ಬಿಟ್ಟಿ ಬಹುರಾಶಿಯ ವಿ
ದ್ಯುತ್ತೋ ಎನೆ ಮೂಡಿದುದು
ದ್ಯತ್ತೇಜೋರಾಶಿಯಲ್ಲಿ ಕಣ್ಣುಳ್ಕುವಿನಂ ॥೨೪॥

ಮ.ವಿ. ಪ್ರಮಥರ್ಕಳ್ ಗಣವೇಶದಿಂ ನೆರೆದು ಸಾಲ್‌ಸಾಲೊಳ್ ಸಮಾನಾಂತರ
ಕ್ರಮದಿಂ ಸಾಯುಧರಾಗಿ ರಂಜಿಸುವಿನಂ ವಿದ್ಯಾಧರಾದಿತ್ಯಸಂ
ಯಮಸಂದೋಹಮುಮೊಂದಿ ಸಜ್ಜನಚಯಂ ರಾರಾಜಿಸುತ್ತಿರ್ಪಿನಂ
ರಮಣೀಯ ಸ್ತವಗಾನಮೇಂ ಮಸಗಿತ್ತೋ ಶ್ರೀಪಾರ್ವತೀನಾಥನಾ ॥೨೫॥

ಕಂದ॥ ಶಿವನ ಗುಣಕೀರ್ತನವನೆಸ
ಗುವೆನೆಂದೆನಲರಿದು ಬಾಣಿಯಂ ಬರಿಸಿದೊಡಂ
ತವೆ ನಾಲ್ಮೊಗವಡೆದೊಡಮೆಂ
ದೆವೆಯಿಕ್ಕದೆ ನುತಿಸುತಿರ್ದನಾ ಕಮಲಭವಂ ॥೨೬॥

೨೪. ಮತ್ತೆ ಏನು? ಸೆರೆಯನ್ನು ಹರಿದು ಕಾಣಿಸಿಕೊಂಡ ಪ್ರಕಾಶವೋ, ಸೋರಿ ಕೆಳಗೆ ಬಿದ್ದ ಬಹುರಾಶಿಯಾಗುಳ್ಳ ವಿದ್ಯುತ್ತೋ, ಎಂಬಂತೆ ಒಂದು ಅತ್ಯಧಿಕ ತೇಜೋರಾಶಿ ಅಲ್ಲಿ ಮೂಡಿತು. ಆಗ ಕಣ್ಣು ಕೋರೈಸುವಂತಾಯಿತು.

೨೫. ಪ್ರಮಥರು ಗಣವೇಶದಿಂದ ಕೂಡಿ ಗುಂಪಾಗಿ ಸಾಲುಸಾಲಾಗಿ ಸಮಾನಾಂತರವುಳ್ಳವರಾಗಿ ಆಯುಧಸಹಿತರಾಗಿ ರಂಜಿಸುತ್ತಿರಲು, ವಿದ್ಯಾಧರರು, ಆದಿತ್ಯರು, ಋಷಿಗಳು – ಇವರ ಸಮೂಹವೂ ಸೇರಿದ್ದು ಸಜ್ಜನರ ಸಂದೋಹವು ಶೋಭಾಯಮಾನವಾಗಿರಲು ಶ್ರೀಪಾರ್ವತಿಪತಿಯನ್ನು ಸ್ತುತಿಸಿ ಕೀರ್ತಿಸುವ ಗಾನ ಮನೋಹರವಾಯಿತು.

೨೬. ಆಗ ಅಲ್ಲಿ ಕಮಲೋದ್ಭವನಾದ ಬ್ರಹ್ಮನು ತಾನು ವಾಗ್ದೇವಿಯನ್ನು ವರಿಸಿದವನಾದರೂ ನಾಲ್ಕು ಮುಖಗಳನ್ನುಳ್ಳವನಾಗಿದ್ದರೂ ಶಿವನ ಗುಣಕೀರ್ತನವನ್ನು ಸರಿಯಾಗಿ ಮಾಡಲು ಸಾಧ್ಯವಿಲ್ಲದವನಾಗಿದ್ದೇನೆ ಎಂದು ಕಣ್ಣೆವೆ ತೆರೆದುಕೊಂಡೇ ಶಿವಸ್ತುತಿ ಮಾಡುತ್ತಿದ್ದನು.

ಮ.ಸಂ. ||ಗಿರಿಜಾತೋಪೇತನುಂ ಷಣ್ಮುಖ ಗಣಪತಿಸಂಯುಕ್ತನುಂ ವಾರಣತ್ವಕ್
ಪರಿಧಾನಂ ವ್ಯೋಮಕೇಶಂ ಶಶಿದಿವಿಜನದೀಶೇಖರಂ ಭೋಗಿಭೂಷಂ
ಸುರುಚಿವ್ಯಾಪ್ತಾಖಿಳಾಶಾವಳಯನಮಿತ ಭಸ್ಮಾಂಗಶೃಂಗಾರನಾದ್ಯಂ
ಪರಮೇಶಂ ಮೃತ್ಯುನಾಶಂ ನಿರವಧಿಕರುಣಂ ತೋರ್ದನಾ ಭಕ್ತಪೋಷಂ ||೨೭||

ಗದ್ಯ|| ಅಂತು ತೋರ್ದು ಬಂದು ನಿಂದಲ್ಲಿ ಬಿಟ್ಟಾ ದೇವಕೀನಂದನನನೆತ್ತಿಯುಂ – ಶಿರವಱಿದುರುಳ್ದ ಗಯನಂ ಸಚೇತನನಂ ಮಾಡಿಯುಂ – ಹವ್ಯವಾಹನಂ ಬಲವರ್ಪ್ಪ ಸವ್ಯಸಾಚಿಯಂ ಕಯ್ಪಿಡಿದು ತಡೆದುಂ – ಕೃಪಾಕಟಾಕ್ಷವಿಕ್ಷೇಪದಿಂದಾ ಕಾದಾಟದೊಳ್ ಕೆಡೆದ ಪಡೆಯ ವೀರರ್ಗೆ ಪುನಃ ಪ್ರಾಣವಾಯುವಂ ದೊರೆಕೊಳಿಸಿಯುಂ – ಕರುಣಾಸಾಗರಂ ಹರಂ ಹರಿನರರ್ಗಭಿಮುಖನಾಗಿಂತೆಂದಂ–

ಮ.ಸ್ರ ಜಗದೊಳ್ ನಿಮ್ಮಿಂದಮಕ್ಕುಂ ಬಲುತೆಱದ ಮೇಲಪ್ಪ ಕಜ್ಜಂಗಳಂತೀ
ಜಗದೊಳ್ ಸುಕ್ಷೇಮಮುಂ ಶಾಂತಿಯುಮನೃತಮಹಿಂಸಾಗುಣಂ ಪೆರ್ಚಿ ನಿಲ್ಕುಂ
ಮಿಗುವುದ್ಯತ್ ಕ್ಷಾತ್ರತೇಜಂ ಸುಜನಮಹಿತಮಾ ಬ್ರಹ್ಮತೇಜಂ ಕಱಂ ಕೂ
ಡಿ ಘನತ್ವಂದಾಳ್ದು ವಿಶ್ವಂ ಮೆಱೆಗೆ ಭುವನದೊಳ್ ನಿಲ್ಕೆ ಮಾನುಷ್ಯಧರ್ಮಂ ||೨೮||

೨೭. ಆಗ ಅಲ್ಲಿ ಪತ್ನಿಯಾದ ಪಾರ್ವತಿಯಿಂದ ಕೂಡಿದವನೂ ಷಣ್ಮುಖ – ಗಣೇಶ ಒಡವೆರೆದವನೂ ಗಜಚರ್ಮಧಾರಿಯೂ ವ್ಯೋಮಕೇಶನೂ ಚಂದ್ರನನ್ನು ಮತ್ತು ಗಂಗೆಯನ್ನು ತಲೆಯಲ್ಲಿಟ್ಟುಕೊಂಡವನೂ ಸರ್ಪಭೂಷಣನೂ ತನ್ನ ಕಾಂತಿಯಿಂದ ಆವೃತವಾದ ದಿಕ್ಕುಗಳವನೂ ಅತಿಶಯವಾಗಿ ವಿಭೂತಿಲೇಪನ ಮಾಡಿ ಶೃಂಗಾರಗೊಂಡವನೂ ಆದಿಪುರುಷನೂ ಮೃತ್ಯುವನ್ನು ನಾಶಮಾಡಿದವನೂ ಮೇರೆ ಮೀರಿದ ದಯಾಗುಣವುಳ್ಳವನೂ ಭಕ್ತರನ್ನು ಪೋಷಿಸುವವನೂ ಆದ ಶ್ರೀ ಪರಮೇಶ್ವರನು ಪ್ರತ್ಯಕ್ಷನಾದನು.

(ಗದ್ಯ) ಹಾಗೆ ಪ್ರತ್ಯಕ್ಷನಾಗಿ ಬಂದು ನಿಂತು–ಅಲ್ಲಿ ಬಿದ್ದಿದ್ದ ಶ್ರೀಕೃಷ್ಣನನ್ನು ಎತ್ತಿ ನಿಲಿಸಿದನು ತಲೆಗಡಿದು ಬಿದ್ದಿದ್ದ ಗಯನನ್ನು ಚೈತನ್ಯ ಪೂರ್ಣನನ್ನಾಗಿ ಮಾಡಿದನು. ಅಗ್ನಿಗೆ ಪ್ರದಕ್ಷಿಣೆ ಮಾಡುತ್ತಿದ್ದ ಅರ್ಜುನನನ್ನು ಕೈಹಿಡಿದು ಅದಕ್ಕೆ ಬೀಳದಂತೆ ತಡೆದನು– ಯುದ್ಧದಲ್ಲಿ ಕೆಡೆದಿದ್ದ ವೀರರಿಗೆಲ್ಲ ತನ್ನ ಕರುಣೆಯ ಕಡೆಗಣ್ಣ ನೋಟದಿಂದಲೇ ಪುನಃ ಪ್ರಾಣವಾಯುವನ್ನು ದೊರೆಯುವಂತೆ ಮಾಡಿದನು. ಕೃಪಾಸಮುದ್ರನಾದ ಹರನು ಕೃಷ್ಣನಿಗೂ ಅರ್ಜುನನಿಗೂ ಎದುರಾಗಿ ಹೀಗೆಂದನು–

೨೮. ನಿಮ್ಮಿಂದ ಈ ಜಗತ್ತಿನಲ್ಲಿ ಬಹುವಿಧದ ಶ್ರೇಷ್ಠಕಾರ್ಯಗಳು ಆಗಲಿಕ್ಕಿವೆ. ಅದರಿಂದಾಗಿ ಲೋಕದಲ್ಲಿ ಒಳ್ಳೆಯ ಕ್ಷೇಮವೂ ಶಾಂತಿಯೂ ಸತ್ಯವೂ ಅಹಿಂಸಾಗುಣವೂ ಅಭಿವೃದ್ಧಿಗೊಂಡು ನೆಲೆ ನಿಲ್ಲುವವು. ವಿಶೇಷವಾದ ಶ್ರೇಷ್ಠವಾದ ಕ್ಷಾತ್ರತೇಜಸ್ಸು ಮತ್ತು ಸುಜನರಿಂದ ಗೌರವಾರ್ಹವಾದ ಬ್ರಹ್ಮತೇಜಸ್ಸೂ ಚೆನ್ನಾಗಿ ಜತೆಗೂಡಿ ಘನತೆಯನ್ನು ಪಡೆದು ಈ ವಿಶ್ವವು ರಾರಾಜಿಸಲಿ! ಲೋಕದಲ್ಲಿ ಮಾನವಧರ್ಮವು ನೆಲೆಗೊಳ್ಳಲಿ!

ಮ.ವಿ. ಪರರಾಷ್ಟ್ರಂಗಳ ಭೂಪ್ರದೇಶದವಿಭಾಜತ್ವಪ್ರಭುತ್ವಂಗಳಾ
ದರಮುಂ ದಾಳಿಯಗೆಯ್ಯದಿರ್ಪುದೊಳಗಜ್ಜಕರ್ಥರಾಜ್ಯಾದಿನಿ।
ತ್ಯುರುತತ್ತ್ವಂ ತಡೆಯಾಗದಿರ್ಪುದು ಸಮಾನತ್ವಂ ಹಿತಂ ಶಾಂತಿಯಿಂ
ಮೆಱೆವನ್ಯೋನ್ಯತೆ ಶೀಲಪಂಚಕಮಿದೆಲ್ಲಂ ಸ್ನೇಹಸಂಪಾದಿತಂ ॥೨೯॥

ಕಂದ॥ ಕೆಳೆಯೊಂದೆ ಬೇೞ್ಪ ಪುರುಳಾ
ಕೆಳೆನಿಮ್ಮಲ್ಲಗಲದಿರ್ಕೆಯೀ ಕೆಳೆತನಮಂ
ಇಳೆಯಲ್ಲಿ ಸಾರಿ ನಿಚ್ಚಂ
ಬಳೆವಂತೆಸಗುವುದು ಧರ್ಮಮಂ ಶಾಂತಿಯುಮಂ ॥೩೦॥

ಎಲ್ಲೆಲ್ಲಿ ಕಿಸುರ್ ಮೊಳೆತೊಡ
ನಲ್ಲಲ್ಲೆ ಚಿವುಂಟಿ ಸತ್ಯಮಂ ಜನಹಿತಮಂ
ನಿಲ್ಲಿಪುದು ಸಮತೆಯೊಡನಿದೆ
ಸಲ್ಲಕ್ಷಿತ ಕರ್ಮಮಿದೆ ವಲಂ ಸದ್ಧರ್ಮಂ ॥೩೧॥

೨೯. ಈ ಪದ್ಯದಲ್ಲಿ ಲೋಕಕಲ್ಯಾಣಕರವಾದ ಪಂಚಶೀಲಗಳನ್ನು ಹೇಳಲಾಗಿದೆ– ಅನ್ಯರಾಷ್ಟ್ರಗಳ ಭೂಪ್ರದೇಶದ ಅವಿಭಾಜ್ಯತೆ ಮತ್ತು ಒಡೆತನಗಳನ್ನು ಆದರಿಸುವುದು, ಅನ್ಯದೇಶಗಳ ಮೇಲೆ ದಾಳಿ ಮಾಡದಿರುವುದು, ಬೇರೆ ದೇಶಗಳ ಆಂತರಿಕ ವಿಷಯಗಳಿಗೆ ತನ್ನ ಆರ್ಥಿಕ ರಾಜನೈತಿಕ ವಿಚಾರಗಳು ತಡೆಯಾಗದಿರುವುದು, ಸಮಾನತೆ ಮತ್ತು ಹಿತ, ಶಾಂತಿಯಿಂದ ಮೆರೆವ ಅನ್ಯೋನ್ಯತೆ ಎಂಬಿವು ಪಂಚಶೀಲಗಳು. ಇವು ಮಿತ್ರತ್ವದಿಂದ ಬರುತ್ತವೆ.

೩೦. ಗೆಳೆತನ ಎಂಬುದೇ ಅತ್ಯವಶ್ಯವಾದ ಮೂಲಭೂತವಾದ ನೀತಿತತ್ತ್ವದ ಸಾರವಾಗಿದೆ. ಅಂತಹ ಗೆಳೆತನ ನಿಮ್ಮಲ್ಲಿ ಸ್ಥಿರವಾಗಿ ನೆಲಸಿರಲಿ. ಅದನ್ನೇ ಲೋಕದಲ್ಲಿ ಪ್ರಚುರಪಡಿಸಿ, ಸರ್ವರೂ ಕ್ಷೇಮದಲ್ಲಿರುವಂತೆ ಧರ್ಮವನ್ನೂ ಶಾಂತಿಯನ್ನೂ ವೃದ್ಧಿಪಡಿಸಬೇಕು.

೩೧. ಎಲ್ಲಿಯೇ ಆದರೂ ಕಲಹ ಮೊಳೆತರೆ, ಅದನ್ನು ಅಲ್ಲಲ್ಲೇ ಪರಿಹರಿಸಬೇಕು. ಸತ್ಯವನ್ನೂ ಸರ್ವಜನಹಿತವನ್ನೂ ಸಮಾನತೆಯೊಂದಿಗೆ ನೆಲೆನಿಲ್ಲಿಸುವ ಈ ಕಾರ್ಯವು ಒಳ್ಳೆಯದೆಂದು ಲಕ್ಷಿಸಲಾದ ಕರ್ಮವೆನಿಸುತ್ತದೆ. ಇದೇ ನಿಶ್ಚಯವಾಗಿಯೂ ಸದ್ಧರ್ಮ. (ಗದ್ಯ) ಹೀಗೆ ಶ್ರೀಶಿವನು ಎಲ್ಲರಿಗೂ ಆಶೀರ್ವಾದ ಮಾಡಿದನು. ಆಗ ಆ ಶಿವಸಭೆ ತಾನಾಗಿಯೇ ಮಾಯವಾಯಿತು. ಲೋಕಕ್ಕೆ ಆಶ್ಚರ್ಯವೆಂಬಂತೆ–ಗಗನಗಾಮಿಯಾದ ಗಯನು ಅತಿಶಯ ಆನಂದದ ಭಾರದಿಂದ ನಮ್ರ ಮನಸ್ಸಿನವನಾಗಿ ಶ್ರೀಕೃಷ್ಣ –

ಗದ್ಯ॥ ಎಂದೆಲ್ಲರ್ಗಂ ಪರಸುವುದುಮಾ ಶಿವಸಭೆ ತನ್ನಿಂ ತಾನೆ ಬಯಲಾಗುವುದುಂ – ಲೋಕಕಚ್ಚರಿಯಾಗೆ ಖೇಚರನಪ್ಪ ಗಯನನೂನ–ಸಂತೋಷ– ಭರ–ವಿನಮ್ರ ಚೇತನನಾಗಿ ಶ್ರೀಕೃಷ್ಣಾರ್ಜುನಾದಿಗಳ್ಗೆ ಪೊಡೆವಟ್ಟು ನಿರಂತರ ಸ್ಮರಣೀಯಾರ್ಜುನ ಕೃತಕೃತ್ಯತಾ ವಿಚಾರಾ–ವಿಚಾರಾನ್ವಿತಂ ವಿಮಾನಾನ್ವಿತಂ ವಿಯತ್ತಳಕ್ಕೆಯ್ದುವುದುಂ– ಕೌರವನಸೇನಾಪ್ರಮುಖರ್ ಭೀಷ್ಮ ದ್ರೋಣಾದಿಗಳ್ ಹರನುಪದೇಶಂಗೆಯ್ದ ಕೆಳೆಯನೆ ಬಗೆಯೊಳ್ ಬಗೆದು ಪಾಂಡವರ್ ನೇಮಂಬಿಡಿದಜ್ಞಾತವಾಸಮಂ ತೀರ್ಚಿದ ಬಟಿಕ್ಕೀ ಸಂದುಗಜ್ಜದ ಬೆಸುಗೆದಗುಟಿಕ್ಕೆಯಂ ಕೆಯ್ಗೂಡಿಸಲಕ್ಕುಮೆಂದಜೆತು ನಿಶ್ಚಯಿಸಿ ಸಕಲ ಸೇನಾಸಮೇತಂ ಕೌರವನನೊತ್ತಿ ಹಸ್ತಿನಾವತಿಗೆಯ್ದುವುದುಂ – ಪಾಂಡುಪುತ್ರರ್ ಸತ್ಯವ್ರತರುಂ ಕೃತಾರ್ಥರುಮಾಗಿ ಪಿರಿಯರ್ಗೆ ವಿನಮಿಸಿ ಶ್ರೀ ಕೃಷ್ಣ ಬಲರಾಮಾದಿ ಯಾದವರನಾದರಿಸಿ ಕೈಗೊಟ್ಟು ದ್ವಾರಾವತಿಗೆ ಮರುವಯಣಕ್ಕೆ ಬೀಟಿಕ್ಕೊಟ್ಟು ತಮ್ಮ ಕಾಡುವನೆಯನೆಯ್ದಿದರಂದಾ ವೇಳೆಯೊಳ್ –

ಮ.ವಿ. ಕದನಂ ಸಲ್ಲದು ಮಿತ್ರವರ್ತನಮೆ ಲೇಸಾಗಿರ್ದೊಡಂ ಯೋಗದಿಂ
ದೊದಗಿತ್ತಾದೊಡತೀತಮೀ ಕತದೆ ನಷ್ಟಪ್ರಾಣಮಿಲ್ಲಂ ವಿರೋ
ಧದ ಭಾವಂ ಬಳೆದಿಲ್ಲ ಶಾಂತಿಗೆಜಿಟಿವಟ್ಟುಂ ಪ್ರೇಮ ಸಂದೇಶಮುಂ
ಪುದುಗೊಂಡಿರ್ಪುದು ಕೂಡಿ ಬಾಳಲೆನುತುಂ ಕೊಂಡಾಡಿದರ್ ಸಗ್ಗಿಗರ್ ॥೩೨॥

ಅರ್ಜುನ ಮುಂತಾದವರಿಗೆ ನಮಸ್ಕಾರವನ್ನೆಸಗಿ ಎಂದಿಗೂ ಮರೆಯದ ಕೃತಕೃತ್ಯತೆಯನ್ನು ಅರ್ಜುನನ ಮೇಲೆ ತಾಳಿದವನಾಗಿ ಎಲ್ಲಾ ವಿಮಾನಗಳ ಸಮೇತ ಆಕಾಶದೆಡೆಗೆ ತೆರಳಿದನು. ಕೌರವಸೈನ್ಯದ ಮುಖ್ಯಸ್ಥರಾದ ಭೀಷ್ಮ ದ್ರೋಣ ಮುಂತಾದವರು ಶಿವನು ಉಪದೇಶಿಸಿದ ಗೆಳೆತನವನ್ನೇ ಮನಸ್ಸಿನಲ್ಲಿ ಭಾವಿಸುತ್ತ–ಮುಂದೆ ಪಾಂಡವರು ನಿಯಮದಂತೆ ಅಜ್ಞಾತವಾಸವನ್ನು ಮುಗಿಸಿದ ಮೇಲೆ, ಕೌರವ ಪಾಂಡವರೊಳಗಣ ಸಂಧಾನವನ್ನು ಕೈಗೂಡಿಸಬಹುದೆಂದು ತಿಳಿದು ನಿಶ್ಚಯಿಸಿ ಎಲ್ಲಾ ಸೈನ್ಯ ಸಹಿತ, ಕೌರವನನ್ನು ಒತ್ತಾಯಿಸಿ, ಹಸ್ತಿನಾವತಿಗೆ ತೆರಳಿದರು. ಪಾಂಡವರು ಸತ್ಯವ್ರತರೂ ಧನ್ಯರೂ ಆಗಿ ಹಿರಿಯರಿಗೆ ನಮಸ್ಕರಿಸಿ, ಶ್ರೀಕೃಷ್ಣ – ಬಲರಾಮ ಮುಂತಾದ ಯಾದವರನ್ನು ಆಧರಿಸಿ ಹಸ್ತಲಾಘವ ಮಾಡಿ, ದ್ವಾರಾವತಿಗೆ ಹಿಂದೆರಳಲು ಬೀಳ್ಕೊಟ್ಟು ತಮ್ಮ ವನವಾಸದ ಕುಟೀರಕ್ಕೆ ತೆರಳಿದರು.

೩೨. ಇವೆಲ್ಲವನ್ನೂ ಆಕಾಶದಲ್ಲಿ ದೂರದಿಂದ ನಿರೀಕ್ಷಿಸುತ್ತಿದ್ದ ದೇವತೆಗಳು ಹೀಗೆಂದು ಕೊಂಡರು – ಯುದ್ಧವು ತಕ್ಕುದಲ್ಲ, ಗೆಳೆತನದ ನಡತೆಯೇ ಲೇಸು. ಆದರೂ ದೈವಯೋಗದಿಂದ ಒದಗಿತಾದರೆ ಮೀರಲಾಗುವುದಿಲ್ಲ. ಪ್ರಕೃತ ಈ ಕಾರಣದಿಂದ ಇಲ್ಲಿ (ಕೃಷ್ಣಾರ್ಜುನರ ಕಾಳಗದಲ್ಲಿ) ಪ್ರಾಣಹಾನಿಯಾಗಿಲ್ಲ. ವೈರಭಾವನೆಯೂ ಹೆಚ್ಚಾಗಿಲ್ಲ. ಶಾಂತಿಗೆ ಆಶ್ರಯವೂ ಪ್ರೇಮದ ಸಂದೇಶವೂ ಸೇರಿ ಕೊಂಡಿರುವುದು. ಇದು ಒಂದುಗೂಡಿ ಜೀವಿಸಲು ಅನುಕೂಲ – ಎಂದು ದೇವತೆಗಳು ಕೊಂಡಾಡಿದರು.

ಕಂದ॥ ಇದು ಕೃಷ್ಣನದಿದು ಪಾರ್ಥನ
ದಿದು ಕವಿಕೇಶವನದೆನಿಸಿ ಸತ್ತ್ವಾಲೋಕಾ
ಸ್ಪದ ಸತ್ತ್ವಾಲೋಕನ ಕಾ
ವ್ಯದ ವಿಸ್ತೃತಿಯಾಯ್ತು ಕಾಣ್ಕೆ ಕನ್ನಡಕೀಗಳ್ ॥೩೩॥

ಮ.ವಿ. ಬೆಳಕಿತ್ತರ್ ಕವಿಪಂಪರನ್ನ ವರರುದ್ರಾಂಡಯ್ಯ ಮುಂತಾದವರ್
ವಿಳಸತ್ ಕಾವ್ಯಸುರತ್ನದೀಪತತಿಯಿಂ ಸಾಹಿತ್ಯ ಸುಕ್ಷೇತ್ರದೊಳ್
ತೊಳಗಲ್ಕೀ ಪೊಸಗಬ್ಬಮಂ ಪಣತೆಯೊಂದಂ ಪೊತ್ತಿಸಲ್ಕಾರ್ತೆನಾಂ
ತಿಳಿಯೆಂ ಮಾಟ್ಪುದೊ ಮಾಡದೊ ಬೆಳಕನೀ ಕರ್ತವ್ಯಮಂ ಮಾಡಿದೆಂ ॥೩೪॥

ಶಾ.ವಿ. ಪದವಾಕ್ಯಾನುಗ ಭಾವಬಂಧುರ ರಸಾಲಂಕಾರದಿಂ ರೀತಿಸಂ
ಪದದಿಂ ಪಂಡಿತರುಂ ವಿನೇಯಗುಣವಿದ್ಯಾರ್ಥಿವ್ರಜಂ ಮೆಚ್ಚೆ ಸ
ತ್ಯದ ಸಾಮರ್ಥ್ಯದ ವಸ್ತು ಪಾತ್ರಕಥನಂ ಸನ್ಮಾರ್ಗಮಂ ತೋರೆ ನೇ
ಹದೆ ಬಾಂಧವ್ಯದೆ ಬಾಳ್ವ ಮಾನವತೆಯಂ ಕಾಣ್ಗೆಲ್ಲರೀ ಕಾವ್ಯದೊಳ್ ॥೩೫॥

೩೩. ಇದು ಶ್ರೀಕೃಷ್ಣನದು, ಇದು ಅರ್ಜುನನದು, ಇದು ಕವಿಕೇಶವನದು– ಹೀಗೆ ಮೂವರ ಸತ್ತ್ವಾಲೋಕನಕ್ಕೆ ಆಶ್ರಯವಾಗಿರುವ ಸತ್ತ್ವಾಲೋಕನಕಾವ್ಯದ ವಿಸ್ತರಣವಾಗಿದೆ. ಇದು ಕನ್ನಡಕ್ಕೆ ಕಾಣಿಕೆಯಾಗಿದೆ. (ಆಲೋಕನ = ನೋಡುವಿಕೆ, ಪ್ರಕಾಶನ).

೩೪. ಮಹಾಕವಿಗಳಾದ ಪಂಪ, ರನ್ನ, ರುದ್ರಭಟ್ಟ, ಆಂಡಯ್ಯ ಮುಂತಾದವರು ತಮ್ಮ ಶೋಭಾಯಮಾನ ಕಾವ್ಯಗಳೆಂಬ ರತ್ನದೀಪಸಮೂಹದಿಂದ ಸಾಹಿತ್ಯ ಕ್ಷೇತ್ರದಲ್ಲಿ ಒಳ್ಳೆಯ ಬೆಳಕನ್ನು ಉಂಟು ಮಾಡಿದ್ದಾರೆ. ಅನಂತರ ಈಗ ನಾನು ಹೊಸತಾದ ಒಂದು ಕಾವ್ಯವೆಂಬ ಹಣತೆಯನ್ನು ಹೊತ್ತಿಸಲು ಸಮರ್ಥನಾದೆನು. ಇದು ಬೆಳಕು ನೀಡುವುದೋ, ನೀಡದೋ – ಎಂಬುದನ್ನು ನಾನರಿಯೆನು. ಹಣತೆಯನ್ನು ಉರಿಸುವ ರೀತಿಯ ನನ್ನ ಕರ್ತವ್ಯವನ್ನು ಮಾತ್ರ ಮಾಡಿರುತ್ತೇನೆ.

೩೫. ಪದ ವಾಕ್ಯವನ್ನು ಅನುಸರಿಸುವ ಭಾವಬಂಧುರತೆ ರಸ–ಅಲಂಕಾರ–ಶೈಲಿಗಳಿಂದ ಪಂಡಿತರೂ, ವಿನಯಶೀಲರಾದ ವಿದ್ಯಾರ್ಥಿವೃಂದವೂ ಮೆಚ್ಚುವಂತಾಗಲಿ. ಸತ್ಯ ಸಾಮರ್ಥ್ಯದ ವಸ್ತು, ಪಾತ್ರ ಮತ್ತು ಕಥೆ ಸನ್ಮಾರ್ಗವನ್ನು ತೋರುವಂತಾಗಲಿ. ಈ ಕಾವ್ಯದಲ್ಲಿ ಎಲ್ಲರಿಗೂ ಸ್ನೇಹ ಬಾಂಧವ್ಯಗಳಿಂದ ಬದುಕುವ ಮಾನವೀಯತೆಯು ಕಂಡು ಬರಲಿ.

ನಿತ್ಯಂ ಸಚ್ಚರಿತಾ ಕಥಾಮುದಿತರುಂ ವಾಙ್ಮಾನಸೈಶ್ವರ್ಯ ಸಂ
ಯುಕ್ತರ್ ವಿಶ್ವವಿನೀತ ಸಂಸ್ಕೃತಿ ಪರಿತ್ರಾಣರ್ ಸ್ವಕರ್ತವ್ಯ ಸಂ
ಸ್ತುತ್ಯರ್ ಜಾತಿ ಮತಾದಿ ಭೇದರಹಿತರ್ ಶ್ರೀ ಮಾತೃಭೂಮೀಹಿತ
ಪ್ರೀತ್ಯರ್ಥರ್ ಮೆಱೆಗೆಲ್ಲ ಸಜ್ಜನವರರ್ ವಿಶ್ವೇಶನೇಕಾಜ್ಞೆಯಿಂ ॥೩೬॥

ಮ.ವಿ. ಅಱಿನೇಗಳ್ ನೆಲಸಿರ್ಕೆ ಭೂವಲಯದೊಳ್ ಸಾಹಿತ್ಯ ಸಾಮ್ರಾಜ್ಯದೊಳ್
ಮಿಱುಗುತ್ತಿರ್ಕೆ ಸುಕಾವ್ಯರತ್ನನಿಚಯಂ ವಿದ್ವಾಂಸರೊಳ್ ನೇಹಮೆ
ಟ್ಟಿಱುಗೊಳ್ಪಿಂ ಜನಮೆಲ್ಲಮೊಂದಿ ಸೊಗದಿಂದಂ ಬಾಟ್ಗಿ ನಿಷ್ಕಾಮದಿಂ
ಪೊಱೆಯೇರ್ಗಲ್ಲರುಮೀ ಜಗಕ್ಕೆ ಹಿತಮಂ ಪಾಲಿಕ್ಕೆ ಮೃತ್ಯುಂಜಯಂ ॥೩೭॥

ಮಳೆಯೇಗಳ್ ಸರಿಗಾಲದೊಳ್ ಕಱೆಗೆ ತಕ್ಕಂತೆಲ್ಲ ಸಸ್ಯಾಳಿಯುಂ
ಬೆಳೆಯುತ್ತಿರ್ಕೆ ಪಯಂಗಳೀಗೆ! ಇನಿವಾಲಂ ವಾಹನಂಗಳ್ ಚಲಿ
ಕ್ಕಿಳೆಯೊಳ್ ಸತ್ಯ–ಸುಶೀಲ–ಶಾಂತಿ–ಬಲ–ಶೌರ್ಯಂ ಸ್ಥಾಯಿಯಾಗಿರ್ಕೆ! ಉ
ಜ್ಜ್ವಳಮಾಗೊಪ್ಪುಗೆ ರಾಮರಾಜ್ಯವಿಭವಂ ಭದ್ರಂ ಶುಭಂ ಮಂಗಳಂ ! ॥೩೮॥

ಎಂಬಲ್ಲಿಗೆ ಸತ್ವಾಲೋಕನ ಕಾವ್ಯದೊಳ್, ಪಾರ್ಥಪ್ರತಿಜ್ಞಾಪಾಲನಂ
ಶಿವಪ್ರಸನ್ನತ್ವಂ ವಿಶ್ವಮೈತ್ರೀ ಬೋಧನಮೆಂಬ ಅಷ್ಟಮಾಶ್ವಾಸಂ ಸಂಪೂರ್ಣಂ

೩೬. ನಿತ್ಯವೂ ಸಚ್ಚಾರಿತ್ರದ ಕಥೆಯಿಂದ ಸಂತಸ ಪಡುವವರೂ ವಾಕ್ಸಂಪತ್ತು ಮನಸ್ಸಂಪತ್ತು ಎಂಬೆರಡೂ ಉಳ್ಳವರೂ ವಿಶ್ವಕ್ಕೇ ದಾರಿ ತೋರಿದ ಸಂಸ್ಕೃತಿಯ ರಕ್ಷಕರೂ ತಮ್ಮ ಕರ್ತವ್ಯ ಪಾಲನೆಯಿಂದ ಸ್ತುತಿಪಾತ್ರರೂ ಜಾತಿ ಮತ ಮುಂತಾದ ಬೇಧವಿಲ್ಲದವರೂ ಮಾತೃಭೂಮಿಗೆ ಹಿತಕರವಾದ ಪ್ರೀತಿಯೇ ಜೀವನೋದ್ದೇಶ ವಾಗಿರುವವರೂ ಆದ ಸಜ್ಜನಶ್ರೇಷ್ಠರು ಆ ವಿಶ್ವೇಶ್ವರನ ಏಕೈಕ ಆಜ್ಞೆಯಿಂದ ಕಾರ್ಯದಕ್ಷರಾಗಿ ಮೆರೆಯುತ್ತಿರಲಿ!

೩೭. ಈ ಭೂಮಂಡಲದಲ್ಲಿ ಧರ್ಮವು ಸದಾ ನೆಲಸಿರಲಿ! ಸಾಹಿತ್ಯಸಾಮ್ರಾಜ್ಯದಲ್ಲಿ ಉತ್ತಮ ಕಾವ್ಯರತ್ನಗಳ ಸಮೂಹವು ಹೊಳೆಯುತ್ತಿರಲಿ! ವಿದ್ವಜ್ಜನರಲ್ಲಿ ಸ್ನೇಹವು ಜಾಗೃತವಾಗಿರಲಿ! ಒಳ್ಳೆತನದಿಂದಲೇ ಜನರೆಲ್ಲರೂ ಒಟ್ಟಾಗಿ ಸುಖದಿಂದ ನಿಷ್ಕಾಮ ಭಾವದಿಂದ (ಸ್ವಾರ್ಥವಿಲ್ಲದೆ) ಬಾಳಲಿ! ಎಲ್ಲರೂ ಹಿಗ್ಗಿನಿಂದ ಮೆರೆಯಲಿ! ಮೃತ್ಯಂಜಯನು ಲೋಕಕ್ಕೆ ಹಿತವಾದುದನ್ನು ಕರುಣಿಸಲಿ!

೩೮. ಯಾವಾಗಲೂ ಕಾಲಕ್ಕೆ ಸರಿಯಾಗಿ ಮಳೆ ಸುರಿಯುತ್ತಿರಲಿ! ತಕ್ಕ ರೀತಿಯಲ್ಲಿ ಸಸ್ಯ ಸಮೂಹವು ಬೆಳೆಯುತ್ತಿರಲಿ! ಹಸುಗಳು ಇನಿದಾದ ಹಾಲನ್ನೀಯಲಿ! ಪ್ರಯಾಣಕ್ಕೆ ಅನುಕೂಲವಾಗಿ ವಾಹನಗಳು ಚಲಿಸುತ್ತಿರಲಿ! ಭೂಮಿಯಲ್ಲಿ ಸತ್ಯ, ಒಳ್ಳೆಯ ಶೀಲ, ಶಾಂತಿ, ಶಕ್ತಿ, ಶೌರ್ಯ – ಇವು ಸ್ಥಾಯಿಯಾಗಿರಲಿ! ಉಜ್ವಲವಾಗಿ ರಾಮರಾಜ್ಯದ ವೈಭವವು ಶೋಭಿಸಲಿ! ಭದ್ರಂ, ಶುಭಂ, ಮಂಗಳಂ.

ಸತ್ವಾಲೋಕನ ಕಾವ್ಯದಲ್ಲಿ ಪಾರ್ಥಪ್ರತಿಜ್ಞಾಕ್ಷರಪಾಲನ – ಎಂಬ ಎಂಟನೆ ಆಶ್ವಾಸ ಮುಗಿಯಿತು.

# ಉತ್ತರ ಭಾಗ - ಅನುಬಂಧ

**ಶಬ್ದಾರ್ಥ**

ಅಂಕ = ಸೈನ್ಯ ; ಬಿರುದು
ಅಂಗ = ಅಭಿಪ್ರಾಯ
ಅಂಗಾರ = ಕೆಂಡ
ಅಂಭೋನಿಧಾನ = ಸಮುದ್ರ
ಅಕ್ಷ = ಅಚ್ಚು; ಮೂಲ, ಆತ್ಮ
ಅಗ್ರಹಾರ = ಬ್ರಾಹ್ಮಣ ವಸತಿ ಸ್ಥಳ
ಅಗ್ಗಿ = ಅಗ್ನಿ
ಅಗುರ್ವು = ಭೀಕರತೆ
ಅಟನ = ಸಂಚಾರ
ಅಟಮಟ = ಮೋಸ
ಅಟ್ಟೆ = ಮುಂಡ
ಅಡಗು = ಮಾಂಸ
ಅಡ್ಡ ಚಣ = ಅರ್ಧಕ್ಷಣ
ಅಣಿ = ಸೈನ್ಯ
ಅಣೆ = ಹತ್ತಿರ ಬರು ; ಕಾಣಿಸು
ಅತನು = ಅನಂಗ; ಮನ್ಮಥ
ಅತ್ತಪರ = ಕಾಳಗದ ಹಲಗೆ;
ಗುರಾಣಿ
ಅದವಳಲು = ವ್ಯಥೆ
ಅಧ್ವ = ದಾರಿ
ಅನ್ನರ್ = ಅಂಥವರು
ಅನಾಕುಳ = ಕಳವಳವಿಲ್ಲದ
ಅನಾಮಯ = ಆರೋಗ್ಯ
ಅನೂನ = ಕಡಿಮೆಯಲ್ಲದ;
ತುಂಬಿದ
ಅಬ್ಜವನ = ಸರೋವರ
ಅಪ್ರಾಕೃತ – ನವೀನ, ಸುಸಂಸ್ಕೃತ
ಅಭ್ರ = ಆಕಾಶ
ಅಭಿಧರ್ = ಹೆಸರುಳ್ಳವರು
ಅಯ = ಜ್ಞಾನ, ಭಾಗ್ಯ
ಅಯಃಫಳಕ = ಕಬ್ಬಿಣದ ತಗಡು
ಅಱ = ಧರ್ಮ
ಅರಮೆ = ಅಲ್ಲಲ್ಲಿ
ಅರವಕ್ಕಳ್ = ಅರಸುಮಕ್ಕಳು
ಅಱಿಕೆ = ಕೀರ್ತಿ
ಅರಿದು = ಅಸಾಧ್ಯ
ಅಱಿಲ್ = ನಕ್ಷತ್ರ
ಅರೆಎಡೆ = ಕೆಲವೆಡೆ
ಅರೆಬರ್ = ಕೆಲವರು
ಅರೆಮೆಯ್ = ಅರ್ಧಾಂಗಿ; ಪತ್ನಿ
ಅಲತಿಗೆ = ಅಲಕ್ತಕ; ಅರಗಿನ ರಸ
ಅವಗಣಿಸು = ಅಲಕ್ಷಿಸು
ಅವಿರತ = ಎಡೆಬಿಡದೆ
ಅಶನ = ವಜ್ರಾಯುಧ
ಅಶೇಷ = ಸಂಪೂರ್ಣ; ಸಮಸ್ತ
ಅಸಕಳಿ = ಕೈಮೀರು
ಅಸ್ಪಂದ = ಅಲುಗಾಡದ
ಅಸಿ = ಖಡ್ಗ
ಅಸುಗೆ = ಅಶೋಕ (ಹೂ)
ಅಱ್ಕಿರ್ತಂ = ಪ್ರೀತಿಪಟ್ಟವನು
ಅೞಿ = ಕೊಲ್ಲು; ಸಾಯು; ಅಲ್ಪತೆ
ಅಳುರ್ = ವ್ಯಾಪಿಸು
ಆಂತು = ಯುದ್ಧಕ್ಕೆ ನಿಂತು ; ಆಧರಿಸಿ
ಹಿಡಿದು
ಆಂಪಂ = ಯುದ್ಧಕ್ಕೆ ನಿಲ್ಲುವವ;
ಹೊಂದುವನು
ಆಕೀರ್ಣ = ಕೂಡಿದ
ಆಕುಲ = ಕದಡಿದ; ದುಃಖ
ಆಜಿ = ಯುದ್ಧ
ಆಟಾಳಿ = ಆಡುಕುಳಿ; ಆಡುವ
ಶೀಲವುಳ್ಳವ
ಆಟಿಸು = ಬಯಸು
ಆತ್ತ = ತಾಳಿದ; ಧರಿಸಿದ
ಆದಂ = ವಿಶೇಷವಾಗಿ; ಹೆಚ್ಚಾಗಿ
ಆರ್ಪಂ = ಸಮರ್ಥನು
ಆಯ = ಮರ್ಮ; ಸುಲಕ್ಷಣ;ಆದಾಯ
ಆಯತಿ = ಸಾಮರ್ಥ್ಯ; ಮನಸ್ಸಂಯಮ

ಆಯಕ್ತ = ಅಧೀನ
ಆಯಸಗಾಢ = ಕಬ್ಬಿಣದಂತೆ ಗಟ್ಟಿಯಾದ
ಆರ್ತಿ = ವ್ಯಥೆ
ಆರಯ್ = ವಿಚಾರಿಸು
ಆರವೆ = ಉದ್ಯಾನ
ಆರ್ಯಚರ್ಯೆ = ಶ್ರೇಷ್ಠ ವರ್ತನೆ
ಆರ್ = ಬೊಬ್ಬಿಡು
ಆರೋಗಣೆ = ಊಟ
ಆವರ್ತ = (ನೀರಿನ) ಸುಳಿ
ಆವೆಯಾದೊಡಂ = ಯಾರೇ ಆದರೂ
ಆಶಾ = ದಿಕ್ಕು
ಆಶ್ಲೇಷ = ಆಲಿಂಗನ
ಆಸರ್ = ಆಸೆ; ಬಾಯಾರಿಕೆ
ಆಳ್ = ಮುಳುಗು; ಆಳಿಕೆ ನಡೆಸು
ಇಂಗಡಲ್ = ಇನಿದು (ಸವಿಯಾದ) ಕಡಲು; ಕ್ಷೀರಸಾಗರ
ಇಂಧನ = ಸೌದೆ
ಇಚ್ಚೆಗ = ಮನ್ಮಥ
ಇಟ್ಟಳ = ಮನೋಹರ; ರಾಶಿ
ಇನಿಸು = ಇಷ್ಟು
ಇನ್ನೆಳಗಾಯ್ = ಸವಿಯಾದ ಎಳನೀರು
ಇರ್ಕೆ = ಇರಲಿ; ಆಶ್ರಯ
ಇಲಿದೇರಂ = ಮೂಷಕವಾಹನ; ಗಣೇಶ
ಇಸು = ಬಾಣ ಪ್ರಯೋಗಿಸು
ಇಳಿಸು = ಹೀನೈಸು
ಈ = ಕೊಡು ( ಈಗೆ = ಕೊಡಲಿ)
ಈರಿತ = ಅಭಿಪ್ರಾಯ; ತಿಳಿಸಲ್ಪಟ್ಟ
ಈರೆರಡು = ಎರಡುಬಾರಿ ಎರಡು; ನಾಲ್ಕು
ಉಂತೆ = ವ್ಯರ್ಥವಾಗಿ
ಉಡುಪ = ಶ್ರೆಷ್ಪ
ಉಣಿಂಗು = ಉಣುಗು; ಉಣ್ಣಿ
ಉತ್ತಮಾಂಗ = ತಲೆ
ಉತ್ಸಂಗ = ತೊಡೆ
ಉದಂಚಿತ = ಮೇಲೆದ್ದು ಕಾಣುವ
ಉದಂಕ = ವೃತ್ತಾಂತ; ಚರಿತ್ರೆ
ಉದ್ಯಮನ = ಮೇಲೆತ್ತುವಿಕೆ
ಉನ್ಮೀಲನ = ಅರಳುವಿಕೆ; ತೆರೆಯುವಿಕೆ
ಉಪಪಾದಿತ = ಸಂಪ್ರಾಪ್ತ
ಉಪಾಂತ = ಸಮೀಪ; ಬದಿ
ಉಱದೆ = ಬೇಗನೆ (ಉಱದಿಂ)
ಉಱ್ = ವಿಶೇಷವಾಗಿ
ಊಣೆಯ = ಕುಂದು; ಕೊರತೆ
ಊರ್ಜಿತ = ಏಳಿಗೆಗೊಂಡ; ಬಲಿಷ್ಠ
ಎಂತದಕೆ = ಏಕೆ
ಎಕ್ಕಟ = ಏಕಾಂಕ
ಎಕ್ಕು = ಮೇಲುಸಿರು;· ಎಟಕು
ಎಡರ್ಗೇಡಿ = ವಿಘ್ನನಾಶಕ; ಗಣೇಶ
ಎಣ್ಣೆ ದೇರ್ = ತೈಲಶಕಟ; ಬಸ್ಸು, ಕಾರ್ – ಇತ್ಯಾದಿ
ಎಮ್ಮತು = ಎಮ್ಮದು; ನಮ್ಮದು
ಎರವಟ್ಟು = ಆಶ್ರಯ
ಎಱಂಕೆ = ರೆಕ್ಕೆ
ಎಲರುಣಿ = ಹಾವು; ಉರಗ
ಎಳನೇಸರು = ಬಾಲ ಸೂರ್ಯ
ಎಳೆ = ಭೂಮಿ (ಇಳಾ)
ಏಣ = ಜಿಂಕೆ
ಏಱು = ಗಾಯ
ಏವ = ದುಃಖ
ಒಟ್ಟಜೆ = ಪರಾಕ್ರಮ
ಒಡರು = ಉಂಟಾಗು

ಒಡ್ಡು = ಸೈನ್ಯ
ಒತ್ತಂಬ = ಒತ್ತಾಯ; ಸಮೂಹ; ಒತ್ತೊತ್ತಾಗಿರುವಿಕೆ
ಒವಜೆ (ಓಜ) = ಉಪಾಧ್ಯಾಯ
ಒಸಗೆ = ಶುಭಕಾರ್ಯ; ಉತ್ಸವ
ಒಸೆ = ಪ್ರೀತಿಸು
ಓ = ಪ್ರೀತಿಸು (ಓಪು = ಪ್ರೀತಿ, ಓಪ = ಪ್ರೀತಿಯವ)
ಓಣಿ = ಇಬ್ಬದಿ ಎತ್ತರವಿರುವ ಕಿರು ದಾರಿ; ಒರುಂಕು
ಓರಂತಿರೆ = ಒಂದೇ ಸವನೆ
ಔದುಂಬರ = ಅತ್ತಿಮರ
ಕಡಂಗು = ಉತ್ಸಾಹಪಡು
ಕರ್ದುಂಕು = ಕೊಕ್ಕಿನಿಂದ ಕುಟುಕು
ಕನೀಯ = ಕನಿಷ್ಠಿಕ; ಕಿರಿಯವನು
ಕರವಾಳ = ಖಡ್ಗ
ಕಯ್ಗೆಯ್ = ಸಿಂಗರಿಸು; ಸಿದ್ಧಗೊಳಿಸು
ಕರಣಂ = ಮನೋಭಾವದವನು; ಮಾಡುವವನು
ಕಱೆ = ಸುರಿಸು; ಕಳಂಕ
ಕರೆ = ಬರಹೇಳು
ಕಾನೀನ = ಕನ್ಯಾಪುತ್ರ, ಕರ್ಣ
ಕಾರ್ = ಮಳೆಗಾಲ
ಕಾಲುರಿಚ = ಚಿಕ್ಕಹಳ್ಳಿಯಲ್ಲಿ ಹುಟ್ಟಿದವನು
ಕಾವಣ = ಚಪ್ಪರ
ಕಾಸಾರ = ಸರೋವರ
ಕಾಟ್ಮಿರೆ = ಕಾಡುಜಿಂಕೆ
ಕಿತ್ತಡಿ = ಋಷಿ, ಪರಿವ್ರಾಜಕ
ಕಿತ್ತಳಿಲು = ಚಿಕ್ಕ ಅಳಿಲು
ಕಿತ್ತೆಲೆ = ಹರಿದು ಕಿರಿದಾದ ಬಾಳೆಯೆಲೆ

ಕೀಲಾಲ ಕ್ರೋಡ = ನೀರು ಹಂದಿ
ಕುಂಬಿಡು = ನಮಸ್ಕರಿಸು
ಕುಕಿಲ್ = ಕೋಗಿಲೆ ಕೂಗು
ಕುಟ್ಟಿವ = ಜಗಲಿ (ಸಂ. ಕುಟ್ಟಿಮ)
ಕುಜನ = ಕೆಟ್ಟ ಜನ; ಭೂಜ, ಮರ
ಕುತ್ತುರ್ = ಪೊದರು
ಕುಳಿರ್ = ಚಳಿ; ಶೈತ್ಯ
ಕುಳಿರ್ವನೆ = ಶೈತ್ಯ ಗೃಹ
ಕುತ್ತುಂಗೋಲ್ = ಬರ್ಚಿ
ಕೂಜತ್ = ಕೂಗುತ್ತಿರುವ
ಕೂರ್ = ಪ್ರೀತಿಸು; ಹರಿತವಾದ
ಕೂರ್ಪುಣಂಬು = ಹರಿತವಾದ ಬಾಣ
ಕೂಲ = ದಡ; ತೀರ
ಕೆನ್ನಂ = ವಿಶೇಷವಾಗಿ
ಕೆರ್ಪು = ಕೆರ, ಚಪ್ಪಲಿ; ಪಾದರಕ್ಷೆ
ಕೇಕರ = ಕಡೆಗಣ್ಣು
ಕೈದವ = (ಕೈತವ) ಮೋಸ
ಕೈವಾರಿಸು = ಹೊಗಳು
ಕೊಂಡ = (ಕೊಣ್ = ಕಚ್ಚು) ಕಚ್ಚಿದ; ಗಾಯವಾದ
ಕೋಳ್ಗುಟ್ಟು = ಬಡಿಯುತ್ತಿರು
ಕೌಳುಡೆ = ದಿಂಬು
ಗರ = (ಸಂ. ಗ್ರಹ), ವಿಷ
ಗರಿವೂ = ಕೇದಗೆ ಹೂವು
ಗರ್ತ = ಬಿಲ; ಹೊಂಡ
ಗರುವಿಕೆ = ಗೌರವ; ಹಿರಿಮೆ
ಗಳ = ಕೊರಲು
ಗಳತ್ತ್ರಪಂ = ನಾಚಿಕೆಯಿಲ್ಲದವನು
ಗಾಡಿ = ಸೊಬಗು
ಗ್ರಾವ = ಶಿಲೆ
ಗಾವಿಲ = ಬುದ್ಧಿಹೀನ (ಸಂ.ಗ್ರಾಮೀಣ)

ಗಿರೆ = ಮಾತು
ಗುಣ = ಹಗ್ಗ ; ಶೀಲ
ಗುಣ್ಪು = ಆಳ; ಗಂಭೀರತೆ
ಗುದಿ = ದೊಣ್ಣೆ ; ಗುದಿಗೆ
ಗುರುಗುಮ್ಮಗೆ = ಸುಮ್ಮಗೆ
ಗೆಂಟರೊಳ್ = ಸಮೀಪದಲ್ಲಿ ; ದೂರದಲ್ಲಿ
ಗೆತ್ತು = ಭಾವಿಸಿ ; ಭ್ರಮಿಸಿ
ಘನಾಂತಸ್ಥಿತಿ = ಗೊರಟುಳ್ಳ
ಘೋಟಾಖುರಂ = ಕುದುರೆಯ ಗೊರಸು
ಚತುರಸ್ರ = ನಾಲ್ಕೂ ಕಡೆ
ಚಲಂಕು = ನೂಕು
ಚಾಂಬಾರು = ಒಣಗಿ ನೇಲುವ ಬಾಳೆಲೆ ಕೈ
ಚಿಚ್ಛವಿ = ಜ್ಞಾನದ ಬೆಳಕು
ಚುರ್ಚುಂಗೊಂಡ = ಅಗ್ನಿಕುಂಡ
ಚುರ್ಚುಲಬೇಸೆ = ಉರಿಯುವ ನೋವು
ಚೆಂಬೂ = ಕೆಂಪಾದ ಹೂವು
ಚೆಚ್ಚರದಿಂ = ಬೇಗನೆ
ಚೆನ್ನಪೊಂಗ = ಮಹಾಶೂರ
ಚೋದನೆ = ಉತ್ತೇಜನ; ಪ್ರೇರಣೆ
ಜಂಗುಳಿ = ಗುಂಪು
ಜಂಬರ = ಕಾರ್ಯಕ್ರಮ ; ಸಮಾರಂಭ
ಜಂಭಾರಿ = ಇಂದ್ರ
ಜಱುಚು = ಗಳಹು; ಹರಟು
ಜಿನುಂಗು = ಮಳೆ
ಜಿಷ್ಣು = ಅರ್ಜುನ
ಜೋದ = (ಸಂ. ಯೋಧ), ಸೈನಿಕ
ಟೌಳಿ = ಶಿರಸ್ತ್ರಾಣ
ಡಿಂಗರಿಗ = ಭಕ್ತ
ಡಿಂಡೀರ = ನೊರೆ
ತಕ್ಕು = ಯೋಗ್ಯತೆ
ತ್ವಕ್ = ಚರ್ಮ
ತಗದ = ತಕ್ಕುದಲ್ಲದ
ತಗರ್ದು = ತಡೆದು
ತಗುಳ್ಚು = ಒಟ್ಟು ಸೇರಿಸು; ತಾಗಿಸು
ತಟಿಕ್ = ಮಿಂಚು
ತಮ್ಮಿರ್ವರುಂ = ತಾವಿಬ್ಬರೂ
ತರದಿಂ = ಅನುಕ್ರಮವಾಗಿ
ತಱಿಸಲ್ = ನಿಶ್ಚಯ; ನಿಶ್ಚಯಿಸು
ತವಿಲ್ = ನಾಶ; ವಿಪತ್ತು; ವ್ಯಯ
ತಳ್ತ = ವ್ಯಾಪಿಸಿದ
ತಳ್ವದೆ = ತಡಮಾಡದೆ
ತಳಿ (ತಳಿಗೆ) = ತಟ್ಟೆ
ತಾಱ್ = ಒಣಗು; ಸೊರಗು
ತ್ರಾಣ = ಶಕ್ತಿ ; ರಕ್ಷಣೆ
ತಿಂಗಳ್ ಬಂಚ = ಚಂದ್ರವಂಶ
ತಿಸುಳಿ = ತ್ರಿಶೂಲ; ಶಿವ
ತೀವು = ತುಂಬು
ತುರಿಪ (ತುರಿಹ) = ತ್ವರೆ; ತುರಿಕೆ
ತುಱುಗಲ್ = ಗುಂಪು
ತುಱು = ಹಸು
ತುಱುಬಿಂದಂ = ಆಕಳ ಹಿಂಡು
ತುಟಿಲ್‌ಗೆಯ್ = ಬಿದ್ದು ತುಟಿ ನಮಸ್ಕರಿಸು
ತೂರ್ಯ = ಮಂಗಳವಾದ್ಯ
ತೂರಿತ್ತು = ಮೇಲೆ ಬಂತು
ತೂಲ = ಹತ್ತಿ (ತೂಳ)
ತೆಂಗನ್ನಡ = ದಕ್ಷಿಣ ಕನ್ನಡ
ತೆಗಲೆ = ಎದೆ; ವಕ್ಷಸ್ಥಳ
ತೇಂಕು (ತೆಂಕು) = ತೇಲು
ತೊಂಗಲ್ = ಗೊಂಚಲು
ದರಸ್ಮಿತ = ಮುಗುಳ್ನಗೆ

ದಿಂಕಿಡು = ಹಾರು
ದಿಟವರಿಜು = ನಿಜಸ್ವರೂಪ
ದ್ವಿಜ = ಮೀನು ; ವಿದ್ವಾಂಸ
ದ್ವಿಪಚಮೂ = ಗಜಸೈನ್ಯ
ದ್ವಿರದ = ಆನೆ
ದಾಸ = ಬೆಸ್ತ
ದೀವಿ = ದ್ವೀಪ
ದುಸ್ತರಕರ = ದಾಟಲು
ಸಾಧ್ಯವಲ್ಲದ
ದೂಱಿಸು = ದುಃಖಿಸು ; ನಿಂದಿಸು
ದೊರೆ = ಆಶ್ರಯ
ದೋರಗೆ = ದ್ವಾರಕೆ, ದ್ವಾರಾವತಿ
ದೋರ್ವಲ = ಬಾಹುಬಲ; ಶೌರ್ಯ
ಧಾಮ = ಮನೆ
ಧ್ವಾನ = ಶಬ್ದ; ಧ್ವನಿ
ನಯ = ನೀತಿ; ನುಣುಪು
ನಲ್ವಿರ್ದು = ಒಳ್ಳೆಯ ಔತಣ
ನಸೆ = ಸಲುಗೆ
ನಾಡೆ = ಚೆನ್ನಾಗಿ, ವಿಶೇಷವಾಗಿ
ನಿಕ್ಕುವಂ = ನಿಶ್ಚಯ
ನಿಗುರು, ನಿಗುರಿಸು = ನೆಟ್ಟಗಾಗು;
ನೆಟ್ಟಗೆ ಮಾಡು
ನಿಟಲತಟ = ಹಣೆ
ನಿದಾನ = ಮೂಲಕಾರಣ
ನಿನತು = ನಿನ್ನದು, ನಿನ್ನ
ನಿಮ್ಮಡಿ = ಸ್ವಾಮೀ ಎಂಬರ್ಥದ
ಸಂಬೋಧನೆ
ನಿಯತಿ = ವಿಧಿ; ಅವಸ್ಥೆ
ನಿಱುಗೆ = ಜೋಡಣೆ; ಪದವಿನ್ಯಾಸ
ನಿಶೀಥ = ರಾತ್ರಿ
ನಿರ್ವಾಣಾಲಾತ = ನಂದಿದ ಕೊಳ್ಳಿ
ನೀಡುಂ = ಚೆನ್ನಾಗಿ
ನಿಸದ = ಸತ್ಯ
ನೀರದ = ಮೋಡ
ನೀರಿಲಿ = ನೀರಿಲ್ಲದ ಕಡೆ
ನೀರ್ವೂ = ತಾವರೆ
ನೀಹಾರಕರ = ಹಿಮಕರ; ಚಂದ್ರ
ನೀಳ = ಉದ್ದವಾದ; ಕಪ್ಪಾದ
ನೆಮ್ಮು = ಆಶ್ರಯಿಸು.
ನೆರನಂ = ಮರ್ಮೋದ್ಘಾಟನದ
ಮಾತನ್ನು
ನೆಲಕಲ = ಲೋಭಿ
ನೇರ್ = ಸೀಳು
ನೊಣೆ = ನುಂಗು
ಪಂಚವದನ = ಶಿವ; ನರಸಿಂಹ;
ಸಿಂಹ
ಪಕ್ಕು = ಆಶ್ರಯ
ಪಚ್ಚ = ಆಭರಣ
ಪಚ್ಚುಗುಡು = ಪಾಲುಮಾಡಿಕೊಡು
ಪಟ್ಟು = ಮಲಗಿ (ಪಡು–ಧಾತು)
ಪಡಲ್ವಡು = ಚೆದರಿ ಹೋಗು
ಪಡಿವರಿಸು = ಪ್ರತಿಭಟಿಸು
ಪಡಿಯಾಡು = ಪ್ರತಿಯಾಗಿ
ಮಾತಾಡು
ಪತತ್ರಿ = ಪಕ್ಷಿ (ಪತತ್ರ =ರೆಕ್ಕೆ)
ಪ್ರತ್ಯಯ = ವಿಶ್ವಾಸ
ಪದ = ಹದ; ಸಂದರ್ಭ; ಪದವಿ ;
ಪಾದ
ಪದೆ = ಪ್ರೀತಿಸು
ಪಯೋದ = ಮೋಡ (ಪಯ =
ನೀರು, ಹಾಲು)
ಪರಿ = ಸಂಗತಿ ; ರೀತಿ
ಪರಿಧಾನ = ಉಡುಪು
ಪಱೆ = ಹರಡು ; ಒಂದು ಬಗೆಯ
ವಾದ್ಯ
ಪಱು = ಕಾಡು

ಪಸರ = ಅಂಗಡಿ
ಪಸಾಯ್ತ = ಉಡುಗೊರೆ
ಪಳಿಕು = ಸ್ಫಟಿಕ
ಪಾಂಗು = ಕ್ರಮ; ವಿಧಾನ
ಪಾಂಡುರ = ಬಿಳಿದಾದ
ಪಾಂಸು = ಧೂಳು; ರಜ
ಪ್ರಾಯ = ಪ್ರಧಾನ (ಬೋಧಪ್ರಾಯ)
ಪಾಱುಂಬಳೆ = ಚಕ್ರಾಯುಧ
ಪ್ರಾಶನ = ಸೇವನೆ
ಪೀಳಿಗೆ = ಪೀಠಿಕೆ
ಪುಗುತೆ = ಪ್ರವೇಶ
ಪುಚ್ಚಳಿ = ಕೇಡು
ಪುದುವಾಳ್ = ಜತೆಸೇರು
ಪುಯ್ಯಲ್ಚು = ದೂರುಕೊಡು.
ಪುಲಕ = ರೋಮಾಂಚನ
ಪೂಣ್ಕೆ = ಪ್ರತಿಜ್ಞೆ (ಪೂಣ್ = ಪ್ರತಿಜ್ಞೆಮಾಡು)
ಪೆಱ್ = ಚಂದ್ರ
ಪೊಣರ್ಚು = ಕಾದಾಡು
ಪೆಂಪು = ಹಿರಿಮೆ
ಪೊಂಕ = ಉತ್ಸಾಹ
ಪೊಗರ್ = ಕಾಂತಿ
ಪೊಗೆಯ ತೇರ್ = ಹೊಗೆಬಂಡಿ; ರೈಲು
ಪೊಚ್ಚ = ನದಿ
ಪೊಡವಡಿಕೆ = ವಂದನೆ; ನೆಲಕ್ಕೆ ಬಿದ್ದು ಮಾಡುವ ನಮಸ್ಕಾರ
ಪೊಡೆ = ಹೊಟ್ಟೆ
ಪೊದಱ್ = ವ್ಯಾಪಿಸು
ಪೊರೆಯೇರು = ಸಂತೋಷದಿಂದ ಹಿಗ್ಗು
ಪೊಸಯಿಸು = ಹೊಸತಾಗಿಸು; ಉಜ್ಜು
ಪೊಟ್ಟಿಡೆ = ಹೊತ್ತಾರೆ; ಬೆಳಗ್ಗೆ
ಫೇನ = ನೊರೆ
ಬಂಡಣ = ಯುದ್ಧ
ಬಂಧುರ = ಮನೋಹರ
ಬಗ್ಗಿಸು = ಕುಕಿಲು; (ಕೋಗಿಲೆ) ಕೂಗು
ಬಚ್ಚ = ವತ್ಸ ; ಗಂಡು ಕರು
ಬಚ್ಚಣೆ = ಲೇಪನ
ಬಟ್ಟ = ದುಂಡಗಾದ ; ವಿಸ್ತಾರವಾದ
ಬಱುವರ್ (ಬಱುಂಬರ್) = ಏನೂ ಇಲ್ಲದವರು
ಬಲ್ಪೋರಿ = ಬಲಿಷ್ಠವಾದ ಎತ್ತು
ಬವಸೆ = ವ್ಯವಸಾಯ; ಉದ್ಯೋಗ
ಬಟಿಯಂ = ಬಳಿಕ; ಆಮೇಲೆ
ಬಾಡು = ಮಾಂಸ
ಬಾಯ್ದೆರೆ = ತುಟಿ
ಬಾರ್ತೆ = ಪ್ರಯೋಜನ; ಕೆಲಸ
ಬಾವನ್ನ = ಶ್ರೀಗಂಧ
ಬಾಸಣಿಸು = ಕವಿಯು; ಮುಚ್ಚು
ಬಾಸೆವಕ್ಕಿ = ಗಿಳಿ
ಬಿಚ್ಚಂಡ = ಮತ್ಸರ
ಬಿದಿ = ವಿಧಿ; ಬ್ರಹ್ಮ
ಬಿನ್ನಗೆ = ನಿಷ್ಪ್ರಯೋಜನ
ಬಿಯ = ವ್ಯಯ, ಬಿರಯಿ = ವಿರಹಿ
ಬಿಸವಂದ = ಆಶ್ಚರ್ಯ
ಬೀಗಿಸು = ಹೆಚ್ಚಿಸು
ಬೀತೊಡೆ = ವ್ಯರ್ಥವಾದರೆ
ಬೀಯ = ವ್ಯಯ
ಬುಧ = ದೇವತೆ; ವಿದ್ವಾಂಸ; ಬ್ರಾಹ್ಮಣ
ಬೆಂಗದಿರು = ಬಿಸಿಲು
ಬೆಗಡಿಸು = ವಿಕಟಾವಸ್ಥೆಗೊಳ್ಳು

ಬೆಜನ = ಬೀಸಣಿಗೆ (ಸಂ. ವ್ಯಜನ)
ಬೆಮೆ = ಭ್ರಮೆ
ಬೆಸನ = ಕೆಲಸ
ಬೆಸಸು = ಆಜ್ಞಾಪಿಸು
ಬೆಳ್ಕಱು = ಭಯಪಡು
ಬೆಳ್ಗಡಿಯ = ಶಿವ
ಬೆಳ್ವಟಿ = ಬಿಳಿ ಬಟ್ಟೆ
ಬೇಗು = ಮೊರದಿಂದ ಕೇರು
ಭಂಗ = ಅಲೆ; ತರಂಗ
ಭಂಗುರ = ಕ್ಷಣಿಕ
ಭಾಷಾ = ಸರಸ್ವತೀದೇವಿ
ಭೂಜ = ಮರ
ಮಂಕಡ = ಮರ್ಕಟ; ಕೋತಿ
ಮಂಕಣ = ಮಂತ್ರಣ ; ಆಲೋಚನೆ
ಮಕರ = ಮೊಸಳೆ
ಮಕರಂದವ್ರತ = ಮಧುವ್ರತ; ತುಂಬಿ
ಮನಂಗೊಳಿಸು = ಚಿತ್ತಾಕರ್ಷಣಗೊಳಿಸು
ಮನೆವಾಳ್ತೆ = ಮನೆಗೆಲಸ
ಮದುವೆನಿಲ್ = ವಿವಾಹವಾಗು
ಮರ್ದುಗುತ್ತು = ಇಂಜೆಕ್ಷನ್
ಮರ್ಬು = ಮಬ್ಬು ; ಕತ್ತಲೆ
ಮಹತೀ = ನಾರದನ ವೀಣೆ
ಮಲರ್ದು = ಅರಳಿತು
ಮಾಣ್ = ನಿಲ್ಲಿಸು
ಮಾಮರ = ಮಾವಿನ ಮರ
ಮಾರಾನ್ = ಯುದ್ಧಕ್ಕೆ ಎದುರಾಗು
ಮಾಧವ = ಶ್ರೀಕೃಷ್ಣ ; ವಸಂತ
ಮಾಧವಿ = ದುಂಡುಮಲ್ಲಿಗೆ
ಮಿಡಿ = ಅಲುಗಿಸು
ಮಿಳಿರು = ಅಲ್ಲಾಡು
ಮೀಂಟು = ಚಿಮ್ಮು ; ಮೇಲೆಬ್ಬಿಸು
ಮುಮ್ಮನೆ = ಮನೆಯ ಮುಂಗಡೆ
ಮುಸುಱು = ಮುತ್ತು ; ಕವಿ
ಮೂಗುವಡಿಕೆ = ಮೂಕತೆ
ಮೃಗನಾಭಿ = ಕಸ್ತೂರಿ
ಮೃಗಯಾ = ಮೃಗ ಬೇಟೆ
ಮೃಣಾಲ = ತಾವರೆದಂಟು
ಮೇಳಂಬ = ತುಂಬಿ
ಮೊನೆ = ಯುದ್ಧ ; ಚೂಪಾದ ಭಾಗ
ಮೊನೆಗಾಳೆ = ಯುದ್ಧರಂಗದ ಕಹಳೆ
ಮೊರೆ = ತುಂಬಿಯ ಜೇಂಕಾರ
ಮೋದಿಕೆ = ಹೊಡೆತ
ಯುಗ (ಯುಗ್ಮ) = ಎರಡರ ಘಟಕ
ಯೂಥ = ಸೈನ್ಯ
ರಥಾಂಗ = ಚಕ್ರ
ರಾಗಾಕ್ಷ = ಕೆಂಗಣ್ಣ
ರಾಜತ್ = ರಾಜಿಸುವ; ಶೋಭಿಸುವ
ರಾಜರಾಜ = ಕುಬೇರ
ರುಗ್ದೈನ್ಯ = ಕಾಂತಿಹೀನತೆ
ರೋಚಿ = ಕಿರಣ
ಲತಾಕುಂಜ = ಬಳ್ಳಿಮನೆ
ಲಸತ್ = ಶೋಭಿಸುವ
ಲೆಂಕ = ಭಕ್ತ ; ಸೇವಕ
ಲೋವೆ = ಇಳಿಜಾರಿನ ಮಾಡು
ವಂಗಡ = ಗುಂಪು
ವನಖಡ್ಗ = ನೀರಿನ ಖಡ್ಗಮೃಗ
ವಯಸ್ಯ = ಗೆಳೆಯ
ವನಯಾನ = ನಾವೆ
ವಳಿಕ = ಆವರಿಸಿದ

ವಾರಣೇಂದ್ರ = ಗಜರಾಜ
ವಾಹಿನಿ = ಸೈನ್ಯ ; ನದಿ
ವಿದ್ಯಾಲೋಕ = ವಿದ್ಯಾವಂತ ಜನತೆ
ವಿನೇಯ = ಸೌಜನ್ಯದ
ವಿಪಂಚಿಕಾ = ವೀಣೆ
ವಿಪರೀತ = ಹಿಂದು ಮುಂದಾದ; ಪಕ್ಷಿಗಳಿಂದ ಆವೃತ
ವಿಯತ್ತಳ = ಬಾಂದಳ; ಆಕಾಶ
ಶಂಬಾಯುಧ = ವಜ್ರಾಯುಧನು ; ಇಂದ್ರ
ಶರದ = ಮೋಡ (ಶರ = ನೀರು)
ಶ್ವಸನ = ವಾಯು
ಶಿವ = ಶುಭ ; ಶಂಕರ
ಶೀಕರ = ತುಂತುರು ಹನಿ
ಶ್ರೀದೇವಿ = ಲಕ್ಷ್ಮೀದೇವಿ; ಕಾಂತಿಯುಕ್ತಳಾದ ಪಾರ್ವತೀ ದೇವಿ
ಶುಂಡಾಲ =ಆನೆ
ಶೈವಲ = ಹಾವಸೆ: ಪಾಚಿ
ಷಟ್ಪದ = ಆರು ಪಾದವುಳ್ಳ ; ತುಂಬಿ
ಸಂಕಾಶ = ಪ್ರಕಾಶ
ಸಂಕು = ಶಂಖ
ಸಂಚಿತ = ಕೂಡಿಸಿದ; ಸಂಪಾದಿತ
ಸಂದೆಯ = ಸಂದೇಹ
ಸಕ್ಕದ = ಸಂಸ್ಕೃತ
ಸಜ್ಜೆ = ಶಯ್ಯೆ ; ಹಾಸಿಗೆ
ಸದ್ಗಣ = ಸತ್ಪುರುಷರ ಸಮೂಹ; ಒಳ್ಳೆಯ ಗಣ
ಸನಿಯ = ಸಮೀಪ
ಸಪರ್ಯಾ = ಪೂಜೆ
ಸಮಂತು = ಸರಿಯಾಗಿ; ಅಚ್ಚುಕಟ್ಟಾಗಿ
ಸವಗ = ಕವಚ
ಸಸಿವಟೆ = ಚಂದ್ರವಂಶ
ಸ್ವಾಂತ = ಮನಸ್ಸು
ಸಾರಸ = ಹಂಸ
ಸಿಂಜಿನಿ = ಬಿಲ್ಲಿನ ಹಗ್ಗ; ಹೆದೆ
ಸಿಂಧು = ಸಮುದ್ರ
ಸಿಂಪಿಸು = ಸೇಚಿಸು; ಚಿಮುಕಿಸು
ಸಿತತುರಗ = ಅರ್ಜುನ
ಸಿರಿಯದರ – ಶ್ರೀದ್ವಾರ
ಸೀರ್ದಂದಲ್ = ಚಿಕ್ಕ ನೀರಹನಿಗಳು
ಸುದರ್ಶನಕರ = ಒಳ್ಳೆಯ ದರ್ಶನ ಕೊಡುವವ; ಚಕ್ರಧಾರಿಯಾದ ಕೃಷ್ಣ
ಸುಪಥ್ಯ = ಅತಿಹಿತ
ಸುಮುಖ = ಗಣೇಶ; ಗರುಡ
ಸೂಳ್ = ಸರದಿ
ಸೂಳಾಯ್ತ = ರಾಜದೂತ; ಡಂಗುರ ಸಾರುವವ
ಸೆಟ್ಟಿಲೆ = ದೊನ್ನೆ
ಸೈಪು = ಪುಣ್ಯ
ಸೊಮ್ಮು = ಗರ್ವ
ಸೋಗೆ = ಅಡೆಕೆಮರದ ಗರಿ; ನವಿಲು
ಸೋನೆ = ಮಳೆ
ಹಂದು = ಅಲುಗಾಡು ; ಚಲಿಸು
ಹರಿ = ಕಪ್ಪೆ ; ಶ್ರೀಕೃಷ್ಣ.

* * * * *

## ಕಾವ್ಯ ಸೂಕ್ತಿಗಳು – ಸಂದರ್ಭ ಸೂಚಿ

(ಆಶ್ವಾಸ ಸಂಖ್ಯೆ ಪದ್ಯಸಂಖ್ಯೆ ಸಹಿತ. ಪದ್ಯಸಂಖ್ಯೆ ಅದರ ಮುಂದಣ ಗದ್ಯಕ್ಕೂ ಅನ್ವಿತ)

* * * * *

# ಸತ್ತ್ವಾಲೋಕನ ಕಾವ್ಯ – ಬೆಂಗಳೂರು ಬಾನುಲಿಯಲ್ಲಿ ವಿಮರ್ಶೆ

ಶ್ರೀ ಬಿ. ಶ್ರೀನಿವಾಸ ಮೂರ್ತಿ

(ದಿನಾಂಕ : ೧೦ – ೫ – ೧೯೬೬, ರಾತ್ರಿ ೮ ಗಂಟೆಗೆ ಪ್ರಸಾರಿತ

ಇಂದು ಮೂರು ಪುಸ್ತಕಗಳ ಪರಿಚಯವನ್ನು ಮಾಡಿ ಕೊಡಲಾಗುವುದು. ಮೊದಲನೆಯದು ಕನೀಯ ಕವಿಕೃತ ಸತ್ತ್ವಾಲೋಕನಂ ಎಂಬ ಹಳಗನ್ನಡ ಶೈಲಿಯ ಚಂಪೂ ಕಾವ್ಯ. ಕನೀಯ ಕವಿ ಎಂದರೆ, ಸದ್ಯ ಬೆಂಗಳೂರು ಆಚಾರ್ಯ ಪಾಠಶಾಲಾ ಕಾಲೇಜಿನ ಅಧ್ಯಾಪಕರಾಗಿರುವ ಶ್ರೀ ಟಿ. ಕೇಶವಭಟ್ಟರು. ೧೬೭ ಪುಟಗಳ ಈ ಚಂಪೂಕಾವ್ಯದಲ್ಲಿ ೩೭ ಪುಟಗಳಷ್ಟು ಕಾವ್ಯ ವಿಚಾರವೂ, ೧೧೨ ಪುಟಗಳಷ್ಟು ಚಂಪೂ ಕಾವ್ಯವೂ ಮತ್ತು ೧೮ ಪುಟಗಳಷ್ಟು ಟಿಪ್ಪಣಿ ಮತ್ತು ಕ್ಲಿಷ್ಟ ಶಬ್ದಾರ್ಥಗಳೂ ಇವೆ. ಜೊತೆಗೆ ಕವಿಯ ಲಘು ಪರಿಚಯವೂ ಶುದ್ಧಾಶುದ್ಧ ಪತ್ರಿಕೆಯೂ ಸೇರಿಸಲ್ಪಟ್ಟಿದೆ. ( ಬೆಲೆ ಸಾಧಾರಣ ಪ್ರತಿ ರೂ. ೨–೫೦, ಉತ್ತಮ ಪ್ರತಿ ರೂ. ೩–೨೫. ಪ್ರಥಮ ಮುದ್ರಣ ೨೧–೨–೧೯೫೯)

ಮೈಸೂರು ಸರಕಾರದ ಪುರಸ್ಕಾರವನ್ನು ಗಳಿಸಿದ ಹಳಗನ್ನಡ ಶೈಲಿಯ ಈ ಚಂಪೂಕಾವ್ಯವು ಕ್ಷಾಮಪೀಡಿತಪ್ರದೇಶದಲ್ಲಿ ಬಹಳ ಕಾಲ ಕದನ್ನವನ್ನುಂಡು ಪರಿತಪಿಸುತ್ತಿದ್ದಂಥ ಜನರಿಗೆ ಷಡ್ರಸೋಪೇತವಾದ ಮೃಷ್ಟಾನ್ನ ಭೋಜನವೇ ಸಿಕ್ಕಿದಂತೆ ಆಗಿದೆಯೆಂದು ಹೇಳಬಹುದು. ವಿದ್ವತ್ಪೂರ್ಣವೂ, ರಸಿಕಜನಪ್ರಿಯವೂ ಆದಂಥ ಅಲಂಕಾರಪೂರ್ಣ ಕಾವ್ಯಗಳ ರಚನೆಯೇ ನಿಂತು ಹೋಯಿತೇನೋ ಎನ್ನುವಂಥ ಸಮಯದಲ್ಲಿ ಈ ರಸಭರಿತ ಕಾವ್ಯವು ಅತ್ಯಂತ ಸ್ವಾಗತಾರ್ಹವಾಗಿದೆ. ಕನೀಯ ಕವಿ ಎಂದರೆ ಚಿಕ್ಕ ಕವಿ ಎಂದು ಹೇಳಿಕೊಂಡಿರುವ ಶ್ರೀ ಟಿ. ಕೇಶವಭಟ್ಟರು ಅತ್ಯಂತ ಪರಿಣತಮತಿಗಳೆನ್ನುವುದು ಕಾವ್ಯವನ್ನೋದಿದ ಮೇಲೆ ಸುಸ್ಪಷ್ಟವಾಗುತ್ತದೆ. ಚಂಪೂ ಕಾವ್ಯವೆಂದರೆ ಗದ್ಯ ಪದ್ಯಾತ್ಮಕವಾದ ಕಾವ್ಯ ಎಂದರ್ಥ. ಕೆಲವು ವರ್ಷಗಳ ಹಿಂದೆ ಆದ ಅನುವಾದದ ಮತ್ತು ಒಂದೆರಡು ಸ್ವತಂತ್ರ ಕಾವ್ಯಗಳನ್ನು ಬಿಟ್ಟರೆ ಕಾವ್ಯವೆಂಬರ್ಥದಿಂದ ಕರೆಸಿಕೊಳ್ಳಲು ಯೋಗ್ಯವಾದಂಥ ಈ ಶೈಲಿಯ ಕೃತಿಗಳು ತೀರಾ ಅಪರೂಪವಾಗಿ ಬಿಟ್ಟಿವೆ. ಈಚೆಗೆ ಚಂಪೂಕಾವ್ಯವನ್ನು ಯಾರೂ ರಚಿಸಿಯೇ ಇಲ್ಲವೆನ್ನಬಹುದು.

ಈ ಚಂಪೂ ಕಾವ್ಯ – ಸತ್ತ್ವಾಲೋಕನಂ ವೀರರಸಪ್ರಧಾನವಾದುದು. ಸಂದರ್ಭೋಚಿತವಾಗಿ ಉಳಿದ ರಸಗಳೂ ಅಲ್ಲಲ್ಲಿ ಕಂಡು ಬರುವುವು. ಗಯೋಪಾಖ್ಯಾನದ ಕಥೆಯೇ ಈ ಕಾವ್ಯದ ವಸ್ತು. ಅದರ ಸಾರಾಂಶವೆಂದರೆ,

ಕುಬೇರ ಪುತ್ರನಾದ ಗಯ ತನ್ನ ಅಶ್ವಾರೋಹಣ ಕೌಶಲವನ್ನು ಭೂಲೋಕದಲ್ಲಿ ಪ್ರದರ್ಶಿಸಿ ಅಲ್ಲಿನ ಜನರನ್ನು ಬೆರಗುಗೊಳಿಸಬೇಕೆಂಬ ಒಂದು ಮಹದಾಕಾಂಕ್ಷೆಯಿಂದ ಉದ್ಯುಕ್ತನಾದಾಗ ಹಾಗೆ ಮಾಡುವುದು ಸರಿಯಲ್ಲವೆಂದು ಹಿರಿಯರು ಹೇಳಿದ ಮಾತನ್ನು ಉಲ್ಲಂಘಿಸಿ ಗರ್ವಿಷ್ಠನಾದ ಅವನು ತನ್ನ ಕುದುರೆಯನ್ನೇರಿ ಭೂಲೋಕಕ್ಕೆ ಬರುತ್ತಾನೆ. ದ್ವಾರಕಾಪಟ್ಟಣದಲ್ಲಿ ಗಯನು ವೇಗ ನಿಯಮಗಳನ್ನು ಉಲ್ಲಂಘಿಸಿ ಸಿಕ್ಕಾಪಟ್ಟೆ ಕುದುರೆಯನ್ನೋಡಿಸಿದ ಪರಿಣಾಮವಾಗಿ ಕುದುರೆಯ ಕಾಲಿಗೆ ಸಿಕ್ಕಿ ಅನೇಕರು ಸಾಯುತ್ತಾರೆ. ನಗರವೆಲ್ಲ ಧೂಳೀಧೂಸರವಾಗುತ್ತದೆ. ಜನರು ಸಂಭ್ರಾಂತರಾಗುತ್ತಾರೆ. ವಸಂತಮಾಸದ ಆ ಸಮಯದಲ್ಲಿ ತನ್ನ ಪ್ರೀತಿಯ ಪತ್ನಿಯರೊಡಗೂಡಿ ಉಪವನ ವಿಹಾರದಲ್ಲಿದ್ದ ಶ್ರೀ ಕೃಷ್ಣನಿಗೆ ಈ ಸಂಗತಿ ತಿಳಿಯುತ್ತದೆ. ಅತ್ಯಂತ ಕ್ರುದ್ಧನಾದ ಕೃಷ್ಣ ಇಷ್ಟೆಲ್ಲ ಅತ್ಯಾಚಾರಕ್ಕೆ ಕಾರಣನಾದವನನ್ನು ಎಂಟು ದಿನಗಳಲ್ಲಿ ಕೊಲ್ಲುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಇದನ್ನು ತಿಳಿದ ಗಯನು ಚಿಂತಾಕ್ರಾಂತನಾಗಿ ಪಶ್ಚಾತ್ತಾಪಪಟ್ಟು ಶಿವನನ್ನು ಮರೆಹೊಗಲು ಅವನ ಸೂಚನೆಯಂತೆ ಅರ್ಜುನನ ಬಳಿ ಬಂದು ತನ್ನ ಪ್ರಾಣಗಳನ್ನುಳಿಸೆಂದು ಬೇಡುತ್ತಾನೆ. ಶಿವನಿಂದ ಕಳಿಹಿಸಲ್ಪಟ್ಟು ಆತನಿಗಾಗಿ ಬಂದ ಗಯನಿಗೆ ಅರ್ಜುನನು ಅಭಯಪ್ರಧಾನ ಮಾಡಿದ ಮೇಲೆಯೇ ಶ್ರೀಕೃಷ್ಣನ ಪ್ರತಿಜ್ಞೆಯಿಂದ ಗಯನನ್ನು ಕಾಪಾಡಬೇಕಾಗಿದೆಯೆಂಬುದು ಅವನಿಗೆ ತಿಳಿಯುತ್ತದೆ. ಇದರಿಂದ ಅರ್ಜುನನಿಗೆ ಮಾತ್ರವಲ್ಲದೆ ಪಾಂಡವರೆಲ್ಲರಿಗೂ ದುಃಖವಾಗುತ್ತದೆ. ಆದರೆ ಅರ್ಜುನ ತನ್ನ ಪ್ರತಿಜ್ಞೆಯಿಂದ ಹಿಂದಕ್ಕೆ ಸರಿಯುವುದಿಲ್ಲ. ಶ್ರೀಕೃಷ್ಣಾರ್ಜುನರಿಗೆ ಭಯಂಕರ ಯುದ್ಧವಾಗುವುದು. ಒಂದು ಸಾರಿ ಅರ್ಜುನ ಪೆಟ್ಟು ತಿಂದು ಬಿದ್ದಾಗ ಕೃಷ್ಣನು ಗಯನನ್ನು ಸಂಹರಿಸುತ್ತಾನೆ. ಪುನಃ ಮೇಲೆಕ್ಕೆದ್ದ ಅರ್ಜುನ ಕೃಷ್ಣನನ್ನು ಹೊಡೆದುರುಳಿಸಿ ಗಯನನ್ನು ಕಾಪಾಡಲಾರದೆ ಹೋದುದಕ್ಕಾಗಿ ಅಗ್ನಿಪ್ರವೇಶಕ್ಕೆ ಸಿದ್ಧನಾಗುತ್ತಾನೆ. ಆಗ ಭೂದೇವಿ, ದೇವತೆಗಳು ಮತ್ತು ಶಿವ ಪ್ರತ್ಯಕ್ಷರಾಗಿ ಲೋಕ ಕಲ್ಯಾಣಾರ್ಥವಾಗಿ ಶ್ರೀಕೃಷ್ಣಾರ್ಜುನರು ಮಾಡಬೇಕಾದ ಕಾರ್ಯಗಳು ಇನ್ನೂ ಬಹಳವಿರುವುದೆಂದು ಹೇಳಿ ಎಲ್ಲರನ್ನು ಬದುಕಿಸುತ್ತಾರೆ. ಇದು ಕಥಾಸಾರಂಶ. ಎಂಟು ಆಶ್ವಾಸಗಳಿಂದ ಕೂಡಿದ ಈ ಕಾವ್ಯದಲ್ಲಿ ಗದ್ಯಕ್ಕಿಂತ ಪದ್ಯಗಳೇ ಹೆಚ್ಚು ಪ್ರಮಾಣದಲ್ಲಿವೆ.

ಪಾಂಡಿತ್ಯಪೂರ್ಣವೂ, ಶಾಸ್ತ್ರೀಯವೂ ಮತ್ತು ಸಂಪ್ರದಾಯಬದ್ಧವೂ ಆದ ಕಾವ್ಯಗಳ ಸೃಷ್ಟಿ ತೀರ ವಿರಳವಾಗಿರುವ ಈಗ, ಶ್ರೀ ಕೇಶವ ಭಟ್ಟರು ವೀರ ರಸ ಪ್ರಧಾನವಾದ ಕಥಾವಸ್ತುವನ್ನು ಆರಿಸಿಕೊಂಡು, ಹಳಗನ್ನಡ ಶೈಲಿಯಲ್ಲಿರುವ, ಕೇವಲ ಪ್ರಾಚೀನ ಕಾವ್ಯಗಳಲ್ಲಿಯೇ ಓದಿ ಆನಂದಿಸಬಹುದಾದಂಥ ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರಾ, ಮಹಾಸ್ರಗ್ಧರಾ, ಉತ್ಪಲಮಾಲಾ, ಚಂಪಕಮಾಲಾ ಮುಂತಾದ ವೃತ್ತಗಳಿಂದಲೂ ಕಂದ ಪದ್ಯಗಳಿಂದಲೂ ಕೂಡಿದ ಒಂದು ಸೊಗಸಾದ ಮನೋಹರವಾದ ಕಾವ್ಯವನ್ನು ರಸಿಕರಿಗೆ ಅರ್ಪಿಸಿದ್ದಾರೆ. ಅರ್ಥಪೂರ್ಣವಾದ ಮಧುರ ಶಬ್ದಗಳ ಜೋಡಣೆ, ನಿರರ್ಗಳವಾಗಿ ಹರಿಯುವ, ಕವಿತಾಶೈಲಿ, ಮನಃ ಪ್ರಸಾದನ್ನುಂಟುಮಾಡುವ ಉಪಮಾನೋಪಮೇಯಗಳಿಂದಲೂ ಕೂಡಿದ ಈ ಕಾವ್ಯ

ಅತ್ಯಂತ ಪ್ರೌಢವಾಗಿದ್ದ ಕವಿಗಳ ಪಾಂಡಿತ್ಯವನ್ನು ಪ್ರತಿಸಾಲಿನಲ್ಲಿಯೂ ಪ್ರದರ್ಶಿಸುತ್ತದೆ. ಕವಿತೆಯ ಮಾಧುರ್ಯ ರಸಿಕರನ್ನು ಅಡಿಯಿಂದಲೇ ಸೆರೆ ಹಿಡಿಯುತ್ತದೆ. ಉದಾಹರಣೆಗಳನ್ನು ಕೊಡಲು ಯಾವುದನ್ನು ಅರಿಸುವುದು ಯಾವುದನ್ನು ಬಿಡುವುದು ಎಂಬುದೇ ಕಷ್ಟ ! ಒಂದೆರಡನ್ನು ಮಾತ್ರ ಇಲ್ಲಿ ಹೇಳುತ್ತೇನೆ:–

ದ್ವಾರಾವತಿ ವರ್ಣನೆಯ ಈ ಪದ್ಯದ ಶಬ್ದ ಮಾಧುರ್ಯವನ್ನು ನೋಡಿ:

**ಬತ್ತದು ಕೆರೆ ಪೊತ್ತದು ಮನೆ**
**ಬತ್ತದ ತೆನೆ ಮುತ್ತದೆತ್ತಲಾದೊಡಮೆಂದುಂ**
**ಕುತ್ತಂ ತಲೆಯೆತ್ತದೆನಲ್**
**ಮತ್ತಿನ ನಾಡಿಂತುಟಲ್ತೆನಲ್ ನಾಡೆಸೆಗುಂ (೨ – ೧೨)**

ವನವಿಹಾರ ವರ್ಣನೆಯ ಈ ಪದ್ಯವನ್ನು ಕೇಳಿ:

**ಕೂಜದ್ರಾಜ ಮರಾಳದಿಂ ರತುನದಾ ಸೋಪಾನದಿಂ ಪಾನದಿಂ**
**ಸಾಜಂ ತೃಪ್ತಿಯ ತಾಳ್ದ ಜೀವತತಿಯಿಂದಾಮೋದದಿಂ ಮೋದದಿಂ**
**ಭೂಜ ಪ್ರಾಂತವನಾಡಿ ತೀಡುವ ಸಮೀರಾಮಂದದಿಂದಂದದಿಂ**
**ರಾಜದ್ರಾಜಸರಂ ರಜಃ ಪುಳಿನ ಮಿಶ್ರಂ ಕೂಲದಿಂ ಕೂಲದಿಂ (೨ – ೬೫)**

**ಗದ್ಯದ ಒಂದು ಧಾಟಿಯನ್ನು ಕೇಳಿ:**

"....... ಭ್ರೂಭಂಗ ವಿಕಟ ನಿಟಿಲತಟರುಂ – ಕೋಪಾರುಣ ಕಿರಣ ಪ್ರಸಾರಣ ರಣ ಭೀಕರ ಕಾರಣ ಕೇಕರರುಂ – ಭುಜ ಕಂಪನ ಪ್ರದರ್ಶ್ಯಮಾನ ಸಂಗ್ರಾಮ ಲಾಂಪಟ್ಯರುಂ, ಅರಿಶಿರಃ ಖಂಡನ ದಂಡನಾ ಪರಿಣತಾತಃಕರಣರಂ, ರಿಪುದ್ವಿಪಚಮೂ ಸಮರ ವಿಫಲಕಾರ್ಯಾತಿ ನಿಪುಣರಂ, ಪ್ರತಿರಥ ಮನೋರಥ ವಿಕಥ ವ್ಯಥಾ ಪ್ರದಾತ ವಿಖ್ಯಾತ ಯುದ್ಧ ವಿದ್ಯಾಧೀತರುಂ, ಪ್ರತಿಹಶಿ ವಿಲಂಘನ ಹತ್ಯಲಂಘನ ಸಂಗರ ಪ್ರದರ್ಶಕ ವಿಕ್ರಾಂತತುಂಗರುಂ, ಸುಕ್ರಮ ಪರವಿಕ್ರಮ ಸ್ತಂಭನ ಪರಾಕ್ರಮ ಗಂಭೀರರುಂ" . . . . . . . . ಇತ್ಯಾದಿ.

ಹೀಗೆ ಬಹು ಸುಂದರವಾದ ಅರ್ಥಪೂರ್ಣವಾದ ಶಬ್ದ ಜಾಲದಿಂದ ಕೂಡಿದ ಈ ಪ್ರೌಢ ಕಾವ್ಯ ರಸಿಕಜನಪ್ರಿಯವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕಾವ್ಯದಲ್ಲಿ ದೋಷಗಳೇನೇ ಇರಲಿ, ಅವು ಇಂಥ ಕಾಲದಲ್ಲಿ ಇಷ್ಟು ಮನೋಹರವೂ ರಸಿಕ ಪ್ರಿಯವೂ ಆದ ಕೃತಿಯೊಂದು ಬಂದಿತಲ್ಲ ಎಂಬುದರ ಪ್ರಶಂಸೆ– ಸಂತೋಷಗಳಲ್ಲಿ ಕ್ಷಮಾರ್ಹವಾದವು. ಈ ಪರಿಣತ ಮತಿಗಳಿಂದ ಕನ್ನಡ ರಸಿಕರು ಇನ್ನೂ ಸುಂದರ ಕಾವ್ಯಗಳನ್ನು ನಿರೀಕ್ಷಿಸಬಹುದು.

* * * * *

# ವಿದ್ವಜ್ಜನರ ಬಿಚ್ಚುನುಡಿಗಳು

1. ತಾವೀಗ ನನಗೆ ಕಳುಹಿರುವ 'ಸತ್ತ್ವಾಲೋಕನ ಕಾವ್ಯ' ಕೃತಿಯನ್ನು – ಸ್ವಯಂ ಕೃತಿಯ ದೃಷ್ಟಿಯಿಂದ ಹೇಳುವುದಾದರೆ, ಇದು ಕನ್ನಡ ಸಾಹಿತ್ಯದಲ್ಲಿ ಪರಂಪರಾಗತವಾಗಿ ಬಂದಿರುವ ಹಿಂದಣ 'ಶಬರಶಂಕರವಿಲಾಸ' ವೇ ಮೊದಲಾದ ಕಾವ್ಯಗಳಂತೆ ಚೆನ್ನಾಗಿದೆ.

**– ಮಂಜೇಶ್ವರ ಗೋವಿಂದ ಪೈ**
**26–3–1959**

2. ಈಚೆಗೆ ಶ್ರೀಮಾನ್ ಟಿ. ಕೇಶವ ಭಟ್ಟರು 'ಸತ್ತ್ವಾಲೋಕನಂ' ಎಂಬ ಚಂಪೂಕಾವ್ಯವನ್ನು ಹಳಗನ್ನಡ ಶೈಲಿಯಲ್ಲಿ ಬರೆದಿದ್ದಾರೆ. ಇದರ ವಿಷಯವಾಗಿ ಶ್ರೀ ದ. ರಾ. ಬೇಂದ್ರೆಯವರು ಹೇಳುತ್ತಾ 'ಶೈವಾನುಗ್ರಹಮೊಂದಿ ಬಂದಿದೆ ಕಣಾ ಇನ್ನೇನಭಿಪ್ರಾಯಮೋ' ಎಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ಇಂಥ ಕಾವ್ಯಗಳ ಸಂಖ್ಯೆ ಹೊಸಗನ್ನಡ ಕಾವ್ಯಸಂಖ್ಯೆಗಳಿಗಿಂತ ಬಹಳ ಕಡಮೆಯಾಗಿದ್ದರೂ ಸಂಪ್ರದಾಯದ ಪ್ರೇಮಿಗಳು ಇನ್ನೂ ಕೆಲವರಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ.

**– ಡಿ. ಎಲ್. ನರಸಿಂಹಾಚಾರ್ (ಅಧ್ಯಕ್ಷ ಭಾಷಣದಿಂದ)**
ಬೀದರಿನಲ್ಲಿ 11–2–1960ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ.

3. ನಿಮ್ಮ 'ಸತ್ತ್ವಾಲೋಕನಂ' ಎಂಬ ಕಾವ್ಯಕ್ಕೆ ನಮ್ಮ ರಾಜ್ಯಸರಕಾರದಿಂದ ಬಹುಮಾನವಾಗಿ 750=00 ರೂ. ಗಳನ್ನು ಕೊಡಲಾದುದನ್ನು ತಿಳಿಸಲು ಬಹಳ ಸಂತೋಷಪಡುತ್ತೇನೆ. ಕನ್ನಡ ಸಾಹಿತ್ಯಕ್ಕೆ ಇದು ನಿಮ್ಮ ವಿಶೇಷಪ್ರಭೇದದ ಕೊಡುಗೆ ಎಂಬುದಕ್ಕಾಗಿ ನಾನು ಅಭಿನಂದಿಸಲೇ?

ನಿಮ್ಮಂತಹ ಗ್ರಂಥಕರ್ತರ ಬಗೆಗಾಗಿ ಸರಕಾರವು ನಿಜವಾಗಿ ಅಭಿಮಾನಪಡುತ್ತದೆ. ನಮ್ಮ ರಾಜ್ಯದ ಸಂಸ್ಕೃತಿಯ ಬೆನ್ನೆಲುಬಾಗಿರುವ ಕನ್ನಡ ಸಾಹಿತ್ಯಸಂಪದಭಿವೃದ್ಧಿಗಾಗಿ ನೀವು ಧಾರಾಳವಾಗಿ ದೇಣಿಗೆ ಸಲ್ಲಿಸುತ್ತಿದ್ದೀರಿ. ಇಂದಿನ ಮತ್ತು ಮುಂದಿನ ಪೀಳಿಗೆಗಾಗಿ ಇನ್ನೂ ಅಮೂಲ್ಯ ಜ್ಞಾನಮಯ ಕೃತಿಗಳನ್ನು ನಿಮ್ಮ ಪಾಂಡಿತ್ಯಪೂರ್ಣ ಲೇಖನಿ ಸಲ್ಲಿಸುವುದೆಂದು ಆಶಿಸಲಾಗಿದೆ. ಈ ಬಹುಮಾನಧನ

ನಿಜವಾಗಿಯೂ ಅಮೂಲ್ಯವಾದ ನಿಮ್ಮ ಬೌದ್ಧಿಕ ಪ್ರತಿಭೆಯ ಮಾನ್ಯತೆಗೆ ಸಂಕೇತ ಮಾತ್ರ, ಮತ್ತೂ ಮತ್ತೂ ಪ್ರಾಮಾಣಿಕ ಅಭಿನಂದನೆಗಳೊಂದಿಗೆ,

– ಕೆ. ಎಸ್. ಧರಣೇಂದ್ರಯ್ಯ,
ಸಾಹಿತ್ಯ – ಸಂಸ್ಕೃತಿ
ಅಭಿವೃದ್ಧಿ ಇಲಾಖೆ, ವಿಧಾನಸೌಧ, ಬೆಂಗಳೂರು.
13–5–1960

4. ಅಧುನಿಕ ಕನ್ನಡದಲ್ಲಿ ಇಷ್ಟೊಂದು ಮಹತ್ವದ 'ಹಳಗನ್ನಡ ಕಾವ್ಯ'ವನ್ನು ಬರೆದವರಿಲ್ಲ. ತಮ್ಮ ಶಬ್ದಶಕ್ತಿ ತುಂಬ ಹಿರಿದಾಗಿದೆಯೆಂಬುದು ಯಾರಿಗಾದರೂ ಕಾಣುತ್ತದೆ. ಕಥೆ ಹಳೆಯದಾದರೂ ಅದಕ್ಕೆ ಬೇರೆ ಅರ್ಥವನ್ನು ತುಂಬಿದ್ದೀರಿ.

– ಪ್ರೊ. ಜಿ. ವೆಂಕಟಸುಬ್ಬಯ್ಯ
18–4–1959

5. ಹೊಸ ಕವಿತೆಗಳಿಗೆ ತಲೆದೂಗುವ ಇಂದಿನ ದಿನಗಳಲ್ಲಿ 'ಕನೀಯರು' ಇಂತಹ ಉದ್ಗ್ರಂಥಗಳನ್ನು ನಿರ್ಮಿಸಲು ಮನಸ್ಸು ಮಾಡಿರುವುದು, ನಿಜಕ್ಕೂ ಶ್ಲಾಘ್ಯವಾದ ಸಂಗತಿಯಾಗಿದೆ. ಸಾಹಿತ್ಯ ಪ್ರೇಮಿಗಳು ಓದುವ ಗ್ರಂಥವಿದು.

– ಆಸ್ಥಾನವಿದ್ವಾನ್, ಬಿ. ಶಿವಮೂರ್ತಿ ಶಾಸ್ತ್ರೀ
12–4–1959

6. **ಡಿ. ಪಿ. ಐ. ಅವರಿಂದ – ಸಿವಿಲ್ (ಟಿ4) 116 – 94 / 61 – 62, ದಿನಾಂಕ: 14–2–1962 ಪ್ರಕಾರ ರಾಜ್ಯದ ವಿದ್ಯಾ ಸಂಸ್ಥೆಗಳಿಗೆ ಮತ್ತು ಗ್ರಂಥಾಲಯಗಳಿಗೆ ಕೊಂಡುಕೊಳ್ಳಲು ನಿರ್ದೇಶಿಸಲಾಗಿದೆ.**

* * * * *



"ಆಧುನಿಕ ಕನ್ನಡದಲ್ಲಿ ಇಷ್ಟೊಂದು ಮಹತ್ವದ 'ಹಳಗನ್ನಡ ಕಾವ್ಯ'ವನ್ನು ಬರೆದವರಿಲ್ಲ.
ತಮ್ಮ ಶಬ್ದಶಕ್ತಿ ತುಂಬ ಹಿರಿದಾಗಿದೆಯೆಂದು ಯಾರಿಗಾದರೂ ಕಾಣುತ್ತದೆ.
ಕಥೆ ಹಳೆಯದಾದರೂ ಅದಕ್ಕೆ ಬೇರೆ ಅರ್ಥವನ್ನು ತುಂಬಿದ್ದೀರಿ."

– ಪ್ರೊ.ಜಿ. ವೆಂಕಟಸುಬ್ಬಯ್ಯ

೧೯೭೦ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯಪ್ರಶಸ್ತಿ ಪಡೆದ ಈ ಚಿತ್ರಕ (ಚಂಪೂ) ಕಾವ್ಯವು ಮಹಾಭಾರತದ ಕಥೆಯಿಂದ ಕೂಡಿದೆ. ಪಾಂಡವರು ಕಾಮ್ಯಕವನದಲ್ಲಿ ವನವಾಸವಿದ್ದಾಗ ನಡೆದ ಕಥೆಯಿದು. ಗಯಚರಿತೆಯೇ ಕಥಾವಸ್ತು. ೮ ಆಶ್ವಾಸಗಳಿಂದ ಕೂಡಿದ್ದು ಒಟ್ಟು ೪೨೨ ಪದ್ಯ ಹಾಗೂ ೧೧೭ ಗದ್ಯಗಳಿವೆ. ಖೇಚರನಾದ ಗಯನ ನಿಮಿತ್ತವಾಗಿ ಶ್ರೀಕೃಷ್ಣ-ಅರ್ಜುನರಿಗೆ ನಡೆಯುವ ಯುದ್ಧವು ಈ ಕಾವ್ಯದ ವಸ್ತು. ವೀರರಸವೇ ಈ ಗ್ರಂಥದಲ್ಲಿ ಪ್ರಧಾನವಾಗಿ ಕಂಡರೂ ಇತರ ರಸಗಳೂ ಅಲ್ಲಲ್ಲಿ ಒರತೆಗಳಂತೆ ಉಕ್ಕಿವೆ. ಒಳ್ಳೆಯ ಗಮಕಿ ಮನಸ್ಸು ಮಾಡಿದರೆ, ಅವುಗಳನ್ನು ಕುಣಿಸಿ ಶ್ರೋತೃವಿನ ಮನವನ್ನು ತಣಿಸಬಹುದು.

ಈ ಕಾವ್ಯದಲ್ಲಿ ಹೊಸತನದ ಮೆರುಗು, ನೀತಿ ವಿಚಾರಗಳ ನರ್ತನ, ಲೋಕಹಿತ ಭಾವನೆ, ಪಂಚಶೀಲ ಬೋಧನೆ, ಮಾನವ ಧರ್ಮದ ನಿರೂಪಣೆ, ಅಲ್ಲದೆ ಪರಶಿವನ ಮೂಲಕ ವಿಶ್ವಮೈತ್ರಿಯ ಸಂದೇಶವನ್ನು ಸಾರಲಾಗಿದೆ.ಕೃಷ್ಣಾರ್ಜುನರ ಯುದ್ಧದಲ್ಲಿ ಗಯನ ಕಡೆಯಿಂದ (ಕುಬೇರನಿಂದ) ವಿಮಾನಗಳು ಬಂದು ಯುದ್ಧ ಮಾಡಿರುವುದು ಹೊಸತಾದ ಸಂಗತಿ. ವೃತ್ತ, ಕಂದ, ರಿಯಕ್ಕರ, ತ್ರಿಪದಿ, ಮಂದಾನಿಲ ರಗಳೆ ಮಾತ್ರವಲ್ಲದೆ 'ಅರಲ ರಗಳೆ 'ಯನ್ನು ಈ ಕಾವ್ಯದಲ್ಲಿ ಯಥೇಚ್ಛವಾಗಿ ಬಳಸಲಾಗಿದೆ.

ಈ ಗಯಚರಿತ್ರೆಯನ್ನು ಹಲವಾರು ಯಕ್ಷಗಾನ ಕವಿಗಳು ಕ್ರಿ.ಶ. ೧೭೦೦ರಿಂದ ವಿವಿಧ ಪ್ರಸಂಗಗಳಾಗಿ ರಚಿಸಿದ್ದಾರೆ. ಅಲ್ಲದೆ ನಾಟಕಗಳು ಬಂದಿವೆ. ಹಲವು ಕನ್ನಡ ಕವಿಗಳು ಈ ಕಥೆಯನ್ನು ಗದ್ಯ, ಭಾಮಿನೀ ಷಟ್ಪದಿ, ಸಾಂಗತ್ಯ ಕಾವ್ಯಗಳಾಗಿಯೂ ರಚಿಸಿರುವರು. ಕೃಷ್ಣಗಿರಿಯ ವೆಂಕಟರಮಣಯ್ಯ (ಕ್ರಿ.ಶ. ೧೮೮೪) ಕವಿಯು "ಗಯೋಪಾಖ್ಯಾನ" ವೆಂಬ ಚಂಪೂ ಕಾವ್ಯವನ್ನು ೨೮ ಸಂಧಿಗಳಲ್ಲಿ ೧೧೪೧ ಪದ್ಯಗಳಿಂದ ರಚಿಸಿರುವುದು ಲಕ್ಷ್ಯಾರ್ಹವಾಗಿದೆ.

**ಈ ಕಾವ್ಯವು ಶ್ರೀಕೃಷ್ಣ-ಅರ್ಜುನ-ಕವಿ ಕೇಶವ- ಎಂಬೀ ಮೂವರ ಸತ್ತ್ವದ ಆಲೋಕನ (ಪ್ರಕಾಶನ)ಕ್ಕೆ ಆಸ್ಪದವಾಗಿರುವ ಕಳೆದ ಶತಮಾನದ ನವೀನ ಚಂಪೂ ಕಾವ್ಯವಾಗಿದೆ.**

– ಕೆ. . ರಾಜಗೋಪಾಲ್ ಕನ್ಯಾನ